ವಿಶ್ವವಾಣಿ
ವಿಶ್ವಾಸವೇ ವಿಶ್ವ

ಒಲಿಂಪಿಕ್ಸ್ ಅಭಿಯಾನಕ್ಕೆ ಚಾಲನೆ

ಪ್ಯಾರಿಸ್‌ನಲ್ಲಿ ಗುರುವಾರ ಭಾರತದ ಬಿಲ್ಲುಗಾರಿಕೆ ತಂಡ ರ‍್ಯಾಂಕಿಂಗ್ ರೌಂಡ್‌ನಲ್ಲಿ ಭಾಗವಹಿಸುವ ಮೂಲಕ ದೇಶದ ಒಲಿಂಪಿಕ್ಸ್ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ಹಿರಿಯ ಆಟಗಾರ್ತಿ ದೀಪಿಕಾ ಕುಮಾರಿ ಅವರಿಗೆ ಇದು ನಾಲ್ಕನೇ ಒಲಿಂಪಿಕ್ಸ್ ಕೂಟವಾಗಿದೆ.

ಪುಟ ತೆರೆದಂತೆ...

ಈ ವಾಚಿನ ಸಮಯಕ್ಕೆ ಬೆಲೆ ಕಟ್ಟಲಾಗದು!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಮಳೆ, ಕೃತಕ ನೆರೆ ಸೃಷ್ಟಿಸುವ ನಿತ್ಯ ಅವಾಂತರಗಳು

ವಿದ್ಯಮಾನ
ಆದರ್ಶ್ ಶೆಟ್ಟಿ ಉಪ್ಪಿನಂಗಡಿ
ಸಂ.ಗಮ | 7

ಹೊರಗುತ್ತಿಗೆ ನೌಕರಿಯಲ್ಲಿ ಏಜೆನ್ಸಿಗಳಿಂದ ಶೋಷಣೆ | ನೌಕರರನ್ನು ರಕ್ಷಿಸಲು ಮುಂದಾದ ರಾಜ್ಯ ಸರಕಾರ

ಡಿಸಿ ನೇತೃತ್ವದಲ್ಲಿ ಹೊರಗುತ್ತಿಗೆ ನೇಮಕ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಹೊರಗುತ್ತಿಗೆ ನೌಕರಿಯಲ್ಲಿ ಏಜೆನ್ಸಿಗಳಿಂದ ನಡೆಯುತ್ತಿರುವ ಶೋಷಣೆಯಿಂದ ನೌಕರರನ್ನು ರಕ್ಷಿಸಲು ಮುಂದಾಗಿರುವ ರಾಜ್ಯ ಸರಕಾರ, ಇನ್ನುಂದೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೊಸೈಟಿ ರಚಿಸಿ, ಅಲ್ಲಿಂದಲೇ ಹೊರಗುತ್ತಿಗೆ ನೌಕರರನ್ನು ನೇಮಿಸಿಕೊಳ್ಳಲು ಸಿದ್ಧತೆ

ನಡೆಸಿಕೊಳ್ಳಲಾಗಿದೆ.

ಹೊರಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವ ಬಹುತೇಕ ಕಾರ್ಮಿಕರು, ನೌಕರರಿಗೆ ಸರಕಾರದಿಂದ ನಿಗದಿ ಮಾಡಿರುವಷ್ಟು ವೇತನ ನೀಡುತ್ತಿಲ್ಲ. ವೇತನ ನೀಡುವಲ್ಲಿ ಭಾರಿ ಕಡಿತ, ನೌಕರರಿಗೆ ಶೋಷಣೆ ಹಾಗೂ ನಕಲಿ ಸಿಬ್ಬಂದಿಗಳ ಹೆಸರು ಸೇರ್ಪಡೆ ಮಾಡುತ್ತಿರುವ ಆರೋಪ ಕೇಳಿಬಂದಿರುವುದರಿಂದ ಕಾರ್ಮಿಕ ಇಲಾಖೆ ಈ ಚಿಂತನೆ ನಡೆಸಿದೆ. ಈಗಾಗಲೇ ಬೀದರ್ ಜಿಲ್ಲೆಯಲ್ಲಿ ಈ ಮಾದರಿಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿದ್ದು, ಮುಂದಿನ ದಿನದಲ್ಲಿ ರಾಜ್ಯಾದ್ಯಂತ ವಿಸ್ತರಣೆ ಮಾಡಲು ಕಾರ್ಮಿಕ ಇಲಾಖೆ ಮುಂದಾಗಿದೆ.

ಪ್ರಶ್ನೋತ್ತರ ಅವಧಿಯಲ್ಲಿ ಪಕ್ಷಾತೀತವಾಗಿ ಹೊರಗುತ್ತಿಗೆ ನೌಕರರ ಸಮಸ್ಯೆಯ ಬಗ್ಗೆ ಪ್ರಸ್ತಾಪಿಸಿದರು. → 4

ಹೊರಗುತ್ತಿಗೆ ನೌಕರರಿಗೆ ಕೆಲಸ ಕೊಡಿಸುವ ಕೆಲಸವನ್ನು ಏಜೆನ್ಸಿಗಳು ಮಾಡುವ ಬದಲು ತಲೆಹಿಡಿಯುವ ಕೆಲಸವನ್ನು ಮಾಡುತ್ತಿವೆ. ನೌಕರರ ಜೀವ ಹಿಂಡುವ ಇವರು ಪ್ರತಿತಿಂಗಳು ಸಿಬ್ಬಂದಿಯಿಂದ ಆರೇಳು ಸಾವಿರ ಉಳಿಸಿಕೊಳ್ಳುತ್ತಿದ್ದಾರೆ. ಈ ರೀತಿ ಹಣ ಉಳಿಸಿಕೊಳ್ಳುವ ಹಿಂದಿನ ಉದ್ದೇಶವೇನು?

-ಶಿವಲಿಂಗೇಗೌಡ, ಶಾಸಕ

ಹೊರಗುತ್ತಿಗೆ ನೌಕರರ ಸಮಸ್ಯೆಗಳು ಇಲಾಖೆಯ ಗಮನದಲ್ಲಿದೆ. ಕನಿಷ್ಠ ವೇತನ ಪಾವತಿಸದವರ ವಿರುದ್ಧ ಕಾನೂನು ಕ್ರಮವಹಿಸಲಾಗುವುದು. ಕನಿಷ್ಠ ವೇತನ ನೀಡದಿದ್ದರೆ, ಅಂತಹ ನೌಕರರು ಉಪ ಕಾರ್ಮಿಕ ಆಯುಕ್ತರು ಹಾಗೂ ಸಹಾಯಕ ಕಾರ್ಮಿಕ ಆಯುಕ್ತರ ಮುಂದೆ ದೂರು ಸಲ್ಲಿಸಬಹುದು.

- ಸಂತೋಷ್ ಲಾಡ್, ಸಚಿವ

ಮಾತಂದ್ರೆ ಮಾತು

ಸಿದ್ದರಾಮಯ್ಯ ಅವರೇ, ನಿವೇಶನ ಹಿಂತಿರುಗಿಸಿ ತನಿಖೆ ಮಾಡಿಸಿ. ಇಲ್ಲದಿದ್ದರೆ ನಿಮ್ಮ ಕೇಸ್ ಇಟ್ಟುಕೊಂಡು ಹಲವರು ಬಚಾವಾಗುತ್ತಾರೆ. 40 ವರ್ಷದಲ್ಲಿ ಕಳಂಕ ಅಂಟಿಸಿಕೊಳ್ಳದಿರುವ ನೀವು ಇದ್ಯಾವುದೋ ನಿವೇಶನಕ್ಕಾಗಿ ಕಳಂಕ ಅಂಟಿಸಿಕೊಳ್ಳುತ್ತಿದ್ದೀರಿ. ಇದು ಬೇಕಾ? ಇನ್ನೂ ಮೂರೂವರೆ ವರ್ಷ ನೀವೇ ಮುಖ್ಯಮಂತ್ರಿ ಆಗಿರುತ್ತೀರಿ. ಅಷ್ಟೂ ಸಮಯ ಇದೇ ಆರೋಪಕ್ಕೆ ತುತ್ತಾಗುತ್ತೀರಿ. ನೊಣ ತಿಂದು ಜಾತಿ ಕೆಡಿಸಿಕೊಳ್ಳಬೇಡಿ.

ಪ್ರತಾಪ್ ಸಿಂಹ
ಮಾಜಿ ಸಂಸದ

ದಾರಿದೀಪೋಕ್ತಿ

ನಿಮ್ಮ ಬುದ್ಧಿವಂತಿಕೆ ನಿಮ್ಮನ್ನು ಅತಿ ಎತ್ತರಕ್ಕೆ ಕರೆದುಕೊಂಡು ಹೋಗಬಲ್ಲುದು. ಆದರೆ ನೀವು ಆ ಎತ್ತರದಲ್ಲಿ ಎಷ್ಟು ಹೊತ್ತು ಇರಬಲ್ಲಿರಿ ಎಂಬುದನ್ನು ನಿರ್ಧರಿಸುವುದು ನಿಮ್ಮ ವರ್ತನೆ. ಬುದ್ಧಿವಂತಿಕೆಯೊಂದೇ ಅಲ್ಲ, ನಿಮ್ಮ ವರ್ತನೆಯೂ ಅಷ್ಟೇ ಮುಖ್ಯ.

ವಕ್ರತುಂಡೋಕ್ತಿ

ವೈಫೈ ಇದ್ದಕ್ಕಿದ್ದಂತೆ ಎಲ್ಲಿ ಕನೆಕ್ಟ್ ಆಗುವುದೋ ಅದೇ ನಮ್ಮ ಮನೆ!

ಮುಡಾ ಚರ್ಚೆಗೆ ಸ್ಪೀಕರ್ ಅವಕಾಶ ನಕಾರ

ನಿಲುವಳಿ ಸೂಚನೆ ತಿರಸ್ಕಾರಕ್ಕೆ ಬಿಜೆಪಿ ಆಕ್ರೋಶ

ಅಹೋರಾತ್ರಿ ಧರಣಿ ಶುರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ಮುಡಾ ನಿವೇಶನ ಹಂಚಿಕೆ ವಿಷಯವನ್ನು ಚರ್ಚಿಸಲು ಅವಕಾಶ ನೀಡದಿರುವುದನ್ನು ಖಂಡಿಸಿ ಬಿಜೆಪಿ-ಜೆಡಿಎಸ್ ಶಾಸಕರು ಅಹೋರಾತ್ರಿ ಧರಣಿಗೆ ಮುಂದಾಗಿದ್ದಾರೆ.

ಬುಧವಾರ ವಿಧಾನಸಭಾ ಕಲಾಪ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷ ನಾಯಕ ಆರ್. ಅಶೋಕ ಮುಡಾ ಪ್ರಕರಣವನ್ನು ಪ್ರಸ್ತಾಪಿಸಲು ಮುಂದಾದರು. ಆದರೆ ಪ್ರಶ್ನೋತ್ತರಕ್ಕೆ ಅವಕಾಶ ನೀಡಿದ ಸ್ಪೀಕರ್ ಯು.ಟಿ.ಖಾದರ್, ಪ್ರಶ್ನೋತ್ತರದ ಬಳಿಕ ನಿಲುವಳಿ ಸೂಚನೆ ಮಂಡಿಸಲು ಅವಕಾಶ ನೀಡುವುದಾಗಿ ಭರವಸೆ ನೀಡಿದರು. ಪ್ರಶ್ನೋತ್ತರದ ಬಳಿಕ ಅವಕಾಶ ನೀಡಿದರೂ, ಕಾನೂನು ಸಚಿವ ಎಚ್.ಕೆ.ಪಾಟೀಲ್ ವಿಷಯ ಪ್ರಸ್ತಾಪ ಮಾಡಲು ಕಾನೂನಾತ್ಮಕವಾಗಿ ಅವಕಾಶವಿಲ್ಲವೆಂದು ವಾದ ಮಂಡಿಸಿದರು. ಆದರೆ ಬಿಜೆಪಿಗರು ಮಾತನಾಡುವ ಮೊದಲೇ, ಪ್ರಸ್ತಾಪವನ್ನು ಖಾದರ್ ತಿರಸ್ಕರಿಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ನಾಯಕರು ಅಹೋರಾತ್ರಿ ಧರಣಿ ಪ್ರಕಟಿಸಿದರು. ಇದಕ್ಕೂ ಮೊದಲು ನಿಲುವಳಿ ಸೂಚನೆಗೆ ಅವಕಾಶ ನೀಡದಿದ್ದರಿಂದ ಬಿಜೆಪಿಗರು ಧರಣಿ ಆರಂಭಿಸಿದರು. ಆದ್ದರಿಂದ ಸದನವನ್ನು ಮುಂದೂಡಲಾಯಿತು. ಬಳಿಕ ಮತ್ತೆ ಸದನ ಆರಂಭಗೊಂಡಾಗ, ಬಿಜೆಪಿ-ಜೆಡಿಎಸ್ ಶಾಸಕರು ಬಾವಿಗಿಳಿದು ಪ್ರತಿಭಟನೆ ಮುನ್ನಡೆಸಿದರು. ಈ ನಡುವೆಯೇ ಸರಕಾರ ವಿತ್ತೀಯ ಬಿಲ್ ಸೇರಿದಂತೆ ವಿವಿಧ ಕಾರ್ಯಕಲಾಪವನ್ನು ಪೂರ್ಣಗೊಳಿಸಿ ಸದನವನ್ನು ಗುರುವಾರಕ್ಕೆ ಮುಂದೂಡಲಾಯಿತು.

ನ್ಯಾಯ ಸಿಗುವ ತನಕ ಹೋರಾಟ: ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಇದೊಂದು ಪ್ರಜಾಪ್ರಭುತ್ವದ ಕಗ್ಗೊಲೆ. ದಲಿತರು, ಬಡವರಿಗೆ ನ್ಯಾಯ ಸಿಗುವವರೆಗೆ ಹೋರಾಟ ಮುಂದುವರೆಯಲಿದೆ. → 4

ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣ ಮತ್ತು ಮುಡಾ ಹಗರಣ ಖಂಡಿಸಿ ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಶಾಸಕರು ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ಸದನಲ್ಲಿ ಅಹೋರಾತ್ರಿ ಧರಣಿ ನಡೆಸಿದರು.

ಎರಡು ದಿನ ಧರಣಿ

ಬುಧವಾರ ರಾತ್ರಿಯಿಂದ ಆರಂಭಿಸಿರುವ ಅಹೋರಾತ್ರಿ ಧರಣಿಯೂ ಎರಡು ದಿನಗಳ ಕಾಲ ನಡೆಯಲಿದೆ. ಶುಕ್ರವಾರ ಸದನ ಮುಕ್ತಾಯವಾಗುವುದರಿಂದ ಬಿಜೆಪಿ-ಜೆಡಿಎಸ್ ಶಾಸಕರು ಬುಧವಾರ ರಾತ್ರಿ, ಗುರುವಾರ ರಾತ್ರಿ ವಿಧಾನಸೌಧದಲ್ಲಿಯೇ ಉಳಿಯಬೇಕಾಗಿದೆ. ಗುರುವಾರವೂ ಬಾವಿಯಲ್ಲಿದ್ದುಕೊಂಡೇ ಸರಕಾರದ ವಿರುದ್ಧ ಹೋರಾಟ ಮುಂದುವರಿಸಲು ಮೈತ್ರಿ ನಾಯಕರು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಾದಯಾತ್ರೆ

ಸದನದ ಹೊರಗೆ ಪ್ರತಿಭಟನೆಗೆ ಇನ್ನಷ್ಟು ಕಾವು ಕೊಡಬೇಕು ಎನ್ನುವ ಉದ್ದೇಶದಿಂದ ಮುಡಾ ಹಗರಣವನ್ನು ಮುಂದಿಟ್ಟುಕೊಂಡು ಬೆಂಗಳೂರಿನಿಂದ ಚನ್ನಪಟ್ಟಣ, ಮಂಡ್ಯ ಒಳರಸ್ತೆಯಲ್ಲಿ ಮೈಸೂರಿಗೆ ಪಾದಯಾತ್ರೆ ನಡೆಸಲು ಬಿಜೆಪಿ ನಾಯಕರು ಸಿದ್ಧತೆ ನಡೆಸಿಕೊಂಡಿದ್ದಾರೆ ಎನ್ನಲಾಗಿದೆ. ಶುಕ್ರವಾರ ವಿಧಾನಸಭಾ ಕಲಾಪ ಮುಕ್ತಾಯವಾಗಲಿದ್ದು, ಸೋಮವಾರ (ಜು. 29)ರಂದು 120 ಕಿ.ಮೀ. ಪಾದಯಾತ್ರೆ ನಡೆಸಲು ಬಿಜೆಪಿ ನಿರ್ಧಾರ ಮಾಡಿದೆ.

ಮುಖ್ಯಮಂತ್ರಿಗಳ ಕುಟುಂಬಕ್ಕೆ ಮೈಸೂರಿನಲ್ಲಿ ಮೂಡದಿಂದ ಕೊಟ್ಟ 14 ನಿವೇಶನಗಳು ವಾಪಸ್ ಬರಬೇಕು. ಈ ಸರಕಾರವು ಅಧಿಕಾರಕ್ಕೆ ಬಂದ ಬಳಿಕ ಐದು ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಹಂಚಿದೆ. ಆ ಹಂಚಿಕೆಯನ್ನು ರದ್ದು ಮಾಡಬೇಕು. ಮುಖ್ಯಮಂತ್ರಿಗಳು ತಪ್ಪು ಮಾಡಿಲ್ಲವೆಂದರೆ ಪಲಾಯನವಾದ ಏಕೆ ಮಾಡುತ್ತಿದ್ದಾರೆ?

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಅನುದಾನ ತಾರತಮ್ಯ: ಸಂಸತ್ತಿನಲ್ಲಿ ಗದ್ದಲ, ವಿಪಕ್ಷ ಸದಸ್ಯರ ಸಭಾತ್ಯಾಗ

ಖರ್ಗೆ-ನಿರ್ಮಲಾ ನಡುವೆ ವಾಕ್ಸಮರ



ದೆಹಲಿ: ಕೇಂದ್ರ ಬಜೆಟ್‌ನಲ್ಲಿ ರಾಜ್ಯಗಳಿಗೆ ಅನ್ಯಾಯವಾಗಿದೆ ಎಂದು ರಾಜ್ಯಸಭೆಯ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಬುಧವಾರ ಆರೋಪಿಸಿದ್ದಾರೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಗಳವಾರ ಮಂಡಿಸಿದ ಬಜೆಟ್‌ನಲ್ಲಿ ಬಿಹಾರ ಮತ್ತು ಆಂಧ್ರಪ್ರದೇಶ ಈ ಎರಡು ರಾಜ್ಯಗಳನ್ನು ಬಿಟ್ಟು ಉಳಿದ ಎಲ್ಲ ರಾಜ್ಯಗಳ ತಟ್ಟೆಗಳು ಖಾಲಿಯಿವೆ. ಯಾವುದೇ ರಾಜ್ಯಕ್ಕೆ ಏನೂ ಸಿಕ್ಕಿಲ್ಲ ಎಂದು ತಮಿಳುನಾಡು, ಮಹಾರಾಷ್ಟ್ರ, ಪಂಜಾಬ್, ಹರಿಯಾಣ, ರಾಜಸ್ಥಾನ, ಛತ್ತೀಸ್‌ಗಢ ಮತ್ತು ಕರ್ನಾಟಕದ ಹೆಸರನ್ನು ಹೇಳಿದರು.

ಕೆಲವೇ ಕೆಲವು ಜನರನ್ನು ತೃಪ್ತಿಪಡಿಸಲು ಮತ್ತು ಕುರ್ಚಿ ಉಳಿಸಿಕೊಳ್ಳಲು ಈ ಬಜೆಟ್ ಸಿದ್ಧಪಡಿಸಲಾಗಿದೆ. ನಮ್ಮ ರಾಜ್ಯಕ್ಕೆ ಗರಿಷ್ಠ ಅನುದಾನ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ನಾನಿದ್ದೆ. ಆದರೆ ನಮಗೆ ಏನೂ ಸಿಕ್ಕಿಲ್ಲ ಎಂದರು. ಇದಕ್ಕೆ ಉತ್ತರಿಸಲು ನಿರ್ಮಲಾ ಸೀತಾರಾಮನ್ ಅವರಿಗೆ ಅವಕಾಶ ಕೊಡಿ ಎಂದು ರಾಜ್ಯಸಭಾ ಸಭಾಪತಿ ಜಗದೀಪ್ ಧನ್‌ಕರ್ ಪ್ರತಿಪಕ್ಷ ನಾಯಕನಿಗೆ ಸೂಚಿಸಿದಾಗ, ನನ್ನ ಮಾತುಗಳನ್ನು ಮೊದಲು ಮುಗಿಸುತ್ತೇನೆ. ಮಾತಾಜಿ ಮಾತನಾಡುವುದರಲ್ಲಿ ನಿಪುಣರು. ನನಗೆ ಅದು ಗೊತ್ತಿದೆ ಎಂದು ಖರ್ಗೆ ಉತ್ತರಿಸಿದರು. ಕುರ್ಚಿ ಉಳಿಸಿಕೊಳ್ಳುವುದಕ್ಕಾಗಿ ಇದೆಲ್ಲವನ್ನೂ ಮಾಡಲಾಗಿದೆ. ನಾವು ಅದನ್ನು ಖಂಡಿಸುತ್ತೇವೆ ಮತ್ತು ಅದನ್ನು ಪ್ರತಿಭಟಿಸುತ್ತೇವೆ. ಇಂಡಿಯ ಮೈತ್ರಿಕೂಟದ ಎಲ್ಲ ಪಕ್ಷಗಳು ಪ್ರತಿಭಟನೆ ನಡೆಸಲಿವೆ. ಸಮತೋಲನ ಇಲ್ಲದಿದ್ದರೆ ಅಭಿವೃದ್ಧಿ ಹೇಗೆ ಸಾಧ್ಯವಾಗುತ್ತದೆ? ಎಂದು ಖರ್ಗೆ ಪ್ರಶ್ನಿಸಿದರು.

ಪ್ರತಿಪಕ್ಷಗಳ ಆರೋಪ ಅತಿರೇಕ

ಖರ್ಗೆ ಅವರ ಆರೋಪವನ್ನು ನಿರಾಕರಿಸಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಒಂದು ಬಜೆಟ್ ಭಾಷಣದಲ್ಲಿ ಎಲ್ಲ ರಾಜ್ಯಗಳನ್ನು ಹೆಸರಿಸಲು ಸಾಧ್ಯವಿಲ್ಲ. ಮಹಾರಾಷ್ಟ್ರದ ಉದಾಹರಣೆಯನ್ನೇ ತೆಗೆದುಕೊಳ್ಳಿ, ಮಧ್ಯಂತರ ಬಜೆಟ್ ಮತ್ತು ನಿನ್ನೆಯ ಬಜೆಟ್‌ನ ನಡುವೆ, ವದವನ್ನಲ್ಲಿ ಬೃಹತ್ ಬಂದರನ್ನು ಸ್ಥಾಪಿಸುವ ಮಹತ್ವದ ನಿರ್ಧಾರವೊಂದನ್ನು ಸಚಿವ ಸಂಪುಟ ಅಂಗೀಕರಿಸಿದೆ. ಪ್ರತಿಪಕ್ಷಗಳ ಆರೋಪ ಅತಿರೇಕ. ಕಾಂಗ್ರೆಸ್ ಪಕ್ಷವು ಉದ್ದೇಶಪೂರ್ವಕವಾಗಿ ಸಾರ್ವಜನಿಕರನ್ನು ತಪ್ಪು ದಾರಿಗೆಳೆಯುತ್ತಿದೆ ಎಂದು ಆರೋಪಿಸಿದರು.

ಡಿಕೆ ಭೇಟಿಯಾದ ದರ್ಶನ್ ಪತ್ನಿ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ, ಸಹೋದರ ತೂಗದೀಪ ದಿನಕರ್ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು. ಈ ಬಗ್ಗೆ ಮಾತನಾಡಿರುವ ಡಿಕೆಶಿ, ನಮ್ಮ ಶಾಲೆಯಲ್ಲಿ ಓದುತ್ತಿದ್ದ ದರ್ಶನ್-ವಿಜಯಲಕ್ಷ್ಮಿ ದಂಪತಿಯ ಪುತ್ರ ಕಾರಣಾಂತರಗಳಿಂದ ಶಾಲೆ ತೊರೆದಿದ್ದರು. ಈಗ ಮತ್ತೆ ಸೇರಿಸಿಕೊಳ್ಳುವಂತೆ ಮನವಿ ಮಾಡಲು ಬಂದಿದ್ದರು. ನಮ್ಮ ಶಾಲೆಯ ಪಕ್ಕದಲ್ಲೇ ವಿಜಯಲಕ್ಷ್ಮಿ ಅವರ ಮನೆಯಿದೆ. ಪ್ರಾಂಶುಪಾಲರನ್ನು ಭೇಟಿ ಮಾಡುವಂತೆ ಅವರಿಗೆ ಹೇಳಿದ್ದೇನೆ ಎಂದು ಸ್ಪಷ್ಟಪಡಿಸಿದರು. ನಟ ದರ್ಶನ್ ನ್ಯಾಯಾಂಗ ಬಂಧನದಲ್ಲಿದ್ದಾರೆ. ಪೊಲೀಸ್ ವಿಚಾರಣೆ, ನ್ಯಾಯ ಪ್ರಕ್ರಿಯೆಯಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ ಎಂದರು.



ಏಮ್ಸ್ ಆಸ್ಪತ್ರೆಗೆ ಲಾಲೂ ದಾಖಲು

ದೆಹಲಿ: ಬಿಹಾರ ಮಾಜಿ ಸಿಎಂ ಲಾಲೂಪ್ರಸಾದ್ ಯಾದವ್ ಆರೋಗ್ಯದಲ್ಲಿ ಏರುಪೇರಾಗಿದ್ದು, ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಲಾಲೂ ಅವರ ಮೇಲೆ ವೈದ್ಯರು ನಿಗಾವಹಿಸಿದ್ದು, ಅವರ ಆರೋಗ್ಯ ಸ್ಥಿರವಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ಲಾಲೂಪ್ರಸಾದ್ ಅನಾರೋಗ್ಯ ಕುರಿತಂತೆ ಪ್ರಿನ್ಸ್ ಯಾದವ್ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಅನಾರೋಗ್ಯದ ಹಿನ್ನೆಲೆಯಲ್ಲಿ ಅವರನ್ನು ಏಮ್ಸ್‌ಗೆ ದಾಖಲು ಮಾಡಲಾಗಿದೆ. ಅವರು ಶೀಘ್ರ ಗುಣಮುಖರಾಗಲಿ ಎಂದು ಬಿಹಾರದ ಜನತೆಯ ಪರವಾಗಿ ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಸಾಹಿತ್ಯ ಸಮ್ಮೇಳನಕ್ಕೆ 100 ಕೋಟಿ ರು.

ವಿಧಾನಸಭೆ: ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 100 ಕೋಟಿ ರುಪಾಯಿ ಮೀಸಲಿರಿಸಲಾಗಿದ್ದು, 30 ಕೋಟಿ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಕೆಯಾಗಿದೆ ಎಂದು ಸಚಿವ ಶಿವರಾಜ್ ತಂಗಡಗಿ ವಿಧಾನ ಸಭೆಯಲ್ಲಿ ತಿಳಿಸಿದ್ದಾರೆ. ಡಿಸೆಂಬರ್ 20, 21ರಂದು ಆಯೋಜಿಸಲಾಗಿರುವ ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ಬಿಡುಗಡೆ ಮಾಡುವ ಕುರಿತು ಪರಿಶೀಲಿಸಲಾಗುತ್ತಿದೆ. ಈಗಾಗಲೇ 2024 25ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ಮೀಸಲಿರಿಸಲಾಗಿದೆ ಎಂದರು.

ವಾಲ್ಮೀಕಿ ನಿಗಮ ಹಗರಣ: ಅಧಿಕಾರಿಗಳಿಗೆ ನೋಟಿಸ್?

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಮಾಜಿ ಸಚಿವ ನಾಗೇಂದ್ರ ಸೇರಿದಂತೆ ನಿಗಮದ ಹಲವು ಅಧಿಕಾರಿಗಳನ್ನು ವಶಕ್ಕೆ ಪಡೆದಿರುವ ಇ.ಡಿ. ಇದೀಗ ಇದೇ ಪ್ರಕರಣದಲ್ಲಿ ಹಿರಿಯ ಐಎಎಸ್ ಅಧಿಕಾರಿಗಳಿಗೆ ನೋಟಿಸ್ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ನೀತಿಗೆಟ್ಟ ಸಭೆಗೆ ಹಾಜರಿಲ್ಲ

ಬೆಂಗಳೂರು: ಕೇಂದ್ರ ಸರಕಾರದ ನೀತಿ ಆಯೋಗ ಕರೆದಿರುವ ಸಭೆಗೆ ಗೈರಾಗುವ ಮೂಲಕ ಮತ್ತೊಮ್ಮೆ ಕೇಂದ್ರದ ವಿರುದ್ಧ ಸಮರ ಸಾರಲು ಮುಂದಾಗಿರುವ ರಾಜ್ಯ ಸರಕಾರದ ನಡೆ ಇದೀಗ ಮತ್ತೊಂದು ಚರ್ಚೆಗೆ ಕಾರಣವಾಗಿದೆ. ಈ ಬಗ್ಗೆ ಮಾತನಾಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸರಕಾರದ ಬಳಿ ನೀತಿಯೇ ಇಲ್ಲದಿರುವಾಗ, ನೀತಿ ಆಯೋಗದ ಸಭೆಗೆ ಹೋಗಿ ಏನು ಪ್ರಯೋಜನ? ಕೇಂದ್ರ ಸರಕಾರದ ಬಜೆಟ್‌ನಲ್ಲಿ ಕರ್ನಾಟಕಕ್ಕೆ ನ್ಯಾಯ ಸಿಕ್ಕಿಲ್ಲ, ಇಲ್ಲಿ ನೀತಿಯೇ ಇಲ್ಲ. ರಾಜ್ಯಕ್ಕೆ ಯಾವುದೇ ಯೋಜನೆ ಸಿಕ್ಕಿಲ್ಲ, ರಾಜ್ಯಕ್ಕೆ ಬಜೆಟ್‌ನಲ್ಲಿ ಸರಿಯಾದ ಪ್ರಾತಿನಿಧ್ಯ ಸಿಕ್ಕಿಲ್ಲದ ಕಾರಣ, ಪಕ್ಷದ ನಾಯಕರು ಸಭೆಯನ್ನು ಬಹಿಷ್ಕರಿಸಿ ಪ್ರತಿಭಟನೆ ಮಾಡಲು ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

ವಿಜಯೇಂದ್ರ ಆಕ್ಷೇಪ: ಸಭೆಗೆ ಗೈರಾಗುವ ನಿರ್ಧಾರದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮುಖ್ಯಮಂತ್ರಿಗಳು ದೆಹಲಿಯಲ್ಲಿ ನಡೆಯುವ ನೀತಿ ಆಯೋಗದ ಸಭೆಗೆ ಬಹಿಷ್ಕಾರ ಹಾಕಿದ್ದಾರೆ. ನೀತಿ ಆಯೋಗದ ಸಭೆಗೆ ಹಾಜರಾಗುವುದಿಲ್ಲ ಎಂದು ಸ್ವತಃ ಮುಖ್ಯಮಂತ್ರಿಗಳು ಬಹಿಷ್ಕಾರ ಹಾಕುವ ಮೂಲಕ ರಾಜ್ಯಕ್ಕೆ ಅನ್ಯಾಯ ಮಾಡಿದ್ದಾರೆ ಎಂದು ಟೀಕಿಸಿದರು.

ಹೊಸ ಆದೇಶ ನೀಡದ ಪ್ರಾಧಿಕಾರ

ಕಾವೇರಿ: ರಾಜ್ಯಕ್ಕೆ ನಿರಾಳ

ದೆಹಲಿ: ತಮಿಳುನಾಡಿಗೆ ಕರ್ನಾಟಕವು ಹರಿಸುತ್ತಿರುವ ಕಾವೇರಿ ನೀರಿನ ಪ್ರಮಾಣ ತೃಪ್ತಿಕರ ಎಂದು ಅಭಿಪ್ರಾಯಪಟ್ಟಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಹೊಸ ಆದೇಶ ನೀಡಲು ನಿರಾಕರಿಸಿದೆ. ಸಭೆಯಲ್ಲಿ ಕರ್ನಾಟಕದ ಪ್ರತಿನಿಧಿಗಳು ವಾದ ಮಂಡಿಸಿ, ಜೂನ್‌ನಿಂದ ಜುಲೈ 22ರ ವರೆಗೆ ರಾಜ್ಯದ ನಾಲ್ಕು ಜಲಾಶಯಗಳಲ್ಲಿ ಸಂಚಿತ ಒಳಹರಿವು 118 ಟಿಎಂಸಿ ಇದೆ. ಆದರೆ, ಇದೇ ಅವಧಿಯಲ್ಲಿ 30 ವರ್ಷಗಳ ಸರಾಸರಿ ಒಳಹರಿವು 98.679 ಟಿಎಂಸಿ ಎಂದರು. ತಮಿಳುನಾಡಿಗೆ ಪ್ರತಿದಿನ ಒಂದು ಟಿಎಂಸಿ ನೀರು ಬಿಡುಗಡೆ ಮಾಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಜುಲೈ 11ರಂದು ಶಿಫಾರಸು ಮಾಡಿತ್ತು. ನಾಲ್ಕು ಜಲಾಶಯಗಳ ಕೇವಲ ಶೇ.15.72 ವಿಸ್ತೀರ್ಣ ಪರಿಗಣಿಸಿ ಸಮಿತಿ ಈ ಸೂಚನೆ ನೀಡಿತ್ತು. ಜೂನ್‌ನಿಂದ ಜುಲೈ 12ರ ವರೆಗೆ ರಾಜ್ಯದಲ್ಲಿ ಮಳೆಯ ಪ್ರಮಾಣ ಕಡಿಮೆ ಇತ್ತು. ಆದರೆ, ತಮಿಳುನಾಡಿನಲ್ಲಿ ಉತ್ತಮ ಮಳೆಯಾಗಿತ್ತು. 3 ಜಲಾಶಯಗಳ ಜಲ ವರ್ಷದ ಅಂತ್ಯಕ್ಕೆ ಕ್ಯಾರಿಓವರ್ ಸಂಗ್ರಹ ಮತ್ತು ಜಲಾನಯನ ಪ್ರದೇಶದ ಪರಿಸ್ಥಿತಿ ಪರಿಣಿಸಿ ಪ್ರಾಧಿಕಾರ ಹಾಗೂ ಸಮಿತಿ ಆದೇಶ ನೀಡಬೇಕು ಎಂದು ಆಗ್ರಹಿಸಿದರು.

ಸರಕಾರವೇ ಪರಿಹಾರ ಕಂಡುಕೊಳ್ಳಲು ಸಲಹೆ

ರೈತರ ಪ್ರತಿಭಟನೆ: ನ್ಯಾಯಾಂಗ ಸಮಿತಿ ರಚನೆಗೆ ಸುಪ್ರೀಂ ಸಲಹೆ

ದೆಹಲಿ: ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನಾನಿರತ ರೈತರ ಬೇಡಿಕೆಗಳಿಗೆ ಪರಿಹಾರ ಹುಡುಕಲು ಸಮರ್ಥ ವ್ಯಕ್ತಿಗಳನ್ನೊಳಗೊಂಡ ಸಾಂವಿಧಾನಿಕ ಸ್ವತಂತ್ರ ಪೀಠ ರಚಿಸುವಂತೆ ಸುಪ್ರೀಂಕೋರ್ಟ್ ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಿದೆ.

ಫೆಬ್ರವರಿ 13ರಂದು ದೆಹಲಿ ಚಲೊ ಹೊರಟಿದ್ದ ರೈತರನ್ನು ಅಂಬಾಲ ಬಳಿಯ ಶಂಭು ಗಡಿಯಲ್ಲಿ ತಡೆಯಲಾಗಿದೆ. ಗಡಿಯಲ್ಲಿ ಹಾಕಲಾಗಿರುವ ಬ್ಯಾರಿಕೇಡ್‌ಗಳನ್ನು ವಾರದೊಳಗೆ ತೆರವು ಮಾಡಬೇಕು ಎಂದು ಹೈಕೋರ್ಟ್ ಆದೇಶಿಸಿರುವುದನ್ನು ಪ್ರಶ್ನಿಸಿ, ಹರಿಯಾಣ ಸರಕಾರ ಸಲ್ಲಿಸಿದ್ದ ಅರ್ಜಿ ವಿಚಾರಣೆ ಬುಧವಾರ ಸುಪ್ರೀಂಕೋರ್ಟ್‌ನಲ್ಲಿ ನಡೆಯಿತು.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮತ್ತು ಅದಕ್ಕೆ ಕಾನೂನು ಖಾತರಿ ಒದಗಿಸುವ ಕುರಿತು ಕೇಂದ್ರ ಸರಕಾರದ ಮೇಲೆ ಇಂಡಿಯ ಮೈತ್ರಿಕೂಟದ ಸದಸ್ಯರು ಒತ್ತಡ ಹೇರಲಿದ್ದಾರೆ. ಹರಿಯಾಣ ಸರಕಾರವು ಪ್ರತಿಭಟನಾನಿರತ ರೈತರಿಗೆ ನೀಡುತ್ತಿರುವ ಕಿರುಕುಳಗಳ ಕುರಿತು ಇಂಡಿಯ ಮೈತ್ರಿಕೂಟದ ನಾಯಕರೊಂದಿಗೆ ಚರ್ಚಿಸುತ್ತೇವೆ.

-ರಾಹುಲ್ ಗಾಂಧಿ,
ಲೋಕಸಭೆ ಪ್ರತಿಪಕ್ಷ ನಾಯಕ

ತ್ರಿಸದಸ್ಯ ಪೀಠದಲ್ಲಿದ್ದ ನ್ಯಾ.ಸೂರ್ಯಕಾಂತ್ ಅವರು, ರೈತರು ಹಾಗೂ ಸರಕಾರದ ನಡುವೆ ವಿಶ್ವಾಸದ ಕೊರತೆ ಇದೆ. ರೈತರನ್ನು ತಲುಪಲು ಕೆಲವು ಕ್ರಮಗಳನ್ನು ನೀವು ಕೈಗೊಳ್ಳಬೇಕಿದೆ ಎಂದು ಹೇಳಿದರು. → 4

ಫನ್‌ತರಂಗ

- ರಘುಪತಿ ಶೃಂಗೇರಿ -

ವಿಧಾನಸಭೆಯಲ್ಲಿ ಮುಡಾ ಗದ್ದಲ - ಸುದ್ದಿ

ಎಲ್ಲೆಲ್ಲೂ ಮೋಡ...ಭೀಕರ ಮಳೆಗೆ ಭೂಕುಸಿತ, ಇಲ್ಲಿ 'ಮುಡಾ ಮಳೆ'ಗೆ ನಮ್ ಸೀಟು ಕುಸಿಯುತ್ತಾ ಅಂತ!!



ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣ: ಮಹತ್ವದ ಘಟ್ಟ ಮುಟ್ಟಿದ ತನಿಖೆ

ಆರ್ಥಿಕ ಇಲಾಖೆಗೆ ಸಿಟ್ ಕ್ಲೀನ್‌ಚಿಟ್

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಬಹುಕೋಟಿ ರೂ. ವಾಲ್ಮೀಕಿ ಹಗರಣದ ತನಿಖೆ ತೀವ್ರಗೊಂಡಿದ್ದು, ಇದರಲ್ಲಿ ಸರಕಾರದ ಹಣಕಾಸು ಇಲಾಖೆ ಪಾತ್ರವಿಲ್ಲ ಎನ್ನುವ ಅಂಶ ಎಸ್‌ಐಟಿ ತನಿಖೆ ವೇಳೆ ತಿಳಿದುಬಂದಿದೆ. ಕೋಟ್ಯಂತರ ರೂಪಾಯಿಗಳ ವರ್ಗಾವಣೆ ಹಿಂದೆ ನಿಗಮದ ಅಧಿಕಾರಿಗಳು ಮತ್ತು ಬ್ಯಾಂಕ್ ಅಧಿಕಾರಿಗಳು ಶಾಮೀಲಾಗಿರುವುದು ತನಿಖೆಯಲ್ಲಿ ಕಂಡು ಬಂದಿದೆ.

ಬ್ಯಾಂಕ್ ಮತ್ತು ನಿಗಮದ ಅಧಿಕಾರಿಗಳ ನಂತರ ಎಸ್‌ಐಟಿ ಅಧಿಕಾರಿಗಳು ಹಣಕಾಸು ಇಲಾಖೆಯ ಕೆಲವು ಅಧಿಕಾರಿಗಳನ್ನೂ ವಿಚಾರಣೆ ನಡೆಸಿದ್ದು, ಅವರು ಹಗರಣದಲ್ಲಿ ಭಾಗಿಯಾಗಿರುವ ಬಗ್ಗೆ ಯಾವುದೇ ದಾಖಲೆಗಳು ದೊರೆತಿಲ್ಲ ಎಂದು ಹೇಳಲಾಗಿದೆ. ಆದರೆ ಇದರಲ್ಲಿ ಅಕ್ರಮ ಹಣ ವರ್ಗಾವಣೆ ಬಗ್ಗೆ ತನಿಖೆ ನಡೆಸುತ್ತಿರುವ ಇಡಿ ಅಧಿಕಾರಿಗಳ ವಿರುದ್ಧ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹೆಚ್ಚುವರಿ ನಿರ್ದೇಶಕರೇ ದೂರು ನೀಡಿದ್ದು, ಇದಾದ ನಂತರ ಎಸ್ ಐಟಿ ತನಿಖೆಗೆ ಇನ್ನಷ್ಟು ಚುರುಕುಗೊಂಡಿದೆ. → 4

ಇಲಾಖೆ ಅನುಮತಿ ಇಲ್ಲದೆ ನೇಮಕ!

ಹಾಗೆ ನೋಡಿದರೆ, ವಾಲ್ಮೀಕಿ ನಿಗಮದ ಎಂಡಿ ಪದ್ಮನಾಭ ಅವರ ನೇಮಕವೇ ಸಂಶಯಾಸ್ಪದ ವಾಗಿದೆ. ಇವರು ಹಿಂದಿನ ಸರಕಾರದಲ್ಲಿ ಭೋವಿ ನಿಗಮದ ಎಂಡಿಯಾಗಿದ್ದರು. ಸಹಾಯಕ ಪ್ರಧಾನ ವ್ಯವಸ್ಥಾಪಕರಾಗಿದ್ದ ಇವರನ್ನು ಪ್ರಭಾರಿ ಎಂಡಿ ಮಾಡಲಾಗಿತ್ತು. ಆದರೆ ಇದಕ್ಕೆ ಅಂದಿನ ಹಣಕಾಸು ಇಲಾಖೆ ಅನುಮತಿಯೇ ಇರಲಿಲ್ಲ ಎನ್ನಲಾಗಿದೆ. ಆದರೂ ಅಂದು ಭೋವಿ ನಿಗಮದಲ್ಲಿ ಸಾಕಷ್ಟು ಅಕ್ರಮಗಳು ನಡೆದು, ತನಿಖೆಯನ್ನೂ ನಡೆಸಲಾಗಿತ್ತು. ಪದ್ಮನಾಭ ಅವರಿಂದ ಯಾವುದೇ ಅಕ್ರಮ ನಡೆದಿಲ್ಲ ಎಂದು ಅಂದಿನ ಸಚಿವ ಶ್ರೀರಾಮುಲು ಅವರೇ ಹೇಳಿದ್ದರು.ಅದೇರೀತಿ ಈ ಸರಕಾರದಲ್ಲೂ ಪದ್ಮನಾಭ ಅವರು ವಾಲ್ಮೀಕಿ ನಿಗಮದ ಎಂಡಿ ಯಾಗಿದ್ದು, ಇದಕ್ಕೂ ಹಣಕಾಸು ಇಲಾಖೆ ಅನುಮತಿ ಸಿಕ್ಕಿಲ್ಲ ಎಂದು ಹಣಕಾಸು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ನೇಪಾಳದಲ್ಲಿ ದುರಂತ

ವಿಮಾನ ಪತನ 18 ಮಂದಿ ಸಾವು

ಕಠ್ಮಂಡು: ನೇಪಾಳದ ಕಠ್ಮಂಡುವಿನ ತ್ರಿಭುವನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶೌರ್ಯ ಏರ್‌ಲೈನ್ಸ್‌ನ ವಿಮಾನವೊಂದು ಟೇಕ್‌ಆಫ್ ವೇಳೆ ಪತನವಾಗಿದೆ. ಘಟನೆಯಲ್ಲಿ ವಿಮಾನದಲ್ಲಿದ್ದ 18 ಮಂದಿ ತಾಂತ್ರಿಕ ಸಿಬ್ಬಂದಿ ಮೃತಪಟ್ಟಿದ್ದು, ಪೈಲಟ್ ಒಬ್ಬರು ಗಾಯಗೊಂಡಿದ್ದಾರೆ. ಬೆಳಗ್ಗೆ 11 ಗಂಟೆ ಸುಮಾರಿಗೆ ವಿಮಾನ ಪೋಖರಾಗೆ ತೆರಳುತ್ತಿತ್ತು, ಈ ವೇಳೆ ಅಪಘಾತ ಸಂಭವಿಸಿದೆ. ಟೇಕ್‌ಆಫ್ ವೇಳೆ ವಿಮಾನವು ರನ್ ವೇಯಿಂದ ಹೊರಬಿದ್ದಿದ್ದು, ಬೆಂಕಿ ಹೊತ್ತಿಕೊಂಡಿದೆ. ಸ್ಥಳದಲ್ಲಿ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಬೀಡುಬಿಟ್ಟಿದ್ದಾರೆ.

ಶಿರೂರು ದುರಂತ: ಹೈಕೋರ್ಟ್‌ಗೆ ಕೇಂದ್ರದ ಮಾಹಿತಿ

ಬೆಂಗಳೂರು: ಅಂಕೋಲಾ ತಾಲೂಕಿನ ಶಿರೂರು ಗ್ರಾಮ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ-66ರಲ್ಲಿ ಉಂಟಾದ ಗುಡ್ಡ ಕುಸಿತ ಹೈಕೋರ್ಟ್ ಮೆಟ್ಟಿಲೇರಿದೆ. ಪ್ರಕರಣದಲ್ಲಿ ಮಣ್ಣಿನಡಿ ಸಿಲುಕಿರುವ ಕೇರಳ ಮೂಲದ ಲಾರಿ ಚಾಲಕನ ಪತ್ತೆ ಕೋರಿ ಕೇರಳ ಮೂಲದ ವಕೀಲರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಬುಧವಾರ ಕೇಂದ್ರ ಪರವಾಗಿ ಹಾಜರಾದ ವಕೀಲರು ಸೇನಾ ತಂಡದಿಂದ ರಕ್ಷಣಾ ಕಾರ್ಯ ಕಾರ್ಯಾಚರಣೆ ಭರದಿಂದ ಸಾಗಿದೆ ಎಂದು ತಿಳಿಸಿದರು. ನಾಪತ್ತೆಯಾದ ಲಾರಿ ನದಿಯಲ್ಲಿ ಪತ್ತೆಯಾಗಿದೆ ಎಂದು ಸಚಿವ ಕೃಷ್ಣ ಭೈರೇಗೌಡ ತಿಳಿಸಿದ್ದಾರೆ.

ಪ್ರಜ್ವಲ್ ರೇವಣ್ಣ ಅರ್ಜಿ ವಜಾ

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ಹಾಸನ ಜೆಡಿಎಸ್ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ ವಜಾಗೊಂಡಿದೆ. ಎರಡನೇ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಪ್ರಜ್ವಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಮನವಿಯನ್ನು ವಜಾಮಾಡಿದ್ದಾರೆ.

ಮಹಾಲಕ್ಷ್ಮಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ
ನಂ.664, "ಆಶೀರ್ವಾದ", ಮೊದಲನೇ ಮಹಡಿ, 4ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು – 560086.

17ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಪ್ರಕಟಣೆ

ಮಾನ್ಯ ಸದಸ್ಯರುಗಳೇ,

ಸಹಕಾರಿಯ **2023–24** ನೇ ಸಾಲಿನ **17ನೇ** ವಾರ್ಷಿಕ ಸರ್ವ ಸದಸ್ಯರ **ಸಭೆಯನ್ನು ದಿನಾಂಕ 28–07–2024 ರ ಭಾನುವಾರ ಬೆಳಿಗ್ಗೆ 10:30 ಕ್ಕೆ ಸರಿಯಾಗಿ ವಾಸವಿ ದೇವಸ್ಥಾನದ ಸಭಾಂಗಣ, ಮಹಾಲಕ್ಷ್ಮೀ ಬಡಾವಣೆ, ಬೆಂಗಳೂರು 560086**. ಇಲ್ಲಿ ನಡೆಸಲು ನಿರ್ಣಯಿಸಲಾಗಿದೆ. ಹಾಗೂ ಎಲ್ಲಾ ಅರ್ಹ ಸದಸ್ಯರುಗಳಿಗೆ ಸೂಚನಾ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಸೂಚನಾ ಪತ್ರ ತಲುಪದೇ ಇರುವ ಸದಸ್ಯರು ಈ ಜಾಹಿರಾತನ್ನೇ ಸೂಚನಾ ಪತ್ರವೆಂದು ತಿಳಿದು ಹಾಜರಾಗಬೇಕಾಗಿ ವಿನಂತಿ.

ಸ್ಥಳ: ಬೆಂಗಳೂರು.
ದಿನಾಂಕ: **06-07-2024.**

ಆಡಳಿತ ಮಂಡಳಿಯ ಪರವಾಗಿ
ಕಾರ್ಯದರ್ಶಿ.

SJS

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್
(ಹಿಂದೆ ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್)
ನೋಂದಾಯಿತ ಮತ್ತು ಕಾರ್ಪೊರೇಟ್ ಕಛೇರಿ: ಅಗರ ಗ್ರಾಮದ ಸರ್ವೆ ಸಂಖ್ಯೆ 28/P16 ಮತ್ತು ಬಿ.ಎಮ್ ಕಾವಲ್ ಗ್ರಾಮದ ಸರ್ವೆ ಸಂಖ್ಯೆ 85/P6, ಕೆಂಗೇರಿ ಹೋಬಳಿ, ಬೆಂಗಳೂರು 560 082, ಕರ್ನಾಟಕ, ಭಾರತ
ವೆಬ್‌ಸೈಟ್: www.sjsindia.com | **ಇ-ಮೇಲ್:** compliance@sjsindia.com
ದೂರವಾಣಿ: +91 80 6194 0777 | **CIN: L51909KA2005PLC036601**

19ನೇ ಆ್ಯನ್ಯೂಅಲ್ ಜನರಲ್ ಮೀಟಿಂಗ್ (ವಾರ್ಷಿಕ ಸಾಮಾನ್ಯ ಸಭೆ) ಹಾಗೂ ಇ-ವೋಟಿಂಗ್ ಮಾಹಿತಿಯ ಸೂಚನೆ

ಎಸ್.ಜೆ.ಎಸ್ ಎಂಟರ್‌ಪ್ರೈಸಸ್ ಲಿಮಿಟೆಡ್ ('ಕಂಪನಿ')ಯ ಹತ್ತೊಂಬತ್ತನೇಯ (19ನೇ) ಆ್ಯನ್ಯೂಅಲ್ ಜೆನರ್ ಮೀಟಿಂಗ್ ('ಎಜಿಎಮ್') ಅನ್ನು ವಿಡಿಯೋ ಕಾನ್ಫರೆನ್ಸಿಂಗ್/ಇತರ ಆಡಿಯೋ ವಿಶ್ಯೂಅಲ್ ಮೀನ್ಸ್ **('ವಿಸಿ/ಒಎವಿಎಮ್') ಮೂಲಕ ಮಂಗಳವಾರ, 20ನೇ ಆಗಸ್ಟ್, 2024ರಂದು ಮಧ್ಯಾಹ್ನದ ಮೇಲೆ 03:30 ಕ್ಕೆ (ಐಎಸ್‌ಟಿ) ನಡೆಸಲಾಗುತ್ತಿದ್ದು** ಕಂಪನೀಸ್ ಆ್ಯಕ್ಟ್, 2013 ('ಆ್ಯಕ್ಟ್') ಹಾಗೂ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅನ್ವಯವಾಗುವ ನಿಬಂಧನೆಗಳಿಗೆ ಅನುಗುಣವಾಗಿ, ಮಿನಿಸ್ಟ್ರಿ ಆಫ್ ಕಾರ್ಪೋರೇಟ್ ಅಫೇರ್ಸ್ (''ಎಮ್‌ಸಿಎ'') ಏಪ್ರಿಲ್ 13, 2020ರ ದಿನಾಂಕದ ಜನರಲ್ ಸರ್ಕ್ಯೂಲರ್ (ಸುತ್ತೋಲೆ) ನಂ. 17/2020, ಜನವರಿ 13, 2021ರ ದಿನಾಂಕದ ಜನರಲ್ ಸರ್ಕ್ಯೂಲರ್ ನಂ. 02/2021, ಡಿಸೆಂಬರ್ 8, 2021ರ ದಿನಾಂಕದ ಜನರಲ್ ಸರ್ಕ್ಯೂಲರ್ ನಂ.19/2021, ಡಿಸೆಂಬರ್ 14, 2021ರ ದಿನಾಂಕದ ಜನರಲ್ ಸರ್ಕ್ಯೂಲರ್ ನಂ. 21/2021, ಮೇ 5, 2022ರ ದಿನಾಂಕದ ಜನರಲ್ ಸರ್ಕ್ಯೂಲರ್ ನಂ. 02/2022, ಡಿಸೆಂಬರ್ 28, 2020ರ ದಿನಾಂಕದ ಜನರಲ್ ಸರ್ಕ್ಯೂಲರ್ ನಂ. 10/2022, ಸೆಪ್ಟೆಂಬರ್ 25, 2023ರ ದಿನಾಂಕದ ಜನರಲ್ ಸರ್ಕ್ಯೂಲರ್ ನಂ.09/2023, ('ಎಮ್‌ಸಿಎ ಸರ್ಕ್ಯೂಲರ್‌ಗಳು') ಹಾಗೂ ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಸರ್ಕ್ಯೂಲರ್ ನಂಬರ್‌ಗಳು. ಮೇ 12, 2020ರ ದಿನಾಂಕದ ಎಸ್‌ಇಬಿಐ/ಎಚ್‌ಓ/ಸಿಎಫ್‌ಡಿ/ಸಿಎಮ್‌ಡಿ1/ಸಿಐಆರ್/ಪಿ/2020/79, ಜನವರಿ 15, 2021ರ ದಿನಾಂಕದ ಎಸ್‌ಇಬಿಐ/ಎಚ್‌ಓ/ಸಿಎಫ್‌ಡಿ/ಸಿಎಮ್‌ಡಿ2/ಸಿಐಆರ್/ಪಿ/2021/11, ಜನವರಿ 5,2023ರ ದಿನಾಂಕದ ಎಸ್‌ಇಬಿಐ/ಎಚ್‌ಓ/ಸಿಎಫ್‌ಡಿ/ಪಿಒಡಿ-2/ಪಿ/ಸಿಐಆರ್/2023/4 ಹಾಗೂ ಅಕ್ಟೋಬರ್ 7,2023ರ ದಿನಾಂಕದ ಎಸ್‌ಇಬಿಐ/ಎಚ್‌ಓ/ಸಿಎಫ್‌ಡಿ/ಸಿಎಫ್‌ಡಿ ಪಿಒಡಿ-2/ಪಿ/ಸಿಐಆರ್/2023/167 (''ಎಸ್‌ಇಬಿಐ/ಸೆಬಿ ಸರ್ಕ್ಯೂಲರ್‌ಗಳು'') (ಎಮ್‌ಸಿಎ ಸರ್ಕ್ಯೂಲರ್‌ಗಳು ಹಾಗೂ ಸೆಬಿ ಸರ್ಕ್ಯೂಲರ್‌ಗಳನ್ನು ಒಟ್ಟಾರೆಯಾಗಿ 'ಸರ್ಕ್ಯೂಲರ್‌ಗಳು' ಎಂದುಉಲ್ಲೇಖಿಸಲಾಗುತ್ತದೆ) ಓದುವುದರೊಂದಿಗೆ, ಎಜಿಎಮ್‌ನಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೇ ಅಂದರೆ, ವಾಸ್ತವಿಕವಾಗಿ, ಎಜಿಎಮ್ ನೋಟೀಸಿನಲ್ಲಿ ನಿಗದಿಪಡಿಸಿದಂತೆ ವ್ಯವಹಾರವನ್ನು ನಡೆಸಲು ಈ ಮೂಲಕ ನೋಟೀಸು ನೀಡಲಾಗಿದೆ. ವಿಸಿ/ಓಎವಿಎಮ್ ಮೂಲಕ ಎಜಿಎಮ್‌ಗೆಹಾಜರಾಗುವ ಸದಸ್ಯರನ್ನು ಆ್ಯಕ್ಟ್‌ನ 103ನೇ ಸೆಕ್ಷನ್ ಅಡಿಯಲ್ಲಿ ಕೋರಂ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ.

ಸರ್ಕ್ಯೂಲರ್‌ಗಳಿಗೆ ಅನುಸಾರವಾಗಿ, ಹಣಕಾಸು ವರ್ಷ 2023-24ರ ('ವಾರ್ಷಿಕ ವರದಿ') ಆ್ಯನ್ಯೂಅಲ್ ರಿಪೋರ್ಟ್‌ನೊಂದಿಗೆ ಎಜಿಎಮ್ ನೋಟೀಸ್ ಅನ್ನು ಯಾವುದೇ ಸದಸ್ಯರು ಅದರ ಭೌತಿಕ ಪ್ರತಿಯನ್ನು ಕೋರದಿದ್ದರೆ, ಎಲೆಕ್ಟ್ರಾನಿಕ್ ಮೋಡ್ ಮೂಲಕ ಕಂಪನಿ/ಕಂಪನಿಯ ರೆಜಿಸ್ಟ್ರಾರ್ ಆ್ಯಂಡ್ ಟ್ರಾನ್ಸ್‌ಫರ್ ಏಜಂಟ್ ('ಆರ್‌ಟಿಎ') ಅಂದರೆ, ಲಿಂಕ್ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ('ಎಲ್‌ಐಐಪಿಎಲ್')/ಡಿಪೋಸಿಟರಿ ಪಾರ್ಟಿಸಿಪೆಂಟ್ಸ್ ('ಡಿಪಿಗಳು')ಗಳೊಂದಿಗೆ ಇಮೇಲ್ ವಿಳಾಸವನ್ನು ನೋಂದಾಯಿಸಿರುವ ಸದಸ್ಯರಿಗೆ ಮಾತ್ರ ಕಳುಹಿಸಲಾಗಿದೆ. ಮೇಲೆ ಹೇಳಿದ ಡಾಕ್ಯುಮೆಂಟ್‌ಗಳು ಕಂಪನಿಯ ವೆಬ್‌ಸೈಟ್ www.sjsindia.com ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಅಂದರೆ ಬಿಎಸ್‌ಇ ಲಿಮಿಟೆಡ್ www.bseindia.com ನಲ್ಲಿ, ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ www.nseindia.com ನಲ್ಲಿ ಹಾಗೂ ಆರ್‌ಟಿಎದ ವೆಬ್‌ಸೈಟ್ https://instavote.linkintime.co.in. ನಲ್ಲಿ ಸಹ ಲಭ್ಯವಿರುತ್ತದೆ. ಎಜಿಎಮ್ ನೋಟೀಸಿನ ರವಾನೆಯು ಭುಧ್ದವಾರ ಜುಲೈ 24, 2024 ರಂದು ಪೂರ್ಣಗೊಂಡಿದೆ.

ಕಂಪನಿ/ಆರ್‌ಟಿಎ/ಡಿಪಿಯೊಂದಿಗೆ ಈಗಾಗಲೇ ಇಮೇಲ್ ಐಡಿಗಳನ್ನು ನೋಂದಾಯಿಸಿರುವ ಸದಸ್ಯರು, ಎಜಿಎಮ್ ನೋಟೀಸಿನಲ್ಲಿ ಒದಗಿಸಿದಂತೆ, ಸಂದರ್ಭಾನುಸಾರವಾಗಿ, ಎಜಿಎಮ್‌ನ ಮೊದಲು ರಿಮೋಟ್ ಇ-ವೋಟಿಂಗ್ ಹಾಗೂ ಎಜಿಎಮ್ ಸಮಯದಲ್ಲಿ ಇ-ವೋಟಿಂಗ್‌ಗಾಗಿ ಸೂಚನೆಗಳನ್ನು ಅನುಸರಿಸಬಹುದು. ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರು ಕಂಪನಿಯಿಂದ ನೋಟೀಸ್‌ಗಳನ್ನು ಒಳಗೊಂಡು ಎಲ್ಲಾ ಸಂವಹನಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಸ್ವೀಕರಿಸಲು ಭವಿಷ್ಯದ ಸಂವಹನಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಕಳುಹಿಸುವುದಕ್ಕಾಗಿ ಕಂಪನಿಯ ಆರ್‌ಟಿಎ/ಅವರ ಸಂಬಂಧಿತ ಡಿಪಿಗಳೊಂದಿಗೆ ಅದನ್ನು ನೋಂದಾಯಿಸಲು ಕೋರಲಾಗಿದೆ. ಶೇರುಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಹೊಂದಿದ್ದ ಸಂದರ್ಭದಲ್ಲಿ ಡಿಪಿಯೊಂದಿಗೆ ಹಾಗೂ ಶೇರ್‌ಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದ ಸಂದರ್ಭದಲ್ಲಿ ಕಂಪನಿಯ ಆರ್‌ಟಿಎಯೊಂದಿಗೆ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳಬಹುದು. ಇಮೇಲ್ ಐಡಿಯ ಯಶಸ್ವಿ ನೋಂದಣಿಯ ನಂತರ, ಇ-ವೋಟಿಂಗ್‌ಗಾಗಿ ಲಾಗಿನ್ ಐಡಿ ಹಾಗೂ ಪಾಸ್‌ವರ್ಡ್ ಅನ್ನು ಸದಸ್ಯರ ನೋಂದಾಯಿತ ಇಮೇಲ್ ಐಡಿಯಲ್ಲಿಹಂಚಿಕೊಳ್ಳಲಾಗುತ್ತದೆ.

ಆ್ಯಕ್ಟ್‌ನ ಸೆಕ್ಷನ್ 108ರ ನಿಬಂಧನೆಗಳಿಗೆ ಅನುಸಾರವಾಗಿ ಕಾಲ ಕಾಲಕ್ಕೆ ತಿದ್ದುಪಡಿ ಮಾಡಿದಂತೆ, ಕಂಪನೀಸ್ (ಮ್ಯಾನೇಜ್‌ಮೆಂಟ್ ಹಾಗೂ ಆ್ಯಡ್ಮಿನಿಸ್ಟ್ರೇಶನ್)ರೂಲ್ಸ್,2014ರ ರೂಲ್ 20 ಹಾಗೂ ಎಸ್‌ಇಬಿಐ /ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್‌ಗಳು ಹಾಗೂ ಡಿಸ್ಕ್ಲೋಸರ್ ರಿಕ್ವಾಯರ್‌ಮೆಂಟ್‌ಗಳು)ರೆಗ್ಯೂಲೇಶನ್ಸ್ 2015 ರ ('ಲಿಸ್ಟಿಂಗ್ ರೆಗ್ಯೂಲೇಶನ್ಸ್') ರೆಗ್ಯೂಲೇಶನ್ 44 ಅನ್ನು ಓದುವುದರೊಂದಿಗೆ, ಎಜಿಎಮ್ ನೋಟೀಸಿನಲ್ಲಿ ಸೂಚಿಸಲಾದ ಎಲ್ಲಾ ನಿರ್ಣಯಗಳ ಮೇಲೆ, ರಿಮೋಟ್ ಇ-ವೋಟಿಂಗ್ ಸೌಲಭ್ಯ (ಎಜಿಎಮ್‌ಗೆ ಮೊದಲು) ಹಾಗೂ ಇ-ವೋಟಿಂಗ್ ಸೌಲಭ್ಯದ (ಎಜಿಎಮ್ ಸಮಯದಲ್ಲಿ) ಮೂಲಕ ಎಲೆಕ್ಟ್ರಾನಿಕ್ ರೂಪದಲ್ಲಿ ತಮ್ಮ ವೋಟ್‌ಗಳನ್ನು ಹಾಕಲು ಸದಸ್ಯರಿಗೆ ಸೌಲಭ್ಯವನ್ನು ಒದಗಿಸಲಾಗುತ್ತದೆ. ವೋಟ್‌ಗಳನ್ನು ಹಾಕುವ ಸೌಲಭ್ಯವನ್ನು ಎಲ್‌ಐಐಪಿಎಲ್ ಒದಗಿಸಲಿದೆ. ಎಜಿಎಮ್‌ನ ಸಮಯದಲ್ಲಿ ಇ-ವೋಟಿಂಗ್‌ನ ಸೌಲಭ್ಯವನ್ನು ವಿಸಿ/ಓಎವಿಎಮ್ ಸೌಲಭ್ಯವದ ಮೂಲಕ ಎಜಿಎಮ್‌ನಲ್ಲಿ ಉಪಸ್ಥಿತರಿರುವ ಹಾಗೂ ರಿಮೋಟ್ ಇ-ವೋಟಿಂಗ್ ಮೂಲಕ ನಿರ್ಣಯಗಳ ಮೇಲೆ ತಮ್ಮ ವೋಟ್ ಅನ್ನು ಹಾಕದ ಸದಸ್ಯರಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ. ಎಜಿಎಮ್‌ಗೆ ಮೊದಲು ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ವೋಟ್ ಅನ್ನು ಹಾಕಿದ ಸದಸ್ಯರು ವಿಸಿ/ಓಎವಿಎಮ್ ಮೂಲಕ ಎಜಿಎಮ್‌ನಲ್ಲಿ ಹಾಜರಾಗಬಹುದು/ಭಾಗವಹಿಸಬಹುದು ಆದರೆ ಎಜಿಎಮ್‌ನಲ್ಲಿ ವೋಟ್ ಮಾಡಲು ಅರ್ಹರಾಗಿರುವುದಿಲ್ಲ.

ರೆಕಾರ್ಡ್ ಡೇಟ್ ಹಾಗೂ ಡಿವಿಡೆಂಡ್: 20ನೇ ಮೇ 2024ರಂದು ನಡೆದ ಮೀಟಿಂಗ್‌ನಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯು 10/-ರ ಮುಖ ಬೆಲೆಯ ಆರ್ಡಿನರಿ (ಇಕ್ವಿಟಿ) ಷೇರಿಗೆ ರೂ.2/-(20%)ರ ಡಿವಿಡೆಂಡ್ ಅನ್ನು ಶಿಫಾರಸುಮಾಡಿರುವುದನ್ನು ಸದಸ್ಯರು ಗಮನಿಸಬಹುದು. ಡಿವಿಡೆಂಡ್ ಅನ್ನು ಎಜಿಎಮ್‌ನಲ್ಲಿ ಘೋಷಿಸಿದರೆ, ಮೂಲದಲ್ಲಿ ತೆರಿಗೆ ಕಡಿತಕ್ಕೆ ಒಳಪಟ್ಟು ಪಾವತಿಸಲಾಗುವುದು. ನಿಗದಿತ ದರಗಳಲ್ಲಿ ಶೇರ್‌ಹೋಲ್ಡರ್‌ಗಳಿಗೆ ಪಾವತಿಸಿದ ಡಿವಿಡೆಂಡ್‌ಗಳಿಂದ ತೆರಿಗೆಯನ್ನು ತಡೆಹಿಡಿಯುವ ಪ್ರಕ್ರಿಯೆಯನ್ನು ವಿವರಿಸಲು, ಕಂಪನಿ/ಡಿಪಾಸಿಟರಿಗಳೊಂದಿಗೆ ಇಮೇಲ್ ಐಡಿಗಳು ನೋಂದಾಯಿತವಾಗಿರುವ ಎಲ್ಲಾ ಸದಸ್ಯರಿಗೆ, ಕಂಪನಿಯು 08ನೇ ಜುಲೈ 2024ರ ದಿನಾಂಕದಂದು ಇಮೇಲ್ ಸಂವಹನವನ್ನು ಕಳುಹಿಸಿದೆ. ಸಂವಹನವು ಅಗತ್ಯ ಅನುಬಂಧಗಳನ್ನು ಸಹ ಒಳಗೊಂಡಿದೆ. ಎಸ್‌ಇಬಿಐ(ಸೆಬಿ) (ಪಟ್ಟಿಮಾಡುವ ಬಾಧ್ಯತೆಗಳು ಹಾಗೂ ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ರೆಗ್ಯುಲೇಶನ್ಸ್ 2015ರ ರೆಗ್ಯೂಲೇಶನ್ 42ಕ್ಕೆ ಅನುಸಾರವಾಗಿ, ಮಂಡಳಿಯು 31ನೇ ಮಾರ್ಚ್, 2024ರಂದು ಕೊನೆಗೊಂಡಿರುವ ಹಣಕಾಸು ವರ್ಷಕ್ಕಾಗಿ, ಡಿವಿಡೆಂಡ್ ಅನ್ನು ಸ್ವೀಕರಿಸಲು ಅರ್ಹವಾಗಿರುವ ಸದಸ್ಯರನ್ನು ನಿರ್ಧರಿಸುವುದಕ್ಕಾಗಿ ಮಂಗಳವಾರ, 13 ಆಗಸ್ಟ್ 2024 ಅನ್ನು ರೆಕಾರ್ಡ್ ಡೇಟ್ ಆಗಿ ನಿಗದಿಪಡಿಸಿದೆ.

ಬುಕ್ ಕ್ಲೋಸರ್: ಕಂಪನೀಸ್ ಆ್ಯಕ್ಟ್, 2013ರ ಸೆಕ್ಷನ್ 91ಕ್ಕೆ ಅನುಸಾರವಾಗಿ ಅದರ ಅಡಿಯಲ್ಲಿ ರೂಪಿಸಲಾದ ರೂಲ್ಸ್ ಹಾಗೂ ಎಸ್‌ಇಬಿಐ (ಸೆಬಿ) (ಪಟ್ಟಿಮಾಡುವ ಬಾಧ್ಯತೆಗಳು ಹಾಗೂ ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ರೆಗ್ಯುಲೇಶನ್ಸ್, 2015ರ ರೆಗ್ಯೂಲೇಶನ್ 42 ಓದುವುದರೊಂದಿಗೆ, ಕಂಪನಿಯ ರೆಜಿಸ್ಟರ್ ಆಫ್ ಮೆಂಬರ್ (ಸದಸ್ಯರ ನೋಂದಣಿ) ಹಾಗೂ ಷೇರ್ ಟ್ರಾನ್ಸ್‌ಫರ್ ಬುಕ್ಸ್ ಬಧವಾರ, 14ನೇ ಆಗಸ್ಟ್, 2024, ರಿಂದ ಮಂಗಳವಾರ, 20ನೇ ಆಗಸ್ಟ್, 2024ರವರೆಗೆ (ಎರಡೂ ದಿನವನ್ನು ಒಳಗೊಂಡು) ಎಜಿಎಮ್‌ನ ಉದ್ದೇಶಕ್ಕಾಗಿ, ಅಂದರೆ ವಾರ್ಷಿಕ ಕ್ಲೋಸಿಂಗ್ ಹಾಗೂ ಹಣಕಾಸು ವರ್ಷ '24ಕ್ಕಾಗಿ ಅಂತಿಮ ಡಿವಿಡೆಂಡ್‌ಗಾಗಿ ಸದಸ್ಯರ ಅರ್ಹತೆಯನ್ನು ನಿರ್ಧರಿಸುವುದಕ್ಕಾಗಿ ಮುಚ್ಚಿರುತ್ತದೆ.

ಎಲ್ಲಾ ಸದಸ್ಯರಿಗೆ ತಿಳಿಸಲಾಗಿರುವುದೇನೆಂದರೆ:

1. 19 ನೇ ಎಜಿಎಮ್ ನೋಟೀಸ್‌ನಲ್ಲಿ ಸೂಚಿಸಿರುವ ಬಿಜಿನೆಸ್ ಅನ್ನು ಎಜಿಎಮ್‌ನ ಮೊದಲು ಅಥವಾ ಎಜಿಎಮ್‌ನ ಸಮಯದಲ್ಲಿ ರಿಮೋಟ್ ಇ-ವೋಟಿಂಗ್‌ನ ರೂಪದಲ್ಲಿ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ವೋಟ್ ಮಾಡುವ ಮೂಲಕ ವಹಿವಾಟು ನಡೆಸಲಾಗುವುದು.
2. ಸದಸ್ಯರ ವೋಟ್ ಮಾಡುವ ಹಕ್ಕುಗಳು ಕಟ್-ಆಫ್ ದಿನಾಂಕ ಅಂದರೆ ಮಂಗಳವಾರ, 13 ಆಗಸ್ಟ್, 2024ರಂದಿನಂತೆ ಕಂಪನಿಯ ಪೇಯ್ಡ್ ಅಪ್ ಇಕ್ವಿಟಿ ಶೇರ್ ಕ್ಯಾಪಿಟಲ್‌ನಲ್ಲಿ ಅವರ ಶೇರುಗಳ ಅನುಪಾತದಲ್ಲಿರಬೇಕು. ಕಟ್-ಆಫ್ ದಿನಾಂಕದಂದಿನಂತೆ ಸದಸ್ಯರ ರೆಜಿಸ್ಟರ್‌ನಲ್ಲಿ ಅಥವಾ ಡಿಪಾಸಿಟರಿಗಳು ನಿರ್ವಹಿಸಿದ ಫಲಾನುಭವಿ ಮಾಲೀಕರ ರೆಜಿಸ್ಟರ್‌ನಲ್ಲಿ ದಾಖಲಾಗಿರುವ ವ್ಯಕ್ತಿಯ ಹೆಸರು ಮಾತ್ರ ಎಜಿಎಮ್‌ಗೆ ಮೊದಲು ರಿಮೋಟ್ ಇ-ವೋಟಿಂಗ್/ಎಜಿಎಮ್ ಸಮಯದಲ್ಲಿ ಇ-ವೋಟಿಂಗ್ ಮೂಲಕ ವೋಟ್ ಮಾಡಲು ಅರ್ಹವಾಗಿರುತ್ತದೆ.
3. ಎಜಿಎಮ್‌ನ ನೋಟೀಸನ್ನು ಕಳುಹಿಸಿದ ನಂತರ ಕಂಪನಿಯ ಶೇರುಗಳನ್ನು ಪಡೆದುಕೊಳ್ಳುವ ಹಾಗೂ ಕಂಪನಿಯ ಸದಸ್ಯರಾಗುವ ಹಾಗೂ ಕಟ್-ಆಫ್ ದಿನಾಂಕದಂದಿನಂತೆ ಶೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯು, ತಮ್ಮ ಫೋಲಿಯೋ ನಂ./ಡಿಪಿ ಐಡಿ ಹಾಗೂ ಕ್ಲೈಂಟ್ ಐಡಿಯನ್ನು ನಮೂದಿಸುವ ಮೂಲಕ ಎಲೆಕ್ಟ್ರಾನಿಕ್ ಸಾಧನಗಳ ಮೂಲಕ ತಮ್ಮ ವೋಟ್‌ಗಳನ್ನು ಚಲಾಯಿಸಲು ಯೂಸರ್ ಐಡಿ ಹಾಗೂ ಪಾಸ್‌ವರ್ಡ್ ನೀಡಿಕೆಗಾಗಿ enotices@linkintime.co.in ನಲ್ಲಿ ಆರ್‌ಟಿಎಗೆ ಇಮೇಲ್ ಕಳುಹಿಸುವ ಮೂಲಕ ಯೂಸರ್ ಐಡಿ ಹಾಗೂ ಪಾಸ್‌ವರ್ಡ್ ಅನ್ನು ಪಡೆದುಕೊಳ್ಳಬಹುದು. ಹೀಗಿದ್ದಾಗ್ಯೂ, ಇ-ವೋಟಿಂಗ್‌ಗಾಗಿ ಆರ್‌ಟಿಎದೊಂದಿಗೆ ಒಬ್ಬ ಸದಸ್ಯ ಈಗಾಗಲೇ ನೋಂದಾಯಿಸಿದ್ದರೆ, ಆಗ ಅಸ್ತಿತ್ವದಲ್ಲಿರುವ ಯೂಸರ್ ಐಡಿ ಹಾಗೂ ಪಾಸ್‌ವರ್ಡ್ ಅನ್ನು ತಮ್ಮ ವೋಟನ್ನು ಹಾಕಲು ಬಳಸಬಹುದು.
4. ರಿಮೋಟ್ ಇ-ವೋಟಿಂಗ್ ಅವಧಿಯು ಶನಿವಾರ, 17 ಆಗಸ್ಟ್, 2024ರಂದು ಬೆಳಿಗ್ಗೆ 9:00ಗಂಟೆಗೆ ಪ್ರಾರಂಭವಾಗುತ್ತದೆ ಹಾಗೂ ಸೋಮವಾರ, 19 ಆಗಸ್ಟ್, 2024ರಂದು ಸಂಜೆ 5:00 ಗಂಟೆಗೆ (ಐಎಸ್‌ಟಿ) ಕೊನೆಗೊಳ್ಳುತ್ತದೆ. ಈ ಸಮಯದ ನಂತರ ಎಲ್‌ಐಐಪಿಎಲ್ ರಿಮೋಟ್ ಇ-ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸುತ್ತದೆ. ಸದಸ್ಯರು ಒಮ್ಮೆ ನಿರ್ಣಯದ ಮೇಲೆ ವೋಟ್ ಅನ್ನು ಹಾಕಿದ ನಂತರ, ಸದಸ್ಯರಿಗೆ ಅದನ್ನು ತರುವಾಯ ಬದಲಾಯಿಸಲು ಅವಕಾಶ ನೀಡಲಾಗುವುದಿಲ್ಲ. ಈ ಸಮಯದಲ್ಲಿ, ಭೌತಿಕ ರೂಪದಲ್ಲಿ ಅಥವಾ ಡಿಮಟೀರಿಯಲೈಸ್ಡ್ ರೂಪದಲ್ಲಿ ಶೇರುಗಳನ್ನು ಹೊಂದಿರುವ ಸದಸ್ಯರು ಎಜಿಎಮ್‌ಗೆ ಮೊದಲು ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ವೋಟ್ ಅನ್ನು ಹಾಕಬಹುದು.
5. ಸದಸ್ಯರಿಗೆ ಎಜಿಎಮ್ ಸಮಯದಲ್ಲಿ ಇ-ವೋಟಿಂಗ್‌ಗಾಗಿ ಸೌಲಭ್ಯವನ್ನು ಒದಗಿಸಲಾಗುತ್ತದೆ ಹಾಗೂ ಎಜಿಎಮ್‌ನಲ್ಲಿ ಭಾಗವಹಿಸುವ ಸದಸ್ಯರು ಎಜಿಎಮ್‌ಗೆ ಮೊದಲು ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತವನ್ನು ಹಾಕದಿದ್ದರೆ, ಎಜಿಎಮ್‌ನ ಸಮಯದಲ್ಲಿ ವೋಟ್ ಮಾಡಲು ಅರ್ಹರಾಗಿರುತ್ತಾರೆ.
6. ಎಜಿಎಮ್‌ಗಿಂತ ಮೊದಲು ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ವೋಟ್ ಅನ್ನು ಹಾಕಿರುವ ಸದಸ್ಯರು ವಿಸಿ/ಓಎವಿಎಮ್ ಮೂಲಕ ಎಜಿಎಮ್‌ನಲ್ಲಿ ಹಾಜರಾಗಬಹುದು/ಭಾಗವಹಿಸಬಹುದು, ಆದರೆ ಎಜಿಎಮ್ ಸಮಯದಲ್ಲಿ ಪುನಃ ವೋಟ್ ಮಾಡಲು ಅರ್ಹರಾಗಿರುವುದಿಲ್ಲ.
7. ಎಜಿಎಮ್‌ಗಿಂತ ಮೊದಲು ರಿಮೋಟ್ ಇ-ವೋಟಿಂಗ್‌ನ ವಿವರವಾದ ಪ್ರಕ್ರಿಯೆಗಳು ಹಾಗೂ ವಿಧಾನ, ಎಜಿಎಮ್‌ನ ಸಮಯದಲ್ಲಿ ಇ-ವೋಟಿಂಗ್ ಹಾಗೂ ವಿಸಿ/ಓಎವಿಎಮ್ ಮೂಲಕ ಎಜಿಎಮ್‌ಗೆ ಹಾಜರಾಗುವುದಕ್ಕಾಗಿ ಸೂಚನೆಗಳನ್ನು ಎಜಿಎಮ್ ನೋಟೀಸ್‌ನಲ್ಲಿ ಒದಗಿಸಲಾಗಿದ್ದು ಅದು ಕಂಪನಿಯ ವೆಬ್‌ಸೈಟ್ www.sjsindia.com ನಲ್ಲಿ ಸಹ ಲಭ್ಯವಿರುತ್ತದೆ.
8. ಕಂಪನಿಯ ಕಾರ್ಯದರ್ಶಿಗಳ ಬೋರ್ಡ್, ಶ್ರೀ ಅನಂತ ಆರ್ ದೇಶ್‌ಪಾಂಡೆ (ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರಿ) ಅವರನ್ನು (ಮೆಂಬರ್ ಶಿಪ್ ನಂ. ಎಫ್‌ಸಿಎಸ್4869) ನಿಷ್ಪಕ್ಷಪಾತ ಹಾಗೂ ಪಾರದರ್ಶಕ ರೀತಿಯಲ್ಲಿ ಎಜಿಎಮ್‌ಗೆ ಮೊದಲು ರಿಮೋಟ್ ಇ-ವೋಟಿಂಗ್‌ಗಾಗಿ ಹಾಗೂ ಎಜಿಎಮ್‌ನ ಸಮಯದಲ್ಲಿ ಇ-ವೋಟಿಂಗ್‌ಗಾಗಿ ಪ್ರಕ್ರಿಯೆಗಳನ್ನು ಪರಿಶೀಲಿಸಲು ಪರಿಶೋಧಕರಾಗಿ ನೇಮಿಸಿದೆ.
9. ವೋಟಿಂಗ್ ಫಲಿತಾಂಶಗಳನ್ನು ಎಜಿಎಮ್‌ನ ಮುಕ್ತಾಯದ ಎರಡು ಕೆಲಸದ ದಿನಗಳೊಳಗೆ ಘೋಷಿಸಲಾಗುತ್ತದೆ ಹಾಗೂ ಅದನ್ನು ಕನ್ಸಲಿಡೇಟೆಡ್ ಸ್ಕ್ರುಟಿನೈಝರ್ಸ್ ರಿಪೋರ್ಟ್‌ನೊಂದಿಗೆ ಕಂಪನಿಯ ವೆಬ್‌ಸೈಟ್ www.sjsindia.com ನಲ್ಲಿ ಹಾಕಲಾಗುತ್ತದೆ ಹಾಗೂ ಬಿಎಸ್‌ಇ ಲಿಮಿಟೆಡ್ ಹಾಗೂ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ಗೆ ತಿಳಿಸಲಾಗುತ್ತದೆ.
10. ಇ-ವೋಟಿಂಗ್‌ಗೆ ಸಂಬಂಧಿಸಿದ ಪ್ರಶ್ನೆಗಳು/ಕುಂದುಕೊರತೆಗಳು, ಯಾವುದಾದರೂ ಇದ್ದರೆ ಪರಿಹರಿಸುವುದಕ್ಕಾಗಿ ಸಂಪರ್ಕ ವಿವರಗಳು : ಫ್ರಿಕ್ವೆಂಟ್ಲಿ ಆಸ್ಕ್‌ಡ್ ಕ್ವಶ್ಚನ್ಸ್ (''ಎಫ್‌ಎಕ್ಯೂಗಳನ್ನು'') ಹಾಗೂ ಹೆಲ್ಪ್ ಸೆಕ್ಷನ್ ಅಡಿಯಲ್ಲಿ https://instavote.linkintime.co.in ನಲ್ಲಿ ಲಭ್ಯವಿರುವ ವೋಟ್ ಮ್ಯಾನ್ಯೂಅಲ್ ಅನ್ನು (ಕೈಪಿಡಿಯನ್ನು) ಅವಲೋಕಿಸಬಹುದು ಅಥವಾ enotices@linkintime.co.inಗೆ ಇ-ಮೇಲ್ ಮಾಡಬಹುದು ಅಥವಾ ಇಲ್ಲಿ ಸಂಪರ್ಕಿಸಿ: ದೂರವಾಣಿ 022-4918 6000, ಇನ್‌ಸ್ಟಾವೋಟ್ ಸಪೋರ್ಟ್ ಹೆಲ್ಪ್‌ಡೆಸ್ಕ್.

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್‌ಗಾಗಿ
ಸಹಿ/-
ಥಬ್ರಾಜ್ ಹುಶೇನ್ ಡಬ್ಲ್ಯೂ
ಕಂಪನಿ ಸೆಕ್ರೆಟರಿ ಹಾಗೂ ಕಂಪ್ಲೈನ್ಸ್ ಆಫಿಸರ್

ದಿನಾಂಕ : ಜುಲೈ 24, 2024
ಸ್ಥಳ : ಬೆಂಗಳೂರು

CONCEPT

ಬಿಹಾರ ಮೂಲದ ಯುವತಿಯ ಬರ್ಬರ ಹತ್ಯೆ | ಸಿಸಿಟಿವಿಯಲ್ಲಿ ದೃಶ್ಯ ಬಯಲು

ಮಹಿಳಾ ಪಿಜಿಗೆ ನುಗ್ಗಿ ಯುವತಿಯ ಹತ್ಯೆ: ಪ್ರಿಯಕರನೇ ಹಂತಕ, ಆರೋಪಿ ಪರಾರಿ

ಬೆಂಗಳೂರು: ನಗರದ ಕೋರಮಂಗಲದಲ್ಲಿರುವ ಮಹಿಳಾ ಪಿಜಿಗೆ ನುಗ್ಗಿದ ವ್ಯಕ್ತಿಯೊಬ್ಬ ಯುವತಿಯನ್ನು ಕೊಲೆಮಾಡಿ ಪರಾರಿಯಾಗಿರುವ ಘಟನೆ ಬೆಳಕಿಗೆ ಬಂದಿದೆ.

ಅಪರಾಧ ಸುದ್ದಿಗಳು

ಮೃತ ಯುವತಿಯನ್ನು ಬಿಹಾರದ ಕೃತಿ ಕುಮಾರಿ (24) ಎಂದು ಗುರುತಿಸಲಾಗಿದ್ದು, ಆಕೆಯ ಪ್ರಿಯತಮನೇ ಕೊಲೆಗಾರ ಎಂದು ಪೊಲೀಸರು ತಿಳಿಸಿದ್ದಾರೆ. ಕೃತಿ ಕುಮಾರಿ ತಾನು ಪ್ರೀತಿಸುತ್ತಿದ್ದ ಯುವಕನಿಂದಲೇ ಕೊಲೆಯಾಗಿದ್ದಾರೆ. ಮಂಗಳವಾರ ರಾತ್ರಿ 11:30ಕ್ಕೆ ಕೃತಿ ಕುಮಾರಿಯೇ ಯುವಕನನ್ನು ಕರೆದುಕೊಂಡು ಬಂದಿರುವ ಬಗ್ಗೆ ಮೇಲ್ನೋಟಕ್ಕೆ ತಿಳಿದುಬಂದಿದೆ. ಪಿಜಿಯಿಂದ ಹೊರ ಬಂದ ಕೃತಿ ತನ್ನ ಪ್ರಿಯತಮನ ಜತೆ ರಾತ್ರಿ ಊಟ ಮಾಡಿದ್ದರು. ನಂತರ ಕೃತಿ ತನ್ನೊಂದಿಗೆ ಯುವಕನನ್ನು ಪಿಜಿಗೆ ಕರೆತಂದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕೃತಿಯ ಕೊಠಡಿಗೆ ಆಗಮಿಸಿದ್ದ ವೇಳೆ ಇಬ್ಬರ ಮಧ್ಯೆ ಗಲಾಟೆಯಾಗಿ ಕೊಲೆಯಾಗಿರುವ ಶಂಕೆ ಇದೆ. ಕೋರಮಂಗಲ ಪೊಲೀಸರು ಸದ್ಯ ಆರೋಪಿಯ ಮಾಹಿತಿ ಕಲೆ ಹಾಕುತ್ತಿದ್ದಾರೆ. ಎರಡು ದಿನದ ಹಿಂದೆಯಷ್ಟೇ ಕೃತಿ ಪಿಜಿಗೆ ಸೇರಿದ್ದರು. ಆಕೆ ಪಿಜಿಗೆ ಆಗಮಿಸುವ ವೇಳೆಯೂ ಈ ಯುವಕ ಲಗೇಜ್ ತೆಗದುಕೊಂಡು ಬಂದಿದ್ದ. ಆಗ ಯುವಕನನ್ನು ಒಳಬಿಡುವುದಿಲ್ಲ ಎಂದು ಪಿಜಿ ಸೆಕ್ಯೂರಿಟಿ ತಡೆದಿದ್ದರು. ಸೆಕ್ಯುರಿಟಿ ಬಳಿ, ಆತ ತನ್ನ ಸಹೋದರ ಎಂದು ಹೇಳಿ ಬೇಗ ಕಳುಹಿಸುತ್ತೇನೆ ಎಂದು ಕೃತಿ ಒಳ ಕರೆದುಕೊಂಡು ಹೋಗಿದ್ದರು ಎನ್ನಲಾಗಿದೆ.

ಘಟನೆ ಹಿನ್ನೆಲೆ: ಮಂಗಳವಾರ ರಾತ್ರಿ 11.10ಕ್ಕೆ ಯುವಕನೋರ್ವ ಚಾಕು ಇಟ್ಟುಕೊಂಡು ಕೃತಿ ಇದ್ದ ಲೇಡೀಸ್ ಪಿಜಿಯೊಳಗೆ ನುಗ್ಗಿ ಆಕೆಯ ಕತ್ತು ಕೊಯ್ದು ಹತ್ಯೆಮಾಡಿ ಪರಾರಿಯಾಗಿದ್ದ. ಪರಿಚಯಸ್ಥ ಯುವಕನಿಂದಲೇ ಕೃತ್ಯ ನಡೆದಿರುವ ಬಗ್ಗೆ ಶಂಕೆ ವ್ಯಕ್ತವಾಗಿತ್ತು. ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸದೆ ಪಿಜಿ ಮಾಲೀಕರು ನಿರ್ಲಕ್ಷ್ಯ ವಹಿಸಿದ್ದೇ ಘಟನೆಗೆ ಕಾರಣ ಎನ್ನುವ ಆರೋಪವೂ ಕೇಳಿ ಬಂದಿದೆ. ಸದ್ಯ ಪೊಲೀಸರು ಮೃತ ಕೃತಿಕುಮಾರಿ ಅವರ ಮೊಬೈಲ್ ಪರಿಶೀಲಿಸುತ್ತಿದ್ದಾರೆ. ಕರೆಗಳ ವರದಿ ಹಾಗೂ ಸಿಡಿಆರ್ ಪಡೆದು ಶೋಧಿಸಲಾಗುತ್ತದೆ. ಕೊನೆಯದಾಗಿ ಯಾರಿಗೆ ಕರೆ ಮಾಡಿದ್ದಾರೆ, ಯಾವ ಯಾವ ನಂಬರ್‌ನಿಂದ ಕಾಲ್ ಬಂದಿದೆ ಎನ್ನುವ ಮಾಹಿತಿ ಕಲೆ ಹಾಕಲಾಗುತ್ತದೆ.

ಆರೋಪಿ ಪತ್ತೆಗೆ ಪೊಲೀಸರ ವಿಶೇಷ ತಂಡ

ಕೃತಿ ಕುಮಾರಿ ಹತ್ಯೆ ಪ್ರಕರಣದ ಬಗ್ಗೆ ಪೂರ್ವ ವಿಭಾಗ ಹೆಚ್ಚುವರಿ ಪೊಲೀಸ್ ಆಯುಕ್ತ ರಮನ್ ಗುಪ್ತ ಹೇಳಿಕೆ ನೀಡಿದ್ದು, ಘಟನೆ ಮಂಗಳವಾರ ರಾತ್ರಿ 11.10ರಿಂದ 11.30ರ ನಡುವೆ ನಡೆದಿದ್ದು, ರಾತ್ರಿ 12 ಗಂಟೆ ವೇಳೆಗೆ ಪೊಲೀಸರಿಗೆ ಮಾಹಿತಿ ಲಭ್ಯವಾಗಿದೆ. ತಕ್ಷಣ ನಮ್ಮ ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದ್ದಾರೆ.

ಈಗಾಗಲೇ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಯಾವ ಕಾರಣಕ್ಕೆ ಕೊಲೆಯಾಗಿದೆ ಎನ್ನುವುದು ಗೊತ್ತಾಗಬೇಕು. ಪಿಜಿಯ ಸಿಸಿಟಿವಿ ಸೇರಿದಂತೆ ಎಲ್ಲವನ್ನೂ ಪರಿಶೀಲನೆ ನಡೆಸಿದ್ದೇವೆ. ಪಿಜಿಯ ನಿರ್ಲಕ್ಷ್ಯತನದ ಬಗ್ಗೆ ಪರಿಶೀಲಿಸಲಾಗುತ್ತಿದೆ. ಆರೋಪಿ ಪತ್ತೆಗಾಗಿ ವಿಶೇಷ ತಂಡವನ್ನೂ ರಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಪತಿಗೆ ಕಡಿಮೆ ಸಂಬಳ; ನೊಂದ ಪತ್ನಿ ಆತ್ಮಹತ್ಯೆ

ಬೆಂಗಳೂರು: ಪತಿಗೆ ಕಡಿಮೆ ಸಂಬಳ ದೊರೆಯುತ್ತಿದ್ದ ವಿಷಯದಲ್ಲಿ ಮನನೊಂದ ಗೃಹಿಣಿ ಆತ್ಮಹತ್ಯೆ ಮಾಡಿಕೊಂಡ ದುರ್ಘಟನೆ ನೆಲಮಂಗಲದ ಅರಿಶಿನಕುಂಟೆಯಲ್ಲಿ ದಾರುಣ ಘಟನೆ ನಡೆದಿದೆ.

ಅರಿಶಿನಕುಂಟೆಯ ನಂದಿನಿ(30) ಆತ್ಮಹತ್ಯೆಗೆ ಶರಣಾದ ಮಹಿಳೆ. ಮನೆಯಲ್ಲಿ 8ವರ್ಷದ ಹೆಣ್ಣು ಮಗಳನ್ನು ಬಿಟ್ಟು ನೇಣಿಗೆ ಶರಣಾಗಿದ್ದಾರೆ. ನಂದಿನಿ 8 ವರ್ಷದ ಹಿಂದೆ ಖಾಸಗಿ ಶಾಲೆಯಲ್ಲಿ ಚಾಲಕನಾಗಿದ್ದ ಪದವೀಧರ ಸುನಿಲ್ ಜತೆ ವಿವಾಹವಾಗಿದ್ದು, ಪತಿಗೆ ಬರುವ ಅಲ್ಪ ವೇತನದಲ್ಲೇ ನಂದಿನಿ ಜೀವನ ನಡೆಸುತ್ತಿದ್ದರು. ಬಿಕಾಂ ಓದಿದ್ದ ನಂದಿನಿ, ಉತ್ತಮ ರೀತಿಯಲ್ಲಿ ಬದುಕುವ ಆಸೆ ಹೊಂದಿದ್ದು ಪತಿಯ ಕಡಿಮೆ ಸಂಬಳದಿಂದ, ಅದು ಸಾಧ್ಯವಾಗಿಲ್ಲ. ಇದರಿಂದ ಮನನೊಂದು ಪತಿ ಕೆಲಸಕ್ಕೆ ತೆರಳಿದ್ದ ವೇಳೆ ಆಕೆ ಆತ್ಮಹತ್ಯೆಗೆ ಶರಣಾಗಿದ್ದು, ಮಾದನಾಯಕನಹಳ್ಳಿ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಪಂದ್ಯದ ವೇಳೆ ಡ್ರ್ಯಾಗರ್, ಚಾಕು ಝಳಪಿಸಿದ ಯುವಕರು

ಬೆಂಗಳೂರು: ಖೋಖೋ ಪಂದ್ಯಾವಳಿಯಲ್ಲಿ ತೀರ್ಪುಗಾರರನ್ನು ಬೆದರಿಸಲು ಕಿಡಿಗೇಡಿಗಳು ವಿಕೆಟ್, ಡ್ರ್ಯಾಗರ್ ಸೇರಿದಂತೆ ಮಾರಕಾಸ್ತ್ರ ಹಿಡಿದು ಬಡಿದಾಡಿಕೊಂಡ ಘಟನೆ ನಗರದಲ್ಲಿ ನಡೆದಿದೆ.

ಮಂಗಳವಾರ ಸಂಜೆ ಕೊತ್ತನೂರು ಠಾಣಾ ವ್ಯಾಪ್ತಿಯ ಬಿಳಿಶಿವಾಲೆ ಸಮೀಪದ ಸರಕಾರಿ ಶಾಲಾ ಮೈದಾನದಲ್ಲಿ ಘಟನೆ ನಡೆದಿದ್ದು, ಕೃತ್ಯ ಸ್ಥಳೀಯರ ಮೊಬೈಲ್ ಫೋನ್‌ನಲ್ಲಿ ಸೆರೆಯಾಗಿದೆ. ಶಾಲಾ ಮೈದಾನದಲ್ಲಿ ಖೋಖೋ ಪಂದ್ಯಾವಳಿ ವೀಕ್ಷಿಸಲು ಮತ್ತೊಂದು ಪ್ರದೇಶದ ಯುವಕರು ಬಂದಿದ್ದರು. ಆಟದ ವೇಳೆ ತೀರ್ಪುಗಾರರು ಸರಿಯಾಗಿ ತೀರ್ಪು ಕೊಡುತ್ತಿಲ್ಲವೆಂದು ರೊಚ್ಚಿಗೆದ್ದ ಯುವಕರು ವಿಕೆಟ್, ಡ್ರ್ಯಾಗರ್ ಹಿಡಿದು ಅಟ್ಟಾಡಿಸಿದ್ದಾರೆ. ಶಾಲಾ ಮಕ್ಕಳ ಮುಂದೆಯೇ ತೀರ್ಪುಗಾರರನ್ನು ಅಟ್ಟಾಡಿಸಿದ ದೃಶ್ಯಗಳು ಸೆರೆಯಾಗಿವೆ. ಘಟನೆಯಲ್ಲಿ ಗಾಯಗೊಂಡಿರುವ ಸುಲೇಮಾನ್ ಎಂಬಾತನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆತನ ಹೇಳಿಕೆ ಪಡೆದಿರುವ ಕೊತ್ತನೂರು ಪೊಲೀಸರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಘಟನೆ ಹಿನ್ನೆಲೆ: ಮಂಗಳವಾರ ಸೊಣ್ಣಪ್ಪನ ಹಳ್ಳಿ ಶಾಲಾ ಬಾಲಕರ ಜತೆ ಕೊತ್ತನೂರು ವಿದ್ಯಾರ್ಥಿಗಳ ಖೋಖೋ ಪಂದ್ಯಾವಳಿ ಆಯೋಜಿಸಲಾಗಿತ್ತು. ಈ ವೇಳೆ ತೀರ್ಪುಗಾರರು ತಪ್ಪು ತೀರ್ಪು ನೀಡಿದ್ದಾರೆ ಎಂದು ಸೊಣ್ಣಪ್ಪನಹಳ್ಳಿಯ ವಿದ್ಯಾರ್ಥಿಗಳು ಆರೋಪಿಸಿದರು. ಪವನ್, ಸುದೀಪ್ ಹಾಗೂ ಇತರರೂ ಏಕಾಏಕಿ ತೀರ್ಪುಗಾರರ ಮೇಲೆ ಮುಗಿಬಿದ್ದಿದ್ದರು. ಕಿರಿಕ್ ವೇಳೆ ಚಾಕು, ಡ್ರ್ಯಾಗರ್, ವಿಕೆಟ್‌ಗಳು ಹೊರಬಿದ್ದವು. ಆಯುಧಗಳನ್ನು ಝಳಪಿಸಿ ಮಕ್ಕಳನ್ನೂ ಭಯಭೀತಗೊಳಿಸಿದರು. ಈ ವೇಳೆ ಪಂದ್ಯ ನೋಡಲು ಬಂದಿದ್ದ ಶಬ್ಬೀರ್ ಎಂಬಾತ ಸುಮ್ಮನಿರುವಂತೆ ಮನವಿ ಮಾಡಿದ್ದ. ಗಾಂಜಾ ನಶೆಯಲ್ಲಿದ್ದ ಯುವಕರು ರೊಚ್ಚಿಗೆದ್ದು ಶಬ್ಬೀರ್ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದರು. ಈ ವೇಳೆ ಶಬ್ಬೀರ್‌ನ ಮೊಬೈಲ್ ಕೂಡ ಚೂರು ಚೂರಾಯಿತು. ಆರೋಪಿಗಳ ವಿರುದ್ಧ ಶಸ್ತ್ರಾಸ್ತ್ರ ಕಾಯಿದೆಯಡಿ ಪ್ರಕರಣ ದಾಖಲಾಗಿದೆ.

ನಂದಿನಿ ಹಾಲಿನ ಬೆಲೆ ಏರಿಕೆ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಜಾ

ಬೆಂಗಳೂರು: ರಾಜ್ಯದಲ್ಲಿ ನಂದಿನಿ ಹಾಲಿನ ಬೆಲೆ ಏರಿಕೆ ಮಾಡಿರುವ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್)ದ ನಿರ್ಧಾರ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿ ಆದೇಶಿಸಿದೆ. ಬಿಳೇಕಳ್ಳಿಯ ನಿವಾಸಿಯಾಗಿರುವ ಚಾರ್ಟೆಡ್ ಅಕೌಂಟೆಂಟ್ ಡಾ.ಆರ್.ರಾಮಲಕ್ಷ್ಮಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಬೆಲೆ ಏರಿಕೆ ಸರಕಾರದ ನೀತಿಯಾಗಿದ್ದು, ಇದನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಮೂಲಕ ಪ್ರಶ್ನೆ ಮಾಡುವುದಕ್ಕೆ ಅವಕಾಶವಿಲ್ಲ, ಬೆಲೆ ಏರಿಕೆ ಮೂಲಭೂತವಾಗಿ ಸರಕಾರದ ನೀತಿ ನಿರೂಪಣೆ ವ್ಯಾಪ್ತಿಯಲ್ಲಿದೆ. ಹೀಗಾಗಿ ಶಾಸನ ಬದ್ಧವಾದ ಉಲ್ಲಂಘನೆಯಾಗಿರುವ ಸಂಬಂಧ ಸ್ಪಷ್ಟವಾಗಿಲ್ಲವಾದಲ್ಲಿ ನ್ಯಾಯಾಂಗ ಪರಿಶೀಲನೆಗೆ ಅವಕಾಶವಿರುವುದಿಲ್ಲ. ಅಲ್ಲದೇ, ಹಾಲಿನ ದರ ಏರಿಕೆ ಮಾಡಿರುವ ಕರ್ನಾಟಕ ಹಾಲು ಒಕ್ಕೂಟ(ಕೆಎಂಎಫ್) ವಾಣಿಜ್ಯ ಉದ್ದೇಶದಿಂದ ತಜ್ಞ ನಿರ್ಧಾರವಾಗಿದೆ. ಹೀಗಾಗಿ ಅರ್ಜಿ ವಜಾಗೊಳಿಸುತ್ತಿರುವುದಾಗಿ ಪೀಠ ತಿಳಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಬೆಲೆ ಏರಿಕೆಯ ಬಳಿಕ 43 ರಿಂದ 57 ರು. ಗಳಿಗೆ ಹೆಚ್ಚಳವಾಗಿದೆ. 50 ಎಂಎಲ್ ಹಾಲು ಹೆಚ್ಚಳವಾಗಿ ನೀಡುತ್ತಿರುವುದರಿಂದ 2 ರು.ಗಳ ಬೆಲೆ ಹೆಚ್ಚಳ ಮಾಡಲಾಗಿದೆ ಎಂದು ಸರಕಾರ ತಿಳಿಸಿದೆ. ಆದರೆ ಒಂದು ಲೀಟರ್‌ಗೆ 40 ರು. ಹೆಚ್ಚಳವಾಗಲಿದೆ. ಅಲ್ಲದೇ, ಬೆಲೆ ಹೆಚ್ಚಳದ ಬಳಿಕ ಅರ್ಧ ಲೀಟರ್ ಪಾಕೆಟ್ ಜತೆ ಶೇ.10 ರಷ್ಟು ಹಾಗೂ 1 ಲೀಟರ್ ಹಾಲಿನ ಜತೆಗೆ ಶೇ.5 ರಷ್ಟು ಮಾತ್ರ ಹೆಚ್ಚಳ ಹಾಲು ಲಭ್ಯವಾಗಲಿದೆ ಎಂದು ವಿವರಿಸಿದರು.

ಡೆಂಘೀ: ಅರ್ಜಿ ವಿಚಾರಣೆ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ನಗರ ಸೇರಿದಂತೆ ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಡೆಂಘೀ ಪ್ರಕರಣಗಳ ಹೆಚ್ಚಳ ಕುರಿತಂತೆ ದಾಖಲಿಸಿಕೊಂಡಿದ್ದ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಸಂಬಂಧ ಅಮೈಕಸ್ ಕ್ಯೂರಿಯನ್ನಾಗಿ (ನ್ಯಾಯಾಲಯಕ್ಕೆ ನೆರವಾಗಲು) ಹಿರಿಯ ವಕೀಲ ಕೆ.ಎನ್.ಫಣೀಂದ್ರ ಅವರನ್ನು ನೇಮಕಮಾಡಿ ಹೈಕೋರ್ಟ್ ಆದೇಶಿಸಿದೆ. ಅರ್ಜಿ ವಿಚಾರಣೆ ನಡೆಸಿದ ಎನ್.ವಿ. ಅಂಜಾ ರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ. ಅರವಿಂದ್ ಅವರಿದ್ದ ನ್ಯಾಯಪೀಠ ಈ ಆದೇಶ ಮಾಡಿತು.

ಅಲ್ಲದೆ, ಅರ್ಜಿಗೆ ಸಂಬಂಧಿಸಿದಂತೆ ಎಲ್ಲ ದಾಖಲೆಗಳನ್ನು ಫಣೀಂದ್ರ ಅವರಿಗೆ ಹಸ್ತಾಂತರಿಸಬೇಕು ಎಂದು ಸೂಚನೆ ನೀಡಿ ವಿಚಾರಣೆಯನ್ನು ಜು. 31ಕ್ಕೆ ಮುಂದೂಡಿತು. ಈ ಹಿಂದೆ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಪೀಠ, ಉತ್ತಮ ವಾತಾವರಣದಲ್ಲಿ ಬದುಕುವುದು ಸಂವಿಧಾನ ಪರಿಚ್ಛೇದ 21ರ ಅಡಿಯಲ್ಲಿ ಮೂಲಭೂತ ಹಕ್ಕಾಗಿದೆ ಎಂದು ಪೀಠ ತಿಳಿಸಿತು. ಅಲ್ಲದೆ, ಬೆಂಗಳೂರು ನಗರ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಸೊಳ್ಳೆಗಳನ್ನು ನಿಂತ್ರಿಸಿ ಡೆಂಘೀ ಹರಡದಂತೆ ತಡೆಯಲು ರಾಜ್ಯ ಸರಕಾರ ಕೈಗೊಂಡಿರುವ ಕ್ರಮಗಳು, ರಾಜ್ಯಾದ್ಯಂತ ಡೆಂಘೀ ರೋಗಿಗಳಿಗಾಗಿ ಒದಗಿಸಿರುವ ವೈದ್ಯಕೀಯ ಮೂಲಸೌಲಭ್ಯಗಳ ಕುರಿತ ಸಂಪೂರ್ಣ ವಿವರ, ಈ ಕುರಿತಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹಾಗೂ ಸೊಳ್ಳೆಗಳ ಸಂಖ್ಯೆ ನಿಯಂತ್ರಣಕ್ಕಾಗಿ ಕೈಗೊಂಡಿರುವ ಕ್ರಮಗಳ ಕುರಿತು ವಿವರಣೆ ನೀಡಬೇಕು ಎಂದು ನ್ಯಾಯಪೀಠ ತಿಳಿಸಿತು.

ಶ್ರೀಕಿ, ಖಂಡೇಲ್‌ವಾಲಾ ಜೈಲಿನಿಂದ ಬಿಡುಗಡೆ

ಬೆಂಗಳೂರು: ಬಹುಕೋಟಿ ಬಿಟ್ ಕಾಯಿನ್ ಹಗರಣದಲ್ಲಿ ಬಂಧನವಾಗಿದ್ದ ಆರೋಪಿಗಳಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ, ಖಂಡೇಲ್ ವಾಲಾ ಜಾಮೀನು ಪಡೆದು ಬಿಡುಗಡೆಯಾಗಿದ್ದಾರೆ.

ತುಮಕೂರು ತಿಲಕ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಬಿಟ್‌ಕಾಯಿನ್ ಹಗರಣ ಸಂಬಂಧ ಪ್ರಕರಣ ದಾಖಲಾಗಿತ್ತು. ಈ ಬಗ್ಗೆ ತನಿಖೆ ನಡೆಸಲು ರಾಜ್ಯ ಸರಕಾರ ಎಸ್‌ಐಟಿ ರಚನೆ ಮಾಡಿತ್ತು. ಇದೀಗ ಇಬ್ಬರು ಆರೋಪಿಗಳು ಜಾಮೀನು ಪಡೆದು ಹೊರಬಂದಿದ್ದಾರೆ.

ಶ್ರೀಕಿ ಮತ್ತು ರಾಬಿನ್ ಖಂಡೇಲ್‌ವಾಲಾ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ತುಮಕೂರಿನ ಒಂದನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಆರೋಪಿಗಳಿಗೆ ಜಾಮೀನು ನೀಡಿದೆ. ಹೀಗಾಗಿ ಆರೋಪಿಗಳು ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗಿದ್ದಾರೆ. ಪ್ರಕರಣದ ಒಂದನೇ ಆರೋಪಿ ಶ್ರೀಕಿ 50 ಸಾವಿರ ಮೊತ್ತದ ಬಾಂಡ್ ಹಾಗೂ ಒಬ್ಬರ ಭದ್ರತೆ ನೀಡಬೇಕು ಮತ್ತು ಎರಡನೇ ಆರೋಪಿ ರಾಬಿನ್ ಖಂಡೇಲ್ವಾಲಾ 25 ಸಾವಿರ ಮೊತ್ತದ ಭದ್ರತೆ ಸೇರಿ ಇತರ ಷರತ್ತುಗಳನ್ನು ವಿಧಿಸಲಾಗಿದೆ.

ಸರಕಾರ ತಮ್ಮ ವಿರುದ್ಧ ಕೋಕಾ ಕಾಯ್ದೆಯಡಿ ಪ್ರಕರಣ ದಾಖಲಿಸಿತ್ತು.. ಇತ್ತೀಚೆಗಷ್ಟೇ ಹೈಕೋರ್ಟ್, ಕೋಕಾ ಕಾಯಿದೆ ಹೇರಿದ್ದ ಆದೇಶ ರದ್ದುಪಡಿಸಿದೆ. ಹೀಗಾಗಿ ಪ್ರಕರಣದ ತನಿಖೆ ನಡೆಸಿದ ವಿಶೇಷ ತನಿಖಾ ತಂಡ (ಎಸ್‌ಐಟಿ) 60 ದಿನಗಳ ಒಳಗಾಗಿ ವಿಚಾರಣಾ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಬೇಕಿತ್ತು. ಆದರೆ, 60 ದಿನ ಕಳೆದರೂ ಯಾವುದೇ (ಪ್ರಾಥಮಿಕ ಅಥವಾ ಅಂತಿಮ ವರದಿ) ಆರೋಪ ಪಟ್ಟಿ ಸಲ್ಲಿಸಿಲ್ಲ. ಹೀಗಾಗಿ, ಸುಪ್ರೀಂ ಕೋರ್ಟ್ ತೀರ್ಪುಗಳ ಪ್ರಕಾರ ನಾವು ಕಾನೂನುಬದ್ಧ ಜಾಮೀನು ಪಡೆಯಲು ಅರ್ಹರು ಎಂದು ಅರ್ಜಿದಾರರು ಕೋರಿದ್ದರು.

ಬಹುಕೋಟಿ ಮೌಲ್ಯದ ಬಿಟ್‌ಕಾಯಿನ್ ಕಳವು ಮಾಡಿ ಅವುಗಳನ್ನು ಪಶ್ಚಿಮ ಬಂಗಾಳದ ತನ್ನ ಸಹಚರ ರಾಬಿನ್ ಖಂಡೇಲ್‌ವಾಲಾಗೆ ವರ್ಗಾವಣೆ ಮಾಡಿದ ಆರೋಪ ಶ್ರೀಕಿ ಮೇಲಿದೆ. ಜಾಮೀನು ಸಿಕ್ಕ ಹಿನ್ನೆಲೆಯಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಗಳನ್ನು ಬಿಡುಗಡೆ ಮಾಡಲಾಗಿದೆ.

ಯಲಹಂಕ ಶಾಸಕ ಎಸ್.ಆರ್ ವಿಶ್ವನಾಥ್ ಅಭಿಪ್ರಾಯ

ಜನ್ಮ ಸಾರ್ಥಕವಾಗುವಂತೆ ಜನ್ಮದಿನ ಆಚರಿಸಿಕೊಳ್ಳಿ

ಯಲಹಂಕ: ಜನ್ಮ ದಿನಾಚರಣೆ ಎನ್ನುವುದು ಆಡಂಬರವಾಗದೇ, ಸೇವಾ ಕಾರ್ಯಗಳು, ನೆರವು ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಜನ್ಮ ಸಾರ್ಥಕವಾಯಿತು ಎನ್ನುವ ರೀತಿಯಲ್ಲಿ ಆಚರಿಸಿಕೊಳ್ಳುವಂತಾಗಬೇಕು ಎಂದು ಶಾಸಕ ಎಸ್.ಆರ್ ವಿಶ್ವನಾಥ್ ಅಭಿಪ್ರಾಯಪಟ್ಟರು.

ಜನ್ಮದಿನದ ಪ್ರಯುಕ್ತ ಕ್ಷೇತ್ರದ ಹೊನ್ನೇನಹಳ್ಳಿ ಸಮೀಪದ ಖಾಸಗಿ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಸೇವಾ ಕಾರ್ಯಗಳನ್ನು ನೆರವೇರಿಸಿ ಮಾತನಾಡಿದ ಅವರು, ಕಳೆದ ನಲವತ್ತು ವರ್ಷಗಳಿಂದ ರಾಜಕಾರಣದಲ್ಲಿ ಅಪಾರ ಸಂಖ್ಯೆಯ ಜನರ, ಅಭಿಮಾನಿಗಳ, ಮುಖಂಡರ ಮತ್ತು ಕಾರ್ಯಕರ್ತರ ಪ್ರೀತಿ ವಿಶ್ವಾಸ ಗಳಿಸಿದ್ದೇನೆ, ಇದು ನಾನು ಬದುಕಿನಲ್ಲಿ ಗಳಿಸಿರುವ ಬಹುದೊಡ್ಡ ಆಸ್ತಿಯಾಗಿದೆ ಎಂದರು.

ಹೊನ್ನೇನಹಳ್ಳಿ ಸಮೀಪದ ಖಾಸಗಿ ಹೋಟೆಲ್‌ನಲ್ಲಿ ಶಾಸಕ ಎಸ್.ಆರ್ ವಿಶ್ವನಾಥ್ ಅವರು ಹುಟ್ಟುಹಬ್ಬವನ್ನು ಆಚರಿಸಿಕೊಂಡರು.

ಜನ್ಮದಿನದ ಪ್ರಯುಕ್ತ ಯಲಹಂಕ ಓಲ್ಡ್ ಟೌನ್ ಮತ್ತು ಯಲಹಂಕ ನ್ಯೂ ಟೌನ್‌ಗಳಲ್ಲಿ ನೂತನ ಶಾಲಾ ಕೊಠಡಿಗಳ ಉದ್ಘಾಟನೆ, ರಕ್ತದಾನ ಶಿಬಿರ, ಉಚಿತ ಆರೋಗ್ಯ ತಪಾಸಣಾ ಶಿಬಿರ, ನೇತ್ರ ತಪಾಸಣೆ ಮತ್ತು ಅಗತ್ಯವಿರುವವರಿಗೆ ಶಸ್ತ್ರ ಚಿಕಿತ್ಸೆಗೆ ನೆರವು, ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ, ನೋಟ್ ಬುಕ್, ಶೂ ವಿತರಣೆ, ವಿಶೇಷ ಚೇತನರಿಗೆ ತ್ರಿಚಕ್ರ ವಾಹನಗಳ ವಿತರಣೆ, ಮಹಿಳೆಯರಿಗೆ ಸಹಾಯಧನ ಮತ್ತು ವಿವಿಧ ಸವಲತ್ತುಗಳ ವಿತರಣೆ ಮುಂತಾದ ಹತ್ತು ಹಲವು ಸೇವಾ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಅರ್ಥಪೂರ್ಣ ರೀತಿಯಲ್ಲಿ ಜನ್ಮದಿನ ಆಚರಿಸಿಕೊಳ್ಳುತ್ತಿರುವ ಬಗ್ಗೆ ಸಾರ್ಥಕ ಭಾವವಿದೆ ಎಂದರು. ಈ ವೇಳೆ ಬಿಜೆಪಿ ಮುಖಂಡ ದಿಬ್ಬೂರು ಜಯಣ್ಣ, ಎಸ್ ಎನ್ ರಾಜಣ್ಣ, ಡಿ.ಜಿ.ಅಪ್ಪಯ್ಯಣ್ಣ, ಎಚ್ ಬಿ ಹನುಮಯ್ಯ, ಚೊಕ್ಕನಹಳ್ಳಿ ವೆಂಕಟೇಶ್, ಸತೀಶ್ ಕಡತನಮಲೆ, ಎಂ.ಸತೀಶ್, ಎಂ. ಮುನಿರಾಜು, ಎಸ್.ಜಿ.ಪ್ರಶಾಂತ್ ರೆಡ್ಡಿ, ಎಸ್.ಜಿ.ನರಸಿಂಹಮೂರ್ತಿ, ಟಿ.ಮುನಿರೆಡ್ಡಿ, ಡಾ.ಶಶಿಕುಮಾರ್ ಸೇರಿದಂತೆ ಅನೇಕರಿದ್ದರು.

> ಹಲವು ಗಣ್ಯರು, ಅಸಂಖ್ಯಾತ ಬಿಜೆಪಿ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಗೌರವ ಸನ್ಮಾನದೊಂದಿಗೆ ಜನ್ಮದಿನದ ಶುಭಾಷಯ ಕೋರಿರುವುದು ಸಂತೋಷ ಉಂಟು ಮಾಡಿದೆ, ಅವರ ಗೌರವಾಧರಗಳಿಗೆ ಸದಾ ಚಿರಋಣಿ.
> -ಎಸ್.ಆರ್ ವಿಶ್ವನಾಥ್, ಶಾಸಕ

ಕಾಶ್ಮೀರ ಮೂಲದ ಸಮರ ಕಲೆ ಪಠ್ಯಕ್ಕೆ ಸೇರ್ಪಡೆ

ಅಪೋಲೋ ನ್ಯಾಷನಲ್ ಶಾಲೆಯಲ್ಲಿ ಮಾರ್ಷಲ್ ಆರ್ಟ್ಸ್

ಬೆಂಗಳೂರು: ಶಾಲಾ ಮಕ್ಕಳಲ್ಲಿ ದೈಹಿಕ ಕ್ಷಮತೆ ಹೆಚ್ಚಳ ಹಾಗೂ ಸಾಂಸ್ಕೃತಿಕ ಪರಂಪರೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕಾಶ್ಮೀರ ಮೂಲದ ಸಮರ ಕಲೆ (ಮಾರ್ಷಲ್ ಆರ್ಟ್ಸ್) ಸ್ಕಾಯ್ ಅನ್ನು ಪಠ್ಯಕ್ರಮದ ಭಾಗವಾಗಿ ಅಳವಡಿಸಿಕೊಳ್ಳುವ ಮೂಲಕ ಅಪೋಲೋ ನ್ಯಾಷನಲ್ ಪಬ್ಲಿಕ್ ಶಾಲೆ ಹೊಸ ಮೈಲಿಗಲ್ಲು ಸಾಧಿಸಲಿದೆ.

ಗುರುವಾರ ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮದಲ್ಲಿ ನುರಿತ ಸ್ಕಾಯ್ ಪಟುಗಳು ದೈಹಿಕ ಕ್ಷಮತೆ, ಮಾನಸಿಕ ಏಕಾಗ್ರತೆ ಹಾಗೂ ಆಧ್ಯಾತ್ಮದ ಶಿಸ್ತು ಹೊಂದಿರುವ ಈ ಕಲೆಯ ಪ್ರದರ್ಶನ ಮಾಡಲಿರುವುದು ಪ್ರಮುಖ ಆಕರ್ಷಣೆಯಾಗಿದೆ. ಸ್ಕಾಯ್ ಸಮರ ಕಲೆಯ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಮಕ್ಕಳಿಗೆ ಪರಿಚಯಿಸುವ ಮೂಲಕ ಅವರಲ್ಲಿ ಹೆಮ್ಮೆ, ಶಿಸ್ತು ಹಾಗೂ ಸ್ವಯಂ ಜಾಗೃತಿಯನ್ನು ಮೂಡಿಸುವುದು ಇದರ ಮೂಲ ಉದ್ದೇಶ. ಈ ಪುರಾತನ ಸಮರ ಕಲೆಗೆ ಪ್ರೋತ್ಸಾಹ ನೀಡುವ ಮೂಲಕ ನಮ್ಮ ಶಾಲೆಯ ಮತ್ತು ಮಕ್ಕಳ ಬೆಳವಣಿಗೆ ಸಹಕಾರಿಯಾಗುವ ನಿರೀಕ್ಷೆ ಹೊಂದಲಾಗಿದೆ.

ಮಕ್ಕಳ ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕೆ ನೆರವಾಗುವ ಈ ಸಮರ ಕಲೆಯನ್ನು ಪಠ್ಯದ ಭಾಗವಾಗಿ ಪರಿಚಯಿಸುವ ಮೂಲಕ, ಈ ಕಲೆಯ ಮೇಲಿರುವ ಬದ್ಧತೆ ಹಾಗೂ ಕಾಳಜಿಯನ್ನು ಶಾಲೆಯ ಪ್ರಾಂಶುಪಾಲರಾದ ಡಾ. ವೇದಾವತಿ ಬಿ.ಎ ಅವರು ವ್ಯಕ್ತಪಡಿಸಿದ್ದಾರೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾರತೀಯ ಸ್ಕಾಯ್ ಫೆಡರೇಶನ್ ಜಂಟಿ ಕಾರ್ಯದರ್ಶಿ ಮೊಹಮದ್ ಅಲಿ, ಅಪೋಲೋ ನ್ಯಾಷನಲ್ ಪಬ್ಲಿಕ್ ಶಾಲೆಯ ಉಪಾಧ್ಯಕ್ಷೆ ಐಶ್ವರ್ಯಾ ಡಿಕೆಎಸ್ ಹೆಗ್ಡೆ, ಅಂತಾರಾಷ್ಟ್ರೀಯ ಸ್ವರ್ಣ ಪದಕ ವಿಜೇತೆ ಸಾನಿಯಾ ಸುಭಾಷ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಆಶಾ ಕಿರಣ್ ಜಿ.ಬಿ.** ರವರು ತಮ್ಮ ಮಾಲಿಕತ್ವಕ್ಕೊಳಪಟ್ಟ ಈ ಹಿಂದೆ ಶ್ರೀ ಕೆಂಪೇಗೌಡ ಮತ್ತು ಇತರರು ಶ್ರೀಮತಿ ಪಿ.ಜೆ. ಶೈಲಜರವರಿಗೆ ಬರೆದುಕೊಟ್ಟ ಬೆಂಗಳೂರು ಯಲಹಂಕ ಉಪನೋಂದಣಾಧಿಕಾರಿಯರ ಕಛೇರಿಯಲ್ಲಿ ದಸ್ತಾವೇಜು ಸಂಖ್ಯೆ ವೈಎಎನ್–1–16735/2004–05 ಯಾಗಿ ನೋಂದಣಿಯಾಗಿ ಸಿ.ಡಿ.ಸಂಖ್ಯೆ ವೈಎಎನ್‌ಡಿ 93 ರಲ್ಲಿ ಶೇಖರಣೆಯಾದ 24–11–2004 ನೇ ದಿನಾಂಕದ ಮೂಲ ಕ್ರಯಪತ್ರವು ಕಳೆದುಹೋಗಿರುತ್ತದೆ.

ಸದರಿ ಮೂಲ ಕ್ರಯಪತ್ರವು ಯಾರಿಗಾದರು ಸಿಕ್ಕಿದ್ದು, ಈ ಕೆಳಕಂಡವರಿಗೆ ಮಾಹಿತಿ ನೀಡಿದ್ದಲ್ಲಿ ಅಥವಾ ಹಿಂದಿರುಗಿಸಿದ್ದಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ತೆರನಾದ ಹಕ್ಕಿದ್ದಲ್ಲಿ ಸೂಕ್ತ ಪುರಾವೆಯೊಂದಿಗೆ ಲಿಖಿತ ರೂಪದಲ್ಲಿ ಈ ಕೆಳಕಂಡವರಿಗೆ ತಕ್ಷಣ ಸಲ್ಲಿಸುವುದು.

ಸಹಿ/-
ಮೋಹನದಾಸ ಎಸ್., ನ್ಯಾಯವಾದಿ,
3944/ಎ, ಎರಡನೇ ಅಡ್ಡರಸ್ತೆ, ಬಿ ಬ್ಲಾಕ್,
ರಾಜಾಜಿನಗರ 2ನೇ ಹಂತ,
ಸುಬ್ರಹ್ಮಣ್ಯನಗರ, ಬೆಂಗಳೂರು – 560021.
ಸಂ.ದೂ: 9448129391 / 9886776714

PUBLIC NOTICE

Public are informed that, my client Mrs. Shashikala had lost the Original document of 1). Sale Deed dated 12/10/2009 executed by K. Syed Afsar Pasha in favour of Smt. Bhagya B.P. vide regd. as doc. No. 2728/2009-10.

If any person/s firm company, institution or organization has any claim are holding the afore mentioned document, they may contact the undersigned in writing within 7 days from the date of this notice failing which it will be presumed that there are no claims.

SCHEDULE : All that piece and parcel of the property bearing Sy. No. 114, Katha No. 55, M.R. No. 57/2008-09, Mulbagal Village, Kasaba Hobli, Mulbagal Taluk, Kolar, measuring: 0-02 ¼ guntas, and bounded on : EAST : Remaining portion of same sy. No. left for Road, WEST: Remaining portion of same sy. No. left for Road, NORTH: Remaining Vendors property, SOUTH: Remaining Vendors property.

KSR Associates
ADVOCATES & LEGAL CONSULTANTS
OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com
Mobile: 99450 00789

ಪುರಸಭಾ ಸದಸ್ಯನ ಬರ್ಬರ ಹತ್ಯೆ

ಆನೇಕಲ್: ಹಳೆಯ ವೈಷಮ್ಯದ ಹಿನ್ನೆಲೆಯಲ್ಲಿ ದುಷ್ಕರ್ಮಿಗಳು ಆನೇಕಲ್ ಪುರಸಭೆಯ 22ನೇ ವಾರ್ಡ್ ಸದಸ್ಯ ರವಿ ಅವರನ್ನು ಬರ್ಬರವಾಗಿ ಇರಿದು ಹಲ್ಲೆ ನಡೆಸಿ ಹತ್ಯೆ ಮಾಡಿರುವ ಘಟನೆ ಹೊಸೂರು ರಸ್ತೆಯಲ್ಲಿ ನಡೆದಿದೆ.

ಏಕಾಏಕಿ ದಾಳಿ ನಡೆಸಿದ ದುಷ್ಕರ್ಮಿಗಳು ಮನಬಂದಂತೆ ಕೊಚ್ಚಿ ಕೊಲೆ ಮಾಡಿದ್ದಾರೆ.

ಆನೇಕಲ್ ಪಟ್ಟಣದ ಹೊಸೂರು ಮುಖ್ಯ ರಸ್ತೆಯಲ್ಲಿ ಪುರಸಭೆ ಸದಸ್ಯ ರವಿ ಅಲಿಯಾ ಸ್ಕ್ರ್ಯಾಪ್ ರವಿ ಬರುತ್ತಿದ್ದಾಗ ಅಡ್ಡಗಟ್ಟಿ ಬುಧವಾರ ರಾತ್ರಿ ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಿದ್ದಾರೆ. ಶವವನ್ನು ಆನೇಕಲ್ ಸರಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ. ಹತ್ಯೆ ಯಾರು ಮಾಡಿದ್ದಾರೆ, ಯಾವ ಕಾರಣಕ್ಕಾಗಿ ಕೊಲೆ ಮಾಡಿದ್ದಾರೆ ಎಂಬುದನ್ನು ಪತ್ತೆಹಚ್ಚುವುದಾಗಿ ಆನೇಕಲ್ ಪೊಲೀಸರು ತಿಳಿಸಿದ್ದಾರೆ.

ಎಸ್.ಕೆ.ಬಸವರಾಜನ್ ಖುಲಾಸೆ

ಬೆಂಗಳೂರು: ಚಿತ್ರದುರ್ಗ ಮುರುಘರಾಜೇಂದ್ರ ಮಠದ ಹಣಕಾಸು ದುರುಪಯೋಗ ಪ್ರಕರಣಕ್ಕೆ ಸಂಬಂಧಿಸಿದಂತೆ ವಂಚನೆ ಆರೋಪದಿಂದ ಎಸ್.ಕೆ.ಬಸವರಾಜನ್ ಖುಲಾಸೆಗೊಂಡಿದ್ದಾರೆ.

ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯವು ಇಂದು (ಜುಲೈ 24) ಎಸ್.ಕೆ.ಬಸವರಾಜನ್ ಅವರನ್ನು ವಂಚನೆ ಆರೋಪದಿಂದ ಖುಲಾಸೆಗೊಳಿಸಿದೆ. ಚಿತ್ರದುರ್ಗ ಮುರುಘಾ ಮಠದಲ್ಲಿ 47 ಫೋಟೋ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಮಠದ ಫೋಟೋ ಕಳ್ಳತನಕ್ಕೆ ಪ್ರಚೋದನೆ ನೀಡಿದ ಆರೋಪದ ಮೇಲೆ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ವಿರುದ್ಧ ಚಿತ್ರದುರ್ಗದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಸವರಾಜನ್ ಅವರನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ನೀಡಿದ್ದರು. ಬಳಿಕ ಅವರು ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದರು. ಇದೀಗ ಮುರುಘರಾಜೇಂದ್ರ ಮಠದ ಹಣಕಾಸು ದುರುಪಯೋಗ, ವಂಚನೆ ಆರೋಪದಿಂದ ಎಸ್.ಕೆ.ಬಸವರಾಜನ್ ಅವರು ಖುಲಾಸೆಗೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಒಟಿಎಸ್‌ಗೆ ಹೆಲ್ಪ್‌ಡೆಸ್ಕ್ ಆರಂಭ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಶೈಕ್ಷಣಿಕ ಸಂಸ್ಥೆಗಳು ಬಾಕಿ ಇರುವ ಸೇವಾ ಶುಲ್ಕವನ್ನು ಒನ್ ಟೈಮ್ ಸೆಟಲ್‌ಮೆಂಟ್ ಯೋಜನೆಯಡಿ ಪಾವತಿಗೆ ಅನುಕೂಲ ಮಾಡಿಕೊಡಲು ಪಾಲಿಕೆಯು ಎಲ್ಲಾ ವಲಯಗಳಲ್ಲಿ ಹೆಲ್ಪ್ ಡೆಸ್ಕ್‌ನ್ನು ಆರಂಭಿಸಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ವೈದ್ಯಕೀಯ ಕಾಲೇಜು, ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ಇನ್ನಿತರೆ ಶೈಕ್ಷಣಿಕ ಸಂಸ್ಥೆಗಳು, ಜುಲೈ 31ರವರೆಗೆ ಚಾಲ್ತಿಯಲ್ಲಿರುವ ಒಂದು ಬಾರಿ ಪರಿಹಾರ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ ವಲಯವಾರು ಹೆಲ್ಪ್ ಡೆಸ್ಕ್ ಪ್ರಾರಂಭಿಸಲಾಗಿದ್ದು, ಎಲ್ಲಾ ವಲಯ ಕಚೇರಿಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ, ಸಿಬ್ಬಂದಿ ಮಾಹಿತಿಯನ್ನು ನೀಡಲಾಗಿದೆ. ಶೈಕ್ಷಣಿಕ ಸಂಸ್ಥೆಗಳ ಆಸ್ತಿ ಮಾಲೀಕರು ತಮ್ಮ ವಲಯ ಕಚೇರಿಗಳಿಗೆ ಭೇಟಿ ನೀಡಿ ಒಂದು ಬಾರಿ ಪರಿಹಾರ ಯೋಜನೆಯನ್ನು ಸದುಪಯೋಗಪಡಿಸಿಕೊಂಡು ಸೇವಾ ಶುಲ್ಕವನ್ನು ಪಾವತಿಸಬಹುದು ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಸಮಾನಾಂತರ ಖಾತರಿ ಯೋಜನೆಗೆ ಅರ್ಜಿ

ಆನೇಕಲ್: ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2023-24 ನೇ ಸಾಲಿನ ಅಯವ್ಯಯ ಘೋಷಣೆಯನ್ವಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಉದ್ಯಮಿಗಳು ಪಡೆಯುವ ಸಾಲಕ್ಕೆ 2 ಕೋಟಿ ರು. ವರೆಗೂ ಸಮಾಂತರ ಖಾತರಿ ಯೋಜನೆಯಡಿ ಕೆಎಸ್‌ಎಫ್‌ಸಿ ಮಾದರಿಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಆರ್‌ಬಿಐ ಬ್ಯಾಂಕುಗಳಿಗೆ ವಿಸ್ತರಿಸಿ ಸರಕಾರ ಆದೇಶ ಹೊರಡಿಸಿದೆ. ಈ ಯೋಜನೆಯ ಸದುಪಯೋಗ ಪಡೆಯಲು ಅರ್ಜಿ ಆಹ್ವಾನಿಸಲಾಗಿದ್ದು, ಅನೇಕಲ್ ಸಮಾಜ ಕಲ್ಯಾಣ ಇಲಾಖೆಯ ಕಚೇರಿಯನ್ನು ಸಂಪರ್ಕಿಸಲು ಸಹಾಯಕ ನಿರ್ದೇಶಕ ಮಂಜುನಾಥ್ ಕೋರಿದ್ದಾರೆ. ಹೆಚ್ಚಿನ ಮಾಹಿತಿಗೆ 080- 27859557 ಹಾಗೂ 9480843052

ನಗರದಲ್ಲಿ ನೀರಿನ ಅದಾಲತ್ ಇಂದು

ಬೆಂಗಳೂರು: ಜಲಮಂಡಳಿಯು ಇಂದು (ಗುರುವಾರ) ಬೆಳಗ್ಗೆ 9:30ರಿಂದ 11 ರವರೆಗೆ ನೀರಿನ ಅದಾಲತ್ ಆಯೋಜಿಸಿದೆ. ನಗರದ (ಆಗ್ನೇಯ-3), (ಆಗ್ನೇಯ-6)(ಪಶ್ಚಿಮ-1-3),(ವಾಯುವ್ಯ-5),(ಉತ್ತರ-2-3),(ದಕ್ಷಿಣ -1-3), (ನೈರುತ್ಯ-3), (ನೈರುತ್ಯ-6)ಮತ್ತು (ಪೂರ್ವ-2-4) ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆಮಾಡಿ ದೂರು ದಾಖಲಿಸಬಹುದು ಹಾಗೂ ವಾಟ್ಸ್ ಅಪ್ ಸಂಖ್ಯೆ 8762228888 ಸಂದೇಶ ಕಳುಹಿಸಿ ದೂರು ದಾಖಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅವಘಡ: ಮೃತಪಟ್ಟ ಎಂಜಿನಿಯರ್ ಪತ್ನಿಗೆ ಸರಕಾರಿ ಕೆಲಸ

ಬೆಂಗಳೂರು: ಕಳೆದ ವರ್ಷ ಬಿಬಿಎಂಪಿಯ ಕೇಂದ್ರ ಕಚೇರಿಯ ಗುಣಮಟ್ಟ ಪರೀಕ್ಷಾ ಕೇಂದ್ರದಲ್ಲಿ ಸಂಭವಿಸಿದ್ದ ಅಗ್ನಿ ಅವಘಡದಲ್ಲಿ ಮೃತಪಟ್ಟಿದ್ದ ಎಂಜಿನಿ ಯರ್ ಪತ್ನಿ ಹಾಗೂ ಗಾಯಗೊಂಡಿದ್ದ ಮೂವರು ಸಿಬ್ಬಂದಿಗೆ ಸರಕಾರಿ ಕೆಲಸ ನೀಡಲಾಗಿದೆ. ದುರಂತದಲ್ಲಿ 13 ಜನ ಪಾಲಿಕೆ ಸಿಬ್ಬಂದಿ ಗಾಯಗೊಂಡಿದ್ದು, ಎಂಜಿನಿಯರ್ ಶಿವಕುಮಾರ್ ಮೃತಪಟ್ಟಿದ್ದರು. ಅಗ್ನಿ ಅವಘಡದಲ್ಲಿ ಗಾಯಗೊಂಡಿದ್ದ ಮೂವರು ಸಿಬ್ಬಂದಿಗೆ ಹಾಗೂ ಮೃತಪಟ್ಟ ಎಂಜಿನಿಯರ್ ಶಿವಕುಮಾರ್ ಪತ್ನಿಗೆ ಸರಕಾರಿ ಕೆಲಸ ನೀಡಿ ರಾಜ್ಯ ಸರಕಾರವು ಆದೇಶಿಸಿದೆ. ಘಟನೆ ಬಳಿಕ ಪಾಲಿಕೆಯ ಆಯುಕ್ತರು ಘಟನೆಯಲ್ಲಿ ಮೃತಪಟ್ಟ ಹಾಗೂ ಗಾಯಗೊಂಡ ಸಿಬ್ಬಂದಿಗೆ ಅನುಕಂಪದ ಆಧಾರದಲ್ಲಿ ಕೆಲಸ ನೀಡುವಂತೆ ಸರಕಾರಕ್ಕೆ ಮನವಿ ಸಲ್ಲಿಸಿತ್ತು. ಬಿಬಿಎಂಪಿ ಆಯುಕ್ತರ ಮನವಿಯನ್ನು ಪರಿಗಣಿಸಿರುವ ರಾಜ್ಯ ಸರಕಾರ ಮೃತ ಎಂಜಿನಿಯರ್ ಪತ್ನಿ ಉಮಾಮಹೇಶ್ವರಿ ಹಾಗೂ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀನಿವಾಸ್, ಜ್ಯೋತಿ ಹಾಗೂ ಮನೋಜ್‌ಗೆ ಪಾಲಿಕೆ ಕೇಂದ್ರ ಕಚೇರಿಯಲ್ಲೇ ೩ಅಯಂ ಉದ್ಯೋಗ ಕಲ್ಪಿಸಿದೆ. ಇನ್ನು ಮುಂದೆ ಈ ನಾಲ್ವರು ಸಿ ಗ್ರೂಪ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ.

ವಿಶ್ವವಾಣಿ ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಪ್ರತಿದಿನ ಆರಾಮದಿಂದ ಓದಿ

{ ಕೃಷ್ಣ ಬೈರೇಗೌಡ } ಸಚಿವ

ಈ ಹಿಂದಿನ ಯಾವುದೇ ವರ್ಷ ಅಥವಾ ಯಾವುದೇ ಸರಕಾರಕ್ಕೆ ಹೋಲಿಸಿದರೆ 2023-24ರ ಸಾಲಿನಲ್ಲಿ ಅತಿಹೆಚ್ಚು ರೈತರಿಗೆ ಬರ ಪರಿಹಾರ ನೀಡಲಾಗಿದೆ. ಈ ವರ್ಷ ಸುಮಾರು 38,78,525 ರೈತರಿಗೆ ಬರ ಪರಿಹಾರ ನೀಡಲಾಗಿದೆ. ಈ ಹಿಂದೆ 23,42,667 ರೈತರಿಗೆ ಪರಿಹಾರ ನೀಡಿದ್ದೇ ದಾಖಲೆಯಾಗಿತ್ತು.

ಕ್ರೈಸ್ ಶಾಲೆಗಳಿಗೆ ಸ್ವಂತ ಕಟ್ಟಡ: ವಿಧಾನಸಭೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟನೆ

ವಿದ್ಯಾರ್ಥಿಗಳ ಸುರಕ್ಷತೆ, ಆರೋಗ್ಯದಲ್ಲಿ ರಾಜಿ ಇಲ್ಲ

ವಿಧಾನಸಭೆ: ಇತ್ತೀಚಿಗೆ ನಡೆದ ಎಸ್ಸಿಪಿ ಮತ್ತು ಟಿಎಸ್‌ಪಿ ಪರಿಷತ್ ಸಭೆಯಲ್ಲಿ ಕ್ರೈಸ್ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಅನುದಾನ ನೀಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ಹಾಸ್ಟೆಲ್ ಗಳಿಗೆ ಭೇಟಿ ನೀಡಲು ಸೂಚಿಸಲಾಗಿದೆ. ವಿದ್ಯಾರ್ಥಿಗಳ ಸುರಕ್ಷತೆ ಹಾಗೂ ಆರೋಗ್ಯ ವಿಚಾರದಲ್ಲಿ ರಾಜಿ ಇಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಶಾಸಕಿ ರೂಪಕಲಾ ಸಮಾಜಕಲ್ಯಾಣ ಇಲಾಖೆಯಲ್ಲಿ ನಡೆಯುತ್ತಿರುವ ವಸತಿ ಶಾಲೆಗಳ ಲೋಪಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಇಲಾಖೆ ವತಿಯಿಂದ 68 ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಸರಕಾರಿ ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದ್ದು, ಇಲ್ಲಿ ಒಂದರಿಂದ ಐದನೇ ತರಗತಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುತ್ತಿದ್ದು, 8,500 ವಿದ್ಯಾರ್ಥಿಗಳ ಪ್ರವೇಶಕ್ಕೆ ಮಂಜೂರಾತಿ ಇದೆ ಎಂದರು.

ರೋಟರಿ ಸಹಯೋಗದಲ್ಲಿ ಸೌಲಭ್ಯ: ವಸತಿಶಾಲೆಗಳಲ್ಲಿ ವಿದ್ಯಾರ್ಥಿಗಳ ಮಾನಸಿಕ, ದೈಹಿಕ ಆರೋಗ್ಯ, ಹಾಗೂ ಶಿಕ್ಷಣ ಗುಣಮಟ್ಟದ ಅಭಿವೃದ್ಧಿಗೆ ರೋಟರಿ ಸಂಸ್ಥೆಯೊಂದಿಗೆ ಕೌನ್ಸಿಲಿಂಗ್ ಹಾಗೂ ಇತರ ಸೌಲಭ್ಯಗಳನ್ನು ಕಲ್ಪಿಸಲು ಪ್ರಸ್ತಾವನೆ ಇದೆ. ಮುಂದಿನ ಎರಡು ತಿಂಗಳಲ್ಲಿ ಸಚಿವ ಸಂಪುಟದ ಅನುಮೋದನೆ ಪಡೆದು ಜಾರಿಗೆ ತರಲಾಗುವುದು. ಇಂಟರ್‌ನೆಟ್ ಹಾಗೂ ಇತರ ಅತ್ಯಾಧುನಿಕ ಸೌಲಭ್ಯಗಳಿಗಾಗಿ ಆತ್ಮಹತ್ಯೆಯ ಪ್ರಚೋದನೆಗಳಿಗೆ ಅವಕಾಶ ಹೆಚ್ಚಾಗುತ್ತಿವೆ. ಈ ಹಿಂದೆ ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ ರೇಣುಕಾ ಚಿದಂಬರಂ ಅವರ ನೇತೃತ್ವದಲ್ಲಿ ಸಮಿತಿ ರಚಿಸಿ ಪ್ರವೇಶ, ವಸತಿಶಾಲೆಗಳ ನಿರ್ವಹಣೆ, ಸುರಕ್ಷತೆಯ ಬಗ್ಗೆ ಪ್ರಮಾಣಿಕೃತ ವ್ಯವಸ್ಥೆ ಜಾರಿಗೊಳಿಸಲು ವೈಜ್ಞಾನಿಕ ವರದಿ ಪಡೆಯಲಾಗಿತ್ತು ಎಂದು ತಿಳಿಸಿದರು. ಹಿಂದಿನ ಸರಕಾರ ಅದನ್ನು ಜಾರಿಗೊಳಿಸಲಿಲ್ಲ. ಹಾಸ್ಟೆಲ್‌ಗಳಲ್ಲಿ 1:7 ಅಥವಾ 1:9 ಅನುಪಾತದಲ್ಲಿ ಶೌಚಾಲಯ ಇರಬೇಕು. ಕೆಲವು ಕಡೆ 1: 21 ಅನುಪಾತದಲ್ಲಿ ಶೌಚಾಲಯಗಳಿವೆ ಎಂದರು.

ಸಾವಿರ ಕೋಟಿ ಖರ್ಚು: ಸಮುದಾಯ ಭವನಗಳಿಗೆ ಸರಕಾರ ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತಿದೆ. ಹಿಂದೆ ಸಮಾಜಕಲ್ಯಾಣ ಸಚಿವನಾಗಿದ್ದಾಗ 14 ಸಾವಿರ ಸಮುದಾಯ ಭವನಗಳ ಮಂಜೂರಾತಿಯನ್ನು ರದ್ದುಮಾಡಿದ್ದೆ. ಈಗಲೂ ಭವನಗಳ ನಿರ್ಮಾಣಕ್ಕಾಗಿ 600 ಕೋಟಿ ಬಾಕಿ ಅಗತ್ಯ ಇದೆ ಎಂದು ಪ್ರಿಯಾಂಕ್ ಖರ್ಗೆ ನುಡಿದರು. ಸಚಿವರು ಉತ್ತರಿಸುವ ವೇಳೆ ಮಧ್ಯ ಪ್ರವೇಶಿಸಿದ ಶಾಸಕ ಕಂಪ್ಲಿ ಗಣೇಶ್, ಸದ್ಯಕ್ಕೆ ತಮ್ಮ ಕ್ಷೇತ್ರದಲ್ಲಿ ಒಂದು ಸಾವಿರ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಜಿ ಸಲ್ಲಿಸಿದ್ದಾರೆ ಅವರ ಪಾಡೇನು ಎಂಬ ಪ್ರಶ್ನೆಗೆ ಸರಕಾರದ ನಿಖರ ಉತ್ತರಕ್ಕೆ ಪಟ್ಟು ಹಿಡಿದಾಗ ಸದನದಲ್ಲಿ ಕೋಲಾಹಲ ವಾತಾವರಣ ನಿರ್ಮಾಣವಾಯಿತು.

ಸಮಾಜ ಕಲ್ಯಾಣ ಇಲಾಖೆಯ ಕ್ರೈಸ್ ಸಂಸ್ಥೆಯಿಂದ ನಡೆಯುತ್ತಿರುವ ವಸತಿ ಶಾಲೆಗಳಲ್ಲಿನ ಶಿಕ್ಷಣ ಗುಣಮಟ್ಟ ಹಾಗೂ ವಿದ್ಯಾರ್ಥಿಗಳ ಸುರಕ್ಷತೆಯಲ್ಲಿ ಸಾಕಷ್ಟು ಲೋಪಗಳಾಗಿವೆ ಎಂದು ಆಡಳಿತ ಪಕ್ಷವು ಸೇರಿದಂತೆ ಎಲ್ಲಾ ಶಾಸಕರು ಪಕ್ಷಭೇಧ ಮರೆತು ಸಮಾಜ ಕಲ್ಯಾಣ ಇಲಾಖೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆಯಿತು.

> ವಸತಿ ಶಾಲೆಗಳ ಸುಧಾರಣೆಗೆ ಕ್ರಮ ಕೈಗೊಳ್ಳುತ್ತದೆ. ಈ ಬಜೆಟ್ ನಲ್ಲಿ 20 ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ. 60 ಹೋಬಳಿಗಳಲ್ಲಿ ವಸತಿ ಶಾಲೆಗಳಿಲ್ಲ ಇವುಗಳಿಗೆ ಹಂತ ಹಂತವಾಗಿ ಮಂಜೂರು ಮಾಡಲಾಗಿದೆ.
>
> -ಎಚ್.ಸಿ. ಮಹದೇವಪ್ಪ, ಸಚಿವ

ಘನತ್ಯಾಜ್ಯ ನಿರ್ವಹಣಾ ಸ್ಥಳಕ್ಕೆ ಸಿಕ್ಕಿಂ ತಂಡ ಭೇಟಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸಿಕ್ಕಿಂನ ಗ್ಯಾಂಗ್ಟಕ್ ಮುನಿಸಿಪಲ್ ಕಾರ್ಪೊರೇಷನ್‌ನ ಮೇಯರ್ ನಿಯೋಗದ ಸದಸ್ಯರು ಘನತ್ಯಾಜ್ಯ ವಿಲೇವಾರಿ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಗ್ಯಾಂಗ್ಟಕ್ ಮುನ್ಸಿಪಲ್ ಕಾರ್ಪೊರೇಷನ್ ಮೇಯರ್ ನೆಲ್ ಬಹದ್ದೂರ್ ಚೆಟ್ರಿ ಮತ್ತು ಉಪ ಮೇಯರ್ ಶೆರಿಂಗ್ ಪಾಲ್ಡೆನ್ ಭುಟಿಯಾ ರವರನ್ನೊಳಗೊಂಡ ನಿಯೋಗವು ಬುಧ ವಾರ ಬೆಂಗಳೂರು ಘನತ್ಯಾಜ್ಯ ನಿರ್ವ ಹಣೆ ನಿಯಮಿತಕ್ಕೆ ಭೇಟಿ ನೀಡಿ, ಪಾಲಿಕೆ ವ್ಯಾಪ್ತಿಯಲ್ಲಿ ಯಾವ ರೀತಿ ಘನತ್ಯಾಜ್ಯ ನಿರ್ವಹಣೆ ಮಾಡಲಾಗುತ್ತಿದೆ. ಘನತ್ಯಾಜ್ಯದಲ್ಲಿ ಪಾಲಿಕೆಯ ಪಾತ್ರವೇನು ಹಾಗೂ ಬಿಎಸ್‌ಡಬ್ಲ್ಯುಎಂಎಲ್ ನ ಪಾತ್ರವೇನು, ತ್ಯಾಜ್ಯ ವಿಂಗಡಣೆ , ಇನ್ನಿತರ ವಿಷಯಗಳ ಕುರಿತು ಮಾಹಿತಿ ಪಡೆದುಕೊಂಡರು.

ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ತೆಗೆದುಕೊಂಡಿರುವ ಕ್ರಮಗಳು, ಮಿನಿ ಟ್ರಾನ್ಸ್ ಫರ್ ಸ್ಟೇಷನ್ಸ್ , ದ್ವಿತೀಯ ಟ್ರಾನ್ಸ್‌ಫರ್ ಸ್ಟೇಷನ್ಸ್, ತ್ಯಾಜ್ಯ ಸಂಸ್ಕರಣಾ ಘಟಕ, ಬಿಡದಿಯಲ್ಲಿ ನೂತನವಾಗಿ ಸ್ಥಾಪಿಸಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸೇರಿದಂತೆ ಇನ್ನಿತರೆ ವಿಷಯಗಳ ಕುರಿತು ಪಾಲಿಕೆ ವತಿಯಿಂದ ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ಒದಗಿಸಲಾಯಿತು.

ಮುಖ್ಯ ಆಯುಕ್ತರ ಭೇಟಿ:ಗ್ಯಾಂಗ್ಟಕ್ ಕಾರ್ಪೊರೇಷನ್‌ನ ಮೇಯರ್ ಒಳಗೊಂಡ ನಿಯೋಗವು ಬಿಬಿಎಂಪಿ ಕೇಂದ್ರ ಕಚೇರಿಗೆ ಭೇಟಿ ನೀಡಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಭೇಟಿ ಮಾಡಿ ಘನತ್ಯಾಜ್ಯ ನಿರ್ವಹಣೆ ಕಾರ್ಯನಿರ್ವಹಣೆಯ ಕುರಿತು ಚರ್ಚಿಸಿದರು.

2ನೇ ವಿಮಾನ ನಿಲ್ದಾಣಕ್ಕೆ ಸಭೆ

ವಿಧಾನಸೌಧದ ಕಚೇರಿಯಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಹತ್ವದ ಸಭೆ ನಡೆಸಿದರು. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ ಸಿಇಒ ಹರಿ ಮರಾರ್, ಕ್ಯಾಪ್ಟನ್ ಗೋಪಿನಾಥ್, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್ ಕೆ ಅತೀಕ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರು: ವಿಮಾನ ಪ್ರಯಾಣಿಕರ ದಟ್ಟಣೆ ಹೆನ್ನೆಲೆಯಲ್ಲಿ ಎರಡನೇ ವಿಮಾನ ನಿಲ್ದಾಣ ವಿಚಾರಕ್ಕೆ ಸಂಬಂಧಿಸಿದ್ದಂತೆ ಸ್ಥಳದ ಆಯ್ಕೆ ಸೇರಿದಂತೆ ಹಲವು ವಿಚಾರ ಕುರಿತು ಚರ್ಚಿಸಲಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ವಿಧಾನಸೌಧದ ಸಚಿವರ ಕಚೇರಿಯಲ್ಲಿ ನಡೆದ ಮಹತ್ವದ ಸಭೆ ನಂತರ ಮಾತನಾಡಿದ ಅವರು, ಈ ಯೋಜನೆಯನ್ನು ಹೇಗೆ ಮುಂದಕ್ಕೆ ಕೊಂಡೊಯ್ಯಬೇಕು ಎನ್ನುವ ಬಗ್ಗೆ ಉದ್ಯಮಿಗಳು ಮತ್ತು ಸಂಬಂಧಿಸಿದ ಅಧಿಕಾರಿಗಳ ಜೊತೆ ಸಭೆ ನಡೆಸಿ ಸಲಹೆ ಸ್ವೀಕರಿಸಲಾಗಿದ್ದು, ಮುಂಬರುವ ದಿನಗಳಲ್ಲಿ ಮತ್ತಷ್ಟು ಸಭೆ ನಡೆಸಿ ಚರ್ಚಿಸಲಾಗುವುದು ಎಂದರು. ಪ್ರಯಾಣಿಕರ ದಟ್ಟಣೆ ಮತ್ತು ಕೈಗಾರಿಕಾ ಅಗತ್ಯ ಎರಡನ್ನೂ ಯೋಜನೆ ಯಲ್ಲಿ ಪರಿಗಣಿಸುವ ಚಿಂತಿಸಲಾಗಿದ್ದು, ಜತೆಗೆ ಭೂಮಿಯ ಲಭ್ಯತೆ ಇತ್ಯಾದಿ ತಾಂತ್ರಿಕ ಅಂಶಗಳ ಕಡೆಗೂ ಗಮನಹರಿಸಲಾಗುವುದು ಎಂದು ತಿಳಿಸಿದ್ದಾರೆ.

ಇ-ಸ್ವತ್ತು ತಂತ್ರಾಂಶದ ಹೊಸ ಅವತರಣಿಕೆ

ಬೆಂಗಳೂರು: ಇ-ಸ್ವತ್ತು ತಂತ್ರಾಂಶದ ಬಳಕೆದಾರರಿಗೆ ಅನುಕೂಲವಾಗುವ ದೃಷ್ಟಿಯಿಂದ ಅಭಿವೃದ್ಧಿಪಡಿಸಲಾಗಿರುವ ಇ-ಸ್ವತ್ತು ತಂತ್ರಾಂಶದ ಹೊಸ ಅವತರಣಿಕೆಯನ್ನು ಸಾರ್ವಜನಿಕರ ಸೇವೆಗೆ ಬಿಡುಗಡೆ ಮಾಡಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾ ಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಸುದ್ದಿಗಾರರಿಗೆ ಈ ಕುರಿತು ಮಾಹಿತಿ ನೀಡಿದ ಅವರು, ತಂತ್ರಾಂಶವು ಸಮಗ್ರ ಆವೃತ್ತಿ ಯೊಂದಿಗೆ ಸಜ್ಜುಗೊಳಿಸಲಾಗಿದ್ದು, ಇದರಿಂದ ಸಾರ್ವಜನಿಕರ ಆಸ್ತಿ ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ಅಳತೆ ಮಾಡಿಸುವ ಪ್ರಕ್ರಿಯೆಯನ್ನು ಗ್ರಾಮ ಪಂಚಾಯಿತಿಯ ಹಂತದಲ್ಲಿ ದಿಶಾಂಕ್ ಆಫ್ ಮೂಲಕ ನಿರ್ವಹಿಸಲು ಕ್ರಮವಹಿಸಲಾ ಗುತ್ತಿದೆ ಎಂದರು. ಇ-ಸ್ವತ್ತು ತಂತ್ರಾಂಶದ ಹೊಸ ಅವತರಣಿಕೆ ಲೈವ್ ಮಾಡಲಾಗು ತ್ತಿದ್ದು, ಇದರಿಂದಾಗಿ, ಜುಲೈ 27ರಿಂದ ಜುಲೈ 29ರವರೆಗೆ ಇ-ಸ್ವತ್ತು ತಂತ್ರಾಂಶ ಕಾರ್ಯನಿರ್ವಹಿಸುವುದಿಲ್ಲ, ಸಾರ್ವಜನಿಕರ ಅನಾನು ಕೂಲತೆ ಕಡಿಮೆ ಮಾಡಲು ತಂತ್ರಾಂಶ ಕಾರ್ಯಾರಂಭಿಸಿದ ನಂತರ ಕಾರ್ಯಾವಧಿಯನ್ನು ಆಗಸ್ಟ್ 2 ರವರೆಗೆ ಸಂಜೆ 8 ಗಂಟೆಯವರೆಗೂ ವಿಸ್ತರಿಸಲಾಗುವುದು ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ರಾಜ್ಯದಲ್ಲಿ 2 ದಿನ ಭಾರಿ ಮಳೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿದ್ದು, ಜು.26 ರವರೆಗೆ ಹಲವು ಜಿಲ್ಲೆಗಳಲ್ಲಿ ಹವಾಮಾನ ಇಲಾಖೇ ಯೆಲ್ಲೋ ಅಲರ್ಟ್ ಘೋಷಿಸಿದೆ. ಉತ್ತರ ಕನ್ನಡ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅತಿ ಭಾರೀ ಮಳೆಯಾಗುವ ಸಾಧ್ಯತೆಯಿದೆ. ನಿರಂತರ ಗಾಳಿಯ ವೇಗ ಪ್ರತಿ ಗಂಟೆಗೆ 40 ರಿಂದ 50 ಕಿಮೀ ತಲುಪಲಿದೆ. ದಕ್ಷಿಣ ಕನ್ನಡ, ಉಡುಪಿ, ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಭಾರಿ ಮಳೆ ನಿರಂತರ ಗಾಳಿ ಬೀಸಲಿದೆ. ಉತ್ತರ ಒಳನಾಡಿನ ಉಳಿದ ಜಿಲ್ಲೆಗಳ ಬಹುತೇಕ ಸ್ಥಳಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಹಲವು ಸ್ಥಳಗಳಲ್ಲಿ ಸಾಧಾರಣ ಮಳೆಯಾಗಲಿದೆ ಎಂದಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ: ಬೆಂಗಳೂರು ನಗರ ಮತ್ತು ಸುತ್ತಮುತ್ತ ಸ್ಥಳಗಳಲ್ಲಿ ಮುಂದಿನ 48 ಗಂಟೆಗಳ ಕಾಲಸಾಮಾನ್ಯವಾಗಿ ಮೋಡ ಕವಿದ ಆಕಾಶ ಇರಲಿದೆ. ಹಗುರ ಮಳೆಯಾಗುವ ಸಾಧ್ಯತೆಯಿದೆ. ನಿರಂತರ ಗಾಳಿಯ ವೇಗ ಇರಲಿದೆ. ವಾಯುಭಾರ ಈಗ ದಕ್ಷಿಣ ಗುಜರಾತ್-ಉತ್ತರ ಕೇರಳ ಕರಾವಳಿಯ ಉದ್ದಕ್ಕೂ ಸಾಗುತ್ತಿರುವುದರಿಂದ ಕರಾವಳಿ ಕರ್ನಾಟಕ ಮತ್ತು ಪಕ್ಕದ ಪಶ್ಚಿಮ ಘಟ್ಟಗಳ ಜಿಲ್ಲೆಗಳಲ್ಲಿ ಬಲವಾದ ಗಾಳಿ ಒಮ್ಮುಖವಾಗಿದೆ. ಇದರ ಪರಿಣಾಮ ನೈರುತ್ಯ ಕರಾವಳಿ ಕರ್ನಾಟಕದ ಮೇಲೆ ಮುಂಗಾರು ಸಕ್ರಿಯವಾಗಿದ್ದು, ಕರ್ನಾಟಕದ ಒಳಭಾಗದಲ್ಲಿ ಸಾಮಾನ್ಯವಾಗಿದೆ. ಕರಾವಳಿಯ ಬಹುತೇಕ ಸ್ಥಳಗಳಲ್ಲಿ ಮತ್ತು ಒಳನಾಡಿನ ಹಲವು ಸ್ಥಳಗಳಲ್ಲಿ ಮಳೆಯಾಗಿದೆ. ಮಂಗಳವಾರದಿಂದ ಅತಿ ಹೆಚ್ಚು ಮಳೆ 15 ಸೆಂ.ಮೀ ಉತ್ತರ ಕನ್ನಡ ಜಿಲ್ಲೆಯ ಮಂಕಿಯಲ್ಲಿ ಆಗಿದೆ. ಉತ್ತರ ಕನ್ನಡ ಜಿಲ್ಲೆಯ ಗೇರುಸೊಪ್ಪ 13 ಸೆಮೀ, ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ 12 ಸೆಮೀ ಮಳೆಯಾಗಿದೆ ಎಂದು ಬೆಂಗಳೂರು ಹವಾಮಾನ ಕೇಂದ್ರದ ನಿರ್ದೇಶಕ ಸಿ.ಎಸ್.ಪಾಟೀಲ್ ಅವರು ತಿಳಿಸಿದ್ದಾರೆ.

ನಗರದ ಅಂಬೇಡ್ಕರ್ ರಸ್ತೆಯಲ್ಲಿ ಸುರಿವ ಮಳೆಗೆ ಸಂಚರಿಸುತ್ತಿರುವ ವಿದ್ಯಾರ್ಥಿಗಳು.

ಮಹದೇವಪುರ ಶಾಸಕಿ ಮಂಜುಳಾ ಲಿಂಬಾವಳಿ ನೇತೃತ್ವ

27 ರಂದು ಬೃಹತ್ ಉದ್ಯೋಗ ಮೇಳ

ಮಾರತ್ತಹಳ್ಳಿ ಬಳಿಯ ಈ ಝೋನ್ ನ ಬಿಜೆಪಿ ಕಚೇರಿಯಲ್ಲಿ ಆಯೋಜಿಸ್ಸಿ ಸುದ್ದಿಗೋಷ್ಠಿ ಯಲ್ಲಿ ಉದ್ಯೋಗ ಮೇಳದ ಭಿತ್ತಿಪತ್ರಗಳನ್ನು ಟಾಸ್ಕ್ ಫೋರ್ಸ್ ಅಧ್ಯಕ್ಷ ಪಾಪಣ್ಣ, ಮಂಡಲ ಅಧ್ಯಕ್ಷ ಮನೋಹರ್ ರೆಡ್ಡಿ, ಗ್ರಾಮಾಂತರ ಅಧ್ಯಕ್ಷ ನಟರಾಜ ಬಿಡುಗಡೆಗೊಳಿಸಿದರು.

ಬೆಂಗಳೂರು: ಮಹದೇವಪುರ ಟಾಸ್ಕ್ ಫೋರ್ಸ್ ಅಧ್ಯಕ್ಷರು ಹಾಗೂ ಮಾಜಿ ಸಚಿವ ಅರವಿಂದ ಲಿಂಬಾವಳಿ ಮತ್ತು ಮಹದೇವಪುರ ಕ್ಷೇತ್ರದ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿಯವರ ನೇತೃತ್ವದಲ್ಲಿ ಸಾಮಾಜಿಕ ಸಬಲೀಕರಣ ಕಾರ್ಯಪಡೆ ವತಿಯಿಂದ ಜು. 27 ರಂದು ಬೆಳಗ್ಗೆ 9 ರಿಂದ ಸಂಜೆ 5 ರ ವರೆಗೆ ಚನ್ನಸಂದ್ರದ ಸರಕಾರಿ ಪಾಲಿಟೆಕ್ನಿಕ್ ಕಾಲೇಜು ಮೈದಾನದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಟಾಸ್ಕ್ ಫೋರ್ಸ್ ಅಧ್ಯಕ್ಷ ಪಾಪಣ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉದ್ಯೋಗ ಮೇಳಕ್ಕೆ ಪ್ರತಿಷ್ಠಿತ 50 ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು 3 ಸಾವಿರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ಭಾಗವಹಿಸಲಿ ದ್ದಾರೆ. ಈಗಾಗಲೇ 1162 ಉದ್ಯೋಗಾ ಕಾಂಕ್ಷಿಗಳು ನೋಂದಾಯಿಸಿ ಕೊಂಡಿದ್ದಾರೆ ಎಂದರು. ಮಂಡಲ ಅಧ್ಯಕ್ಷ ಮನೋಹರ್ ರೆಡ್ಡಿ ಮಾತನಾಡಿ, ಮಹದೇವಪುರ ಕ್ಷೇತ್ರದ ಉದ್ಯೋಗಾಕಾಂಕ್ಷಿಗಳ ಅನುಕೂಲಕ್ಕಾಗಿ ಈ ಮೇಳ ಹಮ್ಮಿಕೊಂಡಿದ್ದ ಸದುಪಯೋಗ ಪಡೆದುಕೊಳ್ಳಬೇಕು. ಪದವೀಧರರು, ಉನ್ನತ ಪಧವೀಧರರು, ಐಟಿಐ, ಡಿಪ್ಲೊಮಾ, ಪದವೀಧರರೇತರ ರಂತೆ 4 ವರ್ಗಗಳಾಗಿ ವಿಂಗಡಿಸಿ, ಸಂಬಂಧಪಟ್ಟ ಉದ್ಯೋಗಾಕಾಂಕ್ಷಿ ಗಳು ಅವರ ವಿದ್ಯಾರ್ಹತೆಯ ತಕ್ಕಂತೆ ಭಾಗವ ಹಿಸಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ ಎಂದರು. ಗ್ರಾಮಾಂತರ ಅಧ್ಯಕ್ಷ ನಟರಾಜ್ , ಕಾರ್ಯದರ್ಶಿ ರಾಜೇಶ್, ಮೋದಿ, ನಾಗೇಶ್, ಕಿರಣ್, ಪ್ರಸಾದ್ ಮತ್ತಿತರರಿದ್ದರು.

> ಉದ್ಯೋಗ ಪಡೆದ ಉದ್ಯೋಗಾಕಾಂಕ್ಷಿಗಳಿಗೆ ಸ್ಥಳದಲ್ಲೇ ನೇಮಕದ ಆದೇಶ ನೀಡುವಂತೆ ಸಂಬಂಧಪಟ್ಟ ಕಂಪನಿಯವರಿಗೆ ಕೋರಲಾಗಿದೆ. ವಿಶೇಷ ಚೇತನ ಯುವಕ ಯುವತಿಯರು ಹಾಗೂ ಮಂಗಳಮುಖಿಯರಿಗೆ ವಿಶೇಷ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ವಾರ್ಡ್‌ಗಳಿಂದ ಭಾಗವಹಿಸುವ ಉದ್ಯೋಗಾಕಾಂಕ್ಷಿಗಳಿಗೆ ಸ್ಥಳೀಯ ಮುಖಂಡರುಗಳಿಂದ ವಾಹನದ ವ್ಯವಸ್ಥೆ ಮಾಡಲಿದ್ದಾರೆ.
>
> -ಪಾಪಣ್ಣ, ಟಾಸ್ಕ್ ಫೋರ್ಸ್ ಅಧ್ಯಕ್ಷ

60ಕ್ಕೂ ಹೆಚ್ಚು ಮಂದಿಗೆ ಉಚಿತ ಚಿಕಿತ್ಸೆ | ಎರಡು ವಿಧದಲ್ಲಿ ಕಸಿ ಚಿಕಿತ್ಸೆ

ಕಿದ್ವಾಯಿ: ಅಸ್ತಿಮಜ್ಜೆ ಕಸಿ ಚಿಕಿತ್ಸೆ ಯಶಸ್ವಿ

ಬೆಂಗಳೂರು: ನಗರದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಅಸ್ತಿಮಜ್ಜೆ (ಬೋನ್ ಮ್ಯಾರೊ) ಕಸಿ ಘಟಕ ಆರಂಭವಾಗಿನಿಂದಲೂ ಚಿಕಿತ್ಸೆಗೊಳಪಟ್ಟ ರೋಗಿಗಳಿಗೆ ಶೇ.100 ರಷ್ಟು ಯಶಸ್ವಿಯಾಗಿ ಅಸ್ತಿಮಜ್ಜೆ ಕಸಿ ನಡೆಸಲಾಗಿದೆ.

ಲಿಂಫೋಮಾ, ಹಾಡ್ಕಿನ್ಸ್ ಲಿಂಫೋಮಾ, ಮಲ್ಟಿಪಲ್ ಮೈಲೋಮಾ, ನ್ಯೂರೋ ಬ್ಲಾಸ್ಟೋಮಾ, ಅಕ್ಯೂಟ್ ಲುಕೇಮಿಯಾ ರೋಗಿಗಳಿಗೆ ಆರೋಗ್ಯ ಶ್ರೀ ಸೇರಿ ಸರಕಾರಿ ಯೋಜನೆಯಡಿ ಹಾಗೂ ರೋಗಿಗಳ ಕ್ಷೇಮಾಭಿವೃದ್ಧಿ ನಿಧಿ ಬಳಸಿ 60ಕ್ಕೂ ಹೆಚ್ಚು ಮಂದಿಗೆ ಉಚಿತ ಚಿಕಿತ್ಸೆ ನೀಡಲಾಗಿದೆ.

ಎರಡು ವಿಧದಲ್ಲಿ ಕಸಿ ಚಿಕಿತ್ಸೆ: ರೋಗಿಯ ದೇಹದಲ್ಲ ಸಕ್ರಿಯವಾಗಿರುವ ಕ್ಯಾನ್ಸರ್ ಕಣಗಳನ್ನು ನಾಶಗೊಳಿಸಿ, ಅವರದೇ ದೇಹದ ಆರೋಗ್ಯಕರ ಅಂಗದ ಒಂದಿಷ್ಟು ಮಜ್ಜೆಯನ್ನು ತೆಗೆದು ಕ್ಯಾನ್ಸರ್ ಕಣಗಳು ನಾಶವಾದ ಜಾಗದಲ್ಲಿ ಕಸಿ ಮಾಡಲಾಗುತ್ತದೆ. ಇದು ಆಟೊಲೋಗಸ್ ವಿಧಾನವಾಗಿದ್ದು, 3 ರಿಂದ 4 ಲಕ್ಷ ರು. ವೆಚ್ಚದಲ್ಲಿ ಚಿಕಿತ್ಸೆ ನಡೆಸಲಾಗಿದೆ. ಮತ್ತೊಂದು ವಿಧಾನದಲ್ಲಿ ಕ್ಯಾನ್ಸರ್ ಪೀಡಿತ ವ್ಯಕ್ತಿಯ ದೇಹಕ್ಕೆ ಹೊಂದಿಕೊಳ್ಳುವ ಮಜ್ಜೆ ಯನ್ನು ಬೇರೇಯವರಿಂದ ಪಡೆದು ಕಸಿ ಮಾಡಲಾಗುತ್ತಿದೆ. ಇದು ಆಲೋಜನಿಕ್ ವಿಧಾನವಾಗಿದ್ದು, 10 ರಿಂದ 12 ಲಕ್ಷ ರು. ವೆಚ್ಚದಲ್ಲಿ ಚಿಕಿತ್ಸೆ ನೀಡಲಾಗಿದೆ.

ಘಟಕದ ವಿಶೇಷತೆ: ಸಂಸ್ಥೆಯ ಆವರಣದಲ್ಲಿನ ಜಿಂದಾಲ್ ಕೇಂದ್ರದ ನಾಲ್ಕನೇ ಮಹಡಿಯಲ್ಲಿ ಸುಮಾರು 12 ಕೋಟಿ ರು. ವೆಚ್ಚದಲ್ಲಿ 15 ಸಾವಿರ ಚದರ ಅಡಿ ವಿಸ್ತೀರ್ಣದ ಅಸ್ತಿಮಜ್ಜೆ ಘಟಕದ ಕಟ್ಟಡ ನಿರ್ಮಾಣಗೊಂಡಿದೆ. 10 ಪ್ರತ್ಯೇಕ ಹಾಗೂ ಸುಸಜ್ಜಿತ ಕೊಠಡಿಗಳು, ಮೂರು ಶಸ್ತ್ರಚಿಕಿತ್ಸಾ ಘಟಕಗಳು, ವೈದ್ಯರ ವಿಶ್ರಾಂತಿ ಕೊಠಡಿಯನ್ನು ಒಳಗೊಂಡಿದೆ. ನುರಿತ ವೈದ್ಯರು ಹಾಗೂ ಸಿಬ್ಬಂದಿ ತಂಡವನ್ನು ಹೊಂದಿದೆ. ಇದು ರಾಜ್ಯದ ಮೊದಲ ಸರಕಾರಿ ಅಸ್ತಿಮಜ್ಜೆ ಘಟಕ ಎಂಬ ಹೆಗ್ಗಳಿಕೆ ಪಾತ್ರವಾಗಿದೆ.

ಅತ್ಯುತ್ತಮ ಸೇವೆ: ಕಿದ್ವಾಯಿಗೆ 3ನೇ ಸ್ಥಾನ

2017ನೇ ಸಾಲಿನಿಂದ ದೇಶದ ಅತ್ಯುತ್ತಮ ಸರಕಾರಿ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಕಿದ್ವಾಯಿಗೆ ಮೂರನೇ ಸ್ಥಾನ ಅಲಂಕರಿಸುತ್ತಾ ಬಂದಿದೆ. ಬಿಪಿಎಲ್ ಕಾರ್ಡು ಹೊಂದಿರುವವರಿಗೆ ಸಂಪೂರ್ಣ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಬಡರೋಗಿಗಳಿಗೆ ವಿಶ್ವದರ್ಜೆಯ ಚಿಕಿತ್ಸೆ ನೀಡುತ್ತಿದೆ. ಕ್ಯಾನ್ಸರ್ ರೋಗಿಗಳಿಗೆ ಅನುಕೂಲಕರವಾದ ವಾತಾವರಣ ನಿರ್ಮಾಣದತ್ತ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸಾಗುತ್ತಿದ್ದು, ಇತರೆ ಆಸ್ಪತ್ರೆಗಳಿಗೆ ಮಾದರಿಯಾಗಲಿದೆ.

ಹೆಚ್ಚಿದ ಬೇಡಿಕೆ

ಕ್ಯಾನ್ಸರ್ ರೋಗಿಗಳು ಅಸ್ತಿಮಕ್ಕೆ ಕಸಿ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಲ್ಲಿ 20 ರಿಂದ 50 ಲಕ್ಷ ರು. ಖರ್ಚು ಮಾಡಬೇಕಿದೆ. ಹೀಗಾಗಿ ಈ ಚಿಕಿತ್ಸೆ ಪಡೆಯುವುದು ಬಡ ರೋಗಿಗಳಿಗೆ ಕಷ್ಟಸಾಧ್ಯವಾಗಿತ್ತು. ಇದೀಗ ಈ ಚಿಕಿತ್ಸೆ ನಗರದ ಕಿದ್ವಾಯಿ ಆಸ್ಪತ್ರೆಯಲ್ಲೆ ಆರಂಭವಾಗಿದ್ದು, ಉಚಿತವಾಗಿ ಚಿಕಿತ್ಸೆ ದೊರೆಯುತ್ತಿರುವುದು ರೋಗಿಗಳಿಗೆ ವರದಾನವಾಗಿದೆ. ಇದರಿಂದ ಸಂಸ್ಥೆಯಲ್ಲಿ ಚಿಕಿತ್ಸೆಗೆ ಬೇಡಿಕೆ ಹೆಚ್ಚಿದೆ.

ಬಿಎಂಟಿಸಿ ಬಸ್‌ನಲ್ಲಿ ಹಿಂದಿ ಬೋರ್ಡ್: ಜನಾಕ್ರೋಶ

ಬೆಂಗಳೂರು: ಬಿಎಂಟಿಸಿ ಬಸ್‌ನಲ್ಲಿ ಹಿಂದಿ ಬೋರ್ಡ್ ಹಾಕಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿದೆ. ಬಿಎಂಟಿಸಿ ಯಲ್ಲಿರುವ ಈ ಹಿಂದಿ ಭಾಷೆ ಬೋರ್ಡ್ ಹಿಂದಿರುವ ವಿಜ್ಞಾನಿ ಯಾರು ಎಂದು ಜನರು ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಯಾಗಿದೆ.

ಬಿಎಂಟಿಸಿಯನ್ನು ಟ್ಯಾಗ್‌ಮಾಡಿ ಪೋಸ್ಟ್ ಹಾಕಲಾಗಿದ್ದು, ನೆಟ್ಟಿಗರು ಹಿಂದಿ ಹೇರಿಕೆ ವಿರುದ್ಧ ಆಕ್ರೋಶ ಹೊರಹಾಕಿ ದ್ದಾರೆ. ಹಾಲಸ್ವಾಮಿ ಡಿ. ಎಂ. ಎಂಬುವ ವರು ಎಕ್ಸ್ ವೇದಿಕೆಯಲ್ಲಿ ಬಿಎಂಟಿಸಿಯ ಹಿಂದಿ ಬೋರ್ಡ್‌ನ ವಿಡಿಯೊ ಹಂಚಿ ಕೊಂಡಿದ್ದು, ಬನಶಂಕರಿ ಬಸ್‌ನಿಲ್ದಾಣದ ಬಳಿ ಎಲೆಕ್ಟ್ರಿಕ್ ಬಸ್ ಮೇಲೆ ಹಿಂದಿ ಬೋರ್ಡ್ ನೋಡಿದೆ. ಈ ಹಿಂದಿ ಭಾಷೆ ಬಳಕೆಯ ಹಿಂದಿನ ವಿಜ್ಞಾನಿ ಯಾರು ಎಂಬುವುದು ನನಗೆ ತಿಳಿಯಬೇಕು ಎಂದು ಕಿಡಿಕಾರಿದ್ದಾರೆ.

ಬಿಎಂಟಿಸಿ ಸ್ಪಷ್ಟನೆ: ಈ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಸದ್ದು ಮಾಡುತ್ತಿದ್ದಂತೆಯೇ ಬಿಎಂಟಿಸಿಯ ಅಧಿಕಾರಿಗಳು ಎಚ್ಚೆತ್ತುಕೊಂಡು ಸ್ಪಷ್ಟನೆ ನೀಡಿದ್ದು, ಬಿಎಂಟಿಸಿ ಕನ್ನಡವನ್ನು ಆಡಳಿತ ಭಾಷೆಯಾಗಿ ಪ್ರಾಮುಖ್ಯತೆ ನೀಡುತ್ತದೆ. ಹಿಂದಿ ಭಾಷಾ ಪ್ರದರ್ಶನ ಫಲಕಗಳ ಬಗ್ಗೆ 'ಎಕ್ಸ್' ಸಾಮಾಜಿಕ ಮಾಧ್ಯಮದಲ್ಲಿ ಬಂದ ಟ್ವೀಟ್ ಸಂಬಂಧ, ಈ ಚಿತ್ರಗಳನ್ನು ಬಸ್‌ಗಳು ಕಂಪನಿಯಿಂದ ನೇರವಾಗಿ ಬಿಎಂಟಿಸಿ ಜಯನಗರ ಡಿಪೊಗೆ ಬಂದಾಗ ತೆಗೆಯಲಾಗಿದ್ದು, ಎಲ್ಲಾ ಬಿಎಂಟಿಸಿ ಬಸ್ ನಾಮಫಲಕಗಳು ಕನ್ನಡ ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರ ಇವೆ ಎಂದು ಸ್ಪಷ್ಟಪಡಿಸಿದೆ.

ಅಧಿಕಾರಿಗಳಿಗೆ ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ

ಒತ್ತುವರಿ ತೆರವು ಕಾರ್ಯಾಚರಣೆಗೆ ಕ್ರಮವಹಿಸಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬೃಹತ್ ನೀರುಗಾಲುವೆ, ಕೆರೆಗಳ ಒತ್ತುವರಿಗಳನ್ನು ಭೂ ದಾಖಲೆಗಳು ಹಾಗೂ ಕಂದಾಯ ಇಲಾಖೆಗಳ ಸಮನ್ವಯದೊಂದಿಗೆ ಗುರುತಿಸಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಬೇಕು ಎಂದು ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಮಳೆ ನೀರುಗಾಲುವೆ ಹಾಗೂ ಕೆರೆಗಳ ಒತ್ತುವರಿ ತೆರವು ಕಾರ್ಯಾಚರಣೆ ಕುರಿತು ಕೇಂದ್ರ ಕಚೇರಿಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ಜತೆ ಸಭೆ ನಡೆಸಿ ಬಳಿಕ ಮಾತನಾಡಿ, ನಗರದಲ್ಲಿ ಬೃಹತ್ ನೀರುಗಾಲುವೆಗಳನ್ನು ಒತ್ತುವರಿ ಮಾಡಿಕೊಂಡಿರುವ ಸ್ಥಳಗಳನ್ನು ಭೂಮಾಪಕರಿಂದ ಸರ್ವೆ ನಡೆಸಿ ಗುರುತು ಮಾಡಬೇಕು. ತಹಸೀಲ್ದಾರರು ಒತ್ತುವರಿದಾರರನ್ನು ಗುರುತಿಸಿ ವಿಶೇಷ ಜಿಲ್ಲಾಧಿಕಾರಿಗೆ ಸಲ್ಲಿಸಿ ಸೂಕ್ತ ಆದೇಶ ಜಾರಿ ಮಾಡಿರುವ ಒತ್ತುವರಿಗಳನ್ನು ಹಂತ- ಹಂತವಾಗಿ ತೆರವುಗೊಳಿಸಬೇಕು. ಹೈಕೋರ್ಟ್‌ನಲ್ಲಿ ತಡೆಯಾಜ್ಞೆಯಿರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಿಕೊಂಡು ತೆರವು ಕಾರ್ಯಾಚರಣೆ ನಡೆಸಬೇಕು ಎಂದು ಹೇಳಿದರು.

ನಗರದಲ್ಲಿ ಹೊಸ ಒತ್ತುವರಿಗಳು ಸೇರಿದಂತೆ 4316 ಒತ್ತುವರಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 2473 ಒತ್ತುವರಿಗಳನ್ನು ಇದುವರೆಗೆ ತೆರವುಗೊಳಿಸಲಾಗಿದೆ. ಇನ್ನು 1648 ಒತ್ತುವರಿಗಳನ್ನು ತೆರವುಗೊಳಿಸಬೇಕಾಗಿದ್ದು, 195 ಒತ್ತುವರಿ ಪ್ರಕರಣಗಳು ನ್ಯಾಯಾಲಯದಲ್ಲಿದೆ. ಭೂಮಾಪನಾ ಇಲಾಖೆಯಲ್ಲಿ 889 ಒತ್ತುವರಿಗಳು, ಕಂದಾಯ ಇಲಾಖೆಯಲ್ಲಿ 615 ಒತ್ತುವರಿಗಳು ಹಾಗು ಪಾಲಿಕೆಯಲ್ಲಿ 144 ಒತ್ತುವರಿ ಪ್ರಕರಣಗಳಿದ್ದು, ಆಯಾ ಇಲಾಖೆಗಳಿಗೆ ಕೂಡಲೆ ಸೂಕ್ತ ಕ್ರಮ ಕೈಗೊಳ್ಳಬೇಕು. ತಹಸೀಲ್ದಾರರು ಆದೇಶಗಳನ್ನು ಜಾರಿಗೊಳಿಸಿದ ನಂತರ, ಹಂತ-ಹಂತವಾಗಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಬೇಕು ಎಂದು ಮಾಹಿತಿ ನೀಡಿದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ಜತೆ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್, ಭೂಮಾಪನ, ಕಂದಾಯ ವ್ಯವಸ್ಥೆ ಹಾಗೂ ಭೂದಾಖಲೆಗಳ ಇಲಾಖೆಯ ಆಯುಕ್ತ ಜೆ. ಮಂಜುನಾಥ್, ವಿಶೇಷ ಆಯುಕ್ತರಾದ ಪ್ರೀತಿ ಗೆಹ್ಲೋಟ್ ಇದ್ದರು.

159 ಕೆರೆ ಒತ್ತುವರಿ

ಪಾಲಿಕೆ ವ್ಯಾಪ್ತಿಯಲ್ಲಿ 202 ಕೆರೆಗಳಿದ್ದು, 183 ಕೆರೆಗಳು ಜೀವಂತ ಕೆರೆಗಳಿವೆ. 159 ಕೆರೆಗಳಲ್ಲಿ ಒತ್ತುವರಿಯಿದೆ ಎಂಬುದನ್ನು ಗುರುತಿಸಿದ್ದು, ಹೈಕೋರ್ಟ್‌ಗೆ ಸಲ್ಲಿಸಿರುವ ಕ್ರಿಯಾ ಯೋಜನೆಯ ಪ್ರಕಾರ ಕ್ರಮವಹಿಸಲು ತಹಶೀಲ್ದಾರರಿಗೆ ಪತ್ರ ಬರೆಯಲಾಗಿದೆ. ಈ ಪೈಕಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು 124 ಕೆರೆಗಳ ಸಮೀಕ್ಷೆ ಮಾಡಿ ಗಡಿ ಗುರುತಿಸಿರುವ ಕೆರೆಗಳಿಗೆ ಸಂಬಂಧಿಸಿದಂತೆ 82 ಕೆರೆಗಳ ನಕ್ಷೆ ನೀಡಲಾಗಿದೆ. ಒತ್ತುವರಿ ತೆರವು ಕಾರ್ಯಾಚರಣೆ ಸಂಬಂಧ ಹೈಕೋರ್ಟ್ ನಿರ್ದೇಶನದಂತೆ ಕ್ರಮವಹಿಸಬೇಕು. ಇಲ್ಲವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಸೂಚನೆ ನೀಡಿದರು.

ರಾಜ್ಯದ ಜಲಾಶಯಗಳ ಮಟ್ಟ

	ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
1.	ಕೆಆರ್‌ಎಸ್	124.80	124.10	31852
2.	ಕಬಿನಿ	2284	2282.35	18,147
3.	ಹಾರಂಗಿ	2859	2856.27	9288
4.	ಹೇಮಾವತಿ	2922	2921.02	23363
5.	ತುಂಗಭದ್ರಾ	1633	1630.75	84115
6.	ಆಲಮಟ್ಟಿ	1704.81	1698.08	159812
7.	ನಾರಾಯಣಪುರ	1615	1619.68	157360

ಸಮಾಚಾರ ಸಣ್ಣದಲ್ಲ

ಉಪಾಹಾರ ಸೇವಿಸಿ 46 ವಿದ್ಯಾರ್ಥಿಗಳು ಅಸ್ವಸ್ಥ

ರಾಯಚೂರು: ತಾಲೂಕಿನ ಚಂದ್ರಬಂಡಾ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಉಪಹಾರ ಸೇವಿಸಿದ 46 ಮಕ್ಕಳು ಅಸ್ವಸ್ಥಗೊಂಡಿರುವ ಘಟನೆ ಬುಧವಾರ ಬೆಳಗ್ಗೆ ನಡೆದಿದೆ. ಬೆಳಗ್ಗೆ ಉಪಾಹಾರದಲ್ಲಿ ಪಲಾವ್ ತಿಂದ ಮಕ್ಕಳು ಅಸ್ವಸ್ಥಗೊಂಡಿದ್ದಾರೆ. ಮಕ್ಕಳನ್ನು ಕೂಡಲೇ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. 46 ವಿದ್ಯಾರ್ಥಿಗಳಲ್ಲಿ ಇಬ್ಬರಿಗೆ ವಾಂತಿಯಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಇನ್ನುಳಿದ ಮಕ್ಕಳು ಗುಣಮುಖರಾಗಿ ವಸತಿ ಶಾಲೆಗೆ ವಾಪಸಾಗಿದ್ದಾರೆ. ರಾಯಚೂರು ಜಿಲ್ಲಾಧಿಕಾರಿ ಕೆ.ನಿತೀಶ್, ಜಿಪಂ ಸಿಇಒ ಪಾಂಡ್ವೆ ರಾಹುಲ್ ತುಕಾರಾಮ, ಡಿಎಚ್‌ಒ ಹಾಗೂ ಇತರ ಅಧಿಕಾರಿಗಳು ಧಾವಿಸಿ ಮಕ್ಕಳ ಆರೋಗ್ಯ ವಿಚಾರಿಸಿ, ವೈದ್ಯರಿಂದ ಮಾಹಿತಿ ಪಡೆದರು.

ಮರ ಬಿದ್ದು ಒಬ್ಬ ಸಾವು

ಶಿರಸಿ: ಉತ್ತರ ಕನ್ನಡ ಜಿಲ್ಲೆಯಲ್ಲಿ ಗಾಳಿ, ಮಳೆಯ ಅವಾಂತರ ಹೆಚ್ಚಾಗಿದ್ದು, ಸ್ಕೂಟಿಯಲ್ಲಿ ಹೋಗುತ್ತಿದ್ದ ವೇಳೆ ಮರ ಬಿದ್ದು ಯುವಕ ಸಾವಿಗೀಡಾದ ಘಟನೆ ಯಲ್ಲಾಪುರ ಶಿರಸಿ ರಸ್ತೆಯ ಬಾಚನಳ್ಳಿ ಗ್ರಾಮದ ಬಳಿ ನಡೆದಿದೆ. ಯಲ್ಲಾಪುರ ತಾಲೂಕಿನ ವಿನಯ ಗಾಡಿಗ(25) ಮೃತ ದುರ್ದೈವಿ. ಯಲ್ಲಾಪುರದ ಹಾಸಣಗಿ ಪಂಚಾಯತ್ ವ್ಯಾಪ್ತಿಯ ಕಬ್ಬಿನಗದ್ದೆ ನಿವಾಸಿಯಾಗಿದ್ದನೆಂದು ತಿಳಿದು ಬಂದಿದೆ. ಯಲ್ಲಾಪುರದಿಂದ ಮಂಚಿಕೇರಿ ಕಡೆ ತೆರಳುತ್ತಿದ್ದ ವೇಳೆ ಈ ದುರಂತ ಸಂಭವಿಸಿದೆ. ಸ್ಥಳಕ್ಕೆ ಅರಣ್ಯ ಇಲಾಖೆ, ಪೊಲೀಸರು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಮಳೆ ಆರ್ಭಟಕ್ಕೆ ತತ್ತರಿಸಿದ ಉತ್ತರ

ತುಂಬಿ ಹರಿಯುತ್ತಿರುವ ಕೃಷ್ಣಾ ನದಿ | ಪ್ರವಾಹ ಭೀತಿಯಲ್ಲಿ ಜನ

ಬೆಳಗಾವಿ/ರಾಯಚೂರು: ಬೆಳಗಾವಿ, ರಾಯಚೂರು ಜಿಲ್ಲೆಯಾದ್ಯಂತ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ಜನಸಾಮಾನ್ಯರು ತತ್ತರಿಸಿದ್ದಾರೆ. ಕೃಷ್ಣಾ, ಘಟಪ್ರಭಾ ಸೇರಿದಂತೆ ನಾಲ್ಕಕ್ಕೂ ಅಧಿಕ ನದಿಗಳು ತುಂಬಿ ಹರಿಯುತ್ತಿದ್ದು ಪ್ರವಾಹದ ಭೀತಿ ಎದುರಾಗಿದೆ.

ಈಗಾಗಲೇ ಕೃಷ್ಣಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು ಚಿಕ್ಕೋಡಿ, ನಿಪ್ಪಾಣಿ, ಅಥಣಿ, ಕಾಗವಾಡ ತಾಲೂಕಿನ ಹಲವು ಗ್ರಾಮಗಳಲ್ಲಿ ಪ್ರವಾಹ ಉಂಟಾಗಿದೆ. ಮಹಾರಾಷ್ಟ್ರದಲ್ಲಿ ಮಳೆ ಮುಂದುವರಿದಿದ್ದು ಕೃಷ್ಣಾ ನದಿಗೆ 1.5 ಲಕ್ಷ ಕ್ಯೂಸೆಕ್ ಒಳಹರಿವಿದೆ. ಈಗಾಗಲೇ ಆಲಮಟ್ಟಿ ಜಲಾಶಯದಿಂದ ನೀರು ಹೊರಬಿಡಲಾಗುತ್ತಿದ್ದರು. ಕೃಷ್ಣಾ ನದಿ ಪಾತ್ರದಲ್ಲಿ ಪ್ರವಾಹದ ಆತಂಕ ಮುಂದುವರಿದಿದೆ.

ಹಿಡಕಲ್ ಡ್ಯಾಂನಿಂದ ನೀರು ಹೊರಕ್ಕೆ: ಬೆಳಗಾವಿ ಹಾಗೂ ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ನಿರಂತರ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಘಟಪ್ರಭಾ ನದಿ ನೀರಿನ ಮಟ್ಟ ಕ್ಷಣ, ಕ್ಷಣಕ್ಕೂ ಹೆಚ್ಚುತ್ತಿದೆ. ಹಾಗೆಯೇ ಹಿಡಕಲ್ ಜಲಾಶಯದಿಂದ ನೀರು ಬಿಡಲಾಗುತ್ತಿದ್ದು ಗೋಕಾಕ್ ತಾಲೂಕಿನ ಹಲವು ಗ್ರಾಮಗಳಿಗೆ ಪ್ರವಾಹ ಭೀತಿ ಎದುರಾಗಿದೆ. ಬೆಳಗಾವಿ ನಗರದಲ್ಲಿ ಸುರಿಯುತ್ತಿದ್ದು 10 ಕ್ಕೂ ಅಧಿಕ ಮನೆಗಳಿಗೆ ನೀರು ನುಗ್ಗಿದೆ. ಜೊತೆಗೆ ಬಳ್ಳಾರಿ ನಾಲೆ ತುಂಬಿ ಹರಿಯುತ್ತಿರುವ ಪರಿಣಾಮ ರೈತರ ಬೆಳೆ ಹಾನಿಯಾಗಿದೆ.

ಜಿಲ್ಲೆಯಲ್ಲಿ ಸಂಭವನೀಯ ಪ್ರವಾಹದ ಹಿನ್ನೆಲೆಯಲ್ಲಿ ಈಗಾಗಲೇ ಗುರುತಿಸಲಾಗಿರುವ 427 ಕಾಳಜಿ ಕೇಂದ್ರಗಳಿಗೆ ಎಲ್ಲ ತಹಸೀಲ್ದಾರರು ಭೇಟಿ ನೀಡಿ ಸಿದ್ಧತೆ ಪರಿಶೀಲಿಸಬೇಕು, ತುರ್ತು ಸಂದರ್ಭದಲ್ಲಿ ಗ್ರಾಮಸ್ಥರನ್ನು ತಕ್ಷಣವೇ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಬೇಕು ಎಂದು ಜಿಲ್ಲಾಧಿಕಾರಿ ಮೊಹಮದ್ ರೋಷನ್ ಸೂಚನೆ ನೀಡಿದ್ದಾರೆ.

ಘಟಪ್ರಭಾ ನದಿಗೆ ಒಳ ಹರಿವು ಹೆಚ್ಚಾದ ಹಿನ್ನೆಲೆಯಲ್ಲಿ ಹಿಡಕಲ್ ಜಲಾಶಯದ ಮೂಲಕ ನೀರು ಹೊರಬಿಡಲಾಗಿದೆ.

ಶಾಲೆಗಳಿಗೆ 2 ದಿನ ರಜೆ

ಧಾರವಾಡ, ಬೆಳಗಾವಿ, ಬೈಲ ಹೊಂಗಲ, ಖಾನಾಪುರ, ಕಿತ್ತೂರು, ಚಿಕ್ಕೋಡಿ, ನಿಪ್ಪಾಣಿ ತಾಲೂಕಿನ ಶಾಲೆಗಳಿಗೆ ಜುಲೈ 25, 26 ರಂದು ರಜೆ ಘೋಷಿಸಿ ಜಿಲ್ಲಾಧಿಕಾರಿಗಳಾದ ಮೊಹಮ್ಮದ್ ರೋಷನ್, ದಿವ್ಯ ಪ್ರಭು ಆದೇಶ ಹೊರಡಿಸಿದ್ದಾರೆ.

ಕೃಷ್ಣೆಯ ಅಬ್ಬರಕ್ಕೆ ಶೀಲಹಳ್ಳಿ ಸೇತುವೆ ಮುಳುಗಡೆ

ಕೃಷ್ಣಾ ನದಿಯಲ್ಲಿ ಕ್ಷಣದಿಂದ ಕ್ಷಣಕ್ಕೆ ನೀರಿನ ಮಟ್ಟ ಏರಿಕೆಯಾಗುತ್ತಿರುವ ಹಿನ್ನೆಲೆ ರಾಯಚೂರಿನ ಲಿಂಗಸುಗೂರು ತಾಲೂಕಿನ ಶೀಲಹಳ್ಳಿ ಸೇತುವೆ ಮುಳುಗಡೆಯಾಗಿದೆ. ನಾರಾಯಣಪುರ ಜಲಾಶಯದಿಂದ ಕೃಷ್ಣಾನದಿಗೆ ಭಾರೀ ಪ್ರಮಾಣದ ನೀರು ಬಿಡುಗಡೆಯಾಗಿದ್ದು, ಒಳಹರಿವು ಹೆಚ್ಚಳವಾಗುತ್ತಿದೆ. ಅಪಾರ ಪ್ರಮಾಣದ ನೀರಿನಿಂದ ಕೃಷ್ಣಾ ನದಿ ಪಾತ್ರದ ಗ್ರಾಮಗಳ ಜನ ಪ್ರವಾಹ ಭೀತಿ ಎದುರುಸುತ್ತಿದ್ದಾರೆ. ಲಿಂಗಸುಗೂರಿನ ಶೀಲಹಳ್ಳಿ-ಹಂಚಿನಾಳ ಮಧ್ಯದ ಸೇತುವೆ ಮುಳುಗಡೆಯಾಗಿರುವುದರಿಂದ ರಸ್ತೆ ಸಂಪರ್ಕ ಕಡಿತವಾಗಿದೆ.

ನಡುಗಡ್ಡೆಯಲ್ಲಿ ಸಿಲುಕಿದ 50ಕ್ಕೂ ಹೆಚ್ಚು ಕುಟುಂಬಗಳು

ಕೃಷ್ಣಾ ನದಿಯಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಿದ್ದು ಅಥಣಿ ತಾಲೂಕಿನ ಹುಲಗಬಾಳಿ ಗ್ರಾಮದ ಮಾಂಗ ಜನವಸತಿಯ 50ಕ್ಕೂ ಅಧಿಕ ಕುಟುಂಬಗಳು, ಮಹಿಳೆಯರು, ಮಕ್ಕಳು, ವಯೋವೃದ್ಧರೂ ಜೊತೆಯಾಗಿ ದನಕರುಗಳು ಕೂಡ ನಡುಗಡ್ಡೆಯಲ್ಲಿ ಸಿಲುಕಿದ್ದಾರೆ. ತಾಲೂಕು ಆಡಳಿತದಿಂದ ಅಲ್ಲಿನ ಜನ, ಜಾನುವಾರು ಗಳನ್ನು ಸ್ಥಳಾಂತರಿಸುವ ಕಾರ್ಯಾಚರಣೆ ಜರುಗಿದೆ. ಆದರೆ ಅನೇಕ ಕುಟುಂಬಗಳು ತಾಲೂಕು ಆಡಳಿತ ಮತ್ತು ಸರಕಾರ ನಮಗೆ ಶಾಶ್ವತ ನೆಲೆ ಕಲ್ಪಿಸುವವರೆಗೆ ನಾವು ಇಲ್ಲಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದಿದ್ದು, ತಾಲೂಕು ಅಧಿಕಾರಿಗಳು ಅವರನ್ನು ಮನವೊಲಿಸುವ ಪ್ರಯತ್ನ ಮಾಡುತ್ತಿದ್ದಾರೆ.

..ಹೊರಗುತ್ತಿಗೆ ನೇಮಕ

← ಮೊದಲಪುಟದಿಂದ

ಸರಕಾರಕ್ಕೆ ಪ್ರತಿ ಸಿಬ್ಬಂದಿಗೆ 17 ಸಾವಿರ ವೇತನವನ್ನು ತೋರಿಸುವ ಏಜೆನ್ಸಿಗಳು, ಸಿಬ್ಬಂದಿಗಳಿಗೆ ಕೇವಲ 10 ಸಾವಿರ ನೀಡುತ್ತಿದ್ದಾರೆ. ಇದರೊಂದಿಗೆ ಹಕ್ಕಿನ ರಜೆ ಪಡೆದರೂ ವೇತನವನ್ನು ಕಡಿತಗೊಳಿಸುವ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪಕ್ಷಾತೀತವಾಗಿ ಎತ್ತಿದ ಈ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರಿಸಿದ ಕಾರ್ಮಿಕ ಇಲಾಖೆ ಸಂತೋಷ್ ಲಾಡ್, ನಿಗದಿಮಾಡಿರುವುದಕ್ಕಿಂತ ಕಡಿಮೆ ವೇತನ ನೀಡಿದ ಕಾನೂನಾತ್ಮಕವಾಗಿ ಕ್ರಮವಹಿಸುತ್ತೇವೆ. ಶಾಸಕರು ಯಾವುದಾದರೂ ನಿರ್ದಿಷ್ಟ ಏಜೆನ್ಸಿ ವಿರುದ್ಧ ದೂರುಗಳಿದ್ದರೆ, ಕ್ರಮವಹಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಆರ್ಥಿಕ ಇಲಾಖೆಗೆ ಪ್ರಸ್ತಾವನೆ ರವಾನೆ: ಈಗಾಗಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೊಸೈಟಿ ರಚನೆ ಮಾಡಿ ಹೊರಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಲು ಸಿದ್ಧತೆ ನಡೆಸಿಕೊಳ್ಳಲಾಗಿದೆ. ಈ ಪ್ರಸ್ತಾಪವನ್ನು ಆರ್ಥಿಕ ಇಲಾಖೆ ಅನುಮೋದನೆಗೆ ಕಳುಹಿಸಲಾಗಿದೆ. ಅನುಮೋದನೆ ಸಿಕ್ಕ ನಂತರ ಆಯಾ ಜಿಲ್ಲೆ ಮೂಲಕ ಹೊರಗುತ್ತಿಗೆ ನೌಕರರಿಗೆ ನೇಮಕ ಮಾಡಲು ಚಾಲನೆ ದೊರೆಯಲಿದೆ ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ವಿವಿಧ ಇಲಾಖೆಗಳ ಮೂಲಕ 54 ಸಾವಿರಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆ. 405 ಸರಕಾರಿ ಇಲಾಖೆಗಳ ಹೊರಗುತ್ತಿಗೆ ಲೈಸೆನ್ಸ್ ನೀಡಲಾಗಿದೆ. 50 ಜನರ ಹೊರಗುತ್ತಿಗೆ ವೇತನ ಪಡೆದು 25 ಜನರಿಂದ ಕೆಲಸ ಮಾಡುತ್ತಿರುವುದು ಸೇರಿದಂತೆ ಹೊರಗುತ್ತಿಗೆ ನೌಕರರ ವಿಚಾರದಲ್ಲಿ ಹಲವು ಸಮಸ್ಯೆಗಳಿರುವುದು ಗಮನಕ್ಕೆ ಬಂದಿದೆ. ಆ ಕಾರಣಕ್ಕಾಗಿ ಈ ಹೊಸ ಪದ್ಧತಿಯನ್ನು ಜಾರಿ ಮಾಡಲು ಉದ್ದೇಶಿಸಲಾಗಿದೆ. ಇದರಿಂದ ಹೊರಗುತ್ತಿಗೆ ಏಜೆನ್ಸಿಗಳಿಗೆ ಕಡಿವಾಣ ಬೀಳಲಿದೆ ಎಂದು ಸ್ಪಷ್ಟಪಡಿಸಿದರು. ಇದಕ್ಕೂ ಮೊದಲು ಶಾಸಕ ಬಸವಂತಪ್ಪ, ಶಿವಲಿಂಗೇಗೌಡ, ನಾರಾಯಣ ಸ್ವಾಮಿ, ಸಿದ್ದು ಸವದಿ ಸೇರಿ ಮೊದಲಾದವರು ಮಾತನಾಡಿ, ಸರಕಾರದಿಂದ 18 ಸಾವಿರ ವೇತನ ಪಡೆದರೂ ಅಷ್ಟು ಪ್ರಮಾಣದಲ್ಲಿ ವೇತನ ನೀಡುವುದಿಲ್ಲ. ಕಡಿಮೆ ವೇತನ ನೀಡುತ್ತಿದ್ದಾರೆ. ಮಧ್ಯವರ್ತಿಗಳ ಹಾವಳಿ ತಪ್ಪಿಸಿ ನೇರ ಹಣ ಪಾವತಿ ಮಾಡುವ ಪದ್ಧತಿ ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ಸ್ಕ್ಯಾನಿಂಗ್ ಸೆಂಟರ್ಸ್ ಸೀಜ್

ಗಡಿ ಭಾಗದಲ್ಲಿ ನಡೆಯುತ್ತಿರುವ ಭ್ರೂಣ ಪತ್ತೆಯ ದಂಧೆ

ಬಾಗಲಕೋಟೆ: ಜಿಲ್ಲೆಯ ಗಡಿ ಭಾಗದಲ್ಲಿ ನಡೆಯುತ್ತಿರುವ ಭ್ರೂಣ ಪತ್ತೆಯ ದಂಧೆಯನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರಕಾರದ ಆರೋಗ್ಯ ಇಲಾಖೆಯ ಗರ್ಭಧಾರಣೆಯ ಪೂರ್ವ ಮತ್ತು ಪ್ರಸವ ಪೂರ್ವ ರೋಗ ನಿರ್ಣಯ ತಂತ್ರಗಳ (ಪಿಸಿಪಿ ಎನ್‌ಡಿಟಿ) ಕಾಯ್ದೆ ಅನುಷ್ಠಾನ ತಂಡವು ಜಿಲ್ಲೆಯ ವಿವಿಧೆಡೆ ಕಳೆದೆರಡು ದಿನಗಳಿಂದ ವಿವಿಧ ಆಸ್ಪತ್ರೆಗಳ ಮೇಲೆ ದಾಳಿ ನಡೆಸಿದೆ.

ದೆಹಲಿಯ ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ತಡೆ ಕಾಯ್ದೆಯ ತಂಡದ ಅಂದಾಜು 15 ಜನ ಅಧಿಕಾರಿಗಳ ತಂಡದಿಂದ ದಾಳಿ ನಡೆದಿದ್ದು, ಜಿಲ್ಲೆಯ ಗುಳೇದಗುಡ್ಡ ಪಟ್ಟಣದ ಬನಶಂಕರಿ ಆಸ್ಪತ್ರೆ ಮೇಲೆ ದಾಳಿ ನಡೆಸಿದಾಗ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಷಿನ್ ಪತ್ತೆಯಾಗಿದ್ದು, ಅದನ್ನು ಸೀಜ್ ಮಾಡಲಾಗಿದೆ.

ಬಾದಾಮಿಯಲ್ಲಿರುವ ರೇಣುಕಾ ಆಸ್ಪತ್ರೆಯ ಸ್ಕ್ಯಾನಿಂಗ್ ರೂಂ ಸೀಜ್ ಮಾಡಿರುವುದು.

ಮುಧೋಳ, ಬಾದಾಮಿಯಲ್ಲೂ ದಾಳಿ

ಮುಧೋಳದಲ್ಲಿ ಬಿಎಂಎಸ್ ಪದವಿ ಪಡೆದು ಪ್ರಸವ ಪೂರ್ವ ಲಿಂಗಪತ್ತೆಯಲ್ಲಿ ತೊಡಗಿದ್ದ ಡಾ.ಆಶಾ ಮಲಘಾಣ ಆಸ್ಪತ್ರೆ ಮೇಲೆ ದಾಳಿ ನಡೆಸಿರುವ ತಂಡವು ಭ್ರೂಣಪತ್ತೆ ಯಂತ್ರವನ್ನು ವಶಕ್ಕೆ ಪಡೆದಿದೆ ಹಾಗೂ ಬಾದಾಮಿಯ ಸರಕಾರಿ ಆಸ್ಪತ್ರೆ ವೈದ್ಯೆಯಾಗಿದ್ದು, ತನ್ನ ಖಾಸಗಿ ಕೇಂದ್ರದಲ್ಲಿ ಸ್ಕ್ಯಾನಿಂಗ್‌ನಲ್ಲಿ ತೊಡಗಿದ್ದ ಡಾ.ಕವಿತಾ ಶಿವನಾಯ್ಕರ್ ಅವರ ಟಿಪ್ಪು ನಗರದಲ್ಲಿರುವ ಆಸ್ಪತ್ರೆ ಮೇಲೆಯೂ ತಂಡ ದಾಳಿ ನಡೆಸಿದೆ. ಸರಕಾರಿ ಆಸ್ಪತ್ರೆಗೆ ಆಗಮಿಸುತ್ತಿದ್ದ ರೋಗಿಗಳನ್ನು ತಮ್ಮ ಖಾಸಗಿ ಆಸ್ಪತ್ರೆಗೆ ವರ್ಗಾಯಿಸಿಕೊಳ್ಳುತ್ತಿರುವ ಆರೋಪವನ್ನು ಎದುರಿಸುತ್ತಿರುವ ಅವರ ಖಾಸಗಿ ಆಸ್ಪತ್ರೆಯ ಸ್ಕ್ಯಾನಿಂಗ್ ರೂಂ ಸೀಜ್ ಮಾಡಲಾಗಿದೆ.

ಆರ್ಥಿಕ ಇಲಾಖೆಗೆ ಸಿಟ್ ಕ್ಲೀನ್‌ಚಿಟ್

← ಮೊದಲಪುಟದಿಂದ

ರಾಜ್ಯದ ಹಣಕಾಸು ಇಲಾಖೆ ಹಾಗೂ ಮುಖ್ಯಮಂತ್ರಿಗಳನ್ನು ಪಾತ್ರ ಇರುವ ಬಗ್ಗೆ ಹೇಳಿಕೆ ನೀಡಬೇಕೆಂದು ಇಡಿ ಅಧಿಕಾರಿಗಳು ಒತ್ತಡ ಹೇರುತ್ತಿದ್ದಾರೆ ಎಂದು ಇಲಾಖೆಯ ಅಧಿಕಾರಿ ಕಲ್ಲೇಶ್ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಇದೇ ಸಂದರ್ಭದಲ್ಲಿ ಕಾಕತಾಳಿಯ ಎನ್ನುವಂತೆ ಹಗರಣದಲ್ಲಿ ಹಣಕಾಸು ಇಲಾಖೆ ಪಾತ್ರವಿಲ್ಲ ಎನ್ನುವ ಅಂಶ ಎಸ್‌ಐಟಿಗೆ ಗೊತ್ತಾಗಿದ್ದು, ಬ್ಯಾಂಕ್ ಮತ್ತು ನಿಗಮದ ಅಧಿಕಾರಿಗಳ ವಿರುದ್ಧ ತನಿಖೆ ತೀವ್ರಗೊಂಡಿದೆ.

ವಾಲ್ಮೀಕಿ ನಿಗಮ ಹೊಂದಿದ್ದ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾದಿಂದ ಹೈದರಾಬಾದ್ ನ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಬ್ಯಾಂಕ್ ಖಾತೆಗೆ 94.73 ಕೋಟಿ ರು. ಅಕ್ರಮವಾಗಿ ವರ್ಗಾವಣೆಯಾಗಿ ಹಣ ವಾಪಸ್ ನಿಗಮದ ಖಾತೆಗೆ ಬಾರದಿದ್ದಾಗ ನಿಗಮದ ಅಧೀಕ್ಷಕ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡಿದ್ದರು. ನಂತರ ಯುನಿಯನ್ ಬ್ಯಾಂಕ್‌ನ ಅಧಿಕಾರಿಗಳ ವಿರುದ್ಧವೂ ಎಫ್ ಐಆರ್ ದಾಖಲಾಗಿತ್ತು. ಸರಕಾರ ಈ ಪ್ರಕರಣವನ್ನು ಎಸ್ ಐಟಿಗೆ ವಹಿಸಿತ್ತು. ಹೀಗಾಗಿ 2 ತಿಂಗಳಿನಿಂದ ತನಿಖೆ ನಡೆಸುತ್ತಿದ್ದು, ನಿಗಮ, ಬ್ಯಾಂಕ್ ಅಧಿಕಾರಿಗಳು ಕಡಿಮೆ ಅವಧಿಯಲ್ಲಿ ಅತಿ ಹೆಚ್ಚು ಹಣ ಲಪಟಾಯಿಸುವ ಸಲುವಾಗಿ ಕೃತ್ಯ ಎಸಗಿದ್ದಾರೆ ಎನ್ನುವುದನ್ನು ಎಸ್‌ಐಟಿ ಕಂಡುಕೊಂಡಿದೆ. ಹೀಗಾಗಿ ಎಸ್‌ಐಟಿ ಅಧಿಕಾರಿಗಳು ಶೀಘ್ರ, ಹಗರಣದ ಆರೋಪಿ ಅಧಿಕಾರಿಗಳ ವಿರುದ್ಧ ಆರೋಪ ಪಟ್ಟಿ ಸಿದ್ದಪಡಿಸಲಿದ್ದಾರೆಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ನಿಜಕ್ಕೂ ಆರ್ಥಿಕ ಇಲಾಖೆ ಪಾತ್ರ ಇಲ್ಲವೇ?: ಹಗರಣದಲ್ಲಿ ಹಣಕಾಸು ಇಲಾಖೆ ಪಾತ್ರವಿಲ್ಲ ಎಂದು ಆಡಳಿತ ಪಕ್ಷದ ನಾಯಕರು ಹೇಳುತ್ತಿದ್ದು, ಪ್ರತಿಪಕ್ಷ ಪಾಳಯ ಇದನ್ನು ಒಪ್ಪಲು ಸಿದ್ಧವಿಲ್ಲ. ಆದರೆ ಒಮ್ಮೆ ನಿಗಮಕ್ಕೆ ಹಣ ಬಿಡುಗಡೆಯಾದ ಮೇಲೆ ಅದನ್ನು ಫಲಾನುಭವಿಗಳಿಗೆ ನೀಡಲು ಆರ್ಥಿಕ ಇಲಾಖೆ ಅನುಮತಿ ನೀಡುವ ಪ್ರಮೇಯ ಬರುವುದಿಲ್ಲ ಎಂದು ಹಣಕಾಸು ಇಲಾಖೆ ಅಧಿಕಾರಿಗಳು ಹೇಳಿದ್ದಾರೆ. ಸಾಮಾನ್ಯ ಸರಕಾರದಲ್ಲಿ ಹಣಕಾಸು ಬಿಡುಗಡೆ ವಿಚಾರದಲ್ಲಿ ಎರಡು ರೀತಿಯ ವ್ಯವಸ್ಥೆ ಇದೆ. ಬಜೆಟ್ ಅನುಮೋದನೆಯಂತೆ ಹಣಕಾಸು ಇಲಾಖೆ ಸರಕಾರದ ಖಜಾನೆಗೆ ಹಣ ನೀಡುತ್ತದೆ. ನಂತರ ವಿವಿಧ ಇಲಾಖೆಗಳು ಕೈಗೊಳ್ಳುವ ಕಾಮಗಾರಿ ಹಾಗೂ ಇತರ ವೆಚ್ಚಗಳ ಬಿಲ್‌ಗಳನ್ನು ಹಣಕಾಸು ಸಲ್ಲಿಸುತ್ತದೆ. ನಂತರ ದಾಖಲೆಗಳ ದೃಢೀಕರಣದ ಬಳಿಕ ಖಜಾನೆಯಿಂದ ನಿಗದಿತ ಲೆಕ್ಕಶೀರ್ಷಿಕೆಯಂತೆ ಡಿಸಿ ಬಿಲ್ (ವಿಸ್ತೃತ)ಗಳಿಗೆ ಹಣ ವರ್ಗಾವಣೆಯಾಗುತ್ತದೆ. ಶೇ.90ರಷ್ಟು ಇಲಾಖೆಗಳಲ್ಲಿ ಇದೇ ವ್ಯವಸ್ಥೆ ಇದೆ. ಇದು ಸುರಕ್ಷಿತ ಕೂಡ. ಆದರೆ ಪರಿಶಿಷ್ಟಜಾತಿ ಮತ್ತು ಪಂಗಡ ಇಲಾಖೆಗಳಲ್ಲಿ ನಿಗಮಗಳ ಮೂಲಕ ಮೂಲಕ ವೆಚ್ಚ ಮಾಡುತ್ತಿದ್ದು, ಇಲ್ಲಿ ನಿಗಮಗಳು ತಮ್ಮದೇ ಬ್ಯಾಂಕ್ ಖಾತೆಗಳನ್ನು ತೆರೆದು ಠೇವಣೆ ಇರಿಸಿಕೊಳ್ಳುತ್ತವೆ.

ಆದರೆ ಇಲ್ಲಿ ನಿಗಮಗಳು ಬ್ಯಾಂಕ್ ಖಾತೆ ತೆರೆಯುವುದು, ಬದಲಾಯಿಸುವುದು, ಏನಾದರೂ ತೊಂದರೆಯಾದಾಗ ಹಣಕಾಸು ಇಲಾಖೆಗೆ ಮಾಹಿತಿ ನೀಡಿ ಅನುಮತಿ ಪಡೆದು ಹಣ ಬಳಸಿಕೊಳ್ಳಬೇಕಾಗುತ್ತದೆ. ಉಳಿದಂತೆ ನಿಗಮಗಳು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹಣ ಬಿಡುಗಡೆ ಮಾಡುವಾಗ ಪ್ರತಿ ಹಂತದಲ್ಲೂ ಹಣಕಾಸು ಇಲಾಖೆ ಅನುಮತಿ ಪಡೆಯುವುದಿಲ್ಲ. ನಿಯಮದ ಪ್ರಕಾರ ಅದರ ಅಗತ್ಯವೂ ಇಲ್ಲ. ಹೀಗಾಗಿ ಹಣಕಾಸು ಇಲಾಖೆ ಒಮ್ಮೆ ನಿಗಮಗಳಿಗೆ ಹಣ ಬಿಡುಗಡೆ ಮಾಡಿದ ನಂತರ ಬಳಸಿಕೊಳ್ಳುವುದು ನಿಗಮದ ಹೊಣೆ. ಆ ಸಂದರ್ಭದಲ್ಲಿ ಅಕ್ರಮ, ಅವ್ಯವಹಾರಗಳು ನಡೆದರೆ, ಅದಕ್ಕೆ ನಿಗಮವೇ ಹೊಣೆಯಾಗುತ್ತದೆಯೇ ವಿನಃ ಆರ್ಥಿಕ ಇಲಾಖೆಯಲ್ಲ ಎಂದು ಹಣಕಾಸು ಇಲಾಖೆ ಹಿರಿಯ ಅಧಿಕಾರಿ ಹೇಳಿದ್ದಾರೆ.

..ನ್ಯಾಯಾಂಗ ಸಮಿತಿ ರಚನೆಗೆ ಸುಪ್ರೀಂ ಸಲಹೆ

← ಮೊದಲಪುಟದಿಂದ

ಇಲ್ಲದಿದ್ದರೆ ಅವರೇಕೆ ದೆಹಲಿಗೆ ಬರಲು ಬಯಸುತ್ತಿದ್ದರು? ನೀವು ಸಚಿವರನ್ನು ಕಳುಹಿಸುತ್ತಿದ್ದೀರಿ. ಉತ್ತಮ ಉದ್ದೇಶದ ಹೊರತಾ ಗಿಯೂ ವಿಶ್ವಾಸದ ಕೊರತೆ ಇದೆ ಎಂದು ನ್ಯಾ. ದೀಪಂಕರ್ ದತ್ತಾ ಮತ್ತು ನ್ಯಾ. ಉಜ್ಜಲ್ ಭುಯಾನ್ ಅವರನ್ನೊಳಗೊಂಡ ಪೀಠ ಸರಕಾರಕ್ಕೆ ಹೇಳಿದೆ. ವಾರದೊಳಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಅಲ್ಲಿಯವರೆಗೆ ಎರಡೂ ಕಡೆಯವರು ಶಂಭು ಗಡಿಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ನಿರ್ದೇಶಿಸಿದೆ.

ಅಹೋರಾತ್ರಿ ಧರಣಿ ಶುರು

← ಮೊದಲಪುಟದಿಂದ

ದಲಿತರಿಗೆ ಅನ್ಯಾಯ ವಾಗಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಮೈಸೂರಿನಲ್ಲಿ ಮೂಡ ದಿಂದ ಮುಖ್ಯಮಂತ್ರಿಗಳ ಕುಟುಂಬಕ್ಕೆ ನೀಡಿರುವ 14 ನಿವೇಶನ ಹಿಂತಿರುಗಿಸುವವರೆಗೆ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ. ಸರಕಾರ ಅಧಿಕಾರಕ್ಕೆ ಬಂದ ಬಳಿಕ ಹಂಚಿಕೆಯಾದ ಐದು ಸಾವಿರಕ್ಕೂ ಹೆಚ್ಚು ನಿವೇಶನ ರದ್ದು ಮಾಡಬೇಕಿದೆ.

ವಾಲ್ಮೀಕಿ ನಿಗಮ ಹಗರಣ, ಇ.ಡಿ. ವಿರುದ್ಧ ಎಫ್‌ಐಆರ್ ದಾಖಲಿಸಿರುವ ಕ್ರಮಕ್ಕೆ ಹೈಕೋರ್ಟ್ ಛಾಟಿ ಬೀಸಿ ಛೀಮಾರಿ ಹಾಕಿದ್ದು, ಸರಕಾರಕ್ಕೆ ಮುಖಭಂಗವಾಗಿದೆ. ಚುನಾಯಿತ ಪ್ರತಿನಿಧಿ ಬಡವರ ನಿವೇಶನ ಮನಸೋ ಇಚ್ಛೆ ಹಂಚಿಕೆ ಕುರಿತು ಜನ ಪ್ರಶ್ನಿಸುತ್ತಿದ್ದು, ಮೂಡದಲ್ಲಿ ಮುಖ್ಯಮಂತ್ರಿಗಳ ಕುಟುಂಬವೇ ನಿವೇಶನ ಪಡೆದಿರುವ ಕುರಿತು ಚರ್ಚಿಸಲು ಮುಂದಾದರೆ, ತನಿಖಾ ಆಯೋಗದ ಮುಂದೆ ಹೋಗಿ ಎಂಬ ಕಾನೂನು ಸಚಿವರ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿದ ಅವರು, ಯಾವ್ಯಾವ ತನಿಖಾ ಆಯೋಗದ ಪರಿಸ್ಥಿತಿ ಏನ ಇಾಗಿದೆ ಎಂದು ಜನತೆಗೆ ಗೊತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸದನದಲ್ಲಿ ಭಜನೆ: ಮೂಡಾ ಹಗರಣ ಸಂಬಂಧ ಚರ್ಚೆಗೆ ಅವಕಾಶ ನೀಡದ ರಾಜ್ಯ ಸರಕಾರದ ಧೋರಣೆ ಖಂಡಿಸಿ ಬಿಜೆಪಿ-ಜೆಡಿಎಸ್ ಸದಸ್ಯರು ವಿಧಾನಸಭೆಯಲ್ಲಿ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಮೂಡಾ ಹಗರಣ ಸಂಬಂಧ ಚರ್ಚೆಗೆ ಅವಕಾಶ ನೀಡುವಂತೆ ಪ್ರತಿಪಕ್ಷಗಳ ನಿಲುವಳಿ ಸೂಚನೆ ಒತ್ತಾಯವನ್ನು ತಿರಸ್ಕರಿಸಿದ್ದ ಸ್ಪೀಕರ್ ಕ್ರಮಕ್ಕೆ ಸದನದ ಬಾವಿಗಿಳಿದು ರಾಜ್ಯ ಸರಕಾರ ಹಾಗೂ ಸ್ಪೀಕರ್ ವಿರುದ್ಧ ಧರಣಿ ನಡೆಸಿದ್ದರು. ಬಳಿಕ ಸ್ಪೀಕರ್ ಸದನ ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು. ಚರ್ಚೆಗೆ ಅವಕಾಶ ನೀಡದ ಸರಕಾರದ ವಿರುದ್ಧ ಪ್ರತಿಪಕ್ಷಗಳು ಸದನದಲ್ಲೇ ಅಹೋರಾತ್ರಿ ಧರಣಿ ನಡೆಸಲು ಆರಂಭಿಸಿದರು. ಈ ವೇಳೆ, ಬಿಜೆಪಿ ಸದಸ್ಯರು ಹನುಮಾನ್ ಚಾಲೀಸಾ ಮತ್ತು ಭಜನೆ ಪಠಿಸುವ ಮೂಲಕ ಗಮನ ಸೆಳೆದರು. ಪ್ರತಿಭಟನಾ ನಿರತ ಸದಸ್ಯರಿಗೆ ಊಟದ ವ್ಯವಸ್ಥೆ ಬಗ್ಗೆ ವಿಚಾರಿಸಿದ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿಗೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ನಿರಾಕರಿಸಿದ್ದು, ಮೂಡಾ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣದ ಹಣದಲ್ಲಿ ಊಟ ಮಾಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಪ್ ಜಾರಿ

ಇನ್ನು ವಿಧಾನ ಪರಿಷತ್‌ನಲ್ಲಿ ಕೆಲ ಪ್ರಮುಖ ವಿಧೇಯಕಗಳು ಪಾಸಬೇಕಿದ್ದು, ಬಿಜೆಪಿ- ಜೆಡಿಎಸ್‌ಗೆ ಬಹುಮತ ವಿರುವುದರಿಂದ ಕಾಂಗ್ರೆಸ್ ಪರಿಷತ್ ಸದಸ್ಯರು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕು ಎಂದು ವಿಪ್ ಹೊರಡಿಸಲಾಗಿದೆ.

ಪ್ರತಿಪಕ್ಷಗಳು ತಂದಿರುವ ನಿಲುವಳಿ ಸೂಚನೆಯಲ್ಲಿ ಸ್ಪಷ್ಟತೆಯಿಲ್ಲ. ಹತ್ತಾರು ಕಾರಣಗಳನ್ನು ನೀಡಿ, ನಿಲುವಳಿ ಸೂಚನೆ ಮಂಡಿಸಲು ಅವಕಾಶವಿಲ್ಲ. ರಾಜಕೀಯ ಕಾರಣಕ್ಕಾಗಿ ಈಗ ಮುಡಾ ವಿಷಯವನ್ನು ಕೈಗೆತ್ತಿಕೊಂಡಿವೆ. ಆದ್ದರಿಂದ ಪ್ರಸ್ತಾಪನೆಗೆ ಅವಕಾಶ ನೀಡಬಾರದು.

– ಎಚ್.ಕೆ.ಪಾಟೀಲ್ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ

ನ್ಯಾಯಾಂಗ ತನಿಖೆಯಲ್ಲಿದೆ ಎನ್ನುವ ಕಾರಣಕ್ಕೆ ನಿಲುವಳಿ ಸೂಚನೆಯನ್ನು ತಿರಸ್ಕರಿಸುವುದಾಗಿ ಹೇಳುತ್ತಿರುವವರು, ಬುಧವಾರದ ಸದನದಲ್ಲಿ ಇ.ಡಿ. ಬಗ್ಗೆ, ವಾಲ್ಮೀಕಿ ಹಗರಣದ ಬಗ್ಗೆ ಚರ್ಚೆಗೆ ಏಕೆ ಅವಕಾಶ ನೀಡಲಾಯಿತು?

– ಸುರೇಶ್‌ಕುಮಾರ್ ಬಿಜೆಪಿ ಶಾಸಕ

ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ
ದೂರವಾಣಿ:08172-268960, email:dswohassan@gmail.com
ಸಂ:ಉನಿಸಕಇಹಾ/ಡಿ3/ವ.ಶಾ/ಸಿಆರ್1/24-25 ದಿ:23.07.20.24
ಇ-ಟೆಂಡರ್ ಪ್ರಕಟಣೆ
2024-25 ಮತ್ತು 2025-26ರ ಸಾಲುಗಳಿಗೆ ಹಾಸನ ಜಿಲ್ಲೆ, ಕ್ರೈಸ್ ವ್ಯಾಪ್ತಿಯ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲು ಇ-ಟೆಂಡರ್ ಕರೆಯಲಾಗಿದ್ದು, ವಿವರ ಕೆಳಕಂಡಂತಿರುತ್ತದೆ. 1.ಟೆಂಡರ್ ಮೊತ್ತ ರೂ.29,47,56,000/- 2.ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ:23-7-2024 3.ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:23.08.2024 4.ಟೆಂಡರ್ ಫಾರಂ ಡೌನ್‌ಲೋಡ್ ಮಾಡುವ ಇ-ಪ್ರೊಕ್ಯೂರ್‌ಮೆಂಟ್ ವಿಳಾಸ:https://eproc.karnataka.gov.in 5.ಸಂಪರ್ಕ ವಿಳಾಸ: ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್.ಅಂಬೇಡ್ಕರ್ ಭವನ, ಎಸ್.ಬಿ.ಜಿ.ಥಿಯೇಟರ್ ಎದುರು, ಹಾಸನ ದೂರವಾಣಿ: 08172-268960
ಸಹಿ/-ಉಪ ನಿರ್ದೇಶಕರು, ಸವಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ
ವಾಸಾಸಂಇ/ಹಿಸನಿ/ಹಾಸನ/223/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು-570 022.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ-ಟೆಂಡರ್ ಪ್ರಕಟಣೆ ಸಂಖ್ಯೆ.07/2024-25 ದಿನಾಂಕ: 22.07.2024
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 3ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ KW-1 KW-2 & KW-3, KW-4 ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ) ಕೆ.ಆರ್.ನಗರ ತಾಲ್ಲೂಕಿನ ಒಟ್ಟು 03 O & M& ಮೈಸೂರು ತಾಲ್ಲೂಕಿನ ಒಟ್ಟು 03 ಕಾಮಗಾರಿಗಳಿಗೆ (ಅಂದಾಜು ಮೊತ್ತ ರೂ.29.27 ರಿಂದ ರೂ.667.00 ಲಕ್ಷದವರೆಗೆ) ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿ: 25.07.2024 ರಿಂದ 01.08.2024 ರವರೆಗೆ, ಟೆಂಡರ್ ತೆರೆಯುವ ದಿನಾಂಕ: 02.08.2024 ರ ಸಂಜೆ 5.30 ಘಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https:// eproc karnataka.gov.inಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಪೋನ್ ನಂ.0821-2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರು
DIPR/DDMYS-312/KSMCA-217/2024-25

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937
ಸಂ: 09/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಸಇ/MVSO&M/2024-25/1418 ದಿನಾಂಕ: 19.07.2024
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 08/2024-25
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈ ವಿಭಾಗ, ತುಮಕೂರು ಇವರು 2024-25 ನೇ ಸಾಲಿಗೆ ದ್ವಿ-ಲಕೋಟೆ ಪದ್ದತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಅನುಮೋದನೆಗೊಂಡಿರುವ ತುಮಕೂರು ತಾಲ್ಲೂಕಿನ 02 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ https://kppp.karnataka.gov.in/ ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ.31.29 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.62,580/- ಗಳು ಮತ್ತು ಆ) ಕಾಮಗಾರಿ ಮೊತ್ತ ರೂ.34,81 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.69,620/- ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : 29-07-2024 ಸಂಜೆ 5:00 ಘಂಟೆ ವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30-07-2024 ಸಂಜೆ 05.30 ಘಂಟೆಯ ನಂತರ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 03-08-2024 ಬೆಳಿಗ್ಗೆ 11.00 ಘಂಟೆಯ ನಂತರ.
ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ, ತುಮಕೂರು
DIPR/TMK/172/KSMCA/2024-25

ಪುರಸಭಾ ಕಾರ್ಯಾಲಯ, ಬೊಮ್ಮಸಂದ್ರ
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560099
ದೂರವಾಣಿ ಸಂಖ್ಯೆ: 080-27834655, ಇ-ಮೇಲ್: itstaff_ulb_bommasandra@yahoo.com
ಸಂಖ್ಯೆ : ಪುಕಾಬೊ/ಶೇ.24.10/ಶೇ.7.25/ಶೇ.5/2024-25 ದಿನಾಂಕ: 06.07.2024
ಸಾರ್ವಜನಿಕ ಪ್ರಕಟಣೆ
2024-25ನೇ ಸಾಲಿನ ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಇತರೆ ಬಡ ವರ್ಗದ ಜನರ ಮತ್ತು ವಿಶೇಷ ಚೇತನರ ಅಭಿವೃದ್ಧಿಗಾಗಿ ಎಸ್.ಎಫ್.ಸಿ ಮುಕ್ತ ನಿಧಿ ಹಾಗೂ ಪುರಸಭಾ ನಿಧಿಯ ಶೇ.24.10, ಶೇ.7.25, ಹಾಗೂ ಶೇ.5ರ ನಿಧಿಯಲ್ಲಿ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರದಲ್ಲಿ ಅನುಮೋದಿತ ಕ್ರಿಯಾಯೋಜನೆ ಸಂಖ್ಯೆ:ಜಿನಕೋ/ಬೆಂ.ನಗರ/ಸಿಆರ್/ತಾ.ಶಾ/ಸಿಆರ್/2024-25ರ ರೀತ್ಯಾ ಅನುಷ್ಠಾನಗೊಳಿಸಲು ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಿದ್ದು, ಆಸಕ್ತ ಅಭ್ಯರ್ಥಿಗಳು ಪುರಸಭಾ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/- ಅಧ್ಯಕ್ಷರು ಪುರಸಭೆ ಬೊಮ್ಮಸಂದ್ರ | ಸಹಿ/- ಅಧ್ಯಕ್ಷರು ಪುರಸಭೆ ಬೊಮ್ಮಸಂದ್ರ | ಸಹಿ/- ಮುಖ್ಯಾಧಿಕಾರಿ, ಪುರಸಭೆ, ಬೊಮ್ಮಸಂದ್ರ
ವಾಸಾಸಂಇ/ವಾ.ಪ್ರ/1063/ಶಿರಡಿ ಸಾಯಿ/2024-25

ಕರ್ನಾಟಕ ಸರ್ಕಾರ ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ), ಹಾಸನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಒಳಾಂಗಣ ಕ್ರೀಡಾಂಗಣದ ಪಕ್ಕ, ಸಾಲಗಾಮೆ ರಸ್ತೆ, ಹಾಸನ.
Email: dhohassan@gmail.com Tel Ph: 08172-246575
No: 15th FC/NFDS/PW-LT/86/2024-25 Date:17.07.2024
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
ಹಾಸನ ಜಿಲ್ಲೆಯ 8 ತಾಲ್ಲೂಕಿನ ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 15ನೇ ಹಣಹಾಸು ಆಯೋಗದ NFDS ಕಾರ್ಯಕ್ರಮದಡಿ ಜಿಲ್ಲೆಯಲ್ಲಿ ಗರ್ಭಿಣಿಯರಿಗೆ FT4, TSH & Vit B -12 ರಕ್ತ ಮಾದರಿಗಳನ್ನು ಪರೀಕ್ಷೆ ಮಾಡಿ ವರದಿ ನೀಡಲು ಸರ್ಕಾರೇತರ ಖಾಸಗಿ ಸಂಸ್ಥೆಯನ್ನು ಆಯ್ಕೆ ಮಾಡಲು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಎರಡು ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಕರ್ನಾಟಕ ಪೋರ್ಟಲ್ ಮೂಲಕ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿರುತ್ತದೆ, (Tender Reference No:DHFWS/2024-25/SE0936) ಇ.ಎಂ.ಡಿ. ಶುಲ್ಕ ರೂ. 50.180/-ಆಗಿದ್ದು, ಸದರಿ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ: 07/08/2024 ರ ಸಂಜೆ 4.30 ಗಂಟೆ ಹಾಗೂ ತಾಂತ್ರಿಕ ಬಿಡ್‌ನ ದಾಖಲಾತಿಗಳ ತೆರೆದು ಪರಿಶೀಲಿಸುವ ದಿನಾಂಕ 09/08/2024 ಬೆಳಿಗ್ಗೆ 11.30 ಗಂಟೆಗೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಮೇಲ್ಕಂಡ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಮತ್ತು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ.
ವಾಸಾಸಂಇ/ಹಿಸನಿ/ಹಾಸನ/228/ಕೆಎಸ್‌ಎಂಸಿಎ/2024-25

ಸಾರಿಗೆ ಇಲಾಖೆ,
ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರ ಕಛೇರಿ,
1ನೇ ಮಹಡಿ, ಬಿ.ಎಂ.ಟಿ.ಸಿ ಸಂಕೀರ್ಣ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು - 560027
TRANSPORT DEPARTMENT
ಸಂಖ್ಯೆ:ಸಾಆ/ಸಿಬ್ಬಂದಿ-05/ವಿವ-05/2024-25/109 ದಿನಾಂಕ: 24.07.2024
ಇ-ಟೆಂಡರ್ ಪ್ರಕಟಣೆ
ಸಾರಿಗೆ ಇಲಾಖೆ ವತಿಯಿಂದ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಖಾಲಿ ಹುದ್ದೆಗಳ ಎದುರಾಗಿ ಹೊರಗುತ್ತಿಗೆ ಆಧಾರದ ಮೇರೆಗೆ ಪಡೆಯಲು GeM ಪೋರ್ಟಲ್ ಮುಖಾಂತರ ಇ-ಟೆಂಡರ್ ಬಿಡ್ ಸಂಖ್ಯೆ: GEM/2024/B/5199707 ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: https://gem.gov.in. ಅನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು GeM portal ಸಹಾಯವಾಣಿ ದೂರವಾಣಿ ಸಂಖ್ಯೆ: Toll Free Numbers: 1800-419-3436 / 1800-102-3436 ಮತ್ತು ಇ-ಮೇಲ್: helpdesk-gem@gov.in ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ-ಪೋರ್ಟಲ್ ಮೂಲಕ ಟೆಂಡರ್ ಅನ್ನು ಸಲ್ಲಿಸಲು ಕೊನೆಯ ದಿನಾಂಕ: 23.08.2024 ರಂದು ಸಮಯ: ಸಂಜೆ 5:00 ಘಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇ-ಮೇಲ್: jctadmn-tran-ka@nic.in ಅನ್ನುಸಂಪರ್ಕಿಸಬಹುದು.
ಸಹಿ/-ಅಪರ ಸಾರಿಗೆ ಆಯುಕ್ತರು (ಆಡಳಿತ), ಸಾರಿಗೆ ಇಲಾಖೆ, ಬೆಂಗಳೂರು.
ವಾಸಾಸಂಇ/ಉನಿ-ಸಿ.ಪಿ/1077/ಕೆಎಸ್‌ಎಂಸಿಎ/2024-25

ಕರ್ನಾಟಕ ಸರಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,
ಜಿಲ್ಲಾ ಆರೋಗ್ಯ ಮತ್ತು ಕು ಕ ಅಧಿಕಾರಿಗಳ ಕಛೇರಿ, ಕೆ.ಸಿ ಪಾರ್ಕ್ ಹತ್ತಿರ, ಹಳಿಯಾಳ ರೋಡ
ಧಾರವಾಡ-580 001, ಫೋನ: 0836-2951501, E-mail: dhodharwad@gmail.com
ಸಂ.ಎನ್.ಹೆಚ್.ಎಂ/ತಾ.ಆ.ಕಾ/ಜಿ.ಆ.ಕು.ಕ.ಸಂ-ಧಾ/ /2024-25 ದಿನಾಂಕ: 24/07/2024
Expression of Interest
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಧಾರವಾಡದಿಂದ, ಈ ಕೆಳಕಾಣಿಸಿದ ಎರಡು ಸನ್ನಿವೇಶಗಳಂತೆ Conducting Ultrasonography by private Radiologists ನೇಮಕ ಮಾಡಿಕೊಳ್ಳಲು Radiologist/Sonologist , private sonography centers ಗಳಿಂದ Expression of Interest ಆಹ್ವಾನಿಸಿದ್ದು ಆಸಕ್ತ Radiologist/Sonologist, private sonography center ರವರು Expression of Interest ನಮೂನೆಯನ್ನು ನಮ್ಮ ಕಚೇರಿಯಿಂದ ಪಡೆದು, ನಮೂನೆಯಲ್ಲಿರುವ ನಿಯಮ ಮತ್ತು ಷರತ್ತುಗಳನುಸಾರ ದಿನಾಂಕ: 03-08-2024 ರ ಸಂಜೆ 5.30 ಘಂಟೆ ಒಳಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಧಾರವಾಡದಲ್ಲಿ ಸಲ್ಲಿಸಲು ಕೋರಿದೆ,
(1) As the USG machines are available in Taluka hospitals& District Hospitals, Radiologist/Sonologist should provide the service using the machines in pertinent hospitals if opted (Scenario 1) (2) In case the Hospitals USG machine is not available / not working for any reason, the pregnant woman of the catchment area will be sent to private sonography centers after duly signed by MOs. (Scenario 2)
ಸಹಿ/- ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಧಾರವಾಡ | ಸಹಿ/- ಉಪಾಧ್ಯಕ್ಷರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಧಾರವಾಡ
ವಾ.ಸಾ.ಇ/ಧಾರವಾಡ/199/ದೇಶಪಾಂಡೆಪಬ್ಲಿಸಿಟಿ/2024-25

ಬಿಜೆಪಿಯವರು ಮಾತನಾಡಲಿ. ಬಳಿಕ ನನ್ನ ಬಳಿಯೂ ಇರುವ ಹೆಸರುಗಳನ್ನು ದಾಖಲೆ ಸಮೇತ ಬಿಡುಗಡೆ ಮಾಡುತ್ತೇನೆ.
- ಬೈರತಿ ಸುರೇಶ್, ಸಚಿವ

ವಿಧಾನಮಂಡಲ ಮಧ್ಯದೊಳಗೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬಕ್ಕೆ ಈ ಪ್ರಮಾಣದಲ್ಲಿ ಸೈಟ್‌ಗಳನ್ನು ನೀಡಲಾಗಿದೆ. ಈ ಬಗ್ಗೆ ಚರ್ಚಿಸುವುದು ಅತ್ಯಗತ್ಯ. ಅವರನ್ನು ರಕ್ಷಿಸುವುದಕ್ಕಾಗಿ ಸ್ಪೀಕರ್ ಚರ್ಚೆಗೆ ಅವಕಾಶ ನೀಡುತ್ತಿಲ್ಲ.
- ಆರ್.ಅಶೋಕ್, ಪ್ರತಿಪಕ್ಷ ನಾಯಕ

ದಿನಕ್ಕೊಂದು ತೀರ್ಮಾನ ಕೈಗೊಂಡಿದ್ದಾರೆಂದು ಆರೋಪ | ಖಾದರ್ ಕೆಪಿಸಿಸಿ ಅಧ್ಯಕ್ಷರಾಗಲು ಅರ್ಹ; ಸಭೆಯ ಅಧ್ಯಕ್ಷರಾಗಲ್ಲ: ಬಿಜೆಪಿ

ಮುಡಾ ಚರ್ಚೆಗೆ ನಕಾರ; ಸ್ಪೀಕರ್ ವಿರುದ್ಧ ಬಿಜೆಪಿ ಕಿಡಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ನಿರೀಕ್ಷೆಯಂತೆ ಮುಡಾ ಪ್ರಕರಣ ಉಭಯ ಸದನದಲ್ಲಿ ಪ್ರತಿಧ್ವನಿಸಿದೆ. ವಿಧಾನಸಭೆಯಲ್ಲಿ ಮಂಡಿಸಿದ ನಿಲುವಳಿ ಸೂಚನೆಗೂ ಅವಕಾಶ ನೀಡದ ಸ್ಪೀಕರ್ ಯು.ಟಿ. ಖಾದರ್ ಅವರ ತೀರ್ಮಾನದ ವಿರುದ್ಧ ಬಿಜೆಪಿಗರು ಕಿಡಿಕಾರಿದ್ದು, ಆಕ್ರೋಶ ಹೊರಹಾಕಿದ್ದಾರೆ.

ಬುಧವಾರ ಬೆಳಗ್ಗೆಯಿಂದಲೇ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಚರ್ಚಿಸಲು ನಿಲುವಳಿ ಸೂಚನೆ ಮಂಡಿಸಿದ ಪ್ರತಿಪಕ್ಷಕ್ಕೆ ಅವಕಾಶ ನೀಡಲಿಲ್ಲ. ಬಳಿಕ ಪ್ರಶ್ನೋತ್ತರ ವೇಳೆಯ ಬಳಿಕ ಅಶೋಕ್ ವಿಷಯ ಪ್ರಸ್ತಾಪಿಸಲು ಮುಂದಾಗುತ್ತಿದ್ದಂತೆ, ಮಧ್ಯಪ್ರವೇಶಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಚರ್ಚೆಗೆ ಅವಕಾಶ ನೀಡಬಾರದು ಎಂದು ಒತ್ತಡ ಹೇರಿದರು. ಪಾಟೀಲ್ ಅವರ ವಾದ ಆಲಿಸಿದ ಸ್ಪೀಕರ್, ನಿಲುವಳಿ ಸೂಚನೆಗೆ ಅವಕಾಶ ನೀಡದಿರುವುದನ್ನು ಖಂಡಿಸಿದ ಬಿಜೆಪಿ ಬಾವಿಗಿಳಿದು ಪ್ರತಿಭಟನೆ ಆರಂಭಿಸಿತು.

ನಿವೇಶನ ಅಕ್ರಮ ಹಂಚಿಕೆ ಕುರಿತು ವಿಧಾನಸಭೆಯಲ್ಲಿ ಬಿಜೆಪಿ ಬುಧವಾರ ಮಂಡಿಸಿದ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಲು ಸಭಾಧ್ಯಕ್ಷ ಯು.ಟಿ. ಖಾದರ್ ನಿರಾಕರಿಸಿದರು. ಈ ವಿಚಾರ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ಜಟಾಪಟಿಗೆ ಕಾರಣವಾಯಿತು. ಈ ನಿಲುವಳಿ ಸೂಚನೆಗೆ ಯಾವುದೇ ಆತುರವಿಲ್ಲ. ಹಗರಣದ ಕುರಿತು ವಿಚಾರಣಾ ಆಯೋಗ ತನಿಖೆ ನಡೆಸುತ್ತಿದೆ. ಹೀಗಾಗಿ, ನಿಲುವಳಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ನೀಡುವುದಿಲ್ಲ, ತಿರಸ್ಕರಿಸುತ್ತೇನೆ' ಎಂದು ಖಾದರ್ ಪ್ರಕಟಿಸಿದರು. ಇದನ್ನು ಖಂಡಿಸಿ ಬಿಜೆಪಿಗರು ಗದ್ದಲ ಆರಂಭಿಸುತ್ತಿದ್ದಂತೆ, ಸದನವನ್ನು ಮುಂದೂಡಿದರು.

ಸೈಟ್ ಕೊಟ್ಟಿರುವವರು ಯಾರು ಎನ್ನುವ ಬಗ್ಗೆ ಚರ್ಚೆಯಾಗಲಿ. ಸೈಟ್ ಕೊಟ್ಟಿರುವವರ ವಿರುದ್ಧ ಕ್ರಮಕ್ಕೆ ನೀವು ಸಿದ್ಧವೇ? ಅವರನ್ನು ಜೈಲಿಗೆ ಹಾಕಬೇಕು. ಬಳಿಕ ಪಡೆದವರ ಬಗ್ಗೆ ಮಾತನಾಡಿ.
- ಸಂತೋಷ್ ಲಾಡ್, ಕಾರ್ಮಿಕ ಸಚಿವ

ಸದನದಲ್ಲಿ ಮುಡಾ ಹಗರಣ ಚರ್ಚೆಯಾಗಬಾರದು ಎನ್ನುವ ಕಾರಣಕ್ಕಾಗಿಯೇ, ನ್ಯಾಯಾಂಗ ತನಿಖೆಗೆ ಆದೇಶ ಹೊರಡಿಸಲಾಗಿದೆ. ಈ ಬಗ್ಗೆ ಚರ್ಚಿಸುವುದು ನಮ್ಮೆಲ್ಲರ ಕರ್ತವ್ಯ
- ಸುರೇಶ್‌ಕುಮಾರ್, ಶಾಸಕ

ಸ್ಪೀಕರ್ ವಿರುದ್ಧ ಕಿಡಿ: ಭೋಜನ ವಿರಾಮದ ಬಳಿಕ ಸದನ ಆರಂಭವಾಗುತ್ತಿದ್ದಂತೆ ಬಿಜೆಪಿ-ಜೆಡಿಎಸ್ ಶಾಸಕರು ಬಾವಿಗಿಳಿದು ಪ್ರತಿಭಟನೆ ಆರಂಭಿಸಿದರು. ಈ ವೇಳೆ ಸ್ಪೀಕರ್ ತೀರ್ಮಾನದ ವಿರುದ್ಧ ಬಿಜೆಪಿಗರು ಆಕ್ರೋಶ ವ್ಯಕ್ತಪಡಿಸಿದರು. 'ಸ್ಪೀಕರ್ ಒನ್ ಸೈಡ್, ಸಿಎಂಗೆ ಮುಡಾ ಸೈಟ್' ಎಂಬ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. 'ನೀವು ಸದನದ ಅಧ್ಯಕ್ಷರಾಗೋಕೆ ಸಾಧ್ಯವಿಲ್ಲ. ನೀವು ಕೆಪಿಸಿಸಿ ಅಧ್ಯಕ್ಷರಾಗೋಕೆ ಲಾಯಕ್. ಹೇಗೂ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಡಿಕೆಶಿ ರಾಜೀನಾಮೆ ನೀಡ್ತಿದ್ದಾರೆ. ನೀವು ಹೋಗಿ ಕೆಪಿಸಿಸಿ ಅಧ್ಯಕ್ಷರಾಗಿಬಿಡಿ ಎಂದು ಬಿಜೆಪಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಶಾಸಕ ಅಶ್ವತ್ಥನಾರಾಯಣ, ಡಿಕೆ ಶಿವಕುಮಾರ್ ಅವರೇ ನೀವು ಬಂದು ಸ್ಪೀಕರ್ ಸ್ಥಾನದಲ್ಲಿ ಕುಳಿತುಕೊಳ್ಳಿ. ಕಾಂಗ್ರೆಸ್ ಪಕ್ಷದ ತರ ಖಾದರ್ ಸದನವನ್ನು ನಡೆಸುತ್ತಿದ್ದಾರೆ ಎಂದು ಅಶೋಕ್, ಸುನೀಲ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ 2023-24ರ ಪೂರಕ ಅಂದಾಜುಗಳ ಬೇಡಿಕೆಯನ್ನು ಸಿಎಂ ಸಿದ್ದರಾಮಯ್ಯ ಮಂಡಿಸಿದರು. ಈ ವೇಳೆ ಪೂರಕ ಅಂದಾಜಿನಲ್ಲಿ ನಿಮಗೆಷ್ಟು ಮುಡಾ ಸೈಟ್‌ಗಳಿವೆ ಹೇಳಿ ಎಂದು ಸುನೀಲ್‌ಕುಮಾರ್ ಟೀಕಿಸಿದರು. ಸ್ಪೀಕರ್ ಹತ್ತಿರವೇ ತೆರಳಿ ಭಿತ್ತಿ ಪತ್ರ ಪ್ರದರ್ಶಿಸಿದ ಪ್ರತಿಪಕ್ಷ ಸದಸ್ಯರು, ಸ್ಪೀಕರ್ ಹತ್ತಿರಕ್ಕೆ ಹೋಗಿ 'ನೀವು ಮಾಡುತ್ತಿರುವುದು ಸರಿಯೇ?' ಎಂದು ಯತ್ನಾಳ್ ಪ್ರಶ್ನಿಸಿದರು.

ಬಿಜೆಪಿ ವಾದವೇನು?

- ಚರ್ಚೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೇ ನ್ಯಾಯಾಂಗ ತನಿಖೆ ಆರಂಭಿಸಿದೆ
- ಮುಡಾ ಹಗರಣ ಇದೀಗ ರಾಷ್ಟ್ರೀಯ ಸುದ್ದಿಯಾಗಿದೆ; ಆದ್ದರಿಂದ ಅವಕಾಶ ನೀಡಬೇಕು
- ಈ ಪ್ರಕರಣ ತನಿಖಾ ಹಂತದಲ್ಲಿದ್ದರೆ, ಬುಧವಾರ ವಾಲ್ಮೀಕಿ ಹಗರಣ, ಇ.ಡಿ.ಗೆ ಸಂಬಂಧಿಸಿದಂತೆ ಅವಕಾಶ ನೀಡಿದ್ದೇಕೆ?
- ರಾಜ್ಯದಲ್ಲಾಗಿರುವ ಅನ್ಯಾಯದ ಬಗ್ಗೆ ಮಾತನಾಡುವುದು ಅಗತ್ಯ
- ನಿಯಮಾವಳಿಯಲ್ಲಿ, ಪ್ರಕರಣ ಹಳೆಯದ್ದಾಗಿದ್ದರೂ ಪ್ರಮುಖ ವಿಷಯಗಳನ್ನು ಚರ್ಚಿಸಲು ಅವಕಾಶವಿದೆ.

ಎಚ್.ಕೆ. ಪಾಟೀಲ್ ವಾದವೇನು?

- ಈ ಪ್ರಕರಣ ಇತ್ತೀಚೆಗೆ ನಡೆದಿರುವುದಲ್ಲ. ಆದ್ದರಿಂದ ನಿಲುವಳಿ ಸೂಚನೆಗೆ ಅವಕಾಶವಿಲ್ಲ
- ಹಳೇಯ ಪ್ರಕರಣವಾಗಿದ್ದರೂ, ಸದನ ಆರಂಭಗೊಂಡು ವಾರವಾದರೂ ಏಕೆ ಪ್ರಸ್ತಾಪಿಸಿಲ್ಲ
- ರಾಜಕೀಯ ಕಾರಣಕ್ಕೆ ಈಗ ಈ ವಿಷಯವನ್ನು ಬಿಜೆಪಿ ಕೈಗೆತ್ತಿಕೊಂಡಿದೆ.
- ನಿಲುವಳಿ ಸೂಚನೆಗೆ ಅವಕಾಶ ನೀಡಿರುವ ಪತ್ರದಲ್ಲಿ, ನಿರ್ದಿಷ್ಟ ವಿಷಯಕ್ಕೆ ಸೀಮಿತವಾಗಿಲ್ಲ
- ನ್ಯಾಯಾಂಗ ತನಿಖೆಗೆ ಆದೇಶಿಸಿರುವುದರಿಂದ ಈ ಹಂತದಲ್ಲಿ ಚರ್ಚೆಗೆ ಅವಕಾಶವಿಲ್ಲ

ಸಮಾಚಾರ ಸಣ್ಣದಲ್ಲ

ಐದು ಲೇಔಟ್‌ಗಳ ನಿರ್ಮಾಣ ಗುರಿ

ವಿಧಾನ ಪರಿಷತ್: ರಾಜ್ಯದಲ್ಲಿ ನೂತನವಾಗಿ 5 ಲೇಔಟ್‌ಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಹಾಕಿಕೊಂಡಿದ್ದೇವೆ ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದ್ದಾರೆ. ಸದಸ್ಯ ಗೋವಿಂದರಾಜು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಹೊಸದಾಗಿ ರಾಜ್ಯದ ಒಟ್ಟು ಐದು ಕಡೆ ಅತ್ಯಂತ ಸುವ್ಯವಸ್ಥಿತ ಹಾಗೂ ಸುಸಜ್ಜಿತ ಲೇಔಟ್‌ಗಳನ್ನು ನಿರ್ಮಾಣ ಮಾಡಬೇಕೆಂಬ ಯೋಜನೆ ಇದೆ. ಆದರೆ ಯಾವ ಸ್ಥಳದಲ್ಲಿ ಮಾಡುತ್ತೇವೆ ಎಂಬುದನ್ನು ಬಹಿರಂಗಪಡಿ ಸುವುದಿಲ್ಲ. ಬೇಕೆಂದರೆ ರೈತರು ಇದಕ್ಕೆ ಜಮೀನು ಕೊಡಲು ಹಿಂದೆಮುಂದೆ ನೋಡುತ್ತಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಬಳಿ ಹಿಂದಿನ ಸರಕಾರ 71 ಎಕರೆಯಲ್ಲಿ ಲೇಔಟ್ ನಿರ್ಮಾಣ ಮಾಡಲು ಮುಂದಾಗಿತ್ತು. ಇಷ್ಟು ಸಣ್ಣ ಪ್ರಮಾಣದಲ್ಲಿ ಸಾಧ್ಯವಿಲ್ಲದ ಕಾರಣ ನನೆಗುದಿಗೆ ಬಿದ್ದಿದೆ. ಒಟ್ಟು 9,460 ಅರ್ಜಿಗಳು ಬಂದಿವೆ. ಅರ್ಜಿದಾರರಿಂದ ಒಟ್ಟು 26 ಕೋಟಿ 80 ಲಕ್ಷ ಠೇವಣಿ ಹಣವನ್ನು ಸಂಗ್ರಹಿಸಿ, ಯೂನಿಯನ್ ಬ್ಯಾಂಕ್ ಇಂಡಿಯಾದಲ್ಲಿ ಇಟ್ಟಿದ್ದೇವೆ ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ 4,047 ಕೋಟಿ ಬರ ಪರಿಹಾರ

ವಿಧಾನಪರಿಷತ್: ರಾಜ್ಯದಲ್ಲಿ ಈವರೆಗೂ ಬರ ಪರಿಹಾರವಾಗಿ 4,047 ಕೋಟಿ ರು. ನೀಡಲಾಗಿದೆ ಅಂತ ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಛಲವಾದಿ ನಾರಾಯಣಸ್ವಾಮಿ ಬದಲಾಗಿ, ಬಿಜೆಪಿ ಸದಸ್ಯ ಕೇಶವ ಪ್ರಸಾದ್ ಪ್ರಶ್ನಿಸಿ ಉತ್ತರಿಸಿದ ಅವರು, ಸರಕಾರ ಎಲ್ಲಾ ರೈತರಿಗೆ ಬರ ಪರಿಹಾರ ಇನ್ನೂ ಬಿಡುಗಡೆ ಮಾಡಿಲ್ಲ. ಕೇಂದ್ರದಿಂದ ಪರಿಹಾರ ಬಿಡುಗಡೆ ಆಗಿದೆ. ಆದರೂ ರಾಜ್ಯ ಸರಕಾರ ಪರಿಹಾರ ನೀಡಿಲ್ಲ. ಬೆಳೆ ವಿಮೆ ಪರಿಹಾರ ಕೂಡ ಸರಿಯಾಗಿ ಸಿಗುತ್ತಿಲ್ಲ. ಈ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳಬೇಕು. ಕೇಂದ್ರ ಸರಕಾರದ ಜತೆಗೆ ರಾಜ್ಯ ಸರಕಾರವೂ ಬರ ಪರಿಹಾರ ನೀಡಬೇಕು ಒತ್ತಾಯಿಸಿದರು. ಇದಕ್ಕೆ ಸಚಿವ ಕೃಷ್ಣಬೈರೇಗೌಡ ಉತ್ತರ ನೀಡಿ, ನಮ್ಮ ಸರಕಾರ 38,78,525 ರೈತರಿಗೆ ಬರ ಪರಿಹಾರ ಕೊಟ್ಟಿದೆ. 3,535.30 ಕೋಟಿ ರು.ಗಳನ್ನು ಅರ್ಹ ರೈತರಿಗೆ ಪರಿಹಾರ ನೀಡಲಾಗಿದೆ. ಡಿಜಿಟಲ್ ಸರ್ವೆ ಮೂಲಕ ಹಾನಿಯಾದ ರೈತರಿಗೆ ಪರಿಹಾರ ಕೊಡಲಾಗಿದೆ. ಶೇ.33 ಕ್ಕಿಂತ ಹೆಚ್ಚು ಬೆಳೆ ಹಾನಿಯಾದ ರೈತರಿಗೆ ಪರಿಹಾರ ನೀಡಲಾಗಿದೆ. ನಾಲೆಯಲ್ಲಿ ನೀರು ಹರಿಸಲು ಆಗದ ರೈತರಿಗೂ ಪರಿಹಾರ ಕೊಡಲಾಗಿದೆ. ಜೀವನೋಪಾಯಕ್ಕಾಗಿ 531 ಕೋಟಿ ರು.ಗಳನ್ನು 17 ಲಕ್ಷ ರೈತರಿಗೆ ಪಾವತಿ ಮಾಡ್ತಿದ್ದೇವೆ. 4,047 ಕೋಟಿ ರು. ಒಟ್ಟು ಪರಿಹಾರ ನೀಡಿದ್ದೇವೆ ಎಂದು ತಿಳಿಸಿದರು.

ಶಕ್ತಿ ಯೋಜನೆಯಿಂದ ಆದಾಯ ಹೆಚ್ಚಳ

ವಿಧಾನ ಪರಿಷತ್: ರಾಜ್ಯ ಸರಕಾರದ 'ಶಕ್ತಿ' ಯೋಜನೆ ಜಾರಿಯಾದ ನಂತರ ಆದಾಯ ಹೆಚ್ಚಾಗಿದ್ದು, ಸಾರಿಗೆ ನಿಗಮಗಳು ಲಾಭದತ್ತ ಬರುತ್ತಿವೆ. ಇದೇ ವೇಳೆ, ನಿರ್ವಹಣೆ, ಡೀಸೆಲ್ ದರ ಹೆಚ್ಚಳವಾಗಿದೆ. ಆದರೆ ಟಿಕೆಟ್ ದರ ಹೆಚ್ಚಿಸಿಲ್ಲದ ಕಾರಣದಿಂದಾಗಿ ಲಾಭವನ್ನು ತೋರಿಸಲಾಗುತ್ತಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ನಿಗಮಗಳಿಗೆ ಲಾಭವಾಗುತ್ತಿದೆ. ಬಿಎಂಟಿಸಿ 10 ವರ್ಷದಿಂದ ಟಿಕೆಟ್ ದರ ಹೆಚ್ಚಿಸಿಲ್ಲ. 'ಶಕ್ತಿ' ಯೋಜನೆ ಜಾರಿ ನಂತರ ಆದಾಯ ಹೆಚ್ಚಾದರೂ ನಿರ್ವಹಣೆ, ಡೀಸೆಲ್, ವೇತನದ ಕಾರಣಕ್ಕೆ ಲಾಭ ತೋರಿಸಲಾ ಗುತ್ತಿಲ್ಲ. 2020ರಲ್ಲಿ ಉಳಿದ ಮೂರು ಸಾರಿಗೆ ನಿಗಮಗಳಿಂದ ಟಿಕೆಟ್ ದರ ಹೆಚ್ಚಳ ಮಾಡಲಾಗಿತ್ತು. ಇದರ ನಡುವೆ ಡೀಸೆಲ್ ದರ ಹೆಚ್ಚಳವಾಗಿದೆ. ಹಾಗಾಗಿ ಲಾಭ ತೋರಿಸಲಾಗಿಲ್ಲ. ಆದರೂ ಮುಂದಿನ ದಿನಗಳಲ್ಲಿ ಲಾಭಕ್ಕೆ ಸಾರಿಗೆ ನಿಗಮಗಳು ಬರಲಿವೆ. 2024ರ ಜೂನ್‌ವರೆಗೆ 'ಶಕ್ತಿ' ಯೋಜನೆಯಡಿ 4,453.50 ಕೋಟಿ ಬಿಡುಗಡೆ ಮಾಡಿದ್ದು 1,413.47 ಕೋಟಿ ಬಾಕಿ ಇದೆ. ಯೋಜನೆಗೆ 5,015 ಕೋಟಿ ಹಣವನ್ನು ಈ ಬಾರಿ ಬಜೆಟ್‌ನಲ್ಲಿ ಇಡಲಾಗಿದೆ. ಈ ವರ್ಷ ಸ್ವಲ್ಪ ಕೊರತೆಯಾಗಬಹುದು. ಇದನ್ನು ಸರಿಪಡಿಸಲು ಸಿಎಂ ಗಮನಕ್ಕೆ ತರಲಾಗಿದೆ. ಪೂರಕ ಬಜೆಟ್‌ನಲ್ಲಿ ಒದಗಿಸುವ ಭರವಸೆ ಇದೆ ಎಂದರು.

ವಿರಾಮ
ಪ್ರತಿ ಭಾನುವಾರ

{ಕೆ.ಎಸ್ ಈಶ್ವರಪ್ಪ} ಮಾಜಿ ಡಿಸಿಎಂ

ಹಿಂದುಳಿದವರಿಗೆ ತಲುಪಬೇಕಾದ ಹಣದಲ್ಲಿ ಭ್ರಷ್ಟಾಚಾರ ಆಗಿದೆ. ರಾಜ್ಯಕ್ಕೆ ವಾಲ್ಮೀಕಿ ಹಗರಣ ಕಪ್ಪುಚುಕ್ಕೆಯಾಗಿದೆ. ಮುಡಾ ಹಗರಣದಲ್ಲಿ ಸಿಎಂ ಭಾಗಿಯಾಗಿದ್ದಾರೆ ಎನ್ನಲಾಗಿದ್ದು, ಬಿಜೆಪಿ ಆಡಳಿತದಲ್ಲಿ ಹಗರಣ ಆಗಿದ್ದರೆ ತನಿಖೆಯನ್ನು ಸಿಬಿಐಗೆ ನೀಡಲಿ.

ಮುಡಾ ಹಗರಣದ ಬಗ್ಗೆ ಚರ್ಚೆಗೆ ಅವಕಾಶ ನೀಡಲು ಪಟ್ಟು

ಮೇಲ್ಮನೆಯಲ್ಲೂ ಬಿಜೆಪಿ ಗದ್ದಲ

ವಿಧಾನ ಪರಿಷತ್: ಮುಡಾ ಹಗರಣದ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ಪಟ್ಟು ಹಿಡಿದು ಉಭಯ ಸದನದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಅಹೋರಾತ್ರಿ ಧರಣಿ ನಡೆಸಿದರು.

ಕಲಾಪದಲ್ಲಿ ಮುಡಾ ಹಗರಣ ಪ್ರಕರಣದ ಚರ್ಚೆಗೆ ಅನುಮತಿ ನೀಡುವಂತೆ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ನಿಯಮ 59ರ ಅಡಿ ನಿಲುವಳಿ ಸೂಚನೆ ಮಂಡನೆ ಮಾಡಿದರು. ಆದರೆ, ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡದೇ ಗದ್ದಲ ಎಬ್ಬಿಸಿದ ಕಾಂಗ್ರೆಸ್ ಸದಸ್ಯರು ವಿರೋಧ ವ್ಯಕ್ತಪಡಿಸಿದರು.

ಈಗಾಗಲೇ ನಿವೃತ್ತ ನ್ಯಾಯಮೂರ್ತಿಗಳ ಏಕಸದಸ್ಯ ತನಿಖಾ ಆಯೋಗ ರಚನೆ ಮಾಡಲಾಗಿದೆ. ಅವಶ್ಯಕತೆ ಇಲ್ಲ ಎಂದು ಸಭಾನಾಯಕ ಬೋಸರಾಜ್ ವಿರೋಧಿಸಿದರು. ಆಡಳಿತ ಪಕ್ಷದ ಸದಸ್ಯರ ವಿರೋಧದ ನಡುವೆಯೂ ಮುಡಾ ನಿಲುವಳಿ ಪ್ರಸ್ತಾಪಿಸಿದ ಛಲವಾದಿ ನಾರಾಯಣಸ್ವಾಮಿ, ಮುಡಾದಿಂದ ಸಾವಿರಾರು ಕೋಟಿ ಮೌಲ್ಯದ ಸೈಟುಗಳನ್ನು ಹಂಚಿಕೆ ಮಾಡಲಾಗಿದೆ. ಡಿನೋಟಿಫೈ ಮಾಡಲಾದ ಜಮೀನನ್ನು ಬಳಸಿಕೊಂಡು ಅಕ್ರಮ ಸೈಟು ಹಂಚಿಕೆ ಮಾಡಲಾಗಿದೆ. ರೈತರ ಜಮೀನಿನ ಮೌಲ್ಯಕ್ಕಿಂತ ದುಬಾರಿ ಸೈಟು ಪಡೆಯಲಾಗಿದೆ. ಇಲ್ಲಿ ಸಾವಿರಾರು ಕೋಟಿ ಅವ್ಯವಹಾರವಾಗಿದೆ. ಕಾಣದ ಕೈಗಳ ಕೈಚಳಕದಿಂದ ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಪರಭಾರೆ ಮಾಡಲಾಗಿದೆ. ಸತ್ತವರ ಹೆಸರಿಗೂ ಪರಭಾರೆ ಮಾಡಲಾಗಿದೆ. ಮುಡಾ ಅಕ್ರಮದ ಕುರಿತು ನಿಲುವಳಿ ಸೂಚನೆ ಮೇರೆಗೆ ಚರ್ಚಿ ಸಲು ಅನುಮತಿ ನೀಡುವಂತೆ ಕೋರಿದರು.

ಪ್ರತಿಪಕ್ಷದ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ಸಭಾಪತಿ ಬಸವರಾಜ ಹೊರಟ್ಟಿ ರೂಲಿಂಗ್ ನೀಡಿದರು. ರಾಜ್ಯ ಸರಕಾರ ನಿವೃತ್ತ ನ್ಯಾಯಾಧೀಶರ ನೇತೃತ್ವದ ಆಯೋಗ ನೇಮಿಸಿ ವರದಿ ನೀಡಲು ಆಯೋಗಕ್ಕೆ ಸೂಚಿಸಿದೆ ಹಾಗಾಗಿ ವಿರೋಧ ಪಕ್ಷದ ನಾಯಕರು ನಿಯಮ 59 ರ ಅಡಿ ಮಂಡಿಸಿದ ನಿಲುವಳಿ ಸೂಚನೆಯನ್ನು ನಿಯಮ 62 ರ ಅಡಿ ಚರ್ಚೆಗೆ ಅನುಮತಿ ನಿರಾಕರಿಸಲಾಗಿದೆ ಎಂದು ರೂಲಿಂಗ್ ನೀಡಿದರು. ಆದರೂ ಚರ್ಚೆಗೆ ಬಿಜೆಪಿ ಜೆಡಿಎಸ್ ಪಟ್ಟು ಹಿಡಿದರೆ ಕಾಂಗ್ರೆಸ್ ಸದಸ್ಯರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು. ಸದನದಲ್ಲಿ ಗದ್ದಲದ ವಾತಾವರಣ ಸೃಷ್ಟಿಯಾದ ಹಿನ್ನೆಲೆಯಲ್ಲಿ ಕಲಾಪವನ್ನು ಭೋಜನ ವಿರಾಮಕ್ಕೆ ಮುಂದೂಡಿಕೆ ಮಾಡಲಾಯಿತು.

ಆಡಳಿತಾರೂಢ, ಪ್ರತಿಪಕ್ಷ ಸದಸ್ಯರ ನಡುವೆ ಗದ್ದಲ: ಭೋಜನ ವಿರಾಮ ಬಳಿಕ ಸದನ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಎದ್ದು ನಿಂತು ಮುಡಾ ಹಗರಣ ಸಂಬಂಧ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಕೋರಿದರು. ಇದಕ್ಕೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಈಗಾಗಲೇ ಈ ವಿಷಯ ಮುಗಿದಿದೆ ಚರ್ಚೆ ಬೇಡ. ಈ ಹಿಂದೆ ತಾವು ಮಾಡಿದ ಪ್ರಸ್ತಾಪವನ್ನು ಕಡತಕ್ಕೆ ಸೇರಿಸಲಾಗಿದೆ ಎಂದರು.

ಇದಕ್ಕೆ ಸಮಾಧಾನಗೊಳ್ಳದ ವಿಪಕ್ಷ ಸದಸ್ಯರು ಚರ್ಚೆಗೆ ಪಟ್ಟುಹಿಡಿದರು. ಈ ಹಂತದಲ್ಲಿ ಆಡಳಿತರೂಢ ಹಾಗೂ ಪ್ರತಿಪಕ್ಷ ಸದಸ್ಯರ ನಡುವೆ ಗದ್ದಲ ಉಂಟಾದ ಹಿನ್ನೆಲೆ ಸಭಾಪತಿ ಸದನವನ್ನು ಮುಂದೂಡಿದರು. ಬಳಿಕ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಅಹೋರಾತ್ರಿ ಧರಣಿ ನಡೆಸಿದರು.

ಬಾಡಿಗೆ ಪಾವತಿಗೆ ಅನುದಾನದ ಕೊರತೆ ಇಲ್ಲ: ಸಚಿವೆ ಹೆಬ್ಬಾಳ್ಕರ್

ಅಂಗನವಾಡಿ ಕೇಂದ್ರಗಳ ಬಾಡಿಗೆ ಹೆಚ್ಚಳಕ್ಕೆ ಕ್ರಮ

ವಿಧಾನಸಭೆ: ಅಂಗನವಾಡಿಗಳನ್ನು ಸ್ವಂತ ಕಟ್ಟಡಗಳಿಲ್ಲದ ಪ್ರದೇಶದಲ್ಲಿ ಬಿಬಿಎಂಪಿ, ಇನ್ನಿತರ ಸರಕಾರಿ ಕಟ್ಟಡಗಳಲ್ಲಿ ನಡೆಸಲಾಗುತ್ತಿದ್ದು, ಕೆಲವೆಡೆ ಉತ್ತಮ ಮೂಲ ಸೌಕರ್ಯವುಳ್ಳ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಬಾಡಿಗೆ ಹೆಚ್ಚಳಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದರು.

ಶಾಸಕ ರವಿ ಸುಬ್ರಹ್ಮಣ್ಯ ಪ್ರಶ್ನೆಗೆ ಉತ್ತರಿಸಿದ ಅವರು, ಅಂಗನವಾಡಿ ಕೇಂದ್ರಗಳ ಮಕ್ಕಳು, ಇತರೆ ಫಲಾನುಭವಿಗಳು ಇಲಾಖೆಯ ಯಾವುದೇ ಸೇವೆಗಳಿಂದ ವಂಚಿತರಾಗದಂತೆ ಕ್ರಮ ವಹಿಸಲಾಗಿದ್ದು, ಪ್ರಸಕ್ತ ಸಾಲಿನ ಬಾಡಿಗೆ ಪಾವತಿಗೆ ಅನುದಾನದ ಕೊರತೆ ಇಲ್ಲ, ಈಗಾಗಲೇ 2024-25ನೇ ಸಾಲಿನ ಡಿಸೆಂಬರ್ ತಿಂಗಳವರೆಗೆ ಅಂಗನವಾಡಿ ಕೇಂದ್ರಗಳ ಬಾಡಿಗೆ ಮೊತ್ತವನ್ನು ಪಾವತಿಸಲಾಗಿದೆ ಎಂದರು.

ರಾಜ್ಯದಲ್ಲಿ 20,266 ಲಿಂಗತ್ವ ಅಲ್ಪಸಂಖ್ಯಾತರು

ರಾಜ್ಯದಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಪ್ರಮಾಣದ ಬಗ್ಗೆ ಶಾಸಕಿ ನಯನಾ ಮೋಟಮ್ಮ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವೆ, 2011ರ ಜನಗಣತಿಯ ಪ್ರಕಾರ, ರಾಜ್ಯದಲ್ಲಿ 20,266 ಲಿಂಗತ್ವ ಅಲ್ಪಸಂಖ್ಯಾತರಿದ್ದಾರೆ. ಇನ್ನು 2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಸಮುದಾಯ ಆಧಾರಿತ ಸಂಸ್ಥೆಗಳಿಂದ ಪಡೆದ ಅಂಕಿ ಅಂಶಗಳ ಪ್ರಕಾರ 43,752 ಲಿಂಗತ್ವ ಅಲ್ಪಸಂಖ್ಯಾತರಿದ್ದಾರೆ ಎಂದು ಸಚಿವರು ಮಾಹಿತಿ ನೀಡಿದರು.

ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಗೌರವ ಧನ 2017ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಚ್ಚಳ ಮಾಡಿದ್ದರು. ಆದಾದ ಮೇಲೇ ಗೌರವ ಧನ ಹೆಚ್ಚಳ ಮಾಡಿಲ್ಲ. ಈಗ ಗೌರವ ಧನ ಹೆಚ್ಚಳದ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.
-ಲಕ್ಷ್ಮೀ ಹೆಬ್ಬಾಳ್ಕರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ಗೌರವಧನಕ್ಕೆ ಶೀಘ್ರ ತೀರ್ಮಾನ

ಬಿಜೆಪಿ ಶಾಸಕಿ ಭಾಗೀರಥಿ ಮುರಳ್ಯ ಪ್ರಶ್ನೆಗೆ ಉತ್ತರಿಸಿದ ಹೆಬ್ಬಾಳ್ಕರ್, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಗೌರವ ಧನ ಹೆಚ್ಚಳಕ್ಕೆ ಸರಕಾರದ ಮುಂದೆ ಪ್ರಸ್ತಾವನೆ ಬಂದಿದ್ದು, ಶೀಘ್ರವೇ ಹೆಚ್ಚಳ ಮಾಡಲಾಗುವುದು ಎಂದು ತಿಳಿಸಿದರು. ಅಂಗನವಾಡಿ ಕಾರ್ಯಕರ್ತೆಯರ ಅನುದಾನ ಮಾತ್ರವಲ್ಲ, ಅಂಗನವಾಡಿ ಕೇಂದ್ರಗಳಲ್ಲಿ ಹುದ್ದೆಗಳು ಖಾಲಿಯಿದ್ದು, ಕೂಡಲೇ ಭರ್ತಿ ಮಾಡಬೇಕೆಂದು ಪ್ರತಿಪಕ್ಷ ನಾಯಕರು ಧ್ವನಿಗೂಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ನೇಮಕದ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದರು.

ಆನ್‌ಲೈನ್ ನಿರ್ವಹಣೆಗೆ ಹೊಸ ತಂತ್ರಾಂಶ

ವಿಧಾನಪರಿಷತ್: ರೈತರ ತೊಂದರೆ ನಿವಾರಣೆಗೆ ಪಹಣಿ ತಿದ್ದುಪಡಿ ಮತ್ತು ಪೌತಿ ಖಾತೆ ಇತ್ಯಾದಿಗಳ ಇತ್ಯರ್ಥಕ್ಕಾಗಿ ಕಂದಾಯ ಅದಾಲತ್ ನಡೆಸಲಾಗುತ್ತಿದೆ. ಮಂಜೂರಾದ ಜಮೀನುಗಳ ಪೋಡಿ, ದುರಸ್ತಿ ಕಾರ್ಯವನ್ನು ಆನ್‌ಲೈನ್‌ನಲ್ಲಿ ನಿರ್ವಹಿಸಲು ಹೊಸ ತಂತ್ರಾಂಶ ಅಭಿವೃದ್ಧಿ ಪಡಿಸುತ್ತಿದ್ದೇವೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಭೂರಹಿತ, ಬಡ ರೈತರಿಗೆ ಸರಕಾರದಿಂದ ವಿವಿಧ ಯೋಜನೆಯಡಿ ಮಂಜೂರಾದ ಭೂಮಿಗೆ ಪಿ.ನಂ ಮತ್ತು ದುರಸ್ತಿ ಆಗದೆ, ಜಮೀನು ಪರಭಾರೆ ಮಾಡಲು ರೈತರಿಗೆ ತೊಂದರೆಯಾಗುತ್ತಿರುವ ಕುರಿತು ವಿಧಾನಪರಿಷತ್ ಸದಸ್ಯರಾದ ಎಂ.ಎಲ್.ಅನಿಲ್ ಕುಮಾರ್ ಅವರ ಗಮನ ಸೆಳೆಯುವ ಸೂಚನೆಗೆ ಸಚಿವರು ಉತ್ತರಿಸಿದರು.

ಲಭ್ಯತೆಗಿಂತ ಹೆಚ್ಚಿನ ಭೂ ಮಂಜೂರು ಹಾಗೂ ಕಂದಾಯ ಇಲಾಖೆಯ ಮೂಲ ದಾಖಲೆಗಳು ಶಿಥಿಲವಾಗಿರುವುದರಿಂದ ಸಮಸ್ಯೆ ಉಂಟಾಗಿದೆ. ತಾಲೂಕುಗಳಿಗೆ ಕಡಿಮೆ ಪ್ರಕರಣಗಳಿರುವ ಇತರ ತಾಲೂಕುಗಳ ಭೂಮಾಪಕರನ್ನು ನಿಯೋಜಿಸಿ, ಪೋಡಿ ದುರಸ್ತಿ ಕಾರ್ಯ ಪೂರ್ಣಗೊಳಿಸಲಾಗುತ್ತಿದೆ. 700 ಸರ್ವೇಯರ್ ಮತ್ತು 34 ಎಡಿಎಲ್‌ಆರ್‌ಗಳನ್ನು ನೇಮಿಸಲಾಗುತ್ತಿದೆ. ಕಂದಾಯ ಇಲಾಖೆಯಲ್ಲಿನ ಸಮಸ್ಯೆಗಳನ್ನು ತಕ್ಷಣವೇ ಇತ್ಯರ್ಥಪಡಿಸುತ್ತೇನೆ ಎಂದು ಹೇಳಲಾರೆ. ಆದರೆ ವ್ಯವಸ್ಥೆಯ ಸುಧಾರಣೆಗೆ ಅಗತ್ಯ ನೀಲನಕಾಶೆ ರೂಪಿಸಿದ್ದೇವೆ ಎಂದು ತಿಳಿಸಿದರು.

ರಫ್ತನ್ನು ಉತ್ತೇಜಿಸಲು ಗರಿಷ್ಠ ನೆರವು: ಚಲುವರಾಯಸ್ವಾಮಿ

ಆಹಾರ ಪಾರ್ಕ್ ಸ್ಥಾಪನೆಗೆ ಉತ್ತೇಜನ

ವಿಧಾನಸಭೆ: ರಾಜ್ಯದಲ್ಲಿ ಫುಡ್ ಪಾರ್ಕ್‌ಗಳ ಸ್ಥಾಪನೆಗೆ ಪ್ರೋತ್ಸಾಹದೊಂದಿಗೆ ಬ್ರಾಂಡಿಗ್‌ಗೂ ನೆರವು ಒದಗಿಸಲಾಗುತ್ತಿದ್ದು, ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ, ಮೌಲ್ಯ ವರ್ಧನೆ ಮತ್ತು ರಫ್ತನ್ನು ಉತ್ತೇಜಿಸಲು ಗರಿಷ್ಠ ನೆರವು ಒದಗಿಸಲಾಗುತ್ತಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಟಿ.ಬಿ.ಜಯಚಂದ್ರ ಪ್ರಶ್ನೆಗೆ ಉತ್ತರಿಸದ ಅವರು, ಆಹಾರ ಪಾರ್ಕ್‌ಗಳ ಅನುಷ್ಠಾನಕ್ಕೆ ಹಾಗೂ ಮೇಲುಸ್ತುವಾರಿ ನಿರ್ವಹಿಸಲು ಆಹಾರ ಕರ್ನಾಟಕ ನಿಯಮಿತ ಎಂಬ ವಿಶೇಷ ಉದ್ದೇಶ ಸಂಸ್ಥೆಯನ್ನು 2003ರಲ್ಲಿ ಕಂಪನಿ ಕಾಯ್ದೆ 1956ರಡಿಯಲ್ಲಿ ಸ್ಥಾಪಿಸಲಾಗಿದ್ದು, ಆಹಾರ ಕರ್ನಾಟಕ ನಿಯಮಿತ ಈ ಹಿಂದೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಡಿಯಲ್ಲಿದ್ದು, ಪ್ರಸ್ತುತ ಕೃಷಿ ಇಲಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂದು ಮಾಹಿತಿ ನೀಡಿದರು.

ಆಹಾರ ಪಾರ್ಕ್‌ಗಳ ಉನ್ನತೀಕರಣ: ಆಹಾರ ಪಾರ್ಕ್‌ಗಳಲ್ಲಿನ ಆಂತರಿಕ ರಸ್ತೆ, ಚರಂಡಿಗಳು ಹಾಗೂ ಮೂಲಸೌಕರ್ಯಗಳ ಉನ್ನತೀಕರಣಕ್ಕಾಗಿ ಆಹಾರ ಪಾರ್ಕಿನ ಪ್ರವರ್ತಕರುಗಳೇ ಕ್ರಮ ವಹಿಸಬೇಕಾಗಿದ್ದು, ನಬಾರ್ಡ್ ಸಂಸ್ಥೆಯಿಂದ ಕಡಿಮೆ ಬಡ್ಡಿ ದರದಲ್ಲಿ ಲಭ್ಯವಿರುವ ಆಹಾರ ಸಂಸ್ಕರಣಾ ನಿಧಿಯಿಂದ ಅಥವಾ ಇಂಡಿಯಾ ಇನ್ಫ್ರಾಸ್ಟ್ರಕ್ಚರ್ ಫಂಡ್‌ನಲ್ಲಿ ಇಕ್ವಿಟಿ ರೂಪದಲ್ಲಿ ನೀಡಲಾಗುತ್ತಿರುವ ಸಾಲ ಸೌಲಭ್ಯವನ್ನು ಬಳಸಿಕೊಂಡು ಅಭಿವೃದ್ಧಿ ಪಡಿಸಲು ಸೂಚಿಸಲಾಗಿದೆ ಎಂದು ವಿವರಿಸಿದರು.

ಆಹಾರ ಪಾರ್ಕುಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸಂಸ್ಕರಣ ಘಟಕಗಳು ಸ್ಥಾಪನೆಯಾಗಿಲ್ಲದೇ ಇರುವುದರಿಂದ ಆಹಾರ ಪಾರ್ಕುಗಳ ಪ್ರವರ್ತಕರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಏಕ ಗವಾಕ್ಷಿ ಸಮಿತಿ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಸಹಯೋಗವನ್ನು ಪಡೆದು ಕೈಗಾರಿಕೆಗಳ ಸ್ಥಾಪನೆಗೆ ಇರುವ ಅಡಚಣೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ.
ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ವಿಶೇಷಚೇತನರಿಗೆ ಹೆಚ್ಚು ಮಾಸಾಶನ

ವಿಧಾನ ಪರಿಷತ್: ವಿಶೇಷಚೇತನರ ಹಾಗೂ ಮನೋರೋಗಕ್ಕೆ ತುತ್ತಾಗಿರುವವರಿಗೆ ನೀಡುವ ಸಾಮಾಜಿಕ ಭದ್ರತಾ ಪಿಂಚಣಿ (ಮಾಸಾಶನ)ಯನ್ನು ದೇಶದಲ್ಲೇ ಅತಿಹೆಚ್ಚಿನ ಸಂಖ್ಯೆಯಲ್ಲಿ ನೀಡುತ್ತಿರುವ ಏಕೈಕ ರಾಜ್ಯ ಕರ್ನಾಟಕ ಎಂದು ಸಚಿವ ಕೃಷ್ಣ ಬೈರೇಗೌಡ ಮಾಹಿತಿ ನೀಡಿದರು.

ಪ್ರಶ್ನೋತ್ತರ ಅವಧಿಯಲ್ಲಿ ವೈ.ಎಂ. ಸತೀಶ್ ಅವರು ವಿಶೇಷಚೇತನರಿಗೆ ಹಾಗೂ ಮನೋರೋಗಿಗಳಿಗೆ ನೀಡುವ ಮಾಸಾಶನದ ಬಗ್ಗೆ ಉಲ್ಲೇಖಿಸಿದರು. ಶೇ.40 ರಿಂದ ಶೇ.75 ರಷ್ಟು ಅಂಗವಿಕಲತೆ ಇರುವವರಿಗೆ 2021 ರಿಂದ 1,400 ರೂಪಾಯಿ ಹಾಗೂ ಶೇ.75ಕ್ಕೂ ಹೆಚ್ಚು ಅಂಗ ವಿಕಲತೆ ಹಾಗೂ ಮನೋರೋಗಿಗಳಿಗೆ 2 ಸಾವಿರ ರೂಪಾಯಿ ಮಾಸಾಶನ ನೀಡಲಾಗುತ್ತಿದೆ. ಈ ಮಾಶಾಸನವನ್ನು ಹೆಚ್ಚಿಸಬೇಕು, ಕಾಲದಿಂದ ಕಾಲಕ್ಕೆ ಪರಿಷ್ಕರಿಸಬೇಕು ಎಂದು ಒತ್ತಾಯಿಸಿದರು.

ವೈ.ಎಂ.ಸತೀಶ್ ಅವರ ಒತ್ತಾಯಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಸಚಿವ ಕೃಷ್ಣ ಬೈರೇಗೌಡ ಅವರು, ಅಂಗವೈಕ್ಯಲ ಹಾಗೂ ಮನೋವೈಕಲ್ಯ ಹೊಂದಿರುವವರ ಮಾಸಾಶನವನ್ನು ಕಾಲದಿಂದ ಕಾಲಕ್ಕೆ ಪರಿಷ್ಕರಿಸಬೇಕು ಎಂಬುದು ನಿಜ. ಇದರಲ್ಲಿ ಸರಕಾರಕ್ಕೆ ಬೇರೆ ಅಭಿಪ್ರಾಯ ಇಲ್ಲ. ರಾಜ್ಯದಲ್ಲಿ ಒಟ್ಟು 78,14,513 ವ್ಯಕ್ತಿಗಳಿಗೆ ನಾನಾ ರೀತಿಯ ಸಾಮಾಜಿಕ ಭದ್ರತಾ ಪಿಂಚಣಿ ನೀಡಲಾಗುತ್ತಿದೆ. ಇದಕ್ಕಾಗಿಯೇ ಪ್ರತಿವರ್ಷ 10500 ಕೋಟಿ ವ್ಯಯಿಸಲಾಗುತ್ತಿದೆ ಎಂದು ಸದನಕ್ಕೆ ಮಾಹಿತಿ ನೀಡಿದರು.

ಅಧಿಕೃತ ಆದೇಶ ಪ್ರಕಟಿಸಿದ ಸಭಾಪತಿ ಬಸವರಾಜ ಹೊರಟ್ಟಿ

ಮೇಲ್ಮನೆ ಪ್ರತಿಪಕ್ಷ ನಾಯಕರಾಗಿ ಛಲವಾದಿ

ವಿಧಾನ ಪರಿಷತ್: ವಿಧಾನ ಪರಿಷತ್ತು ಅಧಿವೇಶನದ ಬುಧವಾರ ಕಲಾಪವೂ ಪ್ರಶ್ನೋತ್ತರ, ಪ್ರತಿಪಕ್ಷದ ನಾಯಕರ ಆಯ್ಕೆ, ಚರ್ಚೆ ಸೇರಿದಂತೆ ಇನ್ನಿತರೆ ಪ್ರಕ್ರಿಯೆಗಳಿಗೆ ಸಾಕ್ಷಿಯಾಯಿತು.

ದಿನದ ಕಲಾಪ ಸಮಯಕ್ಕೆ ಸರಿಯಾಗಿ ಆರಂಭವಾಗುತ್ತಿದ್ದಂತೆ ಸಭಾಪತಿ ಬಸವರಾಜ ಹೊರಟ್ಟಿ ಅವರು ವಿಧಾನಪರಿಷತ್ ಪ್ರತಿಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದ ಛಲವಾದಿ ನಾರಾಯಣಸ್ವಾಮಿಯವರ ಹೆಸರನ್ನು ಅಧಿಕೃತವಾಗಿ ಸದನದಲ್ಲಿ ಪ್ರಕಟಿಸಿದರು. ಆನಂತರ, ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಅವರನ್ನು ಕರೆತಂದು ಪ್ರತಿಪಕ್ಷ ನಾಯಕನ ಸ್ಥಾನದಲ್ಲಿ ಕೂರಿಸಿದರು. ನಂತರ ಛಲವಾದಿ ನಾರಾಯಣಸ್ವಾಮಿಯವರಿಗೆ ಸಚಿವರು ಸೇರಿದಂತೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸದಸ್ಯರು ಪಕ್ಷಭೇದ ಮರೆತು ಅಭಿನಂದನೆ ಸಲ್ಲಿಸಿದರು.

ಉಪಸಭಾಪತಿ ಎಂ.ಕೆ.ಪ್ರಾಣೇಶ್ ಮಾತನಾಡಿ, ಪ್ರಜಾಪ್ರಭುತ್ವದ ಸೌಂದರ್ಯ ಮತ್ತೆ ಮರುಕಳಿಸಿದೆ ಎಂಬುದಕ್ಕೆ ನಾರಾಯಣಸ್ವಾಮಿಯವರ ಆಯ್ಕೆಯೇ ನಿದರ್ಶನ. ಪ್ರತಿಯೊಂದು ಸಮುದಾಯಕ್ಕೆ ಸಾಮಾಜಿಕ ನ್ಯಾಯ ಸಿಗಬೇಕೆಂಬುದು ಸಂವಿಧಾನದ ಆಶಯ. ತಳಸಮುದಾಯದಿಂದ ಬಂದಿರುವ ಅವರಿಗೆ ಅತ್ಯಂತ ಮಹತ್ವದ ಜವಾಬ್ದಾರಿಯನ್ನು ನೀಡಲಾಗಿದೆ. ಇದಕ್ಕೆ ಚ್ಯುತಿ ಬಾರದಂತೆ ಕೆಲಸ ಮಾಡುತ್ತಾರೆಂಬ ವಿಶ್ವಾಸವಿದೆ ಎಂದರು. ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಿ, ನಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಪಕ್ಷದ ನಾಯಕರನ್ನು ಶ್ಯಾಡೋ ಮುಖ್ಯಮಂತ್ರಿ ಎಂದು ಕರೆಯುತ್ತಾರೆ. ಸರಕಾರ ತಪ್ಪು ಮಾಡಿದಾಗ ಕಿವಿ ಹಿಂಡಿ ಎಚ್ಚರಿಸುವ ಕೆಲಸ ವಿರೋಧಪಕ್ಷದ ನಾಯಕರಿಂದ ಆಗಬೇಕು. ಕರ್ನಾಟಕದ ವಿಧಾನಪರಿಷತ್‌ಗೆ ಶತಮಾನಗಳ ಇತಿಹಾಸವಿದೆ. ಹಿಂದೆ ಮೈಸೂರು ರಾಜರ ಆಡಳಿತದಲ್ಲಿ ಈ ವ್ಯವಸ್ಥೆ ಇತ್ತು. ಈಗ ಅದನ್ನು ನಾವೂ ಕೂಡ ಅಳವಡಿಸಿಕೊಂಡಿದ್ದೇವೆ ಎಂದರು. ಜೆಡಿಎಸ್ ಎಸ್.ಎಲ್.ಭೋಜೇಗೌಡ ಮಾತನಾಡಿ, ಛಲವಾದಿ ನಾರಾಯಣಸ್ವಾಮಿಯವರ ಆಯ್ಕೆ ಅತ್ಯುತ್ತಮವಾಗಿದೆ. ಅವರು ಈ ಸ್ಥಾನಕ್ಕೆ ಅರ್ಹರೂ ಹೌದು. ಸಮಾಜಮುಖಿಯಾಗಿ ಕೆಲಸ ಮಾಡಬೇಕು. ಸದನದಲ್ಲಿ ಗುಣಮಟ್ಟದ ಚರ್ಚೆಯಾಗಬೇಕೆಂಬ ಮಾತುಗಳಿವೆ. ಅದಕ್ಕೆ ಪ್ರತಿಪಕ್ಷದ ನಾಯಕರು ಕೈಜೋಡಿಸಲಿ ಎಂದು ಕಿವಿಮಾತು ಹೇಳಿದರು.

ಜನರ ಆಶಯಕ್ಕೆ ಅನುಗುಣವಾಗಿ ಸದನದ ಗೌರವಕ್ಕೆ ಚ್ಯುತಿ ಬಾರದಂತೆ ಪಕ್ಷದ ಹಿತವನ್ನು ಗಮನದಲ್ಲಿಟ್ಟುಕೊಂಡು ನನಗೆ ನೀಡಿರುವ ಈ ಮಹತ್ವದ ಜವಾಬ್ದಾರಿಯನ್ನು ಅತ್ಯಂತ ಪ್ರಾಮಾಣಿಕವಾಗಿ ನಿಭಾಯಿಸುತ್ತೇನೆ.
-ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್, ಪ್ರತಿಪಕ್ಷ ನಾಯಕ

ಧರ್ಮರಾಯಸ್ವಾಮಿ ಮಂದಿರ ಜಾಗ ತೆರವು

ವಿಧಾನ ಪರಿಷತ್: ಬೆಂಗಳೂರಿನಲ್ಲಿ ಒತ್ತುವರಿಯಾಗಿರುವ ಧರ್ಮರಾಯಸ್ವಾಮಿ ದೇವಾಲಯದ ಜಾಗವನ್ನು ತೆರವುಗೊಳಿಸಲು ಕೋರ್ಟ್‌ನಿಂದ ಇದ್ದು, ನ್ಯಾಯಾಲಯದ ತಡೆಯಾಜ್ಞೆ ತೆರವಿಗೆ ಕ್ರಮ ವಹಿಸಿ, ಆದಷ್ಟು ಬೇಗ ಒತ್ತುವರಿ ತೆರವು ಮಾಡಿ ದೇವಾಲಯದ ಜಾಗ ಉಳಿಸುವ ಕೆಲಸ ಮಾಡಲಾಗುತ್ತದೆ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಬಿಜೆಯ ರವಿಕುಮಾರ್ ಪ್ರಶ್ನೆಗೆ ಉತ್ತರಿಸಿರುವ ಸಚಿವರು, ಧರ್ಮರಾಯಸ್ವಾಮಿ ದೇವಾಲಯದ ಜಾಗ 15.12 ಎಕರೆ ಇದ್ದು, 211 ಜನ 6 ಎಕರೆ ಒತ್ತುವರಿ ಮಾಡಿದ್ದಾರೆ. ಇವರ ವಿರುದ್ಧ ಭೂ ಒತ್ತುವರಿ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ. ಒತ್ತುವರಿ ವೇಳೆ ಆರು ಅಧಿಕಾರಿಗಳು ಇದ್ದರೂ ಒತ್ತುವರಿ ತೆರವು ಮಾಡಿಸಲು ಆಗಿಲ್ಲ. ಅಧಿಕಾರಿಗಳ ವಿರುದ್ಧ ಕ್ರಮ ಆಗಿಲ್ಲ. ಕೋರ್ಟ್‌ನಲ್ಲಿ ತಡೆ ತೆರವಾಗಬೇಕು. ಎಜಿ ಜತೆ ಮಾತನಾಡಿ, ತಡೆ ತೆರವಿಗೆ ಕ್ರಮ ವಹಿಸಲಾಗುತ್ತದೆ. ತಡೆ ತೆರವಾದರೆ ನಾವು ಕಾಂಪೌಂಡ್ ಹಾಕುವ ಕೆಲಸ ಮಾಡಬಹುದು. ಈ ಜಾಗ ದೇವಾಲಯಕ್ಕೆ ಉಳಿಯಬೇಕು. ಆ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತದೆ ಎಂದರು. ಆದರೆ, ಸರಕಾರದ ಉತ್ತರ ಖಂಡಿಸಿ ಬಾವಿಗಿಳಿದ ರವಿಕುಮಾರ್ ಧರಣಿ ನಡೆಸಿದರು. ರವಿಕುಮಾರ್ ನಿಲುವು ಬೆಂಬಲಿಸಿದ ಜೆಡಿಎಸ್‌ನ ಭೋಜೇಗೌಡ, 35 ವರ್ಷ ಒತ್ತುವರಿಯಾಗಿದೆ ಎನ್ನುವ ಒಂದೇ ಅಂಶದಿಂದ ಒತ್ತುವರಿದಾರರ ಪರವಾಗಿ ತೀರ್ಪು ಬರುವ ಸಾಧ್ಯತೆ ಇದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ವಿಶ್ವವಾಣಿ

ಸಂಪಾದಕೀಯ

ಕೆರೆ ತುಂಬುವ ಕೆಲಸಕ್ಕೆ ಆದ್ಯತೆ ಸಿಗಲಿ

ಮೇ ತಿಂಗಳ ಮೂರನೇ ವಾರದಲ್ಲಿ ರಾಜ್ಯವು ತೀವ್ರ ಬರದ ದವಡೆಯಲ್ಲಿ ಸಿಲುಕಿದ್ದಾಗ, 2024ರ ಮುಂಗಾರು ಕೂಡ ರಾಜ್ಯದ ಪಾಲಿಗೆ ಆಶಾದಾಯಕವಾಗಿಲ್ಲ ಎಂಬ ಮಾತುಗಳು ಕೇಳಿ ಬಂದಿದ್ದವು. ಅದೃಷ್ಟವಶಾತ್ ಮೇ ತಿಂಗಳ ಕೊನೆ ವಾರದಿಂದ ಆರಂಭವಾಗಿ ನಿರಂತರವಾಗಿ ಸುರಿದ ಮಳೆ ಜುಲೈವರೆಗೂ ಮುಂದುವರಿದಿದೆ. ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶದ ಪ್ರಮುಖ 10 ಜಲಾಶಯಗಳು ಬಹುತೇಕ ಭರ್ತಿಯಾಗಿವೆ. ವಿದ್ಯುಚ್ಛಕ್ತಿಗೆ ಪೂರಕವಾದ ಮಲೆನಾಡಿನ ಜಲಾಶಯಗಳು ಅರ್ಧದಷ್ಟು ಭರ್ತಿಯಾಗಿವೆ. ಕೃಷ್ಣರಾಜಸಾಗರ ಸೇರಿದಂತೆ ಕಾವೇರಿ ಕಣಿವೆಯ ಜಲಾಶಯಗಳು ತುಂಬಿರುವುದು ಮುಂದಿನ ಬೇಸಿಗೆಯಲ್ಲಿ ಬೆಂಗಳೂರು ಸೇರಿದಂತೆ ಎರಡು ಕೋಟಿ ಜನತೆಯ ಕುಡಿಯುವ ನೀರಿನ ಆತಂಕವನ್ನು ಕಡಿಮೆ ಮಾಡಿದೆ. ಮುಖ್ಯವಾಗಿ ತಮಿಳುನಾಡಿನ ಕಾವೇರಿ ನದಿ ನೀರಿನ ಪಾಲು ನಿಗದಿಗಿಂತ ಹೆಚ್ಚಾಗಿಯೇ ಹರಿದು ಹೋಗಿದೆ. ಮತ್ತೊಮ್ಮೆ ಸುಪ್ರೀಂಕೋರ್ಟ್ ಕಟಕಟೆ ಏರುವ ಅನಿವಾರ್ಯತೆ ತಪ್ಪಿದೆ. ಕರ್ನಾಟಕ ರಾಜ್ಯ ವಿಪತ್ತು ನಿಗಾ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ವರದಿಯಂತೆ, ಜುಲೈ 24 ರ ವೇಳೆ ರಾಜ್ಯದ ಪ್ರಮುಖ 14 ಜಲಾಶಯಗಳಲ್ಲಿ 655 ಟಿಎಂಸಿ ನೀರಿದೆ. ಕಳೆದ ವರ್ಷ ಇದೇ ದಿನ 370 ಟಿಎಂಸಿ ನೀರು ಸಂಗ್ರಹವಾಗಿತ್ತು. ಈ ವರ್ಷ ದುಪ್ಪಟ್ಟು ನೀರು ಜಲಾಶಯಗಳಿಗೆ ಹರಿದುಬಂದಿದೆ. ಕರಾವಳಿ ಮತ್ತು ಮಲೆನಾಡಿನಲ್ಲಿ ಮಳೆ ಅಬ್ಬರ ಮುಂದುವರಿದಿದ್ದು, ಇನ್ನುಳಿದ ಜಲಾಶಯಗಳೂ ಶೀಘ್ರ ತುಂಬುವ ನಿರೀಕ್ಷೆ ಇದೆ. ಕಾವೇರಿ, ಕೆಆರ್‌ಎಸ್, ಕಬಿನಿ ಮತ್ತು ಹಾರಂಗಿಯಿಂದ ಹೆಚ್ಚುವರಿ ನೀರನ್ನು ನದಿಗೆ ಬಿಡಲಾಗುತ್ತಿದೆ. ಇದೇ ರೀತಿ ಆಲಮಟ್ಟಿ ಜಲಾಶಯದಿಂದ 1.50 ಲಕ್ಷ ಕ್ಯುಸೆಕ್‌ನಷ್ಟು ಭಾರೀ ಪ್ರಮಾಣದ ನೀರು ಹರಿಯ ಬಿಡಲಾಗಿದೆ. ಇದೀಗ ತುರ್ತಾಗಿ ನೀರಾವರಿ ಕಾಲುವೆಗಳಿಗೆ ನೀರು ಹರಿಸಬೇಕಾಗಿದೆ. ಕೆರೆ ಕಟ್ಟೆಗಳನ್ನು ತುಂಬಿಕೊಳ್ಳಬೇಕಿದೆ. ಕಳೆದ ವರ್ಷ ಕೆರೆ ಕಟ್ಟೆಗಳನ್ನು ತುಂಬಲು ಸಾಧ್ಯವಾಗದ ಕಾರಣ ಕಾವೇರಿ ಕೊಳ್ಳದ ರೈತರು ಹಿಂಗಾರು ಬೆಳೆಗೆ ನೀರಿನ ಕೊರತೆ ಎದುರಿಸಿದ್ದರು. ತಮಿಳುನಾಡಿನ ಕ್ಯಾತೆಯಿಂದ ನಾಲೆಗಳಿಗೂ ನಿಯಮಿತವಾಗಿ ನೀರು ಹರಿಸಲು ಸಾಧ್ಯವಾಗಿರಲಿಲ್ಲ. ಈ ಬಾರಿ ಮುಂಚಿತವಾಗಿಯೇ ನಾಲೆಗಳಿಗೆ ನೀರು ಹರಿಸುವ ಮೂಲಕ ನಮ್ಮ ರೈತರು ಮೂರು ಬೆಳೆ ಬೆಳೆಯಲು ಉತ್ತೇಜನ ನೀಡಬೇಕು. ಜಲಾಶಯಗಳು ತುಂಬಿದ ನಂತರವೂ ನೀರು ಬಿಡಲು ವಿಳಂಬ ಮಾಡುವುದು ಸರಿಯಲ್ಲ. ಮಳೆ ಎಷ್ಟೇ ಸುರಿದರೂ, ಬಿದ್ದ ಮಳೆಯನ್ನು ಹಿಡಿದಿಟ್ಟುಕೊಳ್ಳದೇ ಹೋದರೆ ಮುಂದಿನ ಬೇಸಿಗೆಯಲ್ಲಿ ಮತ್ತೆ ಜಲಕ್ಷಾಮ ಎದುರಿಸಬೇಕಾಗುತ್ತದೆ.

ಸೊಂಪಾದಕೀಯ

ಪೊಲೀಸರು ಇಲ್ಲೂ ದುಡ್ಡು ಕೇಳ್ತಾರಾ?

ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಒಬ್ಬರ ಹೆಸರು ಮತ್ತು ಫೋಟೋ ಬಳಸಿಕೊಂಡು ನಕಲಿ ಖಾತೆ ತೆರೆದು ಅವರ ಸ್ನೇಹಿತರ ಬಳಿ ಹಣ ಕೇಳುವುದು ಸರ್ವೇ ಸಾಮಾನ್ಯವಾಗಿದೆ. ಫೇಸ್‌ಬುಕ್‌ನಲ್ಲಂತೂ ಇದು ಎಲ್ಲರಿಗೂ ಗೊತ್ತಾಗಿ, ಯಾರೂ ಇಂಥವರಿಗೆ ದುಡ್ಡು ಕೊಡದೇ ಇದ್ದರೂ ಈ ಟ್ರೆಂಡ್ ಮಾತ್ರ ಇನ್ನೂ ಚಾಲ್ತಿಯಲ್ಲಿದೆ. ಆದರೆ, ತೀರಾ ಯಾರೋ ಸಾಮಾನ್ಯರ ಹೆಸರಲ್ಲಿ ನಕಲಿ ಖಾತೆ ತೆಗೆದು ನಗದು ಕೇಳಿದರೆ ಓಕೆ. ಆದರೆ ತೀರಾ ಪ್ರಭಾವಿಗಳ ಹೆಸರಲ್ಲಿ ಖಾತೆ ತೆರೆದು ಅವರ ಹೆಸರಲ್ಲಿ 5 ಸಾವಿರ, 10 ಸಾವಿರ ದುಡ್ಡು ಕೇಳಿದಾಗ ಅದು ಅನುಮಾನಕ್ಕೆ ಆಸ್ಪದ ಕೊಡುವುದರ ಜತೆಗೆ ಹಾಸ್ಯಾಸ್ಪದ ಕೂಡಾ ಆಗುತ್ತದೆ. ವರುಷಗಳ ಹಿಂದೆ ಸ್ಯಾಂಡಲ್‌ವುಡ್ ನಿರ್ಮಾಪಕರೊಬ್ಬರ ಹೆಸರಲ್ಲಿ ಫೇಕ್ ಅಕೌಂಟ್ ಮಾಡಿ 10 ಸಾವಿರ ಕೇಳಿದಾಗ, ಸ್ವತಃ ಆ ನಿರ್ಮಾಪಕರು, ನನ್ನ ಹೆಸರಿಗೆ ಕಳಂಕ ತರ್ತಾ ಇದ್ದಾರೆ. ನನ್ ಫೇಕ್ ಅಕೌಂಟ್ ಮಾಡ್ಲಿ, ಆದ್ರೆ ನನ್ನ ಹೆಸರಲ್ಲಿ 5, ಹತ್ತು ಸಾವಿರ ಕೇಳೋದಾ, ಅಟ್ ಲೀಸ್ಟ್ ಒಂದ್ ಐದು, ಹತ್ತು ಲಕ್ಷನಾದ್ರೂ ಕೇಳ್ಬೇಕು ತಾನೇ ಅಂತ ತಮಾಷೆ ಮಾಡಿದ್ದರು. ಈ ಸೈಬರ್ ಖದೀಮರು ಬೆಳಗಾವಿಯ ಎಸ್ ಪಿ ಅವರ ಹೆಸರಲ್ಲಿ ಇನ್‌ಸ್ಟಾಗ್ರಾಮ್‌ನಲ್ಲಿ ಫೇಕ್ ಅಕೌಂಟ್ ಕ್ರಿಯೇಟ್ ಮಾಡಿ ಇದೇ ರಾಗ ಶುರು ಮಾಡಿದ್ದರಂತೆ. ಆದರೆ ಪೊಲೀಸರ ಹೆಸರಿನ ಅಕೌಂಟಿನಿಂದ ಹಣದ ಕೋರಿಕೆ ಬಂದಿದ್ದು ನೋಡಿ ಅವರ ಫಾಲೋವರ್ಸ್ ಗಾಬರಿಯಾಗಿದ್ದಾರೆ. ಪೊಲೀಸರು ಎದುರಿಗೆ ಸಿಕ್ಕಾಗ ಹಣ ವಸೂಲಿ ಮಾಡೋದು ಮಾಮೂಲಿ. ಆದ್ರೆ ಆನ್ ಲೈನಲ್ಲೂ ಮಾಮೂಲಿ ಕೇಳ್ತಾರಾ ಅಂತ ಜನ ಅನುಮಾನಗೊಂಡಿದ್ದಾರೆ. ಅಲ್ಲದೆ, ಪೊಲೀಸರು ಅರ್ಜೆಂಟ್ ದುಡ್ಡು ಬೇಕಿತ್ತು, ನಾಳೆ ಕೊಡ್ತೀನಿ ಅಂತೆಲ್ಲ ಸಾಲ ಕೇಳಲ್ವಲ್ಲ, ಅವರದ್ದೇನಿದ್ದರೂ ಇಷ್ಟು ಇಟ್ಟು ರೈಟ್ ಹೇಳು ಅನ್ನೋ ಪಾಲಿಸಿ ಅಲ್ವಾ ಅಂತಲೂ ಕನ್‌ಫ್ಯೂಸ್ ಆಗಿದ್ದಾರೆ. ಆದರೆ, ಇದನ್ನು ಗಂಭೀರವಾಗಿ ತೆಗೆದುಕೊಂಡರೆ ಈ ಆನ್ ಲೈನ್ ಚೋರರಿಗೆ ಪೊಲೀಸರ ಭಯವೂ ಇಲ್ಲ ಅನ್ನೋದು ಸ್ಪಷ್ಟವಾಗುತ್ತದೆ. ಹಾಗಾಗಿ ಇದಕ್ಕೆ ಸೈಬರ್ ಪೊಲೀಸರು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಸಂಪಾದಕರ ಸದ್ಯಶೋಧನೆ

ರಾಜಕಾರಣದಲ್ಲಿ ಸಂಬಂಧ

ರಾಜಕಾರಣದಲ್ಲಿ ಸಂಬಂಧಗಳು ಬಹಳ ಬೇಗ ಬದಲಾಗುತ್ತದೆ. ಸ್ನೇಹ ಶಾಶ್ವತವಾಗಿ ಇರುವುದಿಲ್ಲ. ಹಾಗಂತ ವೈರತ್ವವೂ ಬಹಳ ದಿನ ಇರುವುದಿಲ್ಲ. ಸಂಬಂಧಗಳು ಕಾಲಕಾಲಕ್ಕೆ ಪಲ್ಲಟವಾಗುತ್ತಲೇ ಇರುತ್ತವೆ. ಜವಾಹರಲಾಲ್ ನೆಹರು ಅವರಿಗೆ ವಿ.ಕೆ.ಕೃಷ್ಣ ಮೆನನ್ ಆತ್ಮೀಯರಾಗಿದ್ದರು. ನೆಹರು ನಂತರ ಭಾರತದಲ್ಲಿ ಎರಡನೆಯ ಅತ್ಯಂತ ಪ್ರಭಾವಿ ವ್ಯಕ್ತಿ ಎಂದೂ ಅವರು ಕರೆಯಿಸಿಕೊಂಡಿದ್ದರು. ನೆಹರು ಸಂಪುಟದಲ್ಲಿ ರಕ್ಷಣಾ ಸಚಿವರಾಗಿದ್ದ ಅವರು, ಕೆಲ ಕಾಲ ಖಾತೆಯಿಲ್ಲದ ಮಂತ್ರಿಯೂ ಆಗಿದ್ದರೆನ್ನಿ. ನೆಹರು ನಂತರ ಅವರ ಮಗಳಾದ ಇಂದಿರಾ ಗಾಂಧಿ ಜತೆ ಅವರ ಸಂಬಂಧ ಚೆನ್ನಾಗಿಯೇ ಇತ್ತು. ಆದರೆ ಇಂದಿರಾಗೆ ಮೆನನ್ ಬಗ್ಗೆ ಯಾರೋ ಚಾಡಿ ಹೇಳಿದರು. ಮೆನನ್ ಅವರನ್ನು ಇಂದಿರಾ ಮೆಲ್ಲಗೆ ದೂರ ಸರಿಸಲಾರಂಭಿಸಿದರು. ಅದು ಮೆನನ್ ಅನುಭವಕ್ಕೂ ಬಂದಿತು. 1967ರ ಲೋಕಸಭಾ ಚುನಾವಣೆ ಬಂದಿತು. ಕಾಂಗ್ರೆಸ್ ಪಕ್ಷ ಅವರಿಗೆ ಈಶಾನ್ಯ ಮುಂಬೈ ಕ್ಷೇತ್ರದಿಂದ ಟಿಕೆಟ್ ನಿರಾಕರಿಸಿತು. ಇದನ್ನು ಮೆನನ್ ಕನಸು ಮನಸಿನಲ್ಲೂ ನಿರೀಕ್ಷಿಸಿರಲಿಲ್ಲ. ಬೇರೆ ದಾರಿಯಿರಲಿಲ್ಲ. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಕಾಂಗ್ರೆಸ್ ಪಕ್ಷ ನಿವೃತ್ತ ಐಪಿಎಸ್ ಅಧಿಕಾರಿ ಎಸ್.ಜಿ.ಬಾರ್ವೆಗೆ ಟಿಕೆಟ್ ನೀಡಿತು. ಅವರಿಗೆ ಜನಸಾಮಾನ್ಯರ ಸಂಪರ್ಕವೇ ಇರಲಿಲ್ಲ. ಮೆನನ್‌ಗೆ ಸರಿಸಾಟಿಯಾಗಿ ಇಂಗ್ಲಿಷ್ ಮಾತಾಡುತ್ತಾರೆಂಬ ಕಾರಣಕ್ಕೆ ಬಾರ್ವೆಗೆ ಟಿಕೆಟ್ ನೀಡಿತ್ತು. ತಾವು ನೆಹರುಗೆ ಎಷ್ಟು ಹತ್ತಿರದವನಾಗಿದ್ದೆ ಎಂಬುದೇ ಮೆನನ್ ಪ್ರಚಾರದ ಪ್ರಮುಖ ಅಂಶವಾಗಿತ್ತು. ಅವರ ಪೋಸ್ಟರುಗಳಲ್ಲಿ, Nehru's Vision, Menon's Mission ಘೋಷವಾಕ್ಯವಾಗಿತ್ತು. ನೆಹರು ನೆರಳಿನ ಮುಂದೆ ಮೆನನ್ ಫೋಟೋ. ಅದೇನೇ ಆಗಲಿ, ಮೆನನ್ ಸೋಲಲೇಬೇಕು ಎಂದು ಇಂದಿರಾ ಪಣ ತೊಟ್ಟಿದ್ದರು. ಶಿವಸೇನೆ ಮುಖ್ಯಸ್ಥ ಬಾಳ ಠಾಕ್ರೆ ಜತೆಗಿನ ವಿರೋಧವನ್ನು ಬದಿಗೊತ್ತಿ ಇಂದಿರಾ ಗಾಂಧಿ ಸ್ವತಃ ಅವರಿಗೆ (ಠಾಕ್ರೆ) ಫೋನ್ ಮಾಡಿ ಬಾರ್ವೆಯನ್ನು ಬೆಂಬಲಿಸುವಂತೆ ವಿನಂತಿ ಮಾಡಿಕೊಂಡರು. ಠಾಕ್ರೆ ಏಕಾಏಕಿ ಕ್ರಿಯಾಶೀಲರಾದರು. ಕಾಂಗ್ರೆಸ್ಸಿಗೆ ತಮ್ಮ ಬೆಂಬಲವನ್ನು ಪ್ರಕಟಿಸಿದರು. ತಮ್ಮ ಪತ್ರಿಕೆ (ಮಾರ್ಮಿಕ್)ಯಲ್ಲೂ ಮೆನನ್ ವಿರುದ್ಧ ಸ್ವತಃ ವ್ಯಂಗ್ಯಚಿತ್ರಗಳನ್ನು ಬಿಡಿಸಿದರು. ಆ ಚುನಾವಣೆಯಲ್ಲಿ ಮೆನನ್ ಹದಿಮೂರು ಸಾವಿರ ಅಂತರಗಳಿಂದ ಸೋತು ಹೋದರು. ಫಲಿತಾಂಶ ಬಂದ ಕೆಲ ದಿನಗಳಲ್ಲೇ ಬಾರ್ವೆ ನಿಧನರಾದರು. ಮರು ಚುನಾವಣಾ ಘೋಷಣೆಯಾಯಿತು. ಕಾಂಗ್ರೆಸ್ ಬಾರ್ವೆ ಅವರ ಸಹೋದರಿ ತಾರಾ ಸಪ್ರೆ ಅವರನ್ನು ಕಣಕ್ಕಿಳಿಸಿತು. ಆಗ ಮೆನನ್ ಹದಿನೈದು ಸಾವಿರ ಮತಗಳ ಅಂತರದಿಂದ ಸೋತು ಹೋದರು. ಇದು ಮೆನನ್ ಅವರಿಗಾದ ತೀವ್ರ ಮುಖಭಂಗ. ಎಂಟು ತಿಂಗಳ ಅವಧಿಯಲ್ಲಿ ಎರಡು ಸೋಲನ್ನು ಅನುಭವಿಸಿದ್ದರು. ಈ ಮಧ್ಯೆ ಇಂದಿರಾ ಜತೆ ಸಂಬಂಧವನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸಿದರು. ಇಂದಿರಾಗೆ ಮೊದಲಿದ್ದ ಸಿಟ್ಟು ತುಸು ತಣ್ಣಗಾಗಿತ್ತು. ಅದಾದ ಎರಡು ವರ್ಷಗಳ ನಂತರ, 1969ರ ಲೋಕಸಭಾ ಮರು ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಮಿಡ್ನಾಪುರ (ಮೇದಿನಿಪುರ) ದಿಂದ ಪಕ್ಷೇತರರಾಗಿಯೇ ಸೆಣಸಿದರು. ಒಂದು ಲಕ್ಷ ಮತಗಳ ಅಂತರದಿಂದ ಆರಿಸಿ ಬಂದರು. ಇಂದಿರಾ ಸೂಚನೆ ಮೇರೆಗೆ ಕಾಂಗ್ರೆಸ್ ಕಾರ್ಯಕರ್ತರು ಮೆನನ್ ಪರವಾಗಿ ಕೆಲಸ ಮಾಡಿದ್ದರು. ಅದಾಗಿ ಎರಡು ವರ್ಷಗಳ ನಂತರ, 1971ರಲ್ಲಿ ತಮ್ಮ ತವರು ರಾಜ್ಯವಾದ ಕೇರಳದ ತಿರುವನಂತಪುರದಿಂದ ಪಕ್ಷೇತರರಾಗಿ ಸ್ಪರ್ಧಿಸಿ, ಪ್ರಜಾ ಸೋಷಿಯಲಿಸ್ಟ್ ಪಕ್ಷದ ದಾಮೋದರಂ ಪೊಟ್ಟಿ ವಿರುದ್ಧ ಇಪ್ಪತ್ನಾಲ್ಕು ಸಾವಿರ ಮತಗಳ ಅಂತರದಿಂದ ಗೆದ್ದರು. ಅಷ್ಟೊತ್ತಿಗೆ ಇಂದಿರಾ ಜತೆ ಸಂಬಂಧ ಸುಧಾರಿಸಿತ್ತು. ಅದಾಗಿ ಮೂರು ವರ್ಷಗಳ ನಂತರ ಅವರು ನಿಧನರಾದರು.

ಈ ವಾಚಿನ ಸಮಯಕ್ಕೆ ಬೆಲೆ ಕಟ್ಟಲಾಗದು!

ಒಮ್ಮೆ ತಯಾರಾದ ವಾಚು ಯಾವುದೇ ಕಾರಣಕ್ಕೂ ದೋಷಪೂರಿತವಾಗಿರಲು ಸಾಧ್ಯವೇ ಇಲ್ಲ. ಖರೀದಿಸಿದ ನಂತರ ಮಷೀನಿನಲ್ಲಿ ದೋಷ ಕಂಡು ಬಂದರೆ ಅದನ್ನು ರಿಪೇರಿ ಮಾಡಿಕೊಡುವ ಬದಲು ಹೊಸ ವಾಚನ್ನೇ ಕೊಡಲಾಗುತ್ತದೆ. ಹತ್ತು ಲಕ್ಷ ವಾಚುಗಳ ಪೈಕಿ ಒಂದು ವಾಚಿನಲ್ಲಿ ದೋಷ ಕಾಣಿಸಿಕೊಳ್ಳಬಹುದು. ಇದನ್ನೂ ಕಂಪನಿ ಗಂಭೀರವಾಗಿ ಪರಿಗಣಿಸುತ್ತದೆ. ಅದಕ್ಕೆ ಕಾರಣರಾದ ಸಿಬ್ಬಂದಿ ಮೇಲೆ ಕ್ರಮ ಜರುಗಿಸುತ್ತದೆ.

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ನನ್ನ ಸ್ನೇಹಿತರಾದ ರವಿತೇಜ ರೆಡ್ಡಿ ಸುಮಾರು ಎಂಬತ್ತು ವರ್ಷಗಳ ಹಳೆಯ ರೋಲೆಕ್ಸ್ ವಾಚು ಕಟ್ಟುತ್ತಾರೆ. ಈ ವಾಚನ್ನು ಅವರಿಗೆ ಅವರ ತಂದೆಯವರು ಕೊಟ್ಟಿದ್ದಂತೆ. ಅವರ ತಂದೆಯವರಿಗೆ ಆ ವಾಚನ್ನು ಅವರ ತಂದೆಯವರು ಕೊಟ್ಟಿದ್ದರಂತೆ. ಅದನ್ನು ಅವರಿಗೆ ಅವರ ತಂದೆಯವರು ಇನ್ನೂ ಮುಂಚೆ ಕೊಟ್ಟಿದ್ದರಂತೆ. ರವಿತೇಜ ಆ ವಾಚಿನ ನಾಲ್ಕನೆಯ ವಾರಸುದಾರರು. ರವಿತೇಜ ಹೇಳುವಂತೆ, ಈ ವಾಚನ್ನು ಅವರ ತಂದೆ, ತಾತ ಮತ್ತು ಮುತ್ತಾತ ಒಂದು ಸಲವೂ ರಿಪೇರಿಗೆ ಕಳಿಸಿಲ್ಲ. ನಾಲ್ವರೂ ಇದನ್ನು ಹೇಗೆ ಧರಿಸಿದ್ದಾರೆಂದರೆ ಸ್ನಾನ ಮಾಡುವಾಗ ಮಾತ್ರ ಇದನ್ನು ಬಿಚ್ಚಿಟ್ಟಿದ್ದಾರೆ. ಮಲಗುವಾಗಲೂ ಕಟ್ಟಿಕೊಂಡೇ ಇದ್ದಾರೆ. ಅಂದರೆ ಈ ವಾಚು ಒಂದೇ ಒಂದು ಸಲ ನಿಂತಿಲ್ಲ. ವಾಚಿನ ಬೆಲ್ಟ್ ಅನ್ನು ಕಾಲಕಾಲಕ್ಕೆ ಸರ್ವಿಸ್ ಮಾಡಿಸಲಾಗಿದೆ. ಆದರೆ ವಾಚಿನ ಡೈಲನ್ನು ಒಂದು ಸಲವೂ ಓಪನ್ ಮಾಡಿಲ್ಲ.

'ಈ ವಾಚಿನ ತಂತ್ರಜ್ಞಾನ ಹೇಗಿದೆಯೆಂದರೆ, ಇದನ್ನು ಬಿಚ್ಚಿಟ್ಟು ಎಂಟು ತಾಸಿನ ಒಳಗೆ ಅಲುಗಾಡಿಸದಿದ್ದರೆ ಅಥವಾ ಪುನಃ ಧರಿಸದಿದ್ದರೆ ಅದು ನಿಂತು ಹೋಗುತ್ತದೆ. ಆದರೆ ನನ್ನ ಪೂರ್ವಜರು ಒಂದೇ ಒಂದು ಸಲವೂ ಅದು ನಿಂತು ಹೋಗಲು ಬಿಟ್ಟಿಲ್ಲ. ಒಂದು ರೀತಿಯಲ್ಲಿ ಈ ವಾಚನ್ನು ದೀಪ ಎಂದು ಪರಿಗಣಿಸಿದರೆ, ನನ್ನ ಮುತ್ತಾತ ಅಂದು ಹಚ್ಚಿದ ದೀಪ ಒಂದು ದಿನ ಸಹ ಆರದೇ ಇಂದಿಗೂ ಉರಿಯುತ್ತಲೇ ಇದೆ. ಪ್ರಾಯಶಃ ನನ್ನ ಪೂರ್ವಿಕರು ನನಗೆ ಮನೆ, ಆಸ್ತಿ ಎಲ್ಲಾ ಬಿಟ್ಟುಹೋಗಿದ್ದಾರೆ. ಆದರೆ ಅವೆಲ್ಲಕ್ಕಿಂತ ನನಗೆ ಹೆಚ್ಚು ಖುಷಿ ಕೊಟ್ಟಿರುವುದು ಈ ರೋಲೆಕ್ಸ್ ವಾಚು. ಕಾರಣ ಮನೆ, ಸೈಟು ಸದಾ ನನ್ನ ಜತೆ ಇರುವುದಿಲ್ಲ. ಆದರೆ ಈ ವಾಚು ಹಾಗಲ್ಲ, ಅದು ಸದಾ ನನ್ನ ಮೈಮೇಲೆಯೇ ಇರುತ್ತದೆ .ನನ್ನ ಮಗನಿಗೆ ನಾನು ಕೊಡಬಹುದಾದ ಅತ್ಯುತ್ತಮ ಕೊಡುಗೆಯೆಂದರೆ ಇದೇ ಎಂದು ಭಾವಿಸಿದ್ದೇನೆ' ಎಂದು ಅವರು ಹೇಳುತ್ತಿರುತ್ತಾರೆ. ಆ ವಾಚನ್ನು ನೋಡಿದಾಗಲೆಲ್ಲ ಅವರಿಗೆ ಏನೋ ಪುಳಕ, ಸಂತಸ... ಅವ್ಯಕ್ತ ಧನ್ಯತಾ ಭಾವ. ಈ ವಾಚನ್ನು ವಂಶವಾಹಿನಿ ಎಂದು ಭಾವಿಸಿದರೆ, ಅವರ ಮುತ್ತಾತ, ತಾತ ಮತ್ತು ತಂದೆಯ ರಕ್ತ ಆ ವಾಚಿನಲ್ಲಿ ಹರಿಯುವುದು ಅವರಿಗೆ ಭಾಸವಾಗುತ್ತದೆ. ಹಾಗೆ ನೋಡಿದರೆ ಅದು ಅವರ ಪಾಲಿಗೆ ವಾಚಲ್ಲ, ಅದು ವಂಶವಾಹಿನಿಯೇ. ಅದು ಅವರ ಪಾಲಿಗೆ legacy. ಬೆಲೆಯೇ ಕಟ್ಟಲಾಗದ ಅಮೂಲ್ಯ ರತ್ನ. ಯಾರಾದರೂ ಹತ್ತು ಕೋಟಿ ರುಪಾಯಿ ಕೊಡ್ತೇನೆ ಅಂದರೂ ಅವರು ಕೊಡಲೊಲ್ಲರು. ಹಣವನ್ನು ಯಾರಾದರೂ ಕೊಡಬಹುದು, ಆದರೆ ಅವರ ಪೂರ್ವಿಕರ ಭಾವನೆ, ಬೆವರು, ವಾಸನೆಯನ್ನು ಕೊಡಲು ಸಾಧ್ಯವೇ? ಇಂಪಾಸಿಬಲ್! ಅವೆಲ್ಲವೂ ಆ ವಾಚಿನಲ್ಲಿ ಮಿಳಿತವಾಗಿವೆ.

ಇಂದು ಜಗತ್ತಿನಲ್ಲಿ ಅತಿ ದುಬಾರಿ ಐದು ವಾಚ್ ಬ್ರಾಂಡುಗಳಲ್ಲಿ ರೋಲೆಕ್ಸ್ ಕೂಡ ಒಂದು. ರೋಲೆಕ್ಸ್ ಕಟ್ಟಿದವನ ಖದರೇ ಬೇರೆ. ಈ ವಾಚನ್ನು ಕಟ್ಟಿದರೆ ಅವನು ಸಾಮಾನ್ಯನಂತೂ ಅಲ್ಲ ಎಂಬ ನಿರ್ಧಾರಕ್ಕೆ ತಕ್ಷಣ ಬರಬಹುದು. ಒಂದೋ ಆತ ಶ್ರೀಮಂತ, ಇಲ್ಲವೇ ಆತನಿಗೆ ಒಳ್ಳೆಯ ಅಭಿರುಚಿ ಇದೆ ಎಂದು ಭಾವಿಸಬಹುದು. ಎಲ್ಲ ವಾಚುಗಳು ಸಮಯವನ್ನೇ ತೋರಿಸುತ್ತೇವೆ. ಕಟ್ಟಿದ ವಾಚಿನಿಂದ ಯಾರ ಟೈಮ್ ಬದಲಾಗುವುದಿಲ್ಲ ಅಂತಾರೆ.

ಆದರೆ ರಸ್ತೆಯಲ್ಲಿ ನಿಂತು ಅಳುವುದಕ್ಕೂ, ಬೆಂಜ್ ಕಾರಿನಲ್ಲಿ ಕುಳಿತು ಅಳುವುದಕ್ಕೂ ಸಾಕಷ್ಟು ವ್ಯತ್ಯಾಸ ಇರುವಂತೆ, ಎಚ್ಎಂಟಿ ವಾಚು ಕಟ್ಟಿಕೊಳ್ಳುವುದಕ್ಕೂ ರೋಲೆಕ್ಸ್ ವಾಚ್ ಕಟ್ಟಿಕೊಳ್ಳುವುದಕ್ಕೂ ಬಹಳ ವ್ಯತ್ಯಾಸವಿದೆ, ಅವೆರಡೂ ತೋರಿಸುವುದು ಸಮಯವೇ ಆದರೂ. ಈ ವಾಚನ್ನು ಕಟ್ಟಿಕೊಂಡರೆ, ಹತ್ತಾರು ಮೀಟರು ದೂರದಿಂದಲೇ ಹೇಳಿಬಿಡಬಹುದು, ಆತ ರೋಲೆಕ್ಸ್ ವಾಚನ್ನು ಕಟ್ಟಿಕೊಂಡಿದ್ದಾನೆಂದು. ಡೈಲಿನಲ್ಲಿ ಇಣುಕಿಯೇ ನೋಡಿ ನಿರ್ಧಾರಕ್ಕೆ ಬರಬೇಕಿಲ್ಲ. ವಾಚಿನ ಬೆಲ್ಟ್ ನೋಡಿಯೇ ಹೇಳಬಹುದು. ಡೈಲಿನ ವಿನ್ಯಾಸ ನೋಡಿ ದೂರದಿಂದಲೇ ಹೇಳಬಹುದು.

ನೂರು ಜನರಿರುವ ಗುಂಪಿನಲ್ಲಿ ಒಬ್ಬನಾದವ ರೋಲೆಕ್ಸ್ ವಾಚನ್ನು ಕಟ್ಟಿದ್ದರೆ ಅವನನ್ನು ಸುಲಭವಾಗಿ ಗುರುತಿಸಬಹುದು. ಅಷ್ಟರಮಟ್ಟಿಗೆ ಆ ವಾಚು ಇತರ ವಾಚುಗಳಿಗಿಂತ ಸಂಪೂರ್ಣ ಭಿನ್ನ. ಎಲ್ಲಾ ವಾಚುಗಳಂತೆ ಇದೂ ಸಹ ಟೈಮನ್ನೇ ತೋರಿಸಬಹುದು. ಆದರೆ ಅದಕ್ಕಿಂತ ಹೆಚ್ಚಿನ ಸಂತೃಪ್ತಿ ಮತ್ತು ಆತ್ಮಾಭಿಮಾನವನ್ನು ಕೊಡುವುದು ಸಹ ಅಷ್ಟೇ ನಿಜ. ಅದು ಹಣದಿಂದ ಬರುವಂಥದ್ದಾ ಅಥವಾ ರೋಲೆಕ್ಸ್ ಎಂಬ ಬ್ರಾಂಡ್‌ನಿಂದ ಬರುವಂಥದ್ದಾ ಅಥವಾ ಇವೆರಡರ ಸಮ್ಮಿಶ್ರ ಭಾವವಾ ಗೊತ್ತಿಲ್ಲ. ಆದರೆ ನೀವು ರೋಲೆಕ್ಸ್ ಕ್ಲಬ್ ಸದಸ್ಯರಾದರೆ ಅದೇ ಭಿನ್ನ ಭಾವ ಸೃಜಿಸುವುದಂತೂ ನಿಜ.

ನೀವು ಎಚ್‌ಎಂಟಿ, ಟೈಟಾನ್ ಅಥವಾ ಇನ್ನಿತರ ಬ್ರಾಂಡ್ ವಾಚುಗಳನ್ನು ಖರೀದಿಸಿದರೆ, ನೀವು ವಾಚುಗಳನ್ನಷ್ಟೇ ಖರೀದಿಸುತ್ತೀರಿ. ಅದೇ ನೀವು ರೋಲೆಕ್ಸ್ ವಾಚ್ ಖರೀದಿಸಿದರೆ ನೀವು ಒಂದು ಸಂಪ್ರದಾಯ ಅಥವಾ legacy ಯನ್ನು ಖರೀದಿಸುತ್ತೀರಿ. ರೋಲೆಕ್ಸ್‌ನ್ನು ಯಾರೂ ಒಂದು ವಾಚು ಎಂದಷ್ಟೇ ಭಾವಿಸುವುದಿಲ್ಲ, ಅದು ಅದಕ್ಕಿಂತ ಮೀರಿದ ಮೌಲ್ಯ ಮತ್ತು ಭಾವನೆಯನ್ನು ಹೊಂದಿರುತ್ತದೆ.

ಆ ವಾಚನ್ನು ಖರೀದಿಸಿದರೆ ಅದು ಜೀವನದ ಕೊನೆಯ ತನಕದ ಸಂಗಾತಿಯೇ. ನಿಮ್ಮ ಸ್ಟೇಟಸ್ ಅನ್ನು ಹೆಚ್ಚಿಸುವ ಮೌಲ್ಯವರ್ಧಕ. ರೋಲೆಕ್ಸ್ ವಾಚನ್ನು ಖರೀದಿಸಿದರೆ ಅದನ್ನು ಒಂದೆಡೆ ಕಪಾಟಿನಲ್ಲಿ ಇಡುವಂತಿಲ್ಲ. ಸದಾ ಕಟ್ಟಿಕೊಳ್ಳಬೇಕು. ಇಲ್ಲದಿದ್ದರೆ ನಿಂತುಹೋಗುತ್ತದೆ. ಇದರ ಉದ್ದೇಶ ಇಷ್ಟೇ. ಅದು ಯಾವತ್ತೂ ನಿಮ್ಮ ಮೈಮೇಲಿರಬೇಕು. ಸದಾ ನಿಮ್ಮಲ್ಲಿ ಒಂದು ಉತ್ತಮ ಭಾವನೆ ಮೂಡಿಸುವಂತಿರಬೇಕು. ನಿಮ್ಮಲ್ಲಿ ಒಂದು sense of pride (ಬೀಗು ಭಾವ) ತೇಲುತ್ತಿರಬೇಕು. ಕೆಲವರು ರಾತ್ರಿ ಮಲಗುವಾಗಲೂ ಈ ವಾಚನ್ನು ಕಟ್ಟಿಕೊಂಡಿರುತ್ತಾರೆ. ನಿದ್ದೆಯಲ್ಲಿ ವಾಚಿಗೆ ತರಚಿದ ಗಾಯಗಳಾಗಬಹುದೆಂದು ಕೆಲವರು ಇದನ್ನು ಬಿಚ್ಚಿಡುವುದುಂಟು. ಸುಮಾರು ಎಂಟು ತಾಸುಗಳ ಕಾಲ ಬಿಚ್ಚಿಟ್ಟರೂ ಅದು ನಿಂತು ಹೋಗುವುದಿಲ್ಲ.

ಡೆಕ್ಕನ್ ಏರ್ ವೇಸ್ ಸಂಸ್ಥಾಪಕ ಕ್ಯಾಪ್ಟನ್ ಜಿ. ಆರ್. ಗೋಪಿನಾಥ್ ಅವರು ಕಳೆದ ಇಪ್ಪತ್ತು ವರ್ಷಗಳಿಗಿಂತ ಹೆಚ್ಚು ಕಾಲದಿಂದ ರೋಲೆಕ್ಸ್ ವಾಚನ್ನು ಧರಿಸುತ್ತಿದ್ದಾರೆ. ಅವರು ಅದನ್ನು ಬಿಚ್ಚಿಟ್ಟಿದ್ದು ಕಡಿಮೆ. ಪ್ರಗತಿಪರ ರೈತ ಎಂಬ ಕಾರಣಕ್ಕೆ ರೋಲೆಕ್ಸ್ ವಾಚ್ ಕಂಪನಿ ಅವರಿಗೆ ಬಹುಮಾನವಾಗಿ ಅದನ್ನು ನೀಡಿದೆ. ಆ ವಾಚಿನ ಹಿಂಬದಿಗೆ ಅವರ ಹೆಸರನ್ನು ಕೆತ್ತಲಾಗಿದೆ. ಅವರ ಪಾಲಿಗೆ ಇದು ಬಹಳ ಅಪರೂಪದ ಕಾಣಿಕೆಯೇ.

'ಆಭರಣಗಳ ಹೊರತಾಗಿ ನೀವು ಯಾವುದೇ ಉಪಕರಣವನ್ನೂ, ನಿಮ್ಮ ಮೈಮೇಲೆ ಇಟ್ಟುಕೊಳ್ಳುವುದಿಲ್ಲ. ಕೆಲವು ಉಪಕರಣಗಳನ್ನು ಬಳಸಿ ಇಟ್ಟುಬಿಡುತ್ತೀರಿ. ಆದರೆ ವಾಚು ಹಾಗಲ್ಲ. ಅದನ್ನು ದಿನದ ಬಹಳ ಹೊತ್ತು ಧರಿಸಿರುತ್ತೀರಿ. ವಾಚಿಗೆ ಅಂಥ ವಿಶೇಷ ಸ್ಥಾನಮಾನ. ಅಲ್ಲದೇ ಅದನ್ನು ಪದೇ ಪದೆ ನೋಡುತ್ತಿರುತ್ತೀರಿ. ನೀವು ಧರಿಸಿದ ಆಭರಣಗಳನ್ನು ಪದೇ ಪದೇ ನೋಡುವುದಿಲ್ಲ. ಹೀಗಾಗಿ ನಿಮ್ಮಲ್ಲಿ ಸದಾ ಒಂದು ಉತ್ತಮ ಭಾವನೆ ಮೂಡಬೇಕೆಂದರೆ, ನಿಮ್ಮ ಬಗ್ಗೆ ನಿಮಗೆ ಖುಷಿ ಆಗಬೇಕೆಂದರೆ, ಉತ್ತಮವಾದ ವಾಚನ್ನು ಧರಿಸಬೇಕು. ಅದಕ್ಕಾಗಿ ರೋಲೆಕ್ಸ್ ಬಹಳ ಸಂಶೋಧನೆ ಮಾಡಿ ಶ್ರೇಷ್ಠ ದರ್ಜೆ ವಾಚುಗಳನ್ನು ನಿರ್ಮಿಸಿದೆ. ಅದನ್ನು ಧರಿಸಿದ ನಂತರ ಬಿಚ್ಚಿಡಲು ಮನಸ್ಸಾಗಬಾರದು. ಅದರ ಮಾಟ ಹಾಗಿರಬೇಕು. ಕಾರಣ ಮನುಷ್ಯ ಸದಾ ತನ್ನ ಮೈಮೇಲೆ ಧರಿಸಿರುವ ಉಪಕರಣವೆಂದರೆ ವಾಚು ಮಾತ್ರ. ಈ ಎಲ್ಲಾ ಅಂಶಗಳನ್ನು ಗಮನಿಸಿ ನಾವು ವಾಚನ್ನು ಬಹಳ ಶ್ರದ್ಧೆಯಿಂದ ನಿರ್ಮಿಸುತ್ತೇವೆ' ಎಂದು ರೋಲೆಕ್ಸ್ ಕಂಪನಿ ಹೇಳಿಕೊಂಡಿದೆ.

ಎಲ್ಲ ರೋಲೆಕ್ಸ್ ವಾಚುಗಳು ಹ್ಯಾಂಡ್ ಮೇಡ್. ಒಂದೊಂದು ವಾಚುಗಳನ್ನು ಮಾಡಲು ವರ್ಷಗಟ್ಟಲೆ ಸಮಯ ಹಿಡಿಯುವು ದುಂಟು. ಪ್ರತಿ ವಾಚನ್ನೂ ಸ್ವಿಟ್ಜರ್ ಲ್ಯಾಂಡಿನಲ್ಲಿ ಸಾಕಷ್ಟು ಪರಿಶ್ರಮ, ಪರಿಣತಿಯಿಂದ ತಯಾರಿಸಲಾಗುತ್ತದೆ. ಒಂದು ವಾಚು ಮಾರುಕಟ್ಟೆಗೆ ಬರುವಾಗ ಎಂಬತ್ತೆರಡು ಗುಣಮಟ್ಟ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಅದಾದ ನಂತರವೇ ಅದನ್ನು ಉತ್ಪಾದನಾ ಘಟಕದಿಂದ ಮಾರುಕಟ್ಟೆಗೆ ಕಳಿಸಲಾಗುತ್ತದೆ. ಹೀಗಾಗಿ ದೋಷಪೂರಿತ ವಾಚು ಮಾರುಕಟ್ಟೆಗೆ ಬರಲು ಸಾಧ್ಯವೇ ಇಲ್ಲ. ವಾಚಿಗೆ ಬಳಸಲಾಗುವ ಎಲ್ಲಾ ಬಿಡಿ ಭಾಗಗಳನ್ನು ಇನ್ -ಹೌಸ್ ತಯಾರಿಸಲಾಗುತ್ತದೆ. ಆನಂತರ ಅವೆಲ್ಲವನ್ನೂ ಕೈಯಿಂದಲೇ (ಅಸೆಂಬಲ್) ಜೋಡಿಸಲಾಗುತ್ತದೆ. ಈ ಕಾರಣದಿಂದ ಪ್ರತಿ ವಾಚನ್ನು ಸ್ವತಂತ್ರವಾಗಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಗ್ರಾಹಕರು ಬಯಸಿದ ವಿನ್ಯಾಸವನ್ನು ಸಹ ಮಾಡಿಕೊಡುವ ಸಂಪ್ರದಾಯವಿದೆ.

ಇರಾಕ್ ಅಧ್ಯಕ್ಷ ಸದ್ದಾಮ್ ಹುಸೇನ್ ರೋಲೆಕ್ಸ್ ವಾಚುಗಳ ಲೋಲುಪನಾಗಿದ್ದ. ತನ್ನಲ್ಲಿರುವ ರೋಲೆಕ್ಸ್ ವಾಚು ಬೇರೆ ಯಾರಲ್ಲೂ ಇರಕೂಡದೆಂದು ತಾಕೀತು ಮಾಡುತ್ತಿದ್ದ. ಇದಕ್ಕೆ 'ಕನ್ಸೈರ್ಷರ್ ಕಲೆಕ್ಷನ್' ಅಂತಾರೆ. ಆತನಿಗಾಗಿ ರೋಲೆಕ್ಸ್ ಕಂಪನಿ ವಾಚುಗಳನ್ನು ತಯಾರಿಸುತ್ತಿತ್ತು. ಆತ ಇಷ್ಟಪಟ್ಟ ಒಂದೇ ಒಂದು ಪೀಸನ್ನು ತಯಾರಿಸುತ್ತಿತ್ತು. ಅದಾಗಿ ಐದು ವರ್ಷಗಳ ನಂತರ ಸದ್ದಾಮ್ ಕಲೆಕ್ಷನ್ ಎಂದು ಕಂಪನಿ ಬಿಡುಗಡೆ ಮಾಡುತ್ತಿತ್ತು. ಆತನ ಮರಣದ ನಂತರ ಆತ ಇಷ್ಟಪಟ್ಟಿದ್ದ ಕೆಲವೇ ಕೆಲವು (ಲಿಮಿಟೆಡ್ ಎಡಿಷನ್) ವಾಚುಗಳನ್ನು ಬಿಡುಗಡೆ ಮಾಡಿತು. ಮಷೀನುಗಳಿಂದ ತಯಾರಿಸುವುದಾದರೆ ಇವೆಲ್ಲ ಸಾಧ್ಯವಿಲ್ಲ. ಆದರೆ ಇಂದಿಗೂ ರೋಲೆಕ್ಸ್ ಕಂಪನಿ ಯಂತ್ರಗಳ ಮೊರೆ ಹೋಗಿಲ್ಲ.

ರೋಲೆಕ್ಸ್ ಕಂಪನಿ ವೈಶಿಷ್ಟ್ಯ ಅಂದರೆ, ವಾಚ್ ತಯಾರಿಕೆಯಲ್ಲಿ ಬಳಸುವ ಪ್ರತಿಯೊಂದೂ ಬಿಡಿ ಭಾಗ ಅಥವಾ ವಸ್ತುವೂ ಕನಿಷ್ಠ ನೂರು ವರ್ಷ ಬಾಳಿಕೆ ಬರಬೇಕು, ಆ ರೀತಿಯ ಗುಣಮಟ್ಟವನ್ನು ಕಾಪಾಡಿಕೊಂಡಿದೆ. ಅದಕ್ಕಾಗಿ ವಿಶ್ವದಲ್ಲಿಯೇ ಅತಿ ದುಬಾರಿಯಾದ 904 ಎಲ್ ಸ್ಟೈನ್‌ಲೆಸ್ ಸ್ಟೀಲನ್ನು ಬಳಸುತ್ತದೆ. ಈ ಸ್ಟೀಲ್ ಯಾವುದೇ ಕಾರಣಕ್ಕೂ ತುಕ್ಕು ಹಿಡಿಯುವುದಿಲ್ಲ, ಸವೆಯುವುದಿಲ್ಲ ಮತ್ತು ತೀವ್ರ ಉಷ್ಣಕ್ಕೆ ಸ್ವಲ್ಪವೂ ಕರಗುವುದಿಲ್ಲ. ಇದರಿಂದ ಸಮಯ ವ್ಯತ್ಯಾಸ ಆಗುವುದಿಲ್ಲ. ಈ ವಾಚನ್ನು ವರ್ಷಗಟ್ಟಲೆ ಸಮುದ್ರದ ನೀರಿನಲ್ಲಿ ಮುಳುಗಿಸಿಟ್ಟರೂ ಏನೂ ಆಗುವುದಿಲ್ಲ. ವಾಚಿಗೆ ಬಳಸಲಾಗುವ ಬಂಗಾರವನ್ನು ಬೇರೆಡೆಯಿಂದ ತರುವುದಿಲ್ಲ. ಅದನ್ನು ತನ್ನ ಎರಕಗಾರದಲ್ಲಿಯೇ ತಯಾರಿಸುತ್ತದೆ. ಜಗತ್ತಿನಲ್ಲಿ ರೋಲೆಕ್ಸ್ ಮಾತ್ರ ತನ್ನ ಬಂಗಾರವನ್ನು ತಾನೇ ತಯಾರಿಸುತ್ತದೆ.

ಒಮ್ಮೆ ತಯಾರಾದ ವಾಚು ಯಾವುದೇ ಕಾರಣಕ್ಕೂ ದೋಷಪೂರಿತವಾಗಿರಲು ಸಾಧ್ಯವೇ ಇಲ್ಲ. ಖರೀದಿಸಿದ ನಂತರ ಮಷೀನಿನಲ್ಲಿ ದೋಷ ಕಂಡು ಬಂದರೆ ಅದನ್ನು ರಿಪೇರಿ ಮಾಡಿಕೊಡುವ ಬದಲು ಹೊಸ ವಾಚನ್ನೇ ಕೊಡಲಾಗುತ್ತದೆ. ಹತ್ತು ಲಕ್ಷ ವಾಚುಗಳ ಪೈಕಿ ಒಂದು ವಾಚಿನಲ್ಲಿ ದೋಷ ಕಾಣಿಸಿಕೊಳ್ಳಬಹುದು. ಇದನ್ನೂ ಕಂಪನಿ ಗಂಭೀರವಾಗಿ ಪರಿಗಣಿಸುತ್ತದೆ. ಅದಕ್ಕೆ ಕಾರಣರಾದ ಸಿಬ್ಬಂದಿ ಮೇಲೆ ಕ್ರಮ ಜರುಗಿಸುತ್ತದೆ. ರೋಲೆಕ್ಸ್ ವಾಚಿನ ಕ್ರಿಸ್ಟಲ್ ಗಾಜಿನ ಮೇಲೆ ಒಂದು ಹನಿ ನೀರನ್ನಿಟ್ಟಾಗ, ಅದರ ಆಪ್ಟಿಕ್ ಸೆನ್ಸರ್ ಘನೀಕರಣ (condensation) ಸೂಚನೆಯನ್ನು ನೀಡಿದರೂ ವಾಚನ್ನು ದೋಷಪೂರಿತ ಎಂದು ಭಾವಿಸಲಾಗುತ್ತದೆ.

ಒಂದು ವಾಚನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಲು ಯಾವುದೇ ಕಾಲಮಿತಿ ಇಲ್ಲ. ಸಿಬ್ಬಂದಿ ಮೇಲೆ ಅನಗತ್ಯ ಒತ್ತಡ ಹೇರಿದರೆ ಗುಣಮಟ್ಟ ಕೆಡಿಸಬಹುದೆಂದು ಅವರಿಗೆ ಸಾಕಷ್ಟು ಕಾಲಾವಕಾಶ ನೀಡಲಾಗುತ್ತದೆ. ಒಂದು ವಾಚು ನಿರ್ಮಾಣಕ್ಕೆ ವರ್ಷಗಟ್ಟಲೆ ಸಮಯ ತೆಗೆದುಕೊಳ್ಳುವುದು ಆ ಕಾರಣಕ್ಕೆ. ಪರಿಣತಿ, ನೈಪುಣ್ಯ, ಅತಿ ಶ್ರೇಷ್ಠ ಗುಣಮಟ್ಟ, ಪರಿಪೂರ್ಣತೆ, ಗರಿಷ್ಠ ಗ್ರಾಹಕ ಸಂತೃಪ್ತಿ ಕಾಪಾಡುವುದು ಸಾಧ್ಯವಾಗಿದ್ದರೆ ಅದಕ್ಕೆ ಕಾರಣ ಇವೇ.

ಖ್ಯಾತ ಮುಳುಗು ತಜ್ಞ ಜೇಮ್ಸ್ ಕ್ಯಾಮೆರೋನ್ ಡೀಪ್ ಸೀ ಚಾಲೆಂಜ್‌ನಲ್ಲಿ ಭಾಗವಹಿಸಿದಾಗ ಆತ ರೋಲೆಕ್ಸ್ ವಾಚನ್ನು ಧರಿಸಿದ್ದ. ಆತ ಸುಮಾರು ಮೂವತ್ತೊಂಬತ್ತು ಸಾವಿರ ಅಡಿ (ಹನ್ನೆರಡು ಸಾವಿರ ಮೀಟರ್) ಆಳದವರೆಗೆ ಮುಳುಗು ಹಾಕಿ ಸುಮಾರು ಏಳು ಗಂಟೆಗಳ ಕಾಲ ಈಜಿದ. ಆ ಸಂದರ್ಭದಲ್ಲಿ ಆತ ರೋಲೆಕ್ಸ್ ವಾಚನ್ನು ಧರಿಸಿದ್ದ. ರೋಲೆಕ್ಸ್ ತಂತ್ರಜ್ಞಾನಕ್ಕೆ ಇದು ಅತ್ಯುತ್ತಮ ನಿದರ್ಶನ. ವಾಚು ಅತ್ಯಂತ ಕರಾರುವಾಕ್ಕಾಗಿ ಕಾರ್ಯನಿರ್ವಹಿಸಿತು. ಸಾಮಾನ್ಯ ವಾಚುಗಳು ಮುನ್ನೂರು ಅಡಿ ಆಳದವರೆಗಿನ ಒತ್ತಡವನ್ನು ತಾಳಿದರೆ, ರೋಲೆಕ್ಸ್ ನಲವತ್ತು ಸಾವಿರ ಅಡಿ ಆಳದ ಒತ್ತಡವನ್ನು ತಾಳುತ್ತದೆ. ಅಂದರೆ ರೋಲೆಕ್ಸ್ ವಾಚಿನ ಗಟ್ಟಿಮುಟ್ಟುತನ ಯಾವ ದರ್ಜೆಯದಿರಬಹುದು ಎಂಬುದನ್ನು ಊಹಿಸಬಹುದು.

ಖ್ಯಾತ ಟೆನಿಸ್ ಆಟಗಾರ ರೋಜರ್ ಫೆಡರರ್ ನೋಡಿದಾಗೆಲ್ಲ ನನ್ನ ಕಣ್ಣ ಮುಂದೆ ಬರುವುದು ರೋಲೆಕ್ಸ್ ವಾಚ್. ರೋಲೆಕ್ಸ್ ವಾಚನ್ನು ನೋಡಿದಾಗ ಆತನೂ ನೆನಪಾಗುತ್ತಾನೆ. ಅಷ್ಟರಮಟ್ಟಿಗೆ ಅವರಿಬ್ಬರ ಇಮೇಜ್ ಒಂದರಲ್ಲೊಂದು ಮಿಳಿತವಾಗಿದೆ. ಸುಮಾರು ಇಪ್ಪತ್ತು ಅಂತಾರಾಷ್ಟ್ರೀಯ ಟೈಟಲ್ಲುಗಳನ್ನು (Grand Slam) ಮುಡಿಗೇರಿಸಿಕೊಂಡಿರುವ ಆತ ಕಳೆದ ಹನ್ನೆರಡು ವರ್ಷಗಳಿಂದ ರೋಲೆಕ್ಸ್ ಬ್ರಾಂಡ್ ಅಂಬಾಸಿಡರ್. ಹತ್ತು ವರ್ಷಗಳ ಕಾಲ ಆತ ಬ್ರಾಂಡ್ ಅಂಬಾಸಿಡರ್ ಆಗಿ ಕರಾರಿಗೆ ಒಪ್ಪಿದಾಗ ರೋಲೆಕ್ಸ್ ಕಂಪನಿ ಅವನಿಗೆ 150 ಲಕ್ಷ ಡಾಲರ್ ಹಣವನ್ನು ನೀಡಿತ್ತು. ಸಾಮಾನ್ಯವಾಗಿ ಯಾವ ಕಂಪನಿಯೂ ಕ್ರೀಡಾಪಟುವಿನ ಜತೆ ಹತ್ತು ವರ್ಷಗಳ ಒಪ್ಪಂದಕ್ಕೆ ಸಹಿ ಹಾಕುವುದಿಲ್ಲ. ಮುಂದಿನ ವರ್ಷವೇ ಆತ ಸೋತು ಮೂಲೆ ಗುಂಪಾದರೆ ಎಂಬ ಕಾರಣಕ್ಕೆ ಯಾರೂ ರಿಸ್ಕ್ ತೆಗೆದುಕೊಳ್ಳುವುದಿಲ್ಲ . ಆದರೆ ಫೆಡರರ್ ಅದೃಷ್ಟ ಚೆನ್ನಾಗಿದೆ ಅಂತ ಕಾಣುತ್ತದೆ. ರೋಲೆಕ್ಸ್ ಬ್ರಾಂಡ್ ಅಂಬಾಸಿಡರ್ ಆದ ನಂತರ ಆತನ ಗೆಲುವಿನ ನಾಗಾಲೋಟ ಮುಂದುವರಿಯುತ್ತಲೇ ಹೋಗುತ್ತಿದೆ.

ಫೆಡರರ್ ಮೈದಾನಕ್ಕೆ ಇಳಿದರೆ ಸಾಕು, ಆತ ಯಾವ ಮಾಡೆಲ್ ರೋಲೆಕ್ಸ್ ಧರಿಸಿ ಆಡುತ್ತಾನೆ ಎಂಬ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ರೋಲೆಕ್ಸ್ ಪ್ರಿಯರು ತಲೆ ಕೆಡಿಸಿಕೊಳ್ಳುತ್ತಾರೆ.

ಆತ ಪಂದ್ಯ ಆಡುವಾಗ ಒಂದು ವಾಚನ್ನು ಕಟ್ಟಿದರೆ, ಪಂದ್ಯ ಗೆದ್ದು ಟ್ರಾಫಿಯನ್ನು ಎತ್ತುವಾಗ ಮತ್ತೊಂದು ವಾಚನ್ನು ಕಟ್ಟುತ್ತಾನೆ. ಪ್ರತಿ ಸಲ ಫೆಡರರ್ ಮೈದಾನಕ್ಕೆ ಇಳಿದಾಗಲೂ ಈ ವಾಚಿನ ಮಾರಾಟ ಜಾಸ್ತಿ ಆಗುತ್ತದೆ. ಅದಕ್ಕಿಂತ ದೊಡ್ಡ ಬ್ಯುಸಿನೆಸ್ ಅಂದ್ರೆ, ಫೆಡರರ್ ಕಟ್ಟಿದ ವಾಚಿನ ಹರಾಜು. ವಿಂಬಲ್ಡನ್ ಪಂದ್ಯಾವಳಿಯಲ್ಲಿ ಆತ ಕಟ್ಟಿದ ರೋಲೆಕ್ಸ್ ವಾಚನ್ನು ಹರಾಜು ಹಾಕಿದರೆ, ಆ ವಾಚಿನ ಮೂಲ ಬೆಲೆಗಿಂತ ಮುನ್ನೂರು- ನಾನೂರು ಪಟ್ಟು ಹೆಚ್ಚಿನ ಬೆಲೆಗೆ ಅದು ಹರಾಜಾಗುತ್ತದೆ. ಆ ಹಣವೆಲ್ಲ ಚಾರಿಟಿಗೆ ನೀಡಲಾಗುತ್ತದೆ ಎಂಬುದು ಬೇರೆ ಮಾತು. ಈ ವಾಚಿನ ಬಗ್ಗೆ ಅಂಥ ಮೋಹ, ಹುಚ್ಚು ಬೆಳೆಸಿಕೊಂಡವರಿದ್ದಾರೆ.

ಕೆಲವು ವರ್ಷಗಳ ಹಿಂದೆ ನಾನು ಝುರಿಕ್‌ನಲ್ಲಿರುವ ಬೆಯೆರ್ ವಾಚ್ ಅಂಡ್ ಕ್ಲಾಕ್ ಮ್ಯೂಸಿಯಂಗೆ ಹೋಗಿದ್ದೆ. ಅಲ್ಲಿ ಸರ್ ಎಡಮಂಡ್ ಹಿಲರಿ ಮತ್ತು ತೇನ್‌ಸಿಂಗ್ ಹಿಮಾಲಯ ಪರ್ವತವನ್ನು ಏರುವಾಗ ಕಟ್ಟಿದ್ದ ರೋಲೆಕ್ಸ್ ವಾಚನ್ನು ನೋಡಿ ಆಶ್ಚರ್ಯವಾಯಿತು. ಜಗತ್ತಿನಲ್ಲಿಯೇ ಅತಿ ಎತ್ತರದ (ಇಪ್ಪತ್ತೊಂಬತ್ತು ಸಾವಿರ ಅಡಿ) ಪರ್ವತವನ್ನು ಏರುವಾಗ ರೋಲೆಕ್ಸ್ ಕಂಪನಿ ಅವರಿಗೆ ಈ ವಾಚನ್ನು ನೀಡಿತ್ತು. ಅಷ್ಟು ಎತ್ತರದ ಪ್ರದೇಶದಲ್ಲೂ ಈ ವಾಚು ಸಮರ್ಪಕವಾಗಿ ಕೆಲಸ ಮಾಡುತ್ತದೆ ಎಂಬುದನ್ನು ಸಾಬೀತುಪಡಿಸುವ ದೃಷ್ಟಿಯಿಂದ ಆ ವಾಚನ್ನು ನೀಡಲಾಗಿತ್ತು. ಕೆಲವು ವರ್ಷಗಳ ನಂತರ ತೇನ್‌ಸಿಂಗನಿಗೆ ಹಣಕಾಸಿನ ತೊಂದರೆ ಎದುರಾದಾಗ, ಆತ ಈ ವಾಚನ್ನು ಮಾರಲು ಮುಂದಾದ. ಸಾಮಾನ್ಯವಾಗಿ ಗಣ್ಯ ರೋಲೆಕ್ಸ್ ವಾರಸುದಾರರು ವಾಚನ್ನು ಮಾರುತ್ತಾರೆಂಬ ಸುದ್ದಿ ಗೊತ್ತಾದರೆ ಕಂಪನಿಯೇ ಖರೀದಿಸುತ್ತದೆ. ತೇನ್‌ಸಿಂಗನ ವಾಚನ್ನು ಕಂಪನಿಯೇ ಖರೀದಿಸಿ ಮ್ಯೂಸಿಯಂನಲ್ಲಿ ಇಟ್ಟಿದೆ. ಈ ವಾಚಿಗೆ ಇಂದು ಬೆಲೆ ಕಟ್ಟಲಾಗದು.

ನನ್ನ ಸ್ನೇಹಿತರೊಬ್ಬರಿದ್ದಾರೆ. ಅವರ ಬಳಿ ಕನಿಷ್ಠ ಇಪ್ಪತ್ತಾದರೂ ರೋಲೆಕ್ಸ್ ವಾಚುಗಳಿರಬಹುದು. ಈ ಕಾರಣಕ್ಕಾಗಿಯೇ ಅವರ ಹೆಸರನ್ನು ಹೇಳಿಲ್ಲ. ಏಕಕಾಲದಲ್ಲಿ ಅವರು ಕಟ್ಟುವುದು ಒಂದೇ ವಾಚಾದರೂ ಉಳಿದ ವಾಚುಗಳನ್ನು ವಿಶೇಷ ತಿರುಗಣೆಯ ಮೇಲಿಟ್ಟು, ಅವು ನಿಲ್ಲದಂತೆ ಕಾಳಜಿ ವಹಿಸಿದ್ದಾರೆ. ನಿಂತು ಹೋದ ರೋಲೆಕ್ಸ್ ವಾಚನ್ನು ನೋಡಲಾಗುವುದಿಲ್ಲ ಎನ್ನುವ ಅವರು ನಿತ್ಯವೂ ಅವೆಲ್ಲವನ್ನೂ ಒರೆಸಿ ಅತೀವ ಕಾಳಜಿ ಮೆರೆಯುತ್ತಾರೆ. ಈ ಜಗತ್ತಿನ ಅದ್ಭುತ ಸೃಷ್ಟಿಗಳಲ್ಲಿ ರೋಲೆಕ್ಸ್ ವಾಚಿಗೆ ಒಂದನೇ ಸ್ಥಾನ ಎಂಬುದು ಅವರ ಸಿಗ್ನೇಚರ್ ಸ್ಟೇಟ್ಮೆಂಟ್.

ಕಾರಿನಲ್ಲಿ ಬೆಂಜ್, ಆಡಿಯನ್ನು ಮೀರಿಸಿದ ಕಾರುಗಳಿರಬಹುದು. ಆದರೆ ಕಾರೆಂದರೆ ಬೆಂಜ್ ಎನ್ನುವ ಅಭಿಪ್ರಾಯ ಹಲವರದ್ದು. ಇದೇ ಮಾತು ರೋಲೆಕ್ಸ್‌ಗೂ ಅನ್ವಯ. ಅದೇನೇ ಇರಲಿ, ಪಕ್ಕದವರನ್ನು ಕೇಳಿದರೂ ಟೈಮ್ ಹೇಳುತ್ತಾರೆ. ಸಮಯ ತಿಳಿಯಲು ವಾಚನ್ನೇ ಕಟ್ಟಬೇಕಿಲ್ಲ. ಆದರೆ ರೋಲೆಕ್ಸ್ ಕಟ್ಟಿದರೆ ಪಕ್ಕದವರು ಸಹ ನಿಮ್ಮನ್ನು ದಿಟ್ಟಿಸದೇ ಹೋಗುವುದಿಲ್ಲ.

ಅನ್ನದ ಬದಲು ಚಿನ್ನದ ಬೆಲೆ ಇಳಿಕೆ!

ಅಭಿಮತ

ಮಂಜುನಾಥ ಭಂಡಾರಿ
vveditoped@gmail.com

ನರೇಂದ್ರ ಮೋದಿಯವರು ಪ್ರಧಾನಿಯಾದಾಗಿನಿಂದಲೂ ಅಚ್ಛೇ ದಿನಗಳ ಕನಸುಗಳನ್ನು ಜನರಲ್ಲಿ ಬಿತ್ತುತ್ತಲೇ ಇದ್ದಾರೆ. ಈ ಬಾರಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, 'ವಿಕಸಿತ ಭಾರತ' ಎಂಬ ಹಗಲುಗನಸನ್ನು ಬಿತ್ತಿ ತೀವ್ರ ನಿರಾಶಾದಾಯಕ ಬಜೆಟ್ ನೀಡಿದ್ದಾರೆ. ಕರ್ನಾಟಕದಿಂದಲೇ ಆಯ್ಕೆಯಾದ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ನಾಡಿನ ಪ್ರಗತಿಯ ಕುರಿತು ಎಳ್ಳಷ್ಟೂ ಆಲೋಚನೆ ಮಾಡಿದಂತಿಲ್ಲ. ವಿಕಸಿತ ಭಾರತವಿರಲಿ, ಈ ಬಜೆಟ್ ದೇಶದ ಮುಂದಿನ ಒಂದು ವರ್ಷದ ಬೇಡಿಕೆಗಳನ್ನು ಕೂಡ ಈಡೇರಿಸಲು ಅಶಕ್ಯವಾಗಿದೆ.

ಈ ಬಜೆಟ್‌ನಿಂದ ಕರ್ನಾಟಕವನ್ನು ಹೊರಗಿಟ್ಟಿರುವುದು ಎಲ್ಲಕ್ಕಿಂತ ಹೆಚ್ಚು ಬೇಸರ ತರಿಸಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಾಖಲೆಯ ಬಹುಮತ ಗಳಿಸಿದ ಕಾಂಗ್ರೆಸ್, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಜನಪರ ಆಡಳಿತ ನೀಡುತ್ತಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಸರಕಾರವೊಂದೇ ಎಲ್ಲವನ್ನೂ ನಿಭಾಯಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ತೆರಿಗೆ ಹಂಚಿಕೆ, ಅನುದಾನ ಮೊದಲಾದವುಗಳಲ್ಲಿ ಕೇಂದ್ರ ಸರಕಾರ ಸರಿಯಾದ ಬೆಂಬಲ, ಮಾರ್ಗದರ್ಶನ ನೀಡಿದರೆ ಮಾತ್ರ ಅಭಿವೃದ್ಧಿಯ ರಥವನ್ನು ಸರಾಗವಾಗಿ ಮುನ್ನಡೆಸಲು ಸಾಧ್ಯ. ಅಭಿವೃದ್ಧಿಯ ವಿಚಾರದಲ್ಲೂ ರಾಜಕೀಯ ದ್ವೇಷ ಸಾಧಿಸಿದ ಬಿಜೆಪಿ, ಅನುದಾನ ತಾರತಮ್ಯ, ಬರ ಪರಿಹಾರದಲ್ಲಿ ವಿಳಂಬ ಹಾಗೂ ವಂಚನೆ, ತೆರಿಗೆ ಹಂಚಿಕೆಯಲ್ಲಿ ಮೋಸ, ಅನ್ನಭಾಗ್ಯಕ್ಕೆ ಅಕ್ಕಿ ಸಿಗದಂತೆ ಮಾಡಿದ್ದು, ಹೀಗೆ ಅನೇಕ ಬಗೆಯಲ್ಲಿ ಜನರ ಹಿತವನ್ನು ಕಡೆಗಣಿಸಿ ರಾಜಕೀಯ ಮೇಲಾಟ ಮಾಡಿದೆ.

ಈ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಹಿಂದಿನಂತೆ ಬಹುಮತ ಬಾರದೇ ಇರಲು ಇದು ಕೂಡ ಕಾರಣ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಈಗ ಬೇರೆ ಪಕ್ಷಗಳನ್ನು ನಂಬಿಕೊಂಡು ಹೊಸದಾಗಿ ಸರಕಾರ ರಚಿಸಿದ ಮೇಲಾದರೂ ಪ್ರಧಾನಿ ನರೇಂದ್ರ ಮೋದಿ ತಮ್ಮ ಮನಸ್ಥಿತಿ ಬದಲಿಸಿಕೊಂಡು ಎಲ್ಲ ರಾಜ್ಯಗಳನ್ನು ಸಮಾನವಾಗಿ ಕೊಂಡೊಯ್ಯುತ್ತಾರೆ ಎಂದೇ ಅನೇಕರು ಭಾವಿಸಿದ್ದು, ಅದು ಈ ಬಜೆಟ್ ಮೂಲಕ ಹುಸಿಯಾಗಿದೆ.

ಇದು ದೇಶದ ಅಭಿವೃದ್ಧಿಯ ಬಜೆಟ್ ಅಲ್ಲ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೆ ಹೆದರಿ ಕೇಂದ್ರ ಸರಕಾರ ಈ ಬಜೆಟ್ ನೀಡಿದೆ. ಅಧಿಕಾರ ಕಳೆದುಕೊಳ್ಳುವ ಭಯದಿಂದ ಇಂತಹ ಬಜೆಟ್ ರೂಪಿಸಿದ್ದಾರೆ ಎನ್ನುವುದು ಇಲ್ಲಿ ಸ್ಪಷ್ಟ. ಇದರ ಪರಿಣಾಮ ಕನ್ನಡಿಗರಿಗೆ ಮತ್ತೊಮ್ಮೆ ಭಾರಿ ಅನ್ಯಾಯವಾಗಿದೆ. ಕಳೆದ ಬಾರಿ 25 ಸ್ಥಾನಗಳನ್ನು ಕೊಟ್ಟಿದ್ದ ಕರ್ನಾಟಕದ ಜನತೆ, ಈ ಬಾರಿ ಕೇವಲ 17 ಸ್ಥಾನಗಳನ್ನು ಕೊಟ್ಟಿದ್ದಾರೆ. ಜೆಡಿಎಸ್‌ನ ಸ್ಥಾನಗಳು ಸೇರಿದಂತೆ ಅದು ಒಟ್ಟು 19. ಆದರೂ ಕನ್ನಡಿಗರಿಗೆ ಅನುಕೂಲವಾಗುವ ಯಾವುದೇ ರೀತಿಯ ಅಂಶ ಇದರಲ್ಲಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಇದು 'ನಿತೀಶ್-ನಾಯ್ಡು ಬಜೆಟ್'.

ದಕ್ಷಿಣ ಭಾರತಕ್ಕೆ ಈ ಬಜೆಟ್, ತಾರತಮ್ಯದ ಹೊಸ ಧೋರಣೆಯನ್ನು ನೀಡಿದೆ. ಸಮಗ್ರ ದೃಷ್ಟಿಕೋನದಿಂದ ಎಲ್ಲ ರಾಜ್ಯಗಳನ್ನು ನೋಡಿಲ್ಲ. ತಮಿಳುನಾಡು, ಕರ್ನಾಟಕ, ಕೇರಳ-ಹೀಗೆ ಬಿಜೆಪಿ ಆಡಳಿತವಿಲ್ಲದ ರಾಜ್ಯಗಳನ್ನು ಕಡೆಗಣಿಸಲಾಗಿದೆ. ಪೂರ್ವ ಭಾಗದ ರಾಜ್ಯಗಳಿಗಾಗಿ 'ಪೂರ್ವೋದಯ' ಯೋಜನೆ ನೀಡಿ, ಅದರಲ್ಲಿ ದಕ್ಷಿಣದ ಆಂಧ್ರಪ್ರದೇಶವನ್ನು ಸೇರಿಸಲಾಗಿದೆ. ಇದೇ ರೀತಿ 'ದಕ್ಷಿಣೋದಯ' ಎಂಬ ಯೋಜನೆಯನ್ನು ತಂದು ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಿಗೆ ಹೊಸ ಯೋಜನೆ ನೀಡಬಹುದಿತ್ತು.

ಈ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಹೈದಾರಾಬಾದ್-ಬೆಂಗಳೂರು ಕೈಗಾರಿಕಾ ಕಾರಿಡಾರ್ ಸಿಕ್ಕಿರುವುದೇನೋ ನಿಜ. ಆದರೆ ಈ ಸರಕಾರದ ಹಿಂದಿನ ಅಭಿವೃದ್ಧಿ ಹೆಜ್ಜೆಗಳನ್ನು ನೋಡಿದರೆ ಇದು ಕೂಡ ಜಾರಿಯಾಗುವುದು ಅನುಮಾನ. ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ರು. ಅನುದಾನ ನೀಡುವುದಾಗಿ ಹಿಂದಿನ ಬಜೆಟ್‌ನಲ್ಲೇ ಹೇಳಿದ್ದರೂ, ಒಂದು ರುಪಾಯಿ ಕೂಡ ಈವರೆಗೆ ಸಿಕ್ಕಿಲ್ಲ. ಇದರ ಜತೆಗೆ ಇನ್ನಷ್ಟು ಯೋಜನೆಗಳಿಗೂ ಕೇಂದ್ರದಿಂದ ಅನುದಾನ ಬಂದಿಲ್ಲ. ಹೀಗೆಯೇ ಈ ಕಾರಿಡಾರ್ ಯೋಜನೆ ಕೇವಲ ಘೋಷಣೆಯಾಗಿಯೇ ಉಳಿಯಲಿದೆ ಎಂಬುದರಲ್ಲಿ ಅನುಮಾನ ಬೇಡ.

ಬಿಪಿಎಲ್ ವರ್ಗದ ಜನರು, ಕೆಳ ಮಧ್ಯಮ ವರ್ಗದ ಜನರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ವಿಶೇಷ ಯೋಜನೆಗಳು ಸಿಕ್ಕಿಲ್ಲ. ಕೃಷಿ ವಿಚಾರದಲ್ಲಿ ಕೇಂದ್ರ ಸರಕಾರ ಹಿಂದಿನಿಂದಲೂ ಪ್ರಗತಿಗೆ ವಿರುದ್ಧವಾಗಿ ನಡೆಯುತ್ತಿದೆ. ಕನಿಷ್ಠ ಬೆಂಬಲ ಬೆಲೆ ಕಾಯಿದೆಯನ್ನು ರೂಪಿಸುವಂತೆ ರೈತರು ಬಹಳ ವರ್ಷಗಳಿಂದ ಒತ್ತಾಯಿಸುತ್ತಿದ್ದಾರೆ. ಈ ಬಗ್ಗೆ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪವಿಲ್ಲ.

ನಿರುದ್ಯೋಗಿಗಳ ಸಮಸ್ಯೆಯ ಕಡೆಗೆ ಗಮನಹರಿಸಬೇಕಿರುವುದು ಸರಕಾರದ ಪ್ರಮುಖ ಹೊಣೆಗಾರಿಕೆ. ಕಾಂಗ್ರೆಸ್ ಸರಕಾರ ನಿರುದ್ಯೋಗಿಗಳಿಗಾಗಿ ಯುವನಿಧಿ ಜಾರಿ ಮಾಡುವುದರ ಜತೆಗೆ ಉದ್ಯೋಗಾವಕಾಶ ಸೃಷ್ಟಿಸುತ್ತಿದೆ. ಇಂತಹ ಬಲವಾದ ವಿಶೇಷ ಯೋಜನೆಯನ್ನು ತರಲು ಕೇಂದ್ರ ಸರಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ ಎಂಬುದು ಬೇಸರ ತಂದಿದೆ.

ಮಹಾದಾಯಿ, ಎತ್ತಿನಹೊಳೆ, ಮೇಕೆದಾಟು, ಕೃಷ್ಣಾ ಮೇಲ್ದಂಡೆ ಹೀಗೆ ಅನೇಕ ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪ ಮಾಡುವಷ್ಟು ಕಿಂಚಿತ್ತು ಕಾಳಜಿಯನ್ನೂ ಕೇಂದ್ರ ಸರಕಾರ ತೋರಿಲ್ಲ. ಕೋಲ್ಕತ್ತಾ, ಚೆನ್ನೈ, ಮುಂಬೈಗಿಂತಲೂ ಬೆಂಗಳೂರು ಐಟಿ ಹಬ್ ಆಗಿ ಬೆಳೆದಿದೆ. ಈ ಸಿಲಿಕಾನ್ ವ್ಯಾಲಿಯಿಂದ ಕೇಂದ್ರ ಸರಕಾರ ಅತಿ ಹೆಚ್ಚು ತೆರಿಗೆ ಪಡೆಯುತ್ತಿದೆ. ಹೆಚ್ಚು ತೆರಿಗೆ ನೀಡುವ ದೊಡ್ಡ ರಾಜಧಾನಿಯೂ ಬೆಂಗಳೂರೇ. ಆದರೂ ರಾಜಕೀಯ ದೃಷ್ಟಿಯಿಂದ ಈ ಮಹಾನಗರವನ್ನು ಬಜೆಟ್‌ನಲ್ಲಿ ಕಡೆಗಣಿಸಲಾಗಿದೆ. ಬೆಂಗಳೂರಿಗೆ ಪೆರಿಫೆರಲ್ ರಿಂಗ್ ರಸ್ತೆ, ಹೊರ ವರ್ತುಲ ರೈಲು ಸೇರಿ ಇನ್ಯಾವುದೇ ರೀತಿಯ ಅಭಿವೃದ್ಧಿ ಯೋಜನೆಗಳನ್ನು ಪರಿಗಣನೆಗೂ ತೆಗೆದುಕೊಂಡಿಲ್ಲ, ರಾಜಧಾನಿಯ ಅಭಿವೃದ್ಧಿಗೆ 11,485 ಕೋಟಿ ರು. ನೀಡುವಂತೆ ರಾಜ್ಯ ಸರಕಾರ ಮನವಿ ಮಾಡಿತ್ತು. ಯಥಾಪ್ರಕಾರ ಈ ಮನವಿಗೆ ಯಾವುದೇ ಸ್ಪಂದನೆ ಸಿಕ್ಕಿಲ್ಲ.

ಅನ್ನದ ಬದಲು ಚಿನ್ನದ ಬೆಲೆ ಇಳಿಕೆ!

ಬೆಲೆ ಏರಿಕೆಗೂ ಎನ್‌ಡಿಎಗೂ ಅವಿನಾಭಾವ ಸಂಬಂಧವಿದೆ. ಜನಸಾಮಾನ್ಯರು ಪ್ರತಿ ದಿನ ಬಳಸುವ ವಸ್ತುಗಳ ದರವನ್ನು ಕಡಿಮೆ ಮಾಡುವ ಭರವಸೆಯನ್ನು ಈ ಬಜೆಟ್ ನೀಡಿಲ್ಲ. ಅನ್ನದ ಬದಲು ಚಿನ್ನದ ಬೆಲೆ ಕಡಿಮೆ ಮಾಡಿದ್ದಾರೆ. ದಿನಬಳಕೆಯ ವಸ್ತುಗಳಾದ ಬೇಳೆಕಾಳು, ಎಣ್ಣೆ ಮೊದಲಾದವುಗಳ ಬೆಲೆ ಗಗನಕ್ಕೆ ಮುಟ್ಟಿದೆ. ಜನರಿಗೆ ಸಿಲಿಂಡರ್ ನೀಡಿದ್ದೇ ನಾವು ಎಂದು ಹೇಳಿಕೊಳ್ಳುವವರು ಅಡುಗೆ ಅನಿಲದ ದರವನ್ನು ಇಳಿಸಿ ಜನರಿಗೆ ನೆರವಾಗುವ ಬಗ್ಗೆ ಚಿಂತನೆ ನಡೆಸಿಲ್ಲ. ಇವುಗಳ ಬಗ್ಗೆ ಗಮನಹರಿಸದೆ ಚಿನ್ನದ ಬೆಲೆ ಕಡಿಮೆ ಮಾಡಿರುವುದರಿಂದ ಅಂತಹ ಪ್ರಯೋಜನವಾಗಿಲ್ಲ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಈ ರಾಜ್ಯದಿಂದ ಐವರು ಕೇಂದ್ರ ಸರಕಾರದಲ್ಲಿ ಸಚಿವರಾಗಿದ್ದಾರೆ. ಈ ಒಬ್ಬೊಬ್ಬ ಸಚಿವರು ಒಂದೊಂದು ವಿಶೇಷ ಯೋಜನೆಗಳಿಗಾಗಿ ಅಥವಾ ಅನುದಾನಕ್ಕೆ ಮನವಿ ಮಾಡಿ ರಾಜ್ಯಕ್ಕೆ ಕೊಡುಗೆ ತರಬಹುದಿತ್ತು. ಅಂತಹ ಯಾವುದೇ ಪ್ರಯತ್ನ ನಡೆದಿಲ್ಲ. ಅಂತೂ ತಾರತಮ್ಯ ಎಂಬ ಧೋರಣೆ ಮತ್ತೊಮ್ಮೆ ಈ ಬಜೆಟ್‌ನಲ್ಲಿ ಪ್ರತಿಧ್ವನಿಸಿದೆ.

(ಲೇಖಕರು: ಶಾಸಕರು ಮತ್ತು ಕೆಪಿಸಿಸಿ ಕಾರ್ಯಾಧ್ಯಕ್ಷ)

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಆರ್ಥಿಕ ಸಂತುಲಿತ ಮುಂಗಡಪತ್ರ

ದೇಶದ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ತಮ್ಮ 7ನೇ ಹಣಕಾಸು ಆಯವ್ಯಯವನ್ನು ಮಂಡಿಸಿದರು. ಈ ಬಜೆಟ್ ಸಾಮಾಜಿಕ ನ್ಯಾಯ ಮತ್ತು ಭದ್ರತೆಯನ್ನು ಒದಗಿಸುವಲ್ಲಿ ದಾಪುಗಾಲು ಇಟ್ಟಿದೆ ಎಂದರೆ ತಪ್ಪಾಗಲಾರದು. ಪ್ರಸ್ತುತ ವರ್ಷದ ಆಯವ್ಯಯದ ಗಾತ್ರ 48.21 ಲಕ್ಷ ಕೋಟಿ ರುಪಾಯಿ. ಈ ಬಜೆಟ್ ಆರ್ಥಿಕ ದೃಷ್ಟಿಯಿಂದ ಉತ್ತಮವಾದ ಹಾಗೂ ಸಾಮಾಜದ ಮಧ್ಯಮ ವರ್ಗದ ಜನರ ಕಲ್ಯಾಣಕ್ಕೆ ಅನೂಕೂಲಕರ ಆಯವ್ಯಯವಾಗಿದೆ, ಇಂದಿನ ಆಯವ್ಯಯವನ್ನು ಪ್ರಮುಖವಾಗಿ ನಾಲ್ಕೂ ಅಂಶಗಳಾದ ಉದ್ಯೋಗ, ಕೌಶ್ಯಲ್ಯಗಳು, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಹಾಗೂ ಮಧ್ಯಮ ವರ್ಗಗಳು ಇವುಗಳ ಆಧಾರದ ಮೇಲೆ ಆಯವ್ಯಯವನ್ನು ಹಂಚಲಾಗಿದೆ. ಮತ್ತು ಆರ್ಥಿಕತೆಯ ಪ್ರಾಥಮಿಕ ವಲಯವಾದ ಕೃಷಿಗೆ 1.52 ಲಕ್ಷ ಕೋಟಿ ರೂಪಾಯಿ ಮೀಸಲಿಡಲಾಗಿದೆ ಮತ್ತು ಕೃಷಿ ಸಂಶೋಧನೆ ಹಾಗೂ ನೈಸರ್ಗಿಕ ಕೃಷಿಗೆ ಉತ್ತೇಜನ ನೀಡಲಾಗಿದೆ. ಶಿಕ್ಷಣಕ್ಕೆ 1.48 ಲಕ್ಷ ಕೋಟಿ ರುಪಾಯಿ ಮೀಸಲಿಡಲಾಗಿದೆ. ಮುಂದಿನ 5 ವರ್ಷಗಳಲ್ಲಿ 4.1 ಕೋಟಿ ಯುವಕರನ್ನು ಕೇಂದ್ರೀಕರಿಸಲು 5 ಯೋಜನೆಗಳನ್ನು ಜಾರಿಗೆ ತರಲು 2 ಲಕ್ಷ ಕೋಟಿ ರುಪಾಯಿ ಮೀಸಲಿಡಲಾಗಿದೆ. ಹಾಗೂ ಸಣ್ಣ ಉದ್ದಿಮೆ ದಾರರಿಗೆ ಮುದ್ರಾ ಯೋಜನೆಯಡಿ ಸಾಲವನ್ನು 10 ರಿಂದ 20 ಲಕ್ಷಕ್ಕೆ ಏರಿಕೆ ಮಾಡಿ ಉದ್ದಿಮೆದಾರಿಕೆಗೆ ಅನುಕೂಲ ಮಾಡಿದೆ. ಪಿಎಮ್ ಆವಾಸ್ ಯೋಜನೆ ಅಡಿ 3 ಕೋಟಿ ಹೊಸ ಮನೆಗಳ ನಿರ್ಮಾಣಕ್ಕೆ ಅಡಿಗಲ್ಲಾಗಿದೆ. ಮತ್ತು ಪ್ರಧಾನ ಮಂತ್ರಿ ಸೂರ್ಯಗೃಹ ಯೋಜನೆ ಅಡಿ 1 ಕೋಟಿ ಮನೆಗಳಿಗೆ 300 ಯುನಿಟ್ ಉಚಿತ ವಿದ್ಯುತ್ ನೀಡಲಾಗಿದೆ. ಹಾಗೂ ಪ್ರವಾಸೋದ್ಯಮಕ್ಕೂ ಉತ್ತಮ ಒಲವು ನೀಡಲಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಈ ಆಯವ್ಯಯವು ವಿಕಸಿತ್ ಭಾರತ್ ಕೇಂದ್ರೀಕರಿಸಿ ಹಾಗೂ ಸಾಮಾಜದ ಎಲ್ಲ ಸಮುದಾಯಗಳಲ್ಲಿನ ಕಟ್ಟಕಡೆಯ ಜನರನ್ನೂ ಮೇಲೆತ್ತುವ ಜನಪರ ಮತ್ತು ಸಮತೋಲನದ ಆಯವ್ಯಯ ಇದಾಗಿದೆ.

-ಅನಂತ್ ಪೂಜಾರಿ ಧಾರವಾಡ

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ನಾಕ್

● **ಸ್ವಾತಿ (ಇಮೇಲ್ ಮೂಲಕ)**
ಭಟ್ರೇ, ಹೆಂಡತಿ ಗಂಡನ ಜತೆ ಬಹಳ ವರ್ಷ ದಾಂಪತ್ಯ ನಡೆಸಿದರೆ ಅದು ಹೆಂಡತಿಯ ಹೆಚ್ಚುಗಾರಿಕೆಯಂತೆ, ನಿಜವಾ?
- ಇಲ್ಲ, ಅದು ಗಂಡನ ಸಹನಾ ಶಕ್ತಿ!

● **ಕಮಲಾಕರ ಪತ್ತಲಮನಿ, ಧಾರವಾಡ**
ಭಟ್ರೇ, ಬರಹ ಮತ್ತು ಬದುಕು ಒಂದೇ ಇರಬೇಕಾ ?
- ಇಲ್ಲದಿದ್ದರೆ, 'ನಿಮ್ಮ ಗಂಡನ ಕುಡಿತದ ಚಟ ಬಿಡಿಸುವುದು ಹೇಗೆ?' ಎಂಬ ಪುಸ್ತಕ ಬರೆದವ ಸದಾ ಕಂಠಮಟ ಕುಡಿದೇ ಇದ್ದಂತಾಗುತ್ತದೆ !

● **ಉಮೇಶ್ ಎಂ. ಸಿರಾ, ರಾಮನಗರ**
ಭಟ್ರೇ, ನನ್ನ ಹೆಂಡ್ತಿ ನನ್ನನ್ನು ಜೀನಿಯಸ್ ಅಂತ ಕರೆದರೆ ಏನರ್ಥ?
- ಸದ್ಯದಲ್ಲಿಯೇ ಏನೋ ಅಪಾಯ ಕಾದಿದೆ ಎಂದರ್ಥ!

● **ನಿಂಗರಾಜು ಆರ್., (ಇಮೇಲ್ ಮೂಲಕ)**
ಭಟ್ರೇ, ಹುಟ್ಟುವ ಮಗು ನನ್ನ ಥರಾನೇ ಇರಬೇಕು ಅಂತ ಇಲ್ಲೊಬ್ಬಳು ಹರಕೆ ಹೊತ್ತಿದ್ದಾಳಲ್ಲ?
- ಹುಟ್ಟಿಸಿದವರ ಐಡೆಂಟಿಟಿ ಗೊತ್ತಾಗದಿರಲಿ ಎಂಬ ದೂರಾಲೋಚನೆ!

● **ಅಮಾಸೆ ಸುಬ್ಬು,ಮೈಸೂರು**
ಹೆಣ್ಣಿನ ಕೊರಳಿಗೆ ಮೂರು ಗಂಟಿನ ತಾಳಿ ಕಟ್ಟಲು ಪುರೋಹಿತರ ಹೆಲ್ಪ್ ಬಯಸುವ ಗಂಡಸರ ಬಗ್ಗೆ ಏನಂತೀರಾ?
-ಕೆಲವರು ಅಪರಾಧ ಮಾಡುವಾಗಲೂ ಸಾಕ್ಷಿಗಳನ್ನು ಹತ್ತಿರ ಇಟ್ಟುಕೊಳ್ಳುತ್ತಾರೆ!

● **ಪುಂಗನೂರು ಪೂರ್ಣಯ್ಯ, (ಇಮೇಲ್ ಮೂಲಕ)**
ಮೊದಲಿಗೆ ಗುದ್ದು ಕೊಟ್ಟವಳು, ಕೊನೆಗೆ ಮುದ್ದು ಕೊಟ್ಟೇ ಕೊಡುತ್ತಾಳೆ ಎನ್ನುವ ಆಶಾ ಭಾವನೆ ಇಟ್ಟುಕೊಳ್ಳಲೇ?
- ಕೊಡಲಿ ಬಿಡಲಿ, ಭಾವನೆ ಇಟ್ಟುಕೊಳ್ಳುವ ಬದಲು ಆಶಾಳನ್ನು ಇಟ್ಟುಕೊಳ್ಳಿ!

● **ನಿಜಗುಣ ಭರತ, (ಇಮೇಲ್ ಮೂಲಕ)**
ಭಟ್ರೇ, ಪುಸ್ತಕಗಳ ಸನಿಹ ಇದ್ರೆ ಸಾಕು, ಬುದ್ಧಿವಂತರಾಗುವಂತಿದ್ದರೆ?
- ಲೈಬ್ರರಿಯನ್‌ಗಳಷ್ಟು ಬುದ್ಧಿವಂತರು ಯಾರೂ ಇರುತ್ತಿರಲಿಲ್ಲ!

● **ರಾಮು ಮಲ್ಲಿಕಟ್ಟಿ, (ಇಮೇಲ್ ಮೂಲಕ)**
ಭಟ್ರೇ, ಗಡ್ಡ ಬೆಳ್ಳಗಾದರೆ ಏನರ್ಥ?
- ಬುದ್ಧಿ ಬಂದಂತೆ ಎಂಬ ನಿರ್ಧಾರಕ್ಕೆ ಮಾತ್ರ ಬರಬೇಡ!

● **ಅನಂತ ಪದ್ಮನಾಭ, (ಇಮೇಲ್ ಮೂಲಕ)**
ವಿಧಾನ ಸೌಧದ ಪಕ್ಕದಲ್ಲೇ ಲೋಕಾಯುಕ್ತ ಕಚೇರಿ, ಸರಿಯೇ ಭಟ್ರೇ?
- ತೀರಾ ಪರಪ್ಪನ ಅಗ್ರಹಾರದ ಪಕ್ಕದಲ್ಲಿರಬೇಕಿತ್ತು ಅಂತೀರಾ?!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ವ್ಯರ್ಥ ಪ್ರಯತ್ನ ಅಂದ್ರೆ ಏನು?
- ಬೊಕ್ಕ ತಲೆಯಲ್ಲಿ ಬೈತಲೆ ತೆಗೆಯೋದು!

ಮಳೆ, ಕೃತಕ ನೆರೆ ಸೃಷ್ಟಿಸುವ ನಿತ್ಯ ಅವಾಂತರಗಳು

ನಿತ್ಯ ತಮ್ಮ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸುವ ಪವರ್ ಮ್ಯಾನ್‌ಗಳ ಕರ್ತವ್ಯದ ಬಗ್ಗೆ ನಾವೆಂದಾದರೂ ಯೋಚಿಸಿದ್ದೇವೆಯೇ? ಇನ್ನೊಬ್ಬರ ಮನೆಯನ್ನು ಬೆಳಗುವ ಬೆಳಕಿನ ಯೋಧರೆಂದು ಕರೆಸಿಕೊಳ್ಳುವ ಅದೆಷ್ಟೋ ಪವರ್‌ಮ್ಯಾನ್‌ಗಳು ಪ್ರಾಣ ಕಳೆದುಕೊಂಡು ತಮ್ಮ ಮನೆಯ ದೀಪವನ್ನೇ ಆರಿಸಿಕೊಂಡವರಿದ್ದಾರೆ.

ವಿದ್ಯಮಾನ

ಆದರ್ಶ್ ಶೆಟ್ಟಿ ಉಪ್ಪಿನಂಗಡಿ
vveditoped@gmail.com

ರೈತರು ಹಾಗೂ ಜನಸಾಮಾನ್ಯರು ಕಾಲ ಕಾಲಕ್ಕೆ ಮಳೆ ಬೀಳದಿದ್ದರೆ ಆಕಾಶದ ಕಡೆಗೆ ಮುಖ ಮಾಡುವುದು, ಮಳೆಗಾಗಿ ಪ್ರಾರ್ಥನೆ ಮಾಡುವುದು,ಬಾರಿ ಪ್ರಮಾಣದ ಕುಡಿಯುವ ನೀರಿನ ಅಭಾವ ಉಂಟಾದಾಗ ದೇವರ ಮೊರೆ ಹೋಗುವುದು, ಕಪ್ಪೆಗೆ ಮದುವೆ ಮಾಡಿಸುವುದು, ಕತ್ತೆಗೆ ಪೂಜೆ ಮಾಡುವಂತಹ ಸಂಪ್ರದಾಯವನ್ನು ಕೆಲವು ಭಾಗಗಳಲ್ಲಿ ಹಲವಾರು ವರ್ಷಗಳಿಂದ ಕಾಣುತ್ತಿದ್ದೇವೆ. ಇನ್ನು ಕೆಲ ದೇವಾಲಯಗಳಲ್ಲಿ ಸಿಯಾಳಾಭಿಷೇಕ, ಪೂಜೆ, ಹೋಮ ಹವನಗಳನ್ನು ಕೂಡ ಅಲ್ಲಿನ ಆಡಳಿತ ಮಂಡಳಿಗಳು ಮುಜರಾಯಿ ಇಲಾಖೆಯ ವತಿಯಿಂದ ನಡೆಸುವ ವಿದ್ಯಮಾನಗಳಿವೆ. ಈ ಪ್ರಕೃತಿದತ್ತವಾಗಿ ಶುದ್ಧ ಗಾಳಿ, ಕಾಲ ಕಾಲಕ್ಕೆ ಮಳೆ-ಬೆಳೆಯಾಗದಿರಲು ಭೂಮಿಯ ಮೇಲಿನ ಮಾನವ ನಿರ್ಮಿತ ಅನಾಚಾರಗಳು ಕೂಡ ಒಂದು ಕಾರಣವೆನ್ನಬಹುದು. ಈ ಬಾರಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಹಾಗೂ ದೇಶದ ವಿವಿಧ ಪ್ರದೇಶಗಳಲ್ಲಿ ವಾತಾವರಣ ಬಿಸಿಯೇರಿ ಕುಡಿಯುವ ನೀರಿಗಾಗಿ ಹಾಹಾಕಾರ ಎದ್ದಿರುವುದನ್ನು ಕಂಡಿದ್ದೇವೆ. ಕಳೆದ ಬಾರಿ ಮಳೆ ವಿಳಂಬವು ಕೂಡ ಈ ಬಾರಿಯ ಅವ್ಯವಸ್ಥೆಗೆ ಒಂದು ಕಾರಣವೆನ್ನಬಹುದು. ಈ ಬಾರಿ ಜನಸಾಮಾನ್ಯರ ಪ್ರಾರ್ಥನೆಯ ಫಲವೋ ಎಂಬಂತೆ ದೇಶವ್ಯಾಪಿ ಉತ್ತಮ ಮಳೆಯಾಗುತ್ತಿದೆ. ಕೆಲವೆಡೆ ಪ್ರವಾಹಗಳ ಅಬ್ಬರ ಕಂಡು ಬಂದಿದೆ.ಜಲಾಶಯಗಳು ತುಂಬಿ ತುಳುಕಿ, ಕೆರೆ, ಹಳ್ಳ, ನದಿಗಳು ತುಂಬಿ ಹರಿಯುತ್ತಿದೆ. ಕೃಷಿ ಚಟುವಟಿಕೆಗಳಿಗೆ ಪ್ರಮುಖವಾಗಿ ವ್ಯಾಪಕ ಮಳೆಯ ಪ್ರಮಾಣದಿಂದ ಕೆಲವು ಬೆಳೆ, ಬೇಸಾಯಗಳಿಗೆ ಲಾಭ ನಷ್ಟದ ಲೆಕ್ಕಾಚಾರವನ್ನು ರೈತಾಪಿ ವರ್ಗ ನಡೆಸುತ್ತಿದೆ. ಶಾಲಾ ಕಾಲೇಜುಗಳಿಗೆ ವಾರವಿಡೀ ರಜೆ ಘೋಷಣೆಯಾಗಿದೆ. ಗುಡ್ಡ ಬೆಟ್ಟಗಳು ಜರಿದು ರಾಷ್ಟ್ರೀಯ ಹೆದ್ದಾರಿ, ರಸ್ತೆಗಳು ಬಂದ್ ಆಗಿ ಪರ್ಯಾಯ ಮಾರ್ಗವನ್ನು ಅನುಸರಿಸಬೇಕಾದ ಪರಿಸ್ಥಿತಿ ಪ್ರಯಾಣಿಕರು, ವಾಹನ ಚಾಲಕರಿಗೆ ಎದುರಾಗಿದೆ. ವ್ಯಾಪಕ ಪ್ರಮಾಣದಲ್ಲಿ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿ, ಸಿಡಿಲಿನ ಆರ್ಭಟಕ್ಕೆ ವಿದ್ಯುತ್ ಸಂಚಾರ ವ್ಯತ್ಯಯವಾಗಿ ಪವರ್‌ಮ್ಯಾನ್‌ಗಳು ಹಗಲು ರಾತ್ರಿ ಕಾರ್ಯದ ಒತ್ತಡದಿಂದ ತಮ್ಮ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆರೋಗ್ಯ ಇಲಾಖೆಯ ಸಿಬ್ಬಂದಿ, ಆಶಾ ಕಾರ್ಯಕರ್ತರು ಮನೆಮನೆಗೆ ತೆರಳಿ ಡೆಂಘೀ, ಶೀತ, ಕಫ, ಕೆಮ್ಮು ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸುವುದರ ಜತೆಗೆ ಸ್ವಚ್ಛತೆಯ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ. ಡೆಂಘೀ ನಂತಹ ಜ್ವರ ಹಲವಾರು ಮಂದಿಯನ್ನು ಈಗಾಗಲೇ ಬಲಿ ಪಡೆದಿದೆ. ಸಾರ್ವಜನಿಕ ಆಸ್ಪತ್ರೆ, ಖಾಸಗಿ ಆಸ್ಪತ್ರೆ, ಕ್ಲಿನಿಕ್‌ಗಳು ರೋಗಿಗಳಿಂದ ತುಂಬಿ ಹೋಗಿವೆ. ಜನಸಾಮಾನ್ಯರು ಮಳೆ ಬಾರದೇ ಇದ್ದಾಗ ಯಾವ ರೀತಿ ದೇವರಲ್ಲಿ ಪ್ರಾರ್ಥನೆ ನಡೆಸುತ್ತಿದ್ದರೋ ಅದೇ ಜನಗಳು ಇತ್ತೀಚಿಗೆ ಸುರಿದ ನಿರಂತರ ಧಾರಾಕಾರ ಮಳೆಗೆ ಮನೆಯಿಂದ ಹೊರ ಬರಲಾಗುತ್ತಿಲ್ಲ, ಬಟ್ಟೆ ಒಣಗುತ್ತಿಲ್ಲ, ಮಕ್ಕಳಿಗೆ ಶಾಲೆ ಇಲ್ಲ, ಮಳೆ ಬೆಳೆಗೆ ಹಾನಿಯಾಗಿದೆ, ಸಾಂಕ್ರಾಮಿಕ ರೋಗಗಳ ಹಾವಳಿ, ವಿಪರೀತ ಚಳಿ ಎಂದೆಲ್ಲ ತಮ್ಮ ಪಾಡಿಗೆ ಗೊಣಗುವುದನ್ನು ಕೂಡ ನಮ್ಮ ಸುತ್ತ ಮುತ್ತ ಕಾಣುತ್ತೇವೆ.

ಮನುಷ್ಯ ಅಥವಾ ಜನಸಾಮಾನ್ಯರು ಈ ಭೂಮಿಯಲ್ಲಿ ತೃಪ್ತಿ, ಪರಿಪೂರ್ಣತೆ ಎಂಬುವುದನ್ನು ಆತ ಯಾವುದೇ ವಿಚಾರದಲ್ಲಿ ಹೊಂದಿರಲು ಅಸಾಧ್ಯ. ಎಷ್ಟೇ ವ್ಯವಸ್ಥೆ, ಸೌಕರ್ಯಗಳನ್ನು ಕಲ್ಪಿಸಿದರೂ ಆತ ಅದಕ್ಕೊಂದು ಕೊಂಕು ಮಾತನ್ನು ಆಡಿಯೇ ಆಡುತ್ತಾನೆ. ಜನರು ತಮ್ಮ ಮನೆಯಲ್ಲಿ ದಿನ ನಿತ್ಯ ಉರಿಯುವ ಬಲ್ಬ್, ತಿರುಗುವ ಫ್ಯಾನ್, ವಿದ್ಯುತ್‌ನಲ್ಲಿ ವ್ಯತ್ಯಯವಾದರೆ ಮೊತ್ತಮೊದಲು ಹಿಡಿಶಾಪ ಹಾಕುವುದು, ಗೊಣಗುವುದು ಕೆಇಬಿ ಅಥವಾ ಪವರ್‌ಮ್ಯಾನ್‌ಗಳಿಗೆ. ನಮ್ಮ ಸರಕಾರಿ ವ್ಯವಸ್ಥೆಗಳ ಮಧ್ಯೆ ದಿನ ನಿತ್ಯ ತಮ್ಮ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸುವ ಪವರ್ ಮ್ಯಾನ್‌ಗಳ ಕರ್ತವ್ಯದ ಬಗ್ಗೆ ನಾವೆಂದಾದರೂ ಯೋಚಿಸಿದ್ದೇವೆಯೇ? ಇಂಧನ ಇಲಾಖೆಯ ಪವರ್‌ಮ್ಯಾನ್‌ಗಳು ಧಾರಾಕಾರವಾಗಿ ಸುರಿಯುವ ಮಳೆಯಲ್ಲಿ ಉರುಳಿದ ಕಂಬಗಳು, ತುಂಡಾಗಿ ಬಿದ್ದ ಸರ್ವೀಸ್ ವಯರ್‌ಗಳು, ಸಿಡಿಲು ಬಡಿದ ಟ್ರಾನ್ಸ್‌ಫಾರ್ಮರ್‌ಗಳು ಹೀಗೆ ಸಾಲು ಸಾಲು ಸಮಸ್ಯೆಗಳನ್ನು ಹೊತ್ತು ರಾತ್ರಿ ಹಗಲು ಕರ್ತವ್ಯ ನಿರ್ವಹಿಸಬೇಕಾದ ಒತ್ತಡಕ್ಕೆ ಸಿಲುಕುತ್ತಾರೆ. ತಮ್ಮನ್ನು ಅವಲಂಭಿತರಾದ ಹೆಂಡತಿ ಮಕ್ಕಳು ತಂದೆ ತಾಯಂದಿರನ್ನು ಬಿಟ್ಟು ವಿದ್ಯುತ್ ಕಂಬದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗಲೇ ವಿದ್ಯುತ್ ಶಾಕ್ ತಗುಲಿ ಪ್ರಾಣ ಕಳೆದುಕೊಂಡ ಅದೆಷ್ಟೋ ಪವರ್‌ಮ್ಯಾನ್‌ಗಳನ್ನು ಕಂಡಿದ್ದೇವೆ. ಇನ್ನೊಬ್ಬರ ಮನೆಯನ್ನು ಬೆಳಗುವ ಬೆಳಕಿನ ಯೋಧರೆಂದು ಕರೆಸಿಕೊಳ್ಳುವ ಅದೆಷ್ಟೋ ಪವರ್‌ಮ್ಯಾನ್‌ಗಳು ಪ್ರಾಣ ಕಳೆದುಕೊಂಡು ತಮ್ಮ ಮನೆಯ ದೀಪವನ್ನೇ ಆರಿಸಿಕೊಂಡವರಿದ್ದಾರೆ. ತಮ್ಮ ಊರಿನಲ್ಲಿ ಒಂದು ಘಳಿಗೆ ವಿದ್ಯುತ್ ವ್ಯತ್ಯಯವಾದರೆ ಕೆಇಬಿ ಕಚೇರಿಗೆ ಸಾಲು ಸಾಲು ಫೋನ್ ಕರೆಗಳ ಸುರಿಮಳೆಯೇ ಬರುತ್ತದೆ. ಮಳೆಗಾಲದಲ್ಲಿ ಜೋರು ಗಾಳಿ, ಸಿಡಿಲಿನ ಆರ್ಭಟ ಉಂಟಾದರೆ ಸಾಕು ಪವರ್‌ಮ್ಯಾನ್ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳು ನಿದ್ದೆಗೆಟ್ಟು ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಇನ್ನು ರಾಜ್ಯದ ನಾನಾ ಭಾಗಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಕಾಮಗಾರಿಗಳು ಕೂಡ ಭರದಿಂದ ಸಾಗುತ್ತಿದೆ. ಭೂ ಸ್ವಾಧೀನ, ಫ್ಲೈ ಓವರ್, ಸೇತುವೆ, ತಡೆಗೋಡೆ ಎಂದೆಲ್ಲ ಈ ಕಾಮಗಾರಿಗಳು ಪೂರ್ಣಗೊಳ್ಳಲು ಸಾಧಾರಣ 4 ರಿಂದ 5 ವರ್ಷಗಳು ಬೇಕಾಗುತ್ತದೆ. ಇನ್ನು ಈ ಗುತ್ತಿಗೆ ಕಂಪನಿಗಳ ಅವೈಜ್ಞಾನಿಕ ಕಾಮಗಾರಿಗಳಿಂದಾಗಿ ವಿಶೇಷವಾಗಿ ಮಳೆಗಾಲದ ಸಮಯದಲ್ಲಿ ದಿನನಿತ್ಯ ಸಂಚರಿಸುವ ವಾಹನ ಸವಾರರು, ಪಾದಚಾರಿಗಳು, ಘನವಾಹನಗಳು ಬಹಳ ಸಂಕಷ್ಟಕ್ಕೆ ಸಿಲುಕುವ ಸ್ಥಿತಿಗಳು ನಿರ್ಮಾಣವಾಗಿದೆ.

ಬಿ.ಸಿ ರೋಡ್‌ನಿಂದ ಅಡ್ಡಹೊಳೆ, ಬಿ.ಸಿ ರೋಡ್‌ನಿಂದ ಚಾರ್ಮಾಡಿ, ಸಾಣೂರುನಿಂದ ಬಿಕರ್ನಕಟ್ಟೆ, ಕಾಸರಗೋಡಿನಿಂದ ಕೊಚ್ಚಿ ಹೀಗೆ ರಾಜ್ಯದ ಹಾಗೂ ಅಂತಾರಾಜ್ಯದ ವಿವಿಧ ಭಾಗಗಳ ರಾಷ್ಟ್ರೀಯ ಹೆದ್ದಾರಿಗಳು ಚತುಷ್ಪಥ ಕಾಮಗಾರಿಗಳ ಮೂಲಕ ಅಭಿವೃದ್ಧಿಯನ್ನು ಹೊಂದುತ್ತಿರುವುದು ಹೆಮ್ಮೆ ಪಡುವ ವಿಚಾರವೇ. ಆದರೆ ಗುತ್ತಿಗೆ ಕಂಪನಿಗಳು ಪ್ರಮುಖವಾಗಿ ತಮ್ಮ ಕೆಲಸ ಕಾರ್ಯಗಳಲ್ಲಿ ಮಳೆ ನೀರು ದೊಡ್ಡ ಪ್ರಮಾಣದಲ್ಲಿ ಹರಿದು ಹೋಗಲು ರಸ್ತೆಯ ಇಕ್ಕೆಲಗಳಲ್ಲಿ ವ್ಯವಸ್ಥೆಗಳನ್ನು ಕಲ್ಪಿಸದಿರುವುದು, ಅಗೆದು ಹಾಕಿದ ಅಗತ್ಯಕ್ಕಿಂತ ಹೆಚ್ಚಿನ ಮಣ್ಣುಗಳನ್ನು ಬೇರೆ ಜಾಗಕ್ಕೆ ಡಂಪ್ ಮಾಡದಿರುವುದು, ಗುಡ್ಡಗಳನ್ನು ಅಗೆದು ರಸ್ತೆ ನಿರ್ಮಿಸುವಾಗ ಜರೆಗಳು ಬೀಳದಂತೆ ತಡೆಗೋಡೆ ನಿರ್ಮಿಸದೇ ಅಸಡ್ಡೆ ತೋರುವುದರಿಂದ ಪ್ರಮುಖವಾಗಿ ಮಳೆ ನೀರು ಹರಿದು ಹೋಗದೆ ರಸ್ತೆಗಳಲ್ಲಿ ನಿಂತು ದ್ವೀಪದಂತಾಗಿ ರಸ್ತೆ ಸಂಚಾರ ಬ್ಲಾಕ್ ಆಗುವುದು, ರಸ್ತೆಗಳ ಕೆಸರು ಮಣ್ಣಿನಿಂದ ದ್ವಿಚಕ್ರ ವಾಹನ ಸವಾರರು ಜಾರಿ ಬೀಳುವುದು, ಪಾದಚಾರಿಗಳಿಗೆ ಕೆಸರು ಚೆಲ್ಲುವುದು, ವಾಹನಗಳು ಮಣ್ಣಿನಿಂದ ಆವರಿಸುವುದು, ಮಣ್ಣು ಜಾರಿ ರಸ್ತೆಗೆ ಬಿದ್ದು ಸಂಪರ್ಕ ಕಡಿದುಕೊಂಡು ಜನ ಜೀವನ ಅಸ್ತವ್ಯಸ್ತಗೊಳ್ಳುತ್ತದೆ. ಇನ್ನು ಪ್ರಯಾಣಿಕರಿಗೆ ರಾಜಧಾನಿ ಬೆಂಗಳೂರನ್ನು ಸಂಪರ್ಕಿಸುವ ಶಿರಾಡಿ ಘಾಟ್, ಶೃಂಗೇರಿ, ಕೊಪ್ಪ, ಚಿಕ್ಕಮಗಳೂರು ಮಲೆನಾಡನ್ನು ಸಂಪರ್ಕಿಸುವ ಚಾರ್ಮಾಡಿ ಘಾಟ್, ಸಾಂಸ್ಕೃತಿಕ ನಗರಿ ಮೈಸೂರು ಸಂಪರ್ಕಿಸುವ ಮಡಿಕೇರಿ ರಸ್ತೆಗಳಲ್ಲಿ ಗುಡ್ಡ ಕುಸಿತ ಬೆಟ್ಟ ಕುಸಿತದಿಂದಾಗಿ ರಸ್ತೆ ಸಂಚಾರ ಕಡಿತಗೊಂಡು ಪರ್ಯಾಯ ಮಾರ್ಗಗಳ ಮೂಲಕ ಸಂಚರಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಈ ಮೂರು ಮಾರ್ಗಗಳು ಕೂಡ ಮಳೆಗಾಲ ಸಂದರ್ಭದಲ್ಲಿ ಸಂಚಾರಕ್ಕೆ ನಿಘಂಟಿನ ರಸ್ತೆಗಳಲ್ಲ. ಇಲ್ಲಿ ವಿಪರೀತ ಮಳೆಗಾಲ ಸಂದರ್ಭದಲ್ಲಿ ಪ್ರಯಾಣಿಕರು ಘಾಟ್ ಸೆಕ್ಷನ್‌ನಲ್ಲಿ ದಿನವಿಡೀ ರಸ್ತೆ ಬ್ಲಾಕ್ ಆಗಿ ತಾವು ಬರುವ ವಾಹನಗಳಲ್ಲಿ ಮಹಿಳೆಯರು ಮಕ್ಕಳನ್ನು ಹೊತ್ತು ಅನ್ನ

ಆಹಾರವಿಲ್ಲದೆ ಸುಗಮ ಸಂಚಾರಕ್ಕೆ ಎದುರು ನೋಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ರಸ್ತೆ ಬ್ಲಾಕ್ ಹಿನ್ನೆಲೆಯಲ್ಲಿ ಮಂಗಳೂರು ಬೆಂಗಳೂರು ಹೆಚ್ಚುವರಿ ರೈಲು ಓಡಾಟ ವ್ಯವಸ್ಥೆಯನ್ನು ಇತ್ತೀಚಿಗೆ ಕಲ್ಪಿಸಲಾಗಿದೆ. ಇನ್ನು ಅವೈಜ್ಞಾನಿಕವಾಗಿ ಮನೆ ನಿರ್ಮಾಣ, ಕಂಪೌಂಡ್ ನಿರ್ಮಾಣದಿಂದ ಕಂಪೌಂಡ್ ಕುಸಿದು ಬಿದ್ದು ಮತ್ತು ಮನೆ ಕುಸಿದು ದಾರುಣವಾಗಿ ಹಲವಾರು ಮಂದಿ ಮೃತಪಟ್ಟ ಘಟನೆ ಈ ಬಾರಿಯ ಮಳೆಗೆ ಸಂಭವಿಸಿದೆ. ಅಂಕೋಲದ ಶೀರೂರು ಗುಡ್ಡ ಕುಸಿತ, ಬೆಳಗಾವಿ ನಿಪ್ಪಾಣಿಯಲ್ಲಿನ ಮನೆ ಕುಸಿತ, ಉಳ್ಳಾಲ ಮದನಿ ನಗರದಲ್ಲಿ ನಡೆದ ದುರಂತ ಹಾಗೂ ಈ ಹಿಂದೆ ಮಡಿಕೇರಿ ಕೊಡಗಿನಲ್ಲಿ ನಡೆದ ಬಹುದೊಡ್ಡ ಗುಡ್ಡ ಕುಸಿತ ಪ್ರಕರಣಗಳು ನಮ್ಮ ಕಣ್ಣ ಮುಂದಿವೆ.

ಬಾರಿ ಗಾಳಿ ಮಳೆಗೆ ವಿದ್ಯುತ್ ಕಂಬಗಳು ಧರೆಗುರುಳಿ, ವಿದ್ಯುತ್ ತಂತಿಗಳು ತುಂಡಾಗಿ ತಂತಿ ಸ್ಪರ್ಶಿಸಿ ಹಲವಾರು ಜೀವಗಳು ಹಾನಿಯಾಗಿವೆ. ದಾರಿ ಮಧ್ಯೆ ಸಂಚರಿಸುವ ಪಾದಚಾರಿಗಳು, ವಿದ್ಯಾರ್ಥಿಗಳು, ಪ್ರಾಣಿಗಳು ಕೂಡ ವಿದ್ಯುತ್ ಅವಘಡಕ್ಕೆ ಬಲಿಯಾದ ಘಟನೆಗಳು ವರದಿಯಾಗಿದೆ. ಕೆಲವೊಂದು ಪ್ರದೇಶದಲ್ಲಿ ಇಂತಹ ಅಪಾಯಕಾರಿ ವಿದ್ಯುತ್ ಕಂಬ, ತಂತಿಗಳು ಜೋತು ಬೀಳುವ ಸ್ಥಿತಿಯಲ್ಲಿದ್ದು ಸಂಬಂಧಪಟ್ಟವರಿಗೆ ತಿಳಿಸಿದರೂ ಅಧಿಕಾರಿಗಳ ಬೇಜವಾಬ್ದಾರಿಯಿಂದಲೂ ಕೆಲವೆಡೆ ದುರ್ಘಟನೆ ನಡೆದಿವೆ. ಮಳೆಗಾಲ ಪೂರ್ವದಲ್ಲಿ ಅಧಿಕಾರಿಗಳು ಸಭೆ ನಡೆಸಿ ನೆರೆ ಹಾಗೂ ಮಳೆ ಮುಂಜಾಗ್ರತಾ ಕ್ರಮಗಳನ್ನು ಪೂರ್ವಭಾವಿಯಾಗಿ ಕೈಗೊಳ್ಳುವಲ್ಲಿ ಅಸಡ್ಡೆ ತೋರುವುದು ಒಂದು ಭಾಗವಾದರೆ ಇನ್ನು ತಗ್ಗು ಪ್ರದೇಶಗಳಲ್ಲಿ ಹಲವಾರು ಮನೆಗಳಿಗೆ ನೀರು ನುಗ್ಗಿ ಅಲ್ಲಿನ ನಿವಾಸಿಗಳನ್ನು ಬೇರೆಡೆಗೆ ಸ್ಥಳಾಂತರಿಸಿದ, ಗಂಜಿ ಕೇಂದ್ರಗಳನ್ನು ನಿರ್ಮಿಸಿರುವುದು ಕೂಡ ಕಂಡು ಬಂದಿವೆ. ಆಸ್ತಿ ಪಾಸ್ತಿಗಳಿಗೆ ಅಪಾರ ಹಾನಿಯುಂಟಾಗಿ ಕೋಟ್ಯಾಂತರ ರುಪಾಯಿಗಳ ನಷ್ಟ ಸಂಭವಿಸಿದ ಘಟನೆಗಳಿವೆ. ವರ್ಷಗಳು ಕಳೆದಂತೆ ಮಳೆಯ ಪ್ರಮಾಣ ಕುಂಠಿತವಾಗುತ್ತಿರುವ ಮಧ್ಯೆ ಹಲವಾರು ವರ್ಷಗಳಿಗೆ ಹೋಲಿಕೆ ಮಾಡಿದರೆ ಈ ಬಾರಿ ದಾಖಲೆ ಪ್ರಮಾಣದಲ್ಲಿ ಮಳೆಯಾಗಿದೆ. ಕಳೆದ ಎರಡು ದಶಕಗಳ ಹಿಂದೆ ಈ ಪ್ರಮಾಣದಲ್ಲಿ ಮಳೆಯಾಗುತ್ತಿದ್ದರೂ ಈ ಮಟ್ಟದ ಹಾನಿಯಾಗಿರುವುದು ಬಹಳ ವಿರಳ. ಆ ಕಾಲದಲ್ಲಿ ಮಳೆ ನೀರು ಸುಗಮವಾಗಿ ಸಾಗಲು ಬೇಕಾದಷ್ಟು ಜಾಗಗಳಿದ್ದವು. ಪ್ರಮುಖ ಪಟ್ಟಣ, ನಗರಗಳಲ್ಲಿ ನೀರು ಬ್ಲಾಕ್ ಆಗುವ ಪ್ರಮೇಯಗಳು ಬಹಳ ಕಡಿಮೆಯಿದ್ದು, ಇತ್ತೀಚಿನ ಹತ್ತು ವರ್ಷಗಳಿಂದ ಕೊಂಚ ಮಳೆಯಾದರೂ ಮನೆಗಳಿಗೆ ನೀರು ನುಗ್ಗುವ ಪ್ರಸಂಗಗಳು ಎದುರಾಗಿವೆ. ಎಲ್ಲೆಡೆ ಜಾಗಗಳ ಅತಿಕ್ರಮಣ, ಬೃಹದಾಕಾರವಾಗಿ ತಲೆ ಎತ್ತುತ್ತಿರುವ ಕಟ್ಟಡಗಳು, ಕೆರೆ ಕಾಲುವೆಗಳ, ಚರಂಡಿಯ ಒತ್ತುವರಿ, ಚರಂಡಿಗಳಲ್ಲಿ ಹೂಳು, ಪ್ಲಾಸ್ಟಿಕ್ ಕಸಕಡ್ಡಿಗಳು ತುಂಬಿ ನೀರಿನ ಹರಿವಿಗೆ ತೊಡಕಾಗುವುದು ಕೂಡ ಒಂದು ಕಾರಣವೆನ್ನಬಹುದು.

ಇನ್ನು ಮಳೆಗಾಲ ಬಂತೆಂದರೆ ಸಾಕು ಸಾಂಕ್ರಾಮಿಕ ರೋಗಗಳು, ವಿವಿಧ ರೀತಿಯ ಜ್ವರಗಳು, ವಿವಿಧ ಖಾಯಿಲೆಗಳು ಜನಸಾಮಾನ್ಯರನ್ನು ಆವರಿಸಿಕೊಳ್ಳುತ್ತಿದೆ. ಚಿಕ್ಕ ಮಕ್ಕಳಿಂದ ಹಿಡಿದು ವಯೋವೃದ್ಧರಿಗೆ ಸರಕಾರಿ ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳ ದಂಡೇ ಕಾಣಬಹುದು. ಮಲೇರಿಯಾ, ಡೆಂಘೀನಂತಹ ಖಾಯಿಲೆಯಿಂದ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿದೆಡೆಗಳಲ್ಲಿ ಹಲವಾರು ಸಾವುಗಳು ಸಂಭವಿಸಿವೆ. ದಿಢೀರ್ ಜ್ವರ, ನಿತ್ರಾಣ ರಕ್ತಕಣಗಳ ಕೊರತೆಯಿಂದ ದಿನಗಳೆದಂತೆ ಶರೀರ ಕುಂಠಿತಗೊಂಡು ಅಸುನೀಗುವ ಲಕ್ಷಣಗಳನ್ನು ಹೊಂದಿರುವ ಈ ಜ್ವರವು ಪ್ರಸ್ತುತ ಎಲ್ಲೆಡೆ ಬಾಧಿಸುತ್ತಿದೆ. ಇನ್ನು ಸಾಮಾನ್ಯ ಶೀತ, ಜ್ವರ, ಕಫದಂತಹ ಲಕ್ಷಣಗಳು ಮಾಮೂಲು ಎಂಬಂತಿದೆ. ಮನೆಯ ಸುತ್ತಮುತ್ತಲಿನ ಸ್ವಚ್ಛತಾ ಕೊರತೆ, ಚರಂಡಿ ನೀರು ಸುಗಮವಾಗಿ ಹರಿದು ಹೋಗದೆ ಕ್ರಿಮಿ ಕೀಟಗಳು, ಸೊಳ್ಳೆಗಳ ಕಾಟದಿಂದ ಉಂಟಾಗುವ ಈ ಕಾಯಿಲೆಯ ಬಗ್ಗೆ ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತರ ದಂಡು ಮನೆಮನೆಗೆ ತೆರಳಿ ಜಾಗೃತಿ ಮೂಡಿಸುತ್ತಿದೆ. ಇನ್ನು ಮಳೆಗಾಲದಲ್ಲಿ ಸಂಭವಿಸುವ ಅಪಾರ ಆಸ್ತಿ ಪಾಸ್ತಿಗಳ ಹಾನಿಗೆ ಸರಕಾರದ ಪರಿಹಾರ ನಿಧಿಯಿಂದ ದೊರಕುವ ಪರಿಹಾರ ಧನಗಳು ಆನೆಯ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತೆ ಏನೂ ಸಾಲದಂತಿದೆ. ಪರಿಹಾರೋಪಾಯಗಳು ಕೂಡ ಸರಕಾರ ಮಟ್ಟದಲ್ಲಿ ತುರ್ತಾಗಿ ಫಲಾನುಭವಿಗಳಿಗೆ ತಲುಪಬೇಕಾದ ಅವಶ್ಯಕತೆಗಳಿದೆ. ಮನೆ ಕುಸಿತ, ಕಂಪೌಂಡ್ ಕುಸಿತ, ಹಟ್ಟಿ ಕುಸಿತ, ಗುಡ್ಡ ಕುಸಿತದಿಂದ ಉಂಟಾದ ಅಪಾರ ಹಾನಿಗಳಿಗೆ ರೈತರ ಕೃಷಿ ಸಂಪತ್ತುಗಳಿಗೆ ಉಂಟಾಗುವ ಬೆಳೆ ಪರಿಹಾರಗಳಲ್ಲಿ ಸರಕಾರಗಳು ಯಾವುದೇ ತಾರತಮ್ಯ ಉಂಟು ಮಾಡದೇ ಮಧ್ಯವರ್ತಿಗಳ ಹಾವಳಿಯನ್ನು ತಡೆಗಟ್ಟಿ ನೇರವಾಗಿ ಫಲನುಭವಿಗಳ ಕೈಗೆ ಅಥವಾ ಖಾತೆಗೆ ಪರಿಹಾರಧನ ಜಮೆಯಾಗುವಂತಹ ವ್ಯವಸ್ಥೆಗಳು ಪಾರದರ್ಶಕತೆಯನ್ನು ಎತ್ತಿ ಹಿಡಿದಂತಾಗುತ್ತದೆ. ಮಳೆಗಾಲದ ನಿತ್ಯ ನಿರಂತರ ಅವಾಂತರಗಳಿಗೆ ಜನಸಾಮಾನ್ಯರು ಕೂಡ ಸಾಕಷ್ಟು ಮುಂಜಾಗ್ರತೆ, ಮುನ್ನೆಚ್ಚರಿಕೆಯನ್ನು ಸರಕಾರದ ಹೊರತಾಗಿ ವಹಿಸಬೇಕಾದ ಅನಿವಾರ್ಯತೆ ಖಂಡಿತವಾಗಿಯೂ ಇದೆ.

(ಲೇಖಕರು: ಹವ್ಯಾಸಿ ಬರಹಗಾರರು)

ಪ್ರಸ್ತುತ

ರಾಸುಮ ಭಟ್

ಡೆಮಾಕ್ರಟಿಕ್ ಪಕ್ಷದ ಜಾಣ್ಮೆಯ ನಡೆ

ಭಾರತದ ಜನಸಂಖ್ಯೆ 144 ಕೋಟಿಗೂ ಅಧಿಕ ಇಂದು ಪ್ರಪಂಚದ ಎಲ್ಲ ಭಾಗದಲ್ಲಿ ಭಾರತೀಯರನ್ನು ಕಾಣಬಹುದಾಗಿದೆ. ಇಂದು ಅಮೆರಿಕದಲ್ಲಿ ಸಹ ದೊಡ್ಡ ಸಂಖ್ಯೆಯಲ್ಲಿ ಭಾರತೀಯ ಮೂಲದವರು ಕಾಣಸಿಗುತ್ತಾರೆ. ಮತ್ತು ದೇಶದ ದೊಡ್ಡ ದೊಡ್ಡ ಸಾಫ್ಟ್‌ವೇರ್ ಹುದ್ದೆಗಳಲ್ಲಿ ಹಾಗೂ ರಾಜಕೀಯದಲ್ಲು ಸಹ ತಮ್ಮ ಛಾಪು ಮೂಡಿಸಿದ್ದಾರೆ.

ಇದರಲ್ಲಿ ಪ್ರಸ್ತುತ ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ದೇವಿ ಹ್ಯಾರಿಸ್ ಕೂಡ ಒಬ್ಬರು ಜೋ ಬೈಡನ್‌ರವರ ವಯೋಸಹಜ ಕಾರಣದಿಂದಾಗಿ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಿಂದ ದೂರಸರಿದಿದ್ದು ಕಮಲಾ ಹ್ಯಾರಿಸ್‌ಗೆ ಬೆಂಬಲ ಸೂಚಿಸಿರುವುದು ಮತ್ತು ಮಹಿಳೆಯಾದ ಕಾರಣ ಇವರು ಡೊನಾಲ್ಡ್ ಟ್ರಂಪ್‌ಗೆ ಕಠಿಣ ಪೈಪೋಟಿ ನೀಡುವುದು ಖಚಿತವಾಗಿದೆ.

ಕಮಲಾ ಹ್ಯಾರಿಸ್‌ರ ಮೂಲ ಭಾರತದ ತಮಿಳುನಾಡಿನಲ್ಲಿರುವ ತುಳಸೇಂದ್ರಪುರಂ ಎಂಬ ಪುಟ್ಟ ಗ್ರಾಮವಾಗಿದ್ದು ಸದ್ಯ ಇಲ್ಲಿ ಸಂಭ್ರಮಾಚರಣೆಯ ಸಡಗರ ಮನೆಮಾಡಿದೆ. ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಡೆಮಾಕ್ರಟಿಕ್ ಅಭ್ಯರ್ಥಿಯಾಗಿ ಮತ್ತು ಯುಎಸ್‌ನ ಸಂಭಾವ್ಯ ಅಧ್ಯಕ್ಷರಾಗಲು ಒಂದು ಹೆಜ್ಜೆ ಮುಂದಿಡುತ್ತಿದ್ದಂತೆ ಇಲ್ಲಿನ ಗ್ರಾಮಸ್ಥರು ಸಂಭ್ರಮಾಚರಣೆಗೆ ಮುಂದಾಗುತ್ತಿದ್ದಾರೆ.

ಕಮಲಾ ದೇವಿ ಹ್ಯಾರಿಸ್ ರವರು ಅಕ್ಟೋಬರ್ 20, 1964 ಓಕ್ ಲ್ಯಾಂಡ್, ಕ್ಯಾಲಿಫೋರ್ನಿಯಾ, ಅಮೆರಿಕದಲ್ಲಿ ಅಮೆರಿಕ ತಂದೆ ಡೊನಾಲ್ಡ್ ಹ್ಯಾರಿಸ್ ಮತ್ತು ಭಾರತೀಯ ತಾಯಿ ಶ್ಯಾಮಲಾ ಗೋಪಾಲನ್‌ರವರಿಗೆ ಜನಿಸಿದರು ಅವರ ತಾಯಿ, ಶ್ಯಾಮಲಾ ಗೋಪಾಲನ್ ಅವರು ತಮಿಳು ಭಾರತೀಯ ಜೀವಶಾಸ್ತ್ರಜ್ಞರಾಗಿದ್ದರು. 2012 ರಲ್ಲಿ ಹ್ಯಾರಿಸ್ ಡೆಮಾಕ್ರಟಿಕ್ ನ್ಯಾಷನಲ್ ಕನ್ವೆನ್ಷನ್‌ನಲ್ಲಿ ಸ್ಮರಣೀಯ ಭಾಷಣವನ್ನು ಮಾಡಿದರು, ಅವರ ರಾಷ್ಟ್ರೀಯ ಪ್ರೊಫೈಲ್ ಅನ್ನು ಹೆಚ್ಚಿಸಿದರು. ಎರಡು ವರ್ಷಗಳ ನಂತರ ಅವರು ವಕೀಲರಾದ ಡೌಗ್ಲಾಸ್ ಎಂಹಾಫ್‌ರನ್ನು ವಿವಾಹವಾದರು .

ಡೆಮಾಕ್ರಟಿಕ್ ಪಕ್ಷದೊಳಗೆ ಉದಯೋನ್ಮುಖ ತಾರೆ ಎಂದು ಗುರಿತಿಸಿಕೊಂಡರು ಅವರು ನಿವೃತ್ತಿ ಹೊಂದುತ್ತಿರುವ ಬಾರ್ಬರಾ ಬಾಕ್ಸರ್ ಸ್ಥಾನಕ್ಕೆ ಸ್ಪರ್ಧಿಸಲು ನೇಮಕಗೊಂಡರು. 2015 ರ ಆರಂಭದಲ್ಲಿ ಹ್ಯಾರಿಸ್ ತನ್ನ ಉಮೇದುವಾರಿಕೆಯನ್ನು ಘೋಷಿಸಿದರು ಮತ್ತು ಪ್ರಚಾರದ ಹಾದಿಯಲ್ಲಿ ಅವರು ವಲಸೆ ಮತ್ತು ಕ್ರಿಮಿನಲ್ -ನ್ಯಾಯ ಸುಧಾರಣೆ, ಕನಿಷ್ಠ ವೇತನದಲ್ಲಿ ಹೆಚ್ಚಳ ಮತ್ತು ಮಹಿಳೆಯರ ಸಂತಾನೋತ್ಪತ್ತಿ ಹಕ್ಕುಗಳ ರಕ್ಷಣೆಗೆ ಕರೆ ನೀಡಿದರು. 2016ರಲ್ಲಿ ಸೆನೆಟ್ ಚುನಾವಣೆಯಲ್ಲಿ ಸುಲಭವಾಗಿ ಗೆದ್ದರು.

ಜನವರಿ 2017 ರಲ್ಲಿ ಅವರು ಅಧಿಕಾರ ವಹಿಸಿಕೊಂಡಾಗ, ಹ್ಯಾರಿಸ್ ಸೆನೆಟ್‌ನಲ್ಲಿ ಮೊದಲ ಭಾರತೀಯ ಅಮೆರಿಕನ್ ಮತ್ತು ಎರಡನೇ ಕಪ್ಪು ಅಮೆರಿಕನ್ ಮಹಿಳೆಯಾದರು. ಅವರು ಇತರ ಕಾರ್ಯಯೋಜನೆಗಳ ನಡುವೆ ಗುಪ್ತಚರ ಮತ್ತು ನ್ಯಾಯಾಂಗ ಸಮಿತಿಯ ಆಯ್ಕೆ ಸಮಿತಿಯಲ್ಲಿ ಸೇವೆ ಸಲ್ಲಿಸಲು ಪ್ರಾರಂಭಿಸಿದರು. ವಿಚಾರಣೆಯ ಸಮಯದಲ್ಲಿ ಸಾಕ್ಷಿಗಳನ್ನು ಉದ್ದೇಶಿಸಿ ತನ್ನ ಪ್ರಾಸಿಕ್ಯೂಟೋರಿಯಲ್ ಶೈಲಿಗೆ ಕಮಲಾರವರು ಹೆಸರುವಾಸಿಯಾದರು.

ಇದು ರಿಪಬ್ಲಿಕನ್ ಸೆನೆಟರ್‌ಗಳಿಂದ ಟೀಕೆ-ಮತ್ತು ಸಾಂದರ್ಭಿಕ ಅಡಚಣೆಗಳನ್ನು ಉಂಟುಮಾಡಿತು. ಜೂನ್‌ನಲ್ಲಿ ಅವರು ಯುಎಸ್ ಅಟಾರ್ನಿ ಜನರಲ್ ಅವರನ್ನು ಪ್ರಶ್ನಿಸಿದ್ದಕ್ಕಾಗಿ ವಿಶೇಷವಾಗಿ ಗಮನ ಸೆಳೆದರು. 2016 ರ ಅಧ್ಯಕ್ಷೀಯ ಚುನಾವಣೆಯಲ್ಲಿ ಆಪಾದಿತ ರಷ್ಯಾದ ಹಸ್ತಕ್ಷೇಪದ ಕುರಿತು ಗುಪ್ತಚರ ಸಮಿತಿಯ ಮುಂದೆ ಸಾಕ್ಷಿ ಹೇಳುತ್ತಿದ್ದ ಜೆಫ್ ಸೆಷನ್ಸ್ ಎಂಬುದು ಅವರು ಈ ಹಿಂದೆ ರಾಜೀನಾಮೆ ನೀಡುವಂತೆ ಕರೆ ನೀಡಿದ್ದರು. ಹ್ಯಾರಿಸ್ ಅವರ ಆತ್ಮಚರಿತ್ರೆ, ದಿ ಟ್ರೂತ್ ವಿ ಹೋಲ್ಡ್: ಆನ್ ಅಮೆರಿಕನ್ ಜರ್ನಿ, ಜನವರಿ 2019 ರಲ್ಲಿ ಪ್ರಕಟವಾಯಿತು.

ಕಮಲಾ ದೇವಿ ಹ್ಯಾರಿಸ್ ಭಾರತೀಯ ಮೂಲದವರಾಗಿದ್ದು ಅಧ್ಯಕ್ಷೀಯ ಚುನಾವಣೆಯಲ್ಲಿ ಜಯಗಳಿಸಿದರೆ ಭಾರತಕ್ಕೆ ಹೆಮ್ಮೆ ಮತ್ತು ಇತ್ತೀಚೆಗೆ ನಡೆದ ಡೊನಾಲ್ಡ್ ಟ್ರಂಪ್ ಮತ್ತು ಜೋ ಬೈಡನ್ ರವರ ನಡುವಿನ ಟಿವಿ ಚರ್ಚೆಯಲ್ಲಿ ಡೊನಾಲ್ಡ್ ಟ್ರಂಪ್ ಮುನ್ನಡೆ ಸಾಧಿಸಿದ್ದು, ಜೋ ಬೈಡನ್ ವಯೋಸಹಜತೆಯಿಂದಾಗಿ ಹಿನ್ನಡೆ ಅನುಭವಿಸಿದ್ದರು.

ಆದರೆ ಡೆಮಾಕ್ರಟಿಕ್ ಪಕ್ಷ ಕಮಲಾ ಹ್ಯಾರಿಸ್‌ರನ್ನು ಕಣಕ್ಕಿಳಿಸುವ ಮೂಲಕ ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಮೆರಗು ಬಂದಂತಾಗಿದ್ದು ಭಾರತೀಯ ಸಂಜಾತೆ ಕಮಲಾ ಹ್ಯಾರಿಸ್ ಜಯಗಳಿಸುವ ಮೂಲಕ ಭಾರತಕ್ಕೂ ಮತ್ತು ಅಮೆರಿಕಕ್ಕೆ ಹೆಮ್ಮೆ ತರಲೆಂದೂ ಭಾರತೀಯರ ಪರವಾಗಿ ಆಶಿಸೋಣ.

(ಲೇಖಕರು: ಸಂಶೋಧನಾ ವಿದ್ಯಾರ್ಥಿ)

ಜನರ ಬದುಕಿನಲ್ಲಿ ರಣರಂಗ ಸೃಷ್ಟಿಸುತ್ತಿರುವ ರಂಗನ್ ವರದಿ!

ಗಂಟಾಘೋಷ

ಗುರುರಾಜ್ ಗಂಟಿಹೊಳೆ
vveditoped@gmail.com

ಅಧಿಕಾರದಲ್ಲಿರುವ ಸರಕಾರವು ಒಂದು ಪಕ್ಷದಾಗಿದ್ದರೆ, ಕೆಲ ಭಾಗದ ಚುನಾಯಿತ ಶಾಸಕರು, ಸಂಸದರು ಮತ್ತೊಂದು ಪಕ್ಷಕ್ಕೆ ಸೇರಿದ್ದರೆ ಆ ಭಾಗದ ಜನರ ಸಂಕಷ್ಟಗಳನ್ನು ಹೇಳುವುದಕ್ಕೂ ಕೇಳುವುದಕ್ಕೂ ಇದು ಸಮಯವಲ್ಲ ಎಂದುಕೊಂಡೇ ಕಾಲ ತಳ್ಳಬೇಕಾದ ಸ್ಥಿತಿ. ಯಾಕೆಂದರೆ, ಸೂಕ್ತ-ಸಮರ್ಪಕ ಅನುದಾನ ಬಿಡುಗಡೆ ಆಗದಿರುವುದು, ಆಡಳಿತ ಯಂತ್ರದ ನೀರಸ ಪ್ರಕ್ರಿಯೆ, ಆಡಳಿತಾರೂಢ ಕ್ಷೇತ್ರಗಳತ್ತ ಹೆಚ್ಚಾಗಿ ಗಮನಹರಿಸುವುದರಿಂದ ಇತರರ ಕ್ಷೇತ್ರಗಳನ್ನು ಅವರವರೇ ಸರಿಪಡಿಸಿಕೊಳ್ಳಬೇಕಾದ ವಿಶೇಷ ಹೊಣೆ.

ಇಂಥವುಗಳ ಮಧ್ಯೆ, ಇತ್ತೀಚೆಗಷ್ಟೆ ನೀಡಿದ ಕರ್ನಾಟಕ ರಾಜ್ಯ ಪರಿಸರ ಸಚಿವರ ಹೇಳಿಕೆಯು ಮತ್ತೆ ಮಲೆನಾಡಿಗರನ್ನು ಕೆರಳಿಸಿದೆ. ಕಸ್ತೂರಿ ರಂಗನ್ ವರದಿ ಜಾರಿಗೆ ಬಗ್ಗೆ ಚಿಂತಿಸಲಾಗುವುದು ಎಂಬ ಹೇಳಿಕೆಯು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದು ನಿಜವೇ ಆಗಿದ್ದರೆ, ಮಲೆನಾಡು, ಕರಾವಳಿ ಸೇರಿದಂತೆ ಈ ಭಾಗದ ಜನರ ಜೀವನವನ್ನು ಅಧಿಕೃತವಾಗಿ ಕೊಲ್ಲುವುದಲ್ಲದೇ ಶವದ ಪೆಟ್ಟಿಗೆಗೆ ಸರಕಾರದಿಂದಲೇ ಮೊಳೆ ಹೊಡೆವ ಕಾಯಕ ಆರಂಭವಾದಂತಾಗುತ್ತದೆ.

ದಶಕಗಳು ಕಳೆಯುತ್ತ ಬಂದರೂ ಮೂಲ ಸೌಕರ್ಯಗಳಾದ ರಸ್ತೆ, ಕುಡಿಯಲು ಯೋಗ್ಯವಾದ ನೀರು, ನದಿ, ಹಳ್ಳಕೊಳ್ಳಗಳಿಗೆ ಬೇಕಾದ ಕಾಲುವೆ-ಸಂಕಗಳನ್ನು ಮಾಡಿಸಿಕೊಳ್ಳಲೇ ಹತ್ತಾರು ವರ್ಷ ಕಾಯಬೇಕಾದ ಪರಿಸ್ಥಿತಿ. ಇಂಥವುಗಳ ಮಧ್ಯೆ, ರಾಜಧಾನಿಯಿಂದ ಆರಂಭಗೊಂಡ ಹತ್ತು ಹಲವು ಯೋಜನೆಗಳು, ಆ ಜಿಲ್ಲೆ ಈ ಜಿಲ್ಲೆ ಎಂದು ದಾಟುತ್ತ ಮಲೆನಾಡ ಭಾಗಗಳಾದ ಉಡುಪಿ, ಕುಂದಾಪುರ, ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಬರುವಷ್ಟರಲ್ಲಿ ಆರಂಭಗೊಂಡ ಯೋಜನೆಗಳೇ ನಿಂತುಹೋಗಿರುತ್ತವೆ ಅಥವಾ ಯಾವುದೋ ತಗಾದೆ ತೆಗೆದು ಮಧ್ಯಂತರ ವಿರಾಮ ಪಡೆದು ಚಿರನಿದ್ರೆಗೆ ಜಾರಿಬಿಡುತ್ತವೆ. ಮತ್ತದೇ ಸ್ವಪರಿಶ್ರಮವನ್ನೇ ನಂಬಿಕೊಂಡು ಎಂದಿನಂತೆ ಬದುಕು ಕಟ್ಟಿಕೊಳ್ಳಲು ಹೆಣಗಾಡಬೇಕಾದ ಬದುಕಿನ ಸ್ಥಿತಿ.

ಕಸ್ತೂರಿ ರಂಗನ್ ವರದಿ ಕುರಿತ ಹೇಳಿಕೆಯು ವಿವಾದಿತ ಮತ್ತು ಚರ್ಚಿತ ವಿಷಯವಾಗಿ ಕಂಡು ಬರುತ್ತಿದ್ದಂತೆ, 'ಅದು ಹಾಗಲ್ಲ, ಈ ಕಸ್ತೂರಿ ರಂಗನ್ ವರದಿಯು 10 ವರ್ಷಗಳಷ್ಟು ಹಳೆಯದಾಗಿದೆ. ಇಂದಿಗೆ ಇದು ಅಪ್ರಸ್ತುತ ಎಂಬ ವಿಚಾರವೂ ಮುನ್ನಲೆಗೆ ಬಂದಿದೆ. ಜತೆಗೆ ಈ ಭಾಗದ ಜನರ ಜೀವನೋಪಾಯಕ್ಕೆ ಆಮೂಲಾಗ್ರ ಅಪಾಯ ತಂದೊಡ್ಡುವ ಭೀತಿಯೂ ಇದೆ. ಜತೆಗೆ, ಸಂಜಯ್ ಕುಮಾರ್ ಸಮಿತಿ ಕೂಡ ಕಸ್ತೂರಿ ರಂಗನ್ ವರದಿಯಲ್ಲಿ ಕೆಲ ಸಡಲಿಕೆ, ಮಾರ್ಪಾಡು ಮಾಡಲು ಸಮ್ಮತಿಸುತ್ತಿದೆ.' ಎಂದು ಇದೇ ಸಚಿವರು ಹೇಳಿದ್ದು ಸ್ವಲ್ಪ ಸಮಾಧಾನ ತರುವ ವಿಷಯವೇ ಆದರೂ, ಜನರ ಆತಂಕವನ್ನು ಸಂಪೂರ್ಣವಾಗಿ ತೊಡೆದು ಹಾಕುವ, ಒಕ್ಕೊರಲಿನ ನಿರ್ಧಾರದ ಮೂಲಕ ಕೇಂದ್ರಕ್ಕೆ ಒತ್ತಡ ತರುವ ಘನ ಜವಾಬ್ದಾರಿ ಮತ್ತು ನೈತಿಕತೆ ರಾಜ್ಯ ಸರಕಾರದ ಮೇಲಿದೆ.

ಅಷ್ಟಕ್ಕೂ ಈ ಕಸ್ತೂರಿ ರಂಗನ್ ವರದಿ ಏನು ಎಂಬುದನ್ನು ಗಮನಿಸಿದಾಗ, ಇಸ್ರೋದ ಮಾಜಿ ಮುಖ್ಯಸ್ಥರೂ, ರಾಜ್ಯಸಭೆ ಮತ್ತು ಯೋಜನಾ ಆಯೋಗದ ಸದಸ್ಯರಾಗಿದ್ದ ಡಾ. ಕೆ. ಕಸ್ತೂರಿ ರಂಗನ್ ಅವರ ನೇತೃತ್ವದ ಸಮಿತಿ ಗುರುತಿಸಿರುವ ಪಶ್ಚಿಮಘಟ್ಟದ 59,949 ಚ.ಕಿ.ಮೀ ವ್ಯಾಪ್ತಿಯ ಪ್ರದೇಶ ಅಂದರೆ ಶೇಕಡಾ 36.4ರಷ್ಟು ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಒಳಪಡುತ್ತದೆ. ಈ ಪ್ರದೇಶದಲ್ಲಿ ಗಣಿಗಾರಿಕೆ, ಕ್ವಾರಿ, ಮರಳುಗಾರಿಕೆ, ಪರಿಸರ ವಿರೋಧಿ ಕೈಗಾರಿಕೆ, ಜಲವಿದ್ಯುತ್, ಪವನ ವಿದ್ಯುತ್ ಯೋಜನೆಗಳನ್ನು ಸಂಪೂರ್ಣ ನಿಷೇಧಿಸಬೇಕು. ಎಲ್ಲ ರೀತಿಯ ಗಣಿಗಾರಿಕೆ ಮುಂದಿನ 5 ವರ್ಷ ಮುಗಿತ್ತಿದ್ದಂತೆ ಸ್ಥಗಿತಗೊಳಿಸಬೇಕು. 20,000 ಚ.ಮೀ. ನಷ್ಟು ದೊಡ್ಡದಾದ ಯಾವುದೇ ಕಟ್ಟಡ ನಿರ್ಮಿಸುವಂತಿಲ್ಲ. ಇಎಸ್‌ಎನಿಂದ 10 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಕಾಮಗಾರಿ ನಡೆಸುವುದಿದ್ದರೂ ಪರಿಸರ ಇಲಾಖೆ, ಸ್ಥಳೀಯ ಗ್ರಾಮಸಭೆ ಅನುಮತಿ ಪಡೆಯಬೇಕು. ಈ ಪ್ರದೇಶದಲ್ಲಿ ಸಿಮೆಂಟು, ಕಲ್ಲು, ರಸಾಯನಿಕ ಬಳಸಲು, ಜನವಸತಿ ನಿರ್ಮಿಸಲು ಅವಕಾಶವಿಲ್ಲ ಎಂಬಿತ್ಯಾದಿಗಳ ಕಠಿಣ ನೀತಿ ನಿಯಮಗಳನ್ನು ಮತ್ತು ಈ ಭಾಗದಲ್ಲಿ ವಾಸಿಸುವ ಜನರ ನಿತ್ಯದ ಬದುಕಿನಲ್ಲಿ ಬೇಕಾದ ಮೂಲಸೌಕರ್ಯಗಳನ್ನು ಒದಗಿಸಲು ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳಿಗೆ ಸಂಪೂರ್ಣ ನಿರ್ಬಂಧ ಹೇರುವ ವಿಚಾರ ಇದರಲ್ಲಿ ಸೇರಿದೆ.

ಮಲೆನಾಡು ಭಾಗದಲ್ಲಿ ಅತೀ ಹೆಚ್ಚು ಮಳೆ ಬೀಳುವುದರಿಂದ ಪ್ರಮುಖ ಬೆಳೆ ಏಲಕ್ಕಿ, ಕಾಫಿ, ಕಾಳು ಮೆಣಸು ಬೆಳೆ ಸಂಕಷ್ಟದಲ್ಲಿದ್ದು, ಬಹುತೇಕ ರೈತರು ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಇದರ ನಡುವೆ ಕಾಡು ಪ್ರಾಣಿಗಳ ಹಾವಳಿ ಮಿತಿ ಮೀರಿದ್ದು, ರೈತರು ತಾವು ಬೆಳೆದ ಕೃಷಿ ಬೆಳೆಗಳನ್ನು ಉಳಿಸಿಕೊಳ್ಳುವುದು ಕಷ್ಟವಾಗಿದೆ. ಇದರಿಂದ ಹೊರಬರಲು ಕೆಲ ರೈತರು ಬ್ಯಾಂಕ್‌ಗಳಿಂದ ಸಾಲ ಪಡೆದು, ತಮ್ಮ ಜಮೀನುಗಳಲ್ಲಿ ಹೋಂ ಸ್ಟೇಗಳನ್ನು ನಡೆಸಿ ತಮ್ಮ ಬದುಕು ಕಟ್ಟಿಕೊಂಡಿದ್ದಾರೆ.

ಈ ಭಾಗದಲ್ಲಿ ಅತೀ ಹೆಚ್ಚು ಪ್ರವಾಸಿ ತಾಣ ಇರುವುದರಿಂದ ರೈತರು ಹೋಂ ಸ್ಟೇ ಸ್ಥಾಪಿಸಿದ್ದು, ಇದರಿಂದ ಬರುವ ಆದಾಯದಲ್ಲಿ ತಮ್ಮ ಕೃಷಿ ಜಮೀನಿನ ಕೆಲಸಗಳನ್ನು ಮಾಡಿಸುತ್ತಾರೆ. ಒಂದು ವೇಳೆ ಯೋಜನೆ ಜಾರಿಯಾದರೆ ಲಕ್ಷಾಂತರ ರು. ಖರ್ಚು ಮಾಡಿರುವ ತೋಟ, ಹೋಂ ಸ್ಟೇಗಳನ್ನು ತೆರವುಗೊಳಿಸುವ ಪರಿಸ್ಥಿತಿ ಬಂದು ಸಂಕಷ್ಟದಲ್ಲಿ ಸಿಲುಕಲಿದ್ದಾರೆ.

ಮಹಾರಾಷ್ಟ್ರ, ಗೋವಾ, ಕೇರಳ, ತಮಿಳುನಾಡು ಹಾಗೂ ಕರ್ನಾಟಕ ರಾಜ್ಯ ಸೇರಿದಂತೆ ಒಟ್ಟು 56,874 ಚದರ ಕಿಲೋ ಮೀಟರ್ ವಿಸ್ತೀರ್ಣದ ಪ್ರದೇಶವನ್ನು ಅತಿ ಸೂಕ್ಷ್ಮ ಪ್ರದೇಶವೆಂದು ಕಸ್ತೂರಿ ರಂಗನ್ ಸಮಿತಿ ವರದಿ ನೀಡಿದೆ. ಕರ್ನಾಟಕದಲ್ಲಿ ಪಶ್ಚಿಮಘಟ್ಟ 44,448 ಚ,ಕಿ.ಮೀ. ವಿಸ್ತೀರ್ಣ ಹೊಂದಿದೆ. ಅದರಲ್ಲಿ 20,668 ಚ.ಕಿ.ಮೀ. ಪ್ರದೇಶವು ಈ ವರದಿಯ ಪ್ರಕಾರ, ಪರಿಸರ ಸೂಕ್ಷ್ಮ ಪ್ರದೇಶದ (ಇಎಸ್‌ಎ) ವ್ಯಾಪ್ತಿಯಲ್ಲಿ ಬರುವುದು. ಇದು 1573 ಗ್ರಾಮಗಳನ್ನು ಒಳಗೊಂಡಿದೆ. ಅಂದಿನ ರಾಜ್ಯ ಸರಕಾರ ಇದನ್ನು 850 ಗ್ರಾಮಗಳಿಗೆ ಸೀಮಿತಗೊಳಿಸಬೇಕೆಂದು ಕೇಳಿಕೊಂಡಿತ್ತು.

ಈಗಾಗಲೇ ಅರಣ್ಯ ರಕ್ಷಣೆ ಮಾಡಲಾಗುತ್ತಿದೆ, ಈ ರೀತಿ ವರದಿ ಅವೈಜ್ಞಾನಿಕವಾಗಿದೆ. ಕಾಡು / ಅರಣ್ಯ ಪ್ರದೇಶ ಕೂಡ ನಮ್ಮಲ್ಲಿ ಜಾಸ್ತಿ ಆಗಿದೆ. ಹೀಗಿದ್ದರೂ, ಪುನಃ ಅಧಿಸೂಚನೆ ಹೊರಡಿಸಲಾಗಿದೆ. ಅಲ್ಲದೆ ಸಿಎಂ ನೇತೃತ್ವದಲ್ಲಿ ಕೇಂದ್ರದ ಸಚಿವರನ್ನು ಭೇಟಿಯಾಗಿ ಇದನ್ನು ರದ್ದು ಮಾಡುವಂತೆ ಈಗಾಗಲೇ ಮನವಿ ಮಾಡಿದ್ದೇವೆ. ಮತ್ತೆ ಪಶ್ಚಿಮ ಘಟ್ಟದ ಶಾಸಕರ ನೇತೃತ್ವದ ನಿಯೋಗ ದೆಹಲಿಗೆ ತೆರಳಲು ನಿರ್ಧಾರ ಮಾಡಲಾಗಿದೆ. ಯಾವುದೇ ಕಾರಣಕ್ಕೂ ಇಂತಹ ಅವೈಜ್ಞಾನಿಕ ವರದಿ ಒಪ್ಪೋದಕ್ಕೆ ಸಾಧ್ಯ ಇಲ್ಲ ಅಂತ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪನವರ ನೇತೃತ್ವದ ರಾಜ್ಯ ಬಿಜೆಪಿ ಸರಕಾರ ಮಹತ್ವದ ಸಭೆ ನಡೆಸಿ ಸ್ಪಷ್ಟಪಡಿಸಿತ್ತು.

ಇದಾಗಿ, ಕೇಂದ್ರದಿಂದ ಮತ್ತೊಮ್ಮೆ ಅಧಿಸೂಚನೆ ಹೊರಡಿಸಿದ ಮೇಲೆ, ಅಧಿಕಾರದಲ್ಲಿರುವ ಪ್ರಸ್ತುತ ಕಾಂಗ್ರೆಸ್ ರಾಜ್ಯ ಸರಕಾರವು ಈ ವಿಚಾರದಲ್ಲಿ ಒಮ್ಮತದ ಮೂಲಕ ಯಾವೊಂದು ಸ್ಪಷ್ಟತೆ ತೋರದಿರುವುದು ಮಲೆನಾಡು, ಘಟ್ಟ ಪ್ರದೇಶದ ಜನರ ಬಗ್ಗೆ ತೋರುತ್ತಿರುವ ಸ್ಪಷ್ಟ ಅಸಡ್ಡೆಯಾಗಿದೆ ಎಂದೇ ಎಲ್ಲರ ಭಾವನೆಯಾಗಿದೆ. ನೂರಾರು ವರ್ಷಗಳ ಕಾಲ ಈ ಕಾಡಿನೊಂದಿಗೆ ನಂಟು ಬೆಳೆಸಿಕೊಂಡು ನಮ್ಮ ಹಿರಿಕರು ಹಾಕಿಕೊಟ್ಟ ಸಂಸ್ಕಾರದಂತೆ ಕಾಡನ್ನು ನಮ್ಮ ಜೀವನದ ಒಂದು ಭಾಗವಾಗಿ ದೇವರಂತೆ ಕಾಣುತ್ತ ಅದರ ರಕ್ಷಣೆಯನ್ನು ಮಾಡುತ್ತ ಬಂದವರು ನಾವು. ಇದ್ದಕ್ಕಿದ್ದಂತೆ ಅದ್ಯಾವುದೋ ಒಂದು ವರದಿಯನ್ನು ಆಧರಿಸಿ, ನಮ್ಮನ್ನು ಪರಕೀಯರಂತೆ ಕಾಣುವುದು, ಪ್ರಕೃತಿನಾಶಕರಂತೆ ನೋಡುವುದು ಎಷ್ಟು ಸರಿ ಎನ್ನುತ್ತಾರೆ ಘಟ್ಟದವಾಸಿಗಳು.

ನೆಲ-ಜಲ ಉಳಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ದೇಶದ ಸಂವಿಧಾನದಲ್ಲೇ ಪ್ರಸ್ತಾಪಿಸಲಾಗಿದೆ. ಮೂಲಭೂತ ಹಕ್ಕುಗಳಿಗೆ ಆದ್ಯತೆ ನೀಡುವಂತೆ ಪ್ರತಿಯೊಬ್ಬರೂ ಕರ್ತವ್ಯ ನಿಭಾಯಿಸಬೇಕು ಜತಗೆ, ಪರಿಸರ ರಕ್ಷಣೆಯಲ್ಲಾಗಲಿ, ಸಸ್ಯಸಂಕುಲವನ್ನು ಉಳಿಸಿ ಬೆಳೆಸುವ ಬಗ್ಗೆಯಾಗಲಿ, ಸಹ್ಯಾದ್ರಿ ಸಾಲಿನ ನಿವಾಸಿಗಳು ತಮ್ಮ ತಲೆಮಾರಿನಿಂದಲೂ ಮಾಡುತ್ತ ಬಂದಿದ್ದಾರೆ. ಇಲ್ಲದಿದ್ದರೆ, ಇಷ್ಟೊತ್ತಿಗೆ ಇಡೀ ಕಾಡು, ಸಸ್ಯ - ಪ್ರಾಣಿ ಸಂಕುಲವೇ ನಶಿಸಿಹೋಗುತ್ತಿತ್ತು. ಕಾನೂನು ಕಟ್ಟಳೆಗಳ ಪೂರ್ವದಲ್ಲಿ, ಕಾಡನ್ನು ರಕ್ಷಣೆ ಮಾಡುತ್ತ ಅದರ ಭಾಗವಾಗಿಯೇ ಬೆಳದು ಬಂದವರು ನಾವು, ಅದ್ಹೇಗೆ ನಾಶಮಾಡಬಲ್ಲೆವು ಎನ್ನುತ್ತಾರೆ ಇಲ್ಲಿನ ಜನತೆ.

ಪರಿಸರ ಸಂರಕ್ಷಣೆಯ ವಿಚಾರದಲ್ಲಿ ಆಯಾ ಕಾಲದಲ್ಲಿ ಅಧಿಕಾರಕ್ಕೆ ಬರುವ ಸರಕಾರಗಳಲ್ಲಿ ಕೆಲ ಗೊಂದಲಗಳಿವೆ. ಒಂದು ಸ್ಪಷ್ಟತೆ, ನಿಖರ ದೃಷ್ಟಿಕೋನ ಹೊಂದಿದ್ದರೆ, ಪ್ರಕೃತಿಯೊಂದಿಗೆ ಬದುಕುತ್ತಿರುವ ಜನರ ಬದಕನ್ನೂ ಗಮನದಲ್ಲಿಸಿಕೊಳ್ಳುವ ಜೊತೆಯಲ್ಲಿ ಪ್ರಕೃತಿ ರಕ್ಷಣೆಯಂತಹ ಸೂಕ್ಷ್ಮ ವಿಚಾರಗಳನ್ನು ಸ್ಥಳೀಕರ ಅಭಿಪ್ರಾಯ ಪಡೆದು ನೀತಿ-ನಿಯಮಗಳನ್ನು ರೂಪಿಸಿದ್ದರೆ ಚೆನ್ನಾಗಿರುತ್ತಿತ್ತು ಎನ್ನುತ್ತಾರೆ ತೊಂಬತ್ತಾರರ ಹಿರಿಯಜ್ಜ.

'ಇನ್ನು ಕೆಲ ಮಾನವ ಹಕ್ಕುಗಳ ಹೋರಾಟಗಾರರು, ಈ ವರದಿ ರೂಪಿಸಿರುವುದರಲ್ಲೇ ದೋಷವಿದೆ. ಇದು ಜನ ಸಮುದಾಯದ ಬೇಡಿಕೆಯಲ್ಲ. ವರದಿ ಸಿದ್ಧಪಡಿಸುವಾಗ ಜನರ ಅಭಿಪ್ರಾಯಕ್ಕೆ ಮನ್ನಣೆ ನೀಡಿಲ್ಲ' ಎಂದು ಬೇಸರ ವ್ಯಕ್ತಪಡಿಸುತ್ತಾರೆ. ಕಸ್ತೂರಿರಂಗನ್ ವರದಿ ಅನುಷ್ಠಾನಗೊಂಡರೆ ಮಾನವ ಸಹಿತ ಸಮತೋಲಿತ ಪರಿಸರ ಸಂರಕ್ಷಣೆ ಅಸಾಧ್ಯ. ಹಾಗಾಗಿ, ಕಸ್ತೂರಿ ರಂಗನ್ ಹಾಗೂ ಗಾಡ್ಗೀಳ್ ವರದಿಗಳನ್ನು ಸಂಪೂರ್ಣ ವಿರೋಧಿಸಬೇಕು ಎಂದು ತಮ್ಮ ಆಕ್ರೋಶವನ್ನು ಹೊರಹಾಕುತ್ತಾರೆ ಇಲ್ಲಿನ ಯುವಜನತೆ.

2014ರ ಮಾರ್ಚ್ ತಿಂಗಳಲ್ಲಿ ಕೇಂದ್ರ ಸರಕಾರ ಕರಡು ಅಧಿಸೂಚನೆ ಹೊರಡಿಸಿತ್ತು. 2014ರ ಮೇ ತಿಂಗಳಲ್ಲಿ ರಾಜ್ಯ ಸರಕಾರ ಮೊದಲ ಬಾರಿಗೆ ಆಕ್ಷೇಪಣೆ ಸಲ್ಲಿಸಿತ್ತು. ಕೇಂದ್ರ ಸರಕಾರ 2015, 2017 ಹಾಗೂ 2018ರಲ್ಲಿ ಪುನಃ ಅಧಿಸೂಚನೆ ಹೊರಡಿಸಿತ್ತು. ರಾಜ್ಯ ಸರ್ಕಾರ ಇದಕ್ಕೆ ಪ್ರತಿಯಾಗಿ 2015ರ ಅ.20, 2017ರ ಏ.22 ಹಾಗೂ 2018ರ ಡಿ.13ರಂದು ಆಕ್ಷೇಪಣೆ ಸಲ್ಲಿಸಿ, ವರದಿ ಅನುಷ್ಠಾನ ಬೇಡ ಎಂಬುದನ್ನು ಮತ್ತೊಮ್ಮೆ ಪುನರುಚ್ಚರಿಸಿತ್ತು.

ಕೇರಳಕ್ಕೆ ಈ ಭಯವಿಲ್ಲ ಏಕೆಂದರೆ, ಕೇಂದ್ರ ಸರಕಾರ ಹೊರಡಿಸಿದ್ದ ಮೊದಲ ಎರಡು ಅಧಿಸೂಚನೆಯಲ್ಲೂ ಕೇರಳ ಹೆಸರನ್ನು ಪ್ರಸ್ತಾಪಿಸಿತ್ತು. ಕೇರಳ ಸರಕಾರ ಸ್ಪಷ್ಟ ನಿರ್ಧಾರ ತೆಗೆದುಕೊಂಡು ಪ್ರಬಲವಾದ ಆಕ್ಷೇಪ ವ್ಯಕ್ತಪಡಿಸಿತ್ತು. ಹೀಗಾಗಿ ಕೇಂದ್ರ ಸರಕಾರವೇ ಅಧಿಸೂಚನೆಯಲ್ಲಿ ಕೇರಳದ ಹೆಸರನ್ನು ಕೈಬಿಟ್ಟಿತ್ತು. ಹೀಗಾಗಿಯೇ ಕೇರಳಕ್ಕೆ ಕಸ್ತೂರಿ ರಂಗನ್ ವರದಿಯ ಅನುಷ್ಠಾನದ ಯಾವುದೇ ಭಯ ಇಲ್ಲ.

ಕರ್ನಾಟಕದಲ್ಲಿ ಪಶ್ಚಿಮ ಘಟ್ಟ ಉಳಿಸಬೇಕು ಎಂಬ ಕೂಗೆಬ್ಬಿಸಿ, ಅದಕ್ಕಾಗಿ ಹೋರಾಡಿದವರೇ ಮಲೆನಾಡಿಗರು. ಇಂದಿಗೂ 'ಅರಣ್ಯ ಉಳಿದಿರುವುದು ಅರಣ್ಯವಾಸಿಗಳಿಂದಲೇ ಹೊರತು ಅಧಿಕಾರಿಗಳು, ಸರಕಾರಗಳಿಂದ ಅಲ್ಲ' ಎಂಬುದನ್ನು ಆಳುವ ಸರಕಾರ ಅತ್ಯಂತ ಗಂಭೀರವಾಗಿ ತೆಗೆದುಕೊಂಡು ಸರ್ವಪಕ್ಷಗಳ ನಿಯೋಗದ ಜತೆಯಲ್ಲಿ ಸಾರ್ವಜನಿಕರ ಹಿತಕಾಯಲು ಈ ರೀತಿಯ ಗಟ್ಟಿ ನಿರ್ಧಾರ ತೆಗೆದುಕೊಳ್ಳಬೇಕು.

ಸರ್ವಜನಾಂಗದ ಶಾಂತಿಯ ತೋಟದಲ್ಲಿ ಎಲ್ಲ ಭಾಗದವರ ಸಹಬಾಳ್ವೆಯ ಜೀವನವೂ ಮುಖ್ಯವಲ್ಲವೇ?!



ನಾರದ ಸಂಚಾರ

ಕಲಹಪ್ರಿಯ
naadigru@gmail.com

ಬಜೆಟ್ಟು ಬರ್ಗೆಟ್ಟು!

ಹೀಗೆ ಕೆಲವು ದಿನಗಳಿಂದ ದೇಶದಾದ್ಯಂತ ಬಜೆಟ್‌ನ ಮಾತುಗಳೇ ಕೇಳಿಬರುತ್ತಿವೆ. ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡಿಸುವುದಕ್ಕಿಂತ ಮೊದಲು, ನಂತರ ಜನ ತಮ್ಮದೇ ಆದ ಮಾತುಗಳಲ್ಲಿ ಬಜೆಟ್ ಬಗ್ಗೆ ಮಾತನಾಡುತ್ತಲೇ ಇದ್ದಾರೆ. ಹೀಗೆ ಮೊನ್ನೆ ನಾರದರು ಹತ್ತಿರದ ಟೀ ಅಂಗಡಿಯ ಮುಂದೆ ನಿಂತಾಗ, ಕೆಲವು ಜನರು ಬಜೆಟ್ ಬಗ್ಗೆ ಮಾತನಾಡುತ್ತಿದ್ದರು. ಅವರನ್ನೇ ಕೇಳಿಸಿಕೊಳ್ಳುತ್ತಿದ್ದ ನಾರದರೂ ಅವರ ಮಾತಿನಲ್ಲಿ ತಮ್ಮದೂ ಒಂದು ಪಾಯಿಂಟ್ ಅನ್ನು ಹಾಕಿದರು. ಹೀಗೇ ಸಾವಿರದಿಂದ ಶುರುವಾದ ಮಾತು ಕೊನೆಗೆ ಲಕ್ಷ ಕೋಟಿಯ ವರೆಗೂ ಬಂದು ನಿಂತಿತು. ಟ್ಯಾಕ್ಸ್ ಸ್ಲ್ಯಾಬ್‌ವರೆಗೂ ಹೋದ ಮಾತು, ಯೂರೋಪ್ ರೀತಿಯಲ್ಲಿ ಟ್ಯಾಕ್ಸ್ ಅನ್ನು ತೆಗೆದುಕೊಂಡು ಅಫ್ಘಾನಿಸ್ತಾನ್ ರೀತಿಯಲ್ಲಿ ಸವಲತ್ತುಗಳನ್ನು ಕೊಡುತ್ತಾರೆ ಎಂದು ಒಬ್ಬ ಹೇಳಿದಾಗ! ಇನ್ನೊಬ್ಬ, ಟ್ಯಾಕ್ಸ್ ಅನ್ನು ಕಡಿಮೆ ಮಾಡಬೇಕಿತ್ತು ಎಂದ. ಮತ್ತೊಬ್ಬ ಟ್ರೇಡಿಂಗ್ ಅಲ್ಲೂ ಟ್ಯಾಕ್ಸ್ ಅನ್ನು ಹೆಚ್ಚು ಮಾಡಿದ್ದಾರೆ ಎಂದ. ಹೀಗೇ ನೂರಾರು ಮಾತುಗಳು ನಡೆದ ನಂತರ, ಚಹಾದ ಅಂಗಡಿಗೆ ಹಣವನ್ನು ಕೊಡುವ ಪ್ರಮೇಯ ಬಂತು. ಆಗ ಒಬ್ಬ ಫೋನ್ ಮನೆಯಲ್ಲಿ ಮರೆತುಬಂದಿದ್ದು ನೆನಪಾದರೆ, ಮತ್ತೊಬ್ಬನಿಗೆ ಪರ್ಸ್ ತರದಿದ್ದು ನೆನಪಾಯಿತು. ಅಂಗಡಿಯವನಿಗೆ ಸಾಲಬರೆದುಕೋ ಎಂದು ಹೊರಡಿದರು!

ಬುದ್ಧಿ ಬರೋದು ಯಾವಾಗ?

ಒಂದು ಸಲ ಸದನದಲ್ಲಿ ಜೋರಾಗಿ ಮಾತನಾಡಿ ದೇಶಾದ್ಯಂತ ಒಮ್ಮೆಲೇ ಹವಾ ಎಬ್ಬಿಸಿದ್ದ ರಾಹುಲ್ ಗಾಂಧಿ ಈಗ ನಾಲಿಗೆಯನ್ನು ಬಾಯಿಯ ಒಳಗೇ ಇಟ್ಟುಕೊಂಡಿದ್ದಾರೆ. ಜೋರಾಗಿ ಮಾತನಾಡುತ್ತಿದ್ದ ಧ್ವನಿಪೆಟ್ಟಿಗೆಯಲ್ಲಿ ಕೇಳುವಂತಹ ಭಾಷಣವೇನೂ ಬರುತ್ತಿಲ್ಲ. ಇದಕ್ಕೂ ಒಂದು ಕಾರಣವಿದೆ ಅಂತೆ, ಅದು ನರೇಂದ್ರ ಮೋದಿ ಅವರು ಬಾಲಕ್ ಬುದ್ಧಿ ಎಂದು ರಾಹುಲ್‌ಗೆ ಹೀಯಾಳಿಸಿದಾಗ, ರಾಹುಲ್ ಅಸಂಬದ್ಧ ಮಾತನಾಡುವುದನ್ನು ಬಿಟ್ಟಿದ್ದಾರಂತೆ. ಆದರೆ, ಈ ಮಾತನ್ನು ರಾಹುಲ್ ಗಾಂಧಿ ಹೇಳಿಲ್ಲ!

ನಂಗೆ ಬೇಜಾರಾಯಿತು!



15 ಲಕ್ಷದ ಮೇಲೆ ಪ್ರತಿವರ್ಷ ದುಡಿಯುತ್ತಿದ್ದರೆ, ಅವರು ಅದರ ಶೇ. 30 ರಷ್ಟು ತೆರಿಗೆ ಕಟ್ಟಬೇಕಂತೆ ಎಂದು ನಿರ್ಮಲಾ ಸೀತಾರಾಮನ್ ಅವರ ವಿರುದ್ಧ ಒಬ್ಬ ಮಾತನಾಡುತ್ತಿದ್ದ. ಪ್ರತಿವರ್ಷ ಎಷ್ಟು ದುಡಿಯುತ್ತೀಯಾ ಎಂದು ಕೇಳಿದಾಗ, ನಂಗೆ ಬೇಜಾರಾಯಿತು ಎಂದ. ಏನಕ್ಕೆ ಬೇಜಾರಾಯಿತು ಎಂದು ಪ್ರಶ್ನಿಸಿದಾಗ, ನೀನು ಕೇಳಿದ ಪ್ರಶ್ನೆ ಕೇಳಿ ಎಂದ!

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 79

ಸಮಾಚಾರ ಸಣ್ಣದಲ್ಲ

ಮಾಜಿ ಅಗ್ನಿವೀರರಿಗೆ ಶೇ.10 ರಷ್ಟು ಮೀಸಲಾತಿ

ದೆಹಲಿ: ಮಾಜಿ ಅಗ್ನಿ ವೀರರಿಗೆ ಬಿಎಸ್‌ಎಫ್, ಸಿಐಎಸ್‌ಎಫ್, ಆರ್‌ಪಿಎಫ್, ಎಸ್‌ಎಸ್‌ಬಿ ಹಾಗೂ ಸಿಆರ್‌ಪಿಎಫ್‌ನಲ್ಲಿ ಶೇ.10 ರಷ್ಟು ಮೀಸಲಾತಿ ನೀಡಲಾಗುವುದು ಎಂದು ಗೃಹ ಸಚಿವಾಲಯ ತಿಳಿಸಿದೆ. ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಈ ಬಗ್ಗೆ ರಾಜ್ಯಸಭೆಯಲ್ಲಿ ಲಿಖಿತ ಉತ್ತರ ನೀಡಿದ್ದು ಮಾಜಿ ಅಗ್ನಿವೀರರಿಗೆ ಸಶಸ್ತ್ರ ಪೊಲೀಸ್ ಪಡೆ ಸೇರಿ ಹಲವು ನೇಮಕಾತಿಗಳಲ್ಲಿ ಶೇ.10ರಷ್ಟು ಯ್‌ಲಾತಿ, ಹಾಗೂ ವಯೋಮಿತಿ ಮತ್ತು ದೈಹಿಕ ಪರೀಕ್ಷೆಯಲ್ಲಿ ವಿನಾಯಿತಿ ನೀಡುವುದಾಗಿ ತಿಳಿಸಿದ್ದಾರೆ. 4 ವರ್ಷ ಅಗ್ನಿವೀರರಾಗಿ ಸೇವೆ ಸಲ್ಲಿಸಿ ನಿವೃತ್ತಿ ಬಳಿಕ ಬಿಎಸ್‌ಎಫ್ ಸೇರ್ಪಡೆಗೊಳ್ಳಲು ಅವಕಾಶ ನೀಡಲಾಗಿದ್ದು ಮೀಸಲಾತಿಯನ್ನು ಕೂಡ ಕಲ್ಪಿಸಲಾಗಿದೆ. ಈ ನಿರ್ಧಾರ ಪ್ರಧಾನಿ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಮಾರ್ಗದರ್ಶನದಲ್ಲಿ ತೆಗೆದುಕೊಂಡ ನಿರ್ಧಾರ ಎಂದು ಸಚಿವರು ತಿಳಿಸಿದ್ದಾರೆ.

ಪ್ರಿಯಕರನನ್ನು ತುಂಡಾಗಿ ಕತ್ತರಿಸಿ ಹೂತ ಮಹಿಳೆ

ಉತ್ತರಪ್ರದೇಶ: ಯುವತಿಯೊಬ್ಬಳು ತನ್ನ ಪ್ರಿಯಕರನನ್ನ ಕೊಂದು ಮೃತದೇಹವನ್ನು ತುಂಡಾಗಿ ಕತ್ತರಿಸಿ ಸ್ನೇಹಿತೆ ಮನೆಯಲ್ಲಿ ಹೂತಿಟ್ಟ ಪ್ರಕರಣ ಪ್ರತಾಪಗಢದ ಸುವಂಶ ಗ್ರಾಮದಲ್ಲಿ ನಡೆದಿದೆ. ಕೊಲೆ ಯಾದ ವ್ಯಕ್ತಿ ಬಿಹಾರದ ನಿವಾಸಿ ಶಿವನಾಥ್ (45) ಎಂದು ಗುರುತಿಸಲಾಗಿದೆ. ಶಿವನಾಥ ಜತೆ ಅಕ್ರಮ ಸಂಬಂಧ ಹೊಂದಿದ್ದ ಪುಷ್ಪಾ ಆತನ ಜತೆ ಸಂಪರ್ಕ ಕಳೆದುಕೊಳ್ಳಲು ನಿರ್ಧರಿಸಿದ್ದಾಳೆ. ಆದರೆ ಶಿವನಾಥ್ ಇದಕ್ಕೆ ಒಪ್ಪದ ಕಾರಣ ಪುಷ್ಪಾ ಹಾಗೂ ಆಕೆಯ ಪತಿ ವಿನೋದ್ ಇಬ್ಬರೂ ಸೇರಿ ಕೊಲೆಗೆ ಪ್ಲ್ಯಾನ್ ಮಾಡಿದ್ದಾರೆ. ಶಿವನಾಥ್‌ನನ್ನು ಸ್ನೇಹಿತೆ ಪೂನಂ ಮನೆಗೆ ಕರೆಸಿ ಕತ್ತು ಹಿಸುಕಿ ಕೊಲೆ ಮಾಡಲಾಗಿದೆ. ಬಳಿಕ ಮೃತದೇಹವನ್ನು ತುಂಡಾಗಿ ಕತ್ತರಿಸಿ ಮನೆಯಲ್ಲೇ ಹೂಳಲಾಗಿದೆ. ಪ್ರತಾಪ್‌ಗಢ ಪೊಲೀಸರು ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಮೃತದೇಹ ವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ. ಆರೋಪಿ ಪುಷ್ಪಾ ಹಾಗೂ ವಿನೋದ್ ಎಂಬುವವರನ್ನು ಬಂಧಿಸಲಾಗಿದೆ.

ಮೈತ್ರಿ ಒತ್ತಡ ಸ್ಪಷ್ಟ, ಹಣದುಬ್ಬರ ನಿರ್ಲಕ್ಷ್ಯ ಏಕೆ? | 'ಬಜೆಟ್ ತಾರತಮ್ಯ' ವಿರುದ್ಧ ವಿಪಕ್ಷಗಳ ಆಕ್ರೋಶ

ನಮಗೆ ಭಾರತ್ ಬಜೆಟ್ ಬೇಕು, ಎನ್‌ಡಿಎ ಬಜೆಟ್ ಅಲ್ಲ

ದೆಹಲಿ : ಮಂಗಳವಾರ ಮಂಡನೆಯಾದ ಕೇಂದ್ರ ಬಜೆಟ್ ವಿರುದ್ಧ 'ತಾರತಮ್ಯದ' ಆರೋಪವನ್ನು ವಿಪಕ್ಷಗಳು ಮಾಡಿದ್ದು ಬುಧವಾರ ಸಂಸತ್ ಆವರಣದಲ್ಲಿ ಸದಸ್ಯರಿಂದ ಭಾರಿ ಪ್ರತಿಭಟನೆ ನಡೆದಿದೆ. ನಿರ್ಮಲಾ ಸೀತಾರಾಮನ್ ಬಜೆಟ್ ಅಧಿಕಾರ

ಉಳಿಸಿಕೊಳ್ಳಲು ರಚಿಸಿದ ಬಜೆಟ್ ಎಂದು ಆರೋಪಿಸಿರುವ ವಿಪಕ್ಷ ಗಳು ನಮಗೆ ಭಾರತ್ ಬಜೆಟ್ ಬೇಕು ಎನ್‌ಡಿಎ ಬಜೆಟ್ ಅಲ್ಲ ಎಂದು ಫಲಕಗಳನ್ನು ಹಿಡಿದು ಪ್ರತಿಭಟನೆ ನಡೆಸಿದ್ದಾರೆ. ಇನ್ನೊಂದೆಡೆ ರಾಜ್ಯಸಭೆ ಹಾಗೂ ಲೋಕಸಭೆ ಎರಡರಲ್ಲೂ ವಿಪಕ್ಷ ನಾಯಕರು ಸರಕಾರದ ವಿರುದ್ಧ ಹರಿಹಾಯ್ದಿದ್ದಾರೆ. ಮಲ್ಲಿಕಾರ್ಜುನ್ ಖರ್ಗೆ ಹಾಗೂ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ನಡುವೆ ಭಾರಿ ಜಟಾಪಟಿ ಕೂಡ ರಾಜ್ಯಸಭೆಯಲ್ಲಿ ನಡೆದಿದೆ.

ಎನ್‌ಡಿಎ ಮೈತ್ರಿ ಪಕ್ಷಗಳಾದ ಆಂಧ್ರಪ್ರದೇಶ ಹಾಗೂ ಬಿಹಾರಕ್ಕೆ ಈ ಬಾರಿ ಬಜೆಟ್‌ನಲ್ಲಿ ಭರಪೂರ ಕೊಡುಗೆ ನೀಡಲಾಗಿದ್ದು ಇಂಡಿಯ ಒಕ್ಕೂಟದ ಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದೆ. ಅದರಲ್ಲೂ ಹಲವು ರಾಜ್ಯಗಳ ಹೆಸರು ಕೂಡ ಬಜೆಟ್ ಭಾಷಣದಲ್ಲಿ ಕೇಳಿ ಬಂದಿಲ್ಲ. ರಾಜ್ಯಗಳ ಮಧ್ಯೆ ಕೇಂದ್ರದ ತಾರತಮ್ಯ ಸರಿಯಲ್ಲ ಇದು ರಾಜಕೀಯ ಪ್ರೇರಿತ ಬಜೆಟ್ ಎಂದು ಆರೋಪಿಸಿದ್ದಾರೆ. ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಣಿಕಮ್ ಠಾಗೋರ್, ಶಶಿ ತರೂರ್, ಅಖಿಲೇಶ್ ಯಾದವ್, ಗೌರವ್ ಗೋಗೊಯ್ , ಸಂಜಯ್ ರಾವುತ್, ಸೇರಿ ಹಲವರು ಬಿಜೆಪಿ ವಿರುದ್ಧ ತೀಕ್ಷ್ಣ ದಾಳಿ ನಡೆಸಿದ್ದಾರೆ. ವಿಪಕ್ಷಗಳ ಆರೋಪಕ್ಕೆ ನಿರ್ಮಲಾ ಸೀತಾರಾಮನ್ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಕ್ಕ ಉತ್ತರವನ್ನು ಕೂಡ ನೀಡಿದ್ದು ಎರಡೂ

ಕಡೆಯಲ್ಲಿ ವಿಪಕ್ಷಗಳ ಸಭಾತ್ಯಾಗದ ಪ್ರಸಂಗವೂ ನಡೆಯಿತು.

ಈ ಬಜೆಟ್ ಕಾಂಗ್ರೆಸ್ ಪ್ರಣಾಳಿಕೆಯ ಕಾಪಿ: ರಾಜ್ಯಸಭೆಯಲ್ಲಿ ಪಿ ಚಿದಂಬರಂ ನಿರ್ಮಲಾ ಸೀತಾರಾಮನ್ ಬಜೆಟ್ ಬಗ್ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ರಾಜ್ಯಸಭೆಯಲ್ಲಿ ಮಾತನಾಡಿದ ಅವರು, ' ಕಾಂಗ್ರೆಸ್ ಪ್ರಣಾಳಿಕೆಯನ್ನು ಓದಲು ನಿರ್ಮಲಾ ಸೀತಾರಾಮನ್ ಸಮಯ ಮಾಡಿಕೊಂಡಿದ್ದಕ್ಕೆ ನನಗೆ ಖುಷಿಯಾಗಿದೆ. ಕಾಪಿ ಮಾಡುವುದೇ ಆಗಿದ್ದರೆ ಇನ್ನೂ ಸ್ವಲ್ಪ ಹೆಚ್ಚಿನ ಅಂಶಗಳನ್ನು ಕಾಪಿ ಮಾಡಬಹುದಿತ್ತು' ಎಂದು ಚಿದಂಬರಂ ಬಜೆಟ್‌ನ್ನು ಕಾಂಗ್ರೆಸ್ ಪ್ರಣಾಳಿಕೆಯಿಂದ ನಕಲು ಎಂದು ಆರೋಪಿಸಿದ್ದಾರೆ. ಈ ಸದನದಲ್ಲಿ ಕಾಪಿ ಮಾಡುವುದು ತಪ್ಪಲ್ಲ. ಕಾಪಿಯನ್ನು ಉತ್ತೇಜಿಸಲಾಗುತ್ತದೆ, ಇನ್ನೂ ಸ್ವಲ್ಪ ಅಂಶಗಳನ್ನು ನಕಲು ಮಾಡಿ ಎಂದು ವ್ಯಂಗ್ಯವಾಡಿದ್ದಾರೆ. ಪ್ರಣಾಳಿಕೆಯ ಪುಟ 11, 30 ಹಾಗೂ 31ರಿಂದ ಅಂಶಗಳನ್ನು ನಕಲು ಮಾಡಲಾಗಿದೆ ಎಂದರು. ಉದ್ಯೋಗ ಸೃಷ್ಟಿ ವಿಚಾರದಲ್ಲಿ ಪ್ರೊಡಕ್ಷನ್-ಲಿಂಕ್ಡ್ ಇನ್ಸೆನ್‌ಟಿವ್(ಪಿಎಲ್‌ಐ) ಯೋಜನೆಯಿಂದ ಉದ್ಯೋಗ ಸಂಬಂಧಿತ ಇನ್ಸೆನ್‌ಟಿವ್ (ಇಎಲ್‌ಐ)ಯೋಜನೆಗೆ ಬದಲಾದ ಬಗ್ಗೆ ಕೆಲವು ಅನುಮಾನ ವ್ಯಕ್ತಪಡಿಸಿರುವ ಚಿದಂಬರಂ ಕೇಂದ್ರ ಸರಕಾರ ಯೋಚಿಸಿದ ರೀತಿಯ ಉದ್ಯೋಗವನ್ನು ಪಿಎಲ್‌ಐ ಸೃಷ್ಟಿಸಿಲ್ಲವೇ ಎಂದು ಪ್ರಶ್ನಿಸಿದ್ದಾರೆ.ಪಿಎಲ್‌ಐ ಯೋಜನೆ ಎಷ್ಟು ಉದ್ಯೋಗ ಸೃಷ್ಟಿಸಿದೆ ? ಮಾಹಿತಿ ನೀಡಿ ಎಂದು ಆಗ್ರಹಿಸಿದ್ದಾರೆ. ಜತೆಗೆ ಹಣದುಬ್ಬರದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿ ಈ ವಿಚಾರವನ್ನು ಸಾಮಾನ್ಯ ಎಂಬ ರೀತಿ ಕೇಂದ್ರ ಸರಕಾರ ನಡೆಸಿಕೊಂಡಿದೆ, ಹಣದುಬ್ಬರದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಶಿಕ್ಷೆ ಅನುಭವಿಸುವುದು ಖಚಿತ ಎಂದು ವಾಗ್ದಾಳಿ ನಡೆಸಿದ್ದಾರೆ.

ಬಜೆಟ್‌ನಲ್ಲಿ ಎನ್‌ಡಿಎ ಆಡಳಿತವಿಲ್ಲದ ರಾಜ್ಯಗಳ ಪ್ರಸ್ತಾಪವೇ ಆಗಿಲ್ಲ. ಈ ರೀತಿಯ ತಾರತಮ್ಯ ಒಕ್ಕೂಟ ವ್ಯವಸ್ಥೆಯಲ್ಲಿ ಸರಿಯಲ್ಲ ಎಂದು ಚಿದಂಬರಂ ಬಜೆಟ್ ಟೀಕಿಸಿದ್ದಾರೆ.

ಸಂಸತ್ ಪ್ರವೇಶಕ್ಕೆ ತಡೆಯಾದ ಪ್ರತಿಭಟನೆ

ಕಲಾಪ ಅರಂಭವಾಗುತ್ತಿದ್ದಂತೆ ವಿಪಕ್ಷ ನಾಯಕರು ಬಜೆಟ್ ತಾರತಮ್ಯದ ಬಗ್ಗೆ ಚರ್ಚೆ ಆರಂಭಿಸಿದ್ದು ಲೋಕಸಭೆಯಲ್ಲಿ ಗದ್ದಲ ಆರಂಭವಾಗಿದೆ. ಸ್ಪೀಕರ್ ಓಂ ಬಿರ್ಲಾ ಸದನದಲ್ಲಿ ಚರ್ಚೆಗೆ ಅಡಚಣೆ ಸೃಷ್ಟಿಸದಂತೆ ಎಚ್ಚರಿಕೆ ನೀಡಿದ್ದರೂ, ಪ್ರತಿಭಟನೆ ಮುಂದುವರೆದಿದ್ದು, 'ವ್ಯವಸ್ಥಿತವಾಗಿ ಕಲಾಪಕ್ಕೆ' ಅಡ್ಡಿಪಡಿಸಲಾಗುತ್ತಿದೆಯೇ ಎಂದು ಪ್ರಶ್ನಿಸಿದ್ದಾರೆ. ಸಂಸತ್ ಆವರಣದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಸಂಸದರು ಟಿಎಂಸಿ, ಸಮಾಜವಾದಿ ಪಕ್ಷ, ಡಿಎಂಕೆ ಸಂಸದರು ಸೇರಿ ಅನೇಕ ಇಂಡಿಯ ಒಕ್ಕೂಟದ ನಾಯಕರು ಭಾಗಿಯಾಗಿದ್ದರು. ಕೇಂದ್ರ ಸರಕಾರದ ವಿರುದ್ಧ ತಮಿಳುನಾಡು , ಮಹಾರಾಷ್ಟ್ರ ಸೇರಿ ಅನೇಕ ರಾಜ್ಯಗಳನ್ನು ಕಡೆಗಣಿಸಿರುವುದನ್ನು ಖಂಡಿಸಿ ಫಲಕಗಳನ್ನು ಪ್ರದರ್ಶಿಸಲಾಯಿತು. ಹಲವು ಸಂಸದರು ದ್ವಾರದ ಬಳಿ ಪ್ರತಿಭಟನೆಯನ್ನು ಖಂಡಿಸಿದ್ದು ಲೋಕಸಭೆ ಒಳಗೆ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ ಎಂದು ದೂರಿದರು.

ಮೈತ್ರಿಗಳಿಗೆ ಬೆಂಬಲ ಬೆಲೆ - ಅಖಿಲೇಶ್ ಟೀಕೆ: ಸಂಸತ್ ಆವರಣದಲ್ಲಿ ವಿಪಕ್ಷಗಳು ಪ್ರತಿಭಟನೆ ನಡೆಸಿದ್ದು ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಬಜೆಟ್‌ನ್ನು 'ಮೈತ್ರಿಗಳಿಗೆ ನೀಡಿದ ಬೆಂಬಲ ಬೆಲೆ' ಎಂದು ಅಣಕಿಸಿದ್ದಾರೆ. ಎಲ್ಲರೂ ರೈತರಿಗೆ ಕನಿಷ್ಠ ಬೆಂಬಲ ಬೆಲೆ ಆಗ್ರಹಿಸಿದರೆ, ಕೇಂದ್ರ ಸರಕಾರ ತಮ್ಮ ಮೈತ್ರಿಗಳಿಗೆ ಬೆಂಬಲ ಬೆಲೆ ನೀಡಿದೆ. ಹಣದುಬ್ಬರ ವಿಚಾರವಾಗಿ ಯಾವುದೇ ನಿರ್ದಿಷ್ಟ ಕ್ರಮ ಕೈಗೊಳ್ಳುವಲ್ಲಿ ಕೇಂದ್ರ ಸೋತಿದೆ. ಉತ್ತರ ಪ್ರದೇಶಕ್ಕೆ ಏನೂ ಸಿಕ್ಕಿಲ್ಲ. ಡಬಲ್ ಇಂಜಿನ್ ಸರಕಾರದಲ್ಲಿ ಯುಪಿಗೆ ಡಬಲ್ ಲಾಭ ಸಿಗಬೇಕಿತ್ತು .

ಪ್ರತಿಪಕ್ಷಗಳು ದಾರಿತಪ್ಪಿಸುತ್ತಿವೆ

ವಿಪಕ್ಷಗಳ ಬಜೆಟ್ ತಾರತಮ್ಯ ಆರೋಪವನ್ನು ಖಂಡಿಸಿದ ಕಿರಣ್ ರಿಜಿಜು ಸಂಪೂರ್ಣ ಬಜೆಟ್ ಕೇವಲ ಎರಡು ರಾಜ್ಯಗಳಿಗೆ ಎಂಬ ವಾದ ತಪ್ಪು. ವಿರೋಧ ಪಕ್ಷಗಳು ಜನರ ದಾರಿತಪ್ಪಿಸುವ ಯತ್ನ ನಡೆಸುತ್ತಿದೆ. ಮೂಲಸೌಕರ್ಯ ಅಭಿವೃದ್ಧಿಗೆ 11,11,111 ಕೋಟಿ ಮೀಸಲಿಟ್ಟಿರುವುದು ದೇಶಕ್ಕೆ ಹೊರತು ಎರಡು ರಾಜ್ಯಕ್ಕಲ್ಲ ಎಂದರು. ಮಧ್ಯಮ ವರ್ಗ, ವೈದ್ಯಕೀಯ ಸೇವೆ, ಕೃಷಿ ವಲಯ, ಬುಡಕಟ್ಟು ಜನರಿಗೆ ಬಜೆಟ್ ಮಿಸಲಿಡಲಾಗಿದೆ. ಇದೊಂದು ಉತ್ತಮ ಬಜೆಟ್ . ಬಿಹಾರ , ಆಂಧ್ರ ಬಜೆಟ್‌ನಲ್ಲಿ ಕೆಲವು ಲಾಭ ಪಡೆದರೆ ತಪ್ಪೇನು?ಎಂದು ಪ್ರಶ್ನಿಸಿದ್ದಾರೆ.

ಲಖ್ನೌ ಜನತೆ ದೆಹಲಿ ನಾಯಕರ ಸಿಟ್ಟಿಗೆ ಕಾರಣವಾಗಿರಬಹುದು ಎಂದು ಟೀಕಿಸಿದ್ದಾರೆ.

ಇನ್ನೊಂದೆಡೆ ರಾಜ್ಯಗಳನ್ನು ಕಡೆಗಣಿಸಿರುವ ಬಗ್ಗೆ ವಿವಿಧ ರಾಜ್ಯಗಳ ಸಂಸದರು ಕೇಂದ್ರ ಸರಕಾರದ ವಿರುದ್ಧ ಹರಿಹಾಯ್ದಿದ್ದಾರೆ. ಶಿವಸೇನಾ (ಉದ್ಧವ್ ಬಣ)ದ ಪ್ರಿಯಾಂಕಾ ಚತುರ್ವೇದಿ 'ಮಹಾರಾಷ್ಟ್ರ ವಿರೋಧಿ ಯೋಜನಾ' ಅತಿ ಹೆಚ್ಚು ತೆರಿಗೆ ಸಲ್ಲಿಸುವ ಮಹಾರಾಷ್ಟ್ರಕ್ಕೆ ಬಜೆಟ್‌ನಲ್ಲಿ ಅನ್ಯಾಯ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಂಜಾಬ್ ಸಂಸದ ಅಮರಿಂದರ್ ಸಿಂಗ್ ರಾಜಾ ರಾಜ್ಯಕ್ಕೆ ಯಾವುದೇ ಪ್ರವಾಹ ನೆರವು ನೀಡಲಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಬಜೆಟ್ ಬಗ್ಗೆ ' ಬಾಲ ನಾಯಿಯನ್ನ ಕುಣಿಸುತ್ತಿದೆ' ಎಂದು ಕಟುವಾಗಿ ಟೀಕಿಸಿದ್ದು ಎನ್‌ಡಿಎ ಮೇಲೆ ಮೈತ್ರಿ ಪಕ್ಷಗಳ ಒತ್ತಡವಿರುವುದು ಬಜೆಟ್‌ನಲ್ಲಿ ಸ್ಪಷ್ಟವಾಗಿದೆ ಎಂದು ಹೇಳಿದ್ದಾರೆ.

ಟೇಕ್ ಆಫ್ ವೇಳೆ ರನ್ ವೇ ನಲ್ಲಿ ಜಾರಿದ ವಿಮಾನ

ನೇಪಾಳದಲ್ಲಿ ಮಗು ಸೇರಿ 18 ಬಲಿ

ಕಠ್ಮಂಡು: 19 ಪ್ರಯಾಣಿಕರನ್ನು ಹೊತ್ತು ಹೊರಟಿದ್ದ ವಿಮಾನ ಟೇಕ್ ಆಫ್ ವೇಳೆಯೇ ಹೊತ್ತಿ ಉರಿದಿದೆ. ಘಟನೆಯಲ್ಲಿ ನಾಲ್ಕು ವರ್ಷದ ಮಗು ಸೇರಿ 18 ಮಂದಿ ದುರ್ಮರಣಕ್ಕೀಡಾಗಿದ್ದಾರೆ. ಬುಧವಾರ ನೇಪಾಳದ ತ್ರಿಭುವನ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈ ಅವಘಡ ಸಂಭವಿಸಿದೆ.

2 ವಿಮಾನ ಸಿಬ್ಬಂದಿ ಹಾಗೂ 17 ಪ್ರಯಾಣಿಕರನ್ನು ಹೊತ್ತು ಪೋಖರಾಗೆ ಹೊರಟಿದ್ದ ಸೌರ್ಯ ಏರ್‌ಲೈನ್ಸ್ ವಿಮಾನ ಟೇಕ್‌ಆಫ್ ವೇಳೆ ರನ್‌ವೇನಲ್ಲಿ ಜಾರಿದೆ. ತಕ್ಷಣ ವಿಮಾನಕ್ಕೆ ಬೆಂಕಿ ಹೊತ್ತಿಕೊಂಡಿದ್ದು ನೋಡನೋಡುತ್ತಿದ್ದಂತೆ 15 ಮಂದಿ ಸುಟ್ಟು ಕರಕಲಾಗಿದ್ದಾರೆ. ಇನ್ನೂ ಮೂವರು ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಸಾವನ್ನಪ್ಪಿದ್ದಾರೆ ಎಂದು ತಿಳಿದು ಬಂದಿದೆ. ಓರ್ವ ವಿಮಾನ ಸಿಬ್ಬಂದಿಯನ್ನು ರಕ್ಷಿಸಲಾಗಿದೆ. ವಿಮಾನದಲ್ಲಿ ತಾಂತ್ರಿಕ ಸಿಬ್ಬಂದಿಗಳೇ

ಹೆಚ್ಚಾಗಿದ್ದು , ಕೆಲವು ಸಿಬ್ಬಂದಿಗಳ ಕುಟುಂಬಸ್ಥರು ಕೂಡ ಇದ್ದರು ಎಂದು ಹೇಳಲಾಗಿದೆ. 4 ವರ್ಷದ ಮಗು ಅಧಿರಜ್ ಶರ್ಮಾ ಕೂಡ ದುರಂತಕ್ಕೆ ಬಲಿಯಾಗಿದೆ. ಸೌರ್ಯ ವಿಮಾನದ ಪರೀಕ್ಷಾ ಹಾರಾಟದ ವೇಳೆ ಈ ಘಟನೆ ನಡೆದಿದೆ ಎನ್ನಲಾಗಿದೆ.

ನೇಪಾಳ ಸರಕಾರ ಈ ದುರ್ಘಟನೆ ಕುರಿತು ತನಿಖೆ ನಡೆಸಲು ನೇಪಾಳದ ನಾಗರಿಕ ವಿಮಾನಯಾನ ಪ್ರಾಧಿಕಾರದ ಮಾಜಿ ನಿರ್ದೇಶಕ ರತೀಶ್ ಚಂದ್ರ ಲಾಲ್ ಸುಮನ್ ನೇತೃತ್ವದಲ್ಲಿ 5 ಸದಸ್ಯರ ಸಮಿತಿ ರಚಿಸಿದೆ.

ಬಜೆಟ್ ಬಳಿಕ ರೈತ ಮುಖಂಡರ ನಿಯೋಗದ ಜತೆ ರಾಹುಲ್ ಸಭೆ

ಎಂಎಸ್‌ಪಿಗೆ ಇಂಡಿಯ ಕೂಟ ಬೆಂಬಲ

ದೆಹಲಿ: ಕೇಂದ್ರ ಬಜೆಟ್ ಬಳಿಕ ಬುಧವಾರ ಸಂಸತ್ ಭವನದ ಸಂಕೀರ್ಣದಲ್ಲಿ ಎಂಎಸ್‌ಪಿ ವಿಚಾರವಾಗಿ ರೈತ ಮುಖಂಡರನ್ನ ರಾಹುಲ್ ಗಾಂಧಿ ಭೇಟಿಯಾಗಿದ್ದಾರೆ. ಕನಿಷ್ಠ ಬೆಂಬಲ ಬೆಲೆ ವಿಚಾರವಾಗಿ ಇಂಡಿಯ ಒಕ್ಕೂಟ ಸರಕಾರವನ್ನು ಒತ್ತಾಯಿಸಲಿದೆ ಎಂದು ವಿಪಕ್ಷ ನಾಯಕ ರೈತರಿಗೆ ಭರವಸೆ ನೀಡಿದ್ದಾರೆ.

ಉತ್ತರಪ್ರದೇಶ, ಹರಿಯಾಣ, ಪಂಜಾಬ್, ತೆಲಂಗಾಣ, ತಮಿಳುನಾಡು ಹಾಗೂ ಕರ್ನಾಟಕದಿಂದ 12 ರೈತರ ನಿಯೋಗ ಬುಧವಾರ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದು ಕಾನೂನಾತ್ಮಕ ಗ್ಯಾರಂಟಿಯ ಕನಿಷ್ಠ ಬೆಂಬಲ ಬೆಲೆ ಅಗತ್ಯತೆಯನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಜತೆಗೆ ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿಪಕ್ಷ ನಾಯಕನ ಜತೆ ಚರ್ಚಿಸಿದ್ದಾರೆ. ರಾಜ್ಯವಾರು ಕೃಷಿ ಸಮಸ್ಯೆಗಳನ್ನ ಆಲಿಸಿದ ಬಳಿಕ ಅಧಿವೇಶನದಲ್ಲಿ ಎಂಎಸ್‌ಪಿ ಬಗ್ಗೆ ಕೇಂದ್ರ

ಸರಕಾರವನ್ನು ಒತ್ತಾಯಿಸಲಾಗುವುದು ಎಂದು ಆಶ್ವಾಸನೆ ನೀಡಿದ್ದಾರೆ.

ರೈತರ ಭೇಟಿ ಬಳಿಕ ಮಾತನಾಡಿದ ರಾಹುಲ್ ಗಾಂಧಿ, ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಕಾನೂನಾತ್ಮಕ ಗ್ಯಾರಂಟಿಯ ಕನಿಷ್ಠ ಬೆಂಬಲ ಬೆಲೆಯನ್ನು ಉಲ್ಲೇಖಿಸಿತ್ತು. ನಾವು ಈ ಬಗ್ಗೆ ಸಾಕಷ್ಟು ಪರಿಶೀಲನೆ ನಡೆಸಿದ್ದೇವೆ, ಎಂಎಸ್‌ಪಿ ಜಾರಿ ಮಾಡಲು ಸಾಧ್ಯವಿದೆ. ರೈತ ಮುಖಂಡರ ನಿಯೋಗದ ಜತೆ ನಡೆದ ಚರ್ಚೆಯನ್ನು ಉಳಿದ ಇಂಡಿಯ ಕೂಟದ ನಾಯಕರ ಜತೆ ಹಂಚಿಕೊಳ್ಳಲಾಗುವುದು. ಎಂಎಸ್‌ಪಿ ವಿಚಾರದಲ್ಲಿ ಸರಕಾರವನ್ನು ಒತ್ತಾಯಿಸುತ್ತೇವೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಸಭೆಯಲ್ಲಿ ಕೆ ಸಿ ವೇಣುಗೋಪಾಲ್, ಅಮರಿಂದರ್ ಸಿಂಗ್ ರಾಜಾ, ಸುಖ್ಜಿಂದರ್ ಸಿಂಗ್ ರಾಂಧವಾ , ದೀಪೆಂದರ್ ಸಿಂಗ್ ಹೂಡಾ , ಜೈ ಪ್ರಕಾಶ್ ಸೇರಿ ಹಲವು ನಾಯಕರು ಉಪಸ್ಥಿತರಿದ್ದರು.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ
ಬೆಳಗಾವಿ. ಫ್ಯಾಕ್ಸ್/ದೂರವಾಣಿ ಸಂಖ್ಯೆ: 0831-2470342, 2470257
ಇ-ಮೇಲ್: belagavibuda@gmail.com
No: BUDA/PWD/E-TENDER/2024-25/1106 Date: 23-07-2024
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳಲ್ಲಿನ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಅನ್ವಯ ಇ-ಪ್ರೊಕ್ಯೂರ್‌ಮೆಂಟ್-2 ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ದೂರವಾಣಿ ಸಂಖ್ಯೆ: **0831-2470342**) ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್: **https://kppp.karnataka.gov.in** ರಲ್ಲಿ ಪಡೆಯಬಹುದು.
ಕಾಮಗಾರಿಯ ಹೆಸರು: **ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಕಣಬರ್ಗಿಯಲ್ಲಿ ಯೋಜನೆ ಸಂಖ್ಯೆ: 61 ರ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ.** ಇಂಡೆಂಟ್ ನಂ.: **BGMUDA/2023-24/OW/WORK_INDENT41.** ಕಾಮಗಾರಿ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ): **ರೂ. 94.06.** ಮುಂಗಡ ಠೇವಣಿ (ರೂ. ಲಕ್ಷಗಳಲ್ಲಿ): **ರೂ. 94.06.** ಕಾಮಗಾರಿಯನ್ನು ನಿರ್ವಹಿಸುವ ಅವಧಿ: **24 ತಿಂಗಳು (ಮಳೆಗಾಲವನ್ನು ಸೇರಿ).**
ಟೆಂಡರ್ ಫಾರ್ಮ ಬೆಲೆ ಇ-ಪ್ರೊಕ್ಯೂರ್‌ಮೆಂಟ್‌ದಲ್ಲಿದ್ದಂತೆ: 1) ಟೆಂಡರ್ ಕ್ವಾರಿಸ್ ಸಲ್ಲಿಸಲು ಕೊನೆಯ ದಿನಾಂಕ: **07-08-2024 ರಂದು ಸಾಯಂಕಾಲ 4.30 ಘಂಟೆಯವರೆಗೆ. 2)** ಟೆಂಡರ್ ಪೂರ್ವ ಸಭೆಯ ಕೊನೆಯ ದಿನಾಂಕ: **09-08-2024 ರಂದು ಮುಂಜಾನೆ 11.00 ಘಂಟೆಗೆ ವಿಳಾಸ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ. 3)** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **26-08-2024 ರಂದು ಸಾಯಂಕಾಲ 4.30 ಘಂಟೆಯವರೆಗೆ. 4)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **27-08-2024 ರಂದು ಸಾಯಂಕಾಲ 5.00 ಘಂಟೆಗೆ. 5)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಇ-ಪೋರ್ಟಲ್ ಮುಖಾಂತರ ಮಾಹಿತಿಯನ್ನು ಪಡೆಯಬಹುದು. **6)** ಯಾವ ಕಾರಣವನ್ನು ಸಹ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. **7)** ಟೆಂಡರ್ ಮೊತ್ತವು ಜಿ.ಎಸ್.ಟಿ. ಮೊತ್ತವನ್ನು ಒಳಗೊಂಡಿರುತ್ತದೆ.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.
ಸಹಿ/- ಆಯುಕ್ತರು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.
ವಾಸಾಸಂಇ/ಬೆಳಗಾವಿ/447/ಅಡ್ವಟೋರ್/2024-25

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಾಳಿಕೋಟಿ-586214
ದೂರವಾಣಿ ಸಂ:08356-266231, ಇ-ಮೇಲ್: apmctalikote@gmail.com
ಕ್ರ.ಸಂ:ಕೃಉಮಾಸ/ತಾ/153/2024-25 ದಿನಾಂಕ:20.07.2024
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
ತಾಳಿಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ 2024-25 ನೇ ಸಾಲಿನ ಅವಧಿಗೆ(ಕಾರ್ಯಾದೇಶ ನೀಡಿದ ದಿನಾಂಕದಿಂದ 31-05-2025 ರ ವರೆಗೆ)ಭದ್ರತಾ ಸೇವೆಗಾಗಿ ಸಂಬಂಧಿಸಿದ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.
1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 05.08.2024 ಸಾಯಂಕಾಲ 4.00 ಘಂಟೆವರೆಗೆ.
2) ಟೆಂಡರ್ ತೆರೆಯುವ ದಿನಾಂಕ: 07.08.2024 ಸಾಯಂಕಾಲ 4.30 ಘಂಟೆಗೆ.
3) ಟೆಂಡರ್ ತೆರೆಯುವ ಸ್ಥಳ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಾಳಿಕೋಟೆ.

ಕ್ರ. ಸಂ	ಸೇವೆಯ ಹೆಸರು	ಪೂರೈಸಬೇಕಾದ ಸಿಬ್ಬಂದಿಗಳ ಸಂಖ್ಯೆ	ಇ.ಎಂ.ಡಿ. ರೂ.ಗಳಲ್ಲಿ	ಖಾಲಿ ಟೆಂಡರ್ ಫಾರಂ ಬೆಲೆ
1	ಭದ್ರತಾ ಸಿಬ್ಬಂದಿ	02	60,000/-	ಕೆಪಿಪಿಪಿ ಪೋರ್ಟಲ್ ನಿಯಮಗಳ ನ್ವಯ
2	ಕಂಪ್ಯೂಟರ್ ಆಪರೇಟರ್	01		
3	ವಾಹನ ಚಾಲಕರು	01		
4	ಡಾಟಾ ಎಂಟ್ರಿ ಆಪರೇಟರ್	02		
	ಒಟ್ಟು	06		

ಭಾಗವಹಿಸುವ ಏಜೇನ್ಸಿದಾರರು ಪ್ರತಿ ಮಾಹೆಯ ಒಟ್ಟು ಬಿಲ್ಲಿನ ಮೊತ್ತಕ್ಕೆ ಶೇಕಡಾ 1 ಕ್ಕಿಂತ ಕಡಿಮೆ ಇಲ್ಲದಂತೆ ಸೇವಾ ಶುಲ್ಕದ ದರವನ್ನು ಮಾತ್ರ ನಮೂದಿಸತಕ್ಕದ್ದು. ಇ.ಎಂ.ಡಿ ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬ್ಯಾಂಕಿನಲ್ಲಿ ಹೊಂದಿರುವ ಕರ್ನಾಟಕ ಸರಕಾರ ಸೆಂಟ್ರಲ್ ಪೂಲಿಂಗ್ ಅಕೌಂಟಿನಲ್ಲಿ ಟೆಂಡರ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೊಂದು ಮಾದರಿಯಲ್ಲಿ ಸಂದಾಯ ಮಾಡುವುದು. ಟೆಂಡರ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಸಮಿತಿ ಕಛೇರಿ ವೇಳೆಯಲ್ಲಿ ಅಥವಾ ಮೇಲೆ ಸೂಚಿಸಿರುವ ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ. http://kppp.karnataka.gov.in ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರಕಾರ ಇ-ಪ್ರೊಕ್ಯೂರಮೆಂಟ್ ಸಹಾಯವಾಣಿ 08356-266231 ಮತ್ತು ಕಾರ್ಯದರ್ಶಿ, ಕೃ.ಉ.ಮಾ.ಸ, ತಾಳಿಕೋಟೆ ಸಹಾಯವಾಣಿ 8197946860 ರವರಿಂದ ಪಡೆಯಬಹುದಾಗಿದೆ.
ಸಹಿ/- ಕಾರ್ಯದರ್ಶಿ, ಕೃಉಮಾಸ ತಾಳಿಕೋಟೆ
ಸಹಿ/-ಆಡಳಿತಾಧಿಕಾರಿಗಳು ಕೃಉಮಾಸ ತಾಳಿಕೋಟೆ
ವಾಸಾಸಂಇ/ವಿಜಯಪುರ/129/ಕೆಎಸ್ಎಂಸಿಎ/2024-25

ಕಟ್ಟಡದಲ್ಲಿ ಬೆಂಕಿ: ಬಾಲಕಿ ಸಾವು

ಹೈದ್ರಾಬಾದ್: 3 ಅಂತಸ್ತಿನ ಕಟ್ಟಡದಲ್ಲಿ ಬುಧವಾರ ಭಾರಿ ಅಗ್ನಿ ಅವಘಡ ಸಂಭವಿಸಿದೆ. ಪರಿಣಾಮ ಓರ್ವ ಬಾಲಕಿ ಸಾವನ್ನಪ್ಪಿದ್ದು ಐವರು ಗಂಭೀರ ಗಾಯಗೊಂಡಿದ್ದಾರೆ ಎಂದು ತಿಳಿದು ಬಂದಿದೆ. ಕಟ್ಟಡದ ತಳ ಮಹಡಿಯಲ್ಲಿನ ಪೀಠೋಪಕರಣ ಗೋದಾಮಿನಲ್ಲಿ ಬೆಂಕಿ ಹೊತ್ತಿದ್ದು ಬಳಿಕ ಎಲ್ಲಾ ಮಹಡಿಗೂ ಹರಡಿದೆ. ಅಗ್ನಿ ಶಾಮ ಕದಳ ಸಿಬ್ಬಂದಿ ಹಾಗೂ ಪೊಲೀಸರು ಕಟ್ಟಡದಲ್ಲಿದ್ದ ಸುಮಾರು 20 ಮಂದಿಯನ್ನು ರಕ್ಷಿಸಿದ್ದಾರೆ . ಘಟನೆಯಲ್ಲಿ 10 ವರ್ಷದ ಬಾಲಕಿ ಸಾವನ್ನಪ್ಪಿದ್ದು ಗಾಯಗೊಂಡವರನ್ನು ಒಸ್ಮಾನಿಯಾ ಜನರಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಬೆಂಕಿ ಹೊತ್ತಿಕೊಳ್ಳಲು ಶಾರ್ಟ್ ಸರ್ಕ್ಯೂಟ್ ಕಾರಣ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,ಧಾರವಾಡ
ಫೋ:-(0836)2213838 Email: eedharwad@gmail.com
ನಂ.ಎಚ್.ಡಿಎಂಸಿ/66/07/02/2024-25 ದಿನಾಂಕ:- -07-2024
ಇ-ಟೆಂಡರ ಅಧಿಸೂಚನೆ
ಸನ್ 2023-24 ಹಾಗೂ 2024-25ನೇ ಸಾಲಿನ ಪಾಲಿಕೆ ಅನುದಾನ, 15ನೇ ಹಣಕಾಸು ಅನುದಾನ, ಎಸ್.ಎಫ್.ಸಿ ಅನುದಾನ (ಎಸ್‌ಸಿಎಸ್‌ಪಿ/ಟಿಎಸ್‌ಪಿ/7.25%) ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ಪ್ರಕಾರ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ PWD/CPWD/ ಇತರೆ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ 1ನೇ ದರ್ಜೆ, 2ನೇ ದರ್ಜೆ, 3ನೇ ದರ್ಜೆ ಮತ್ತು 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರನಲ್ಲಿ ಭಾಗವಹಿಸಬಹುದು.
ಇ.ನಂ :
1) 10422(SC), 2) 3365(Gen), 3)1340 (Gen), 4) 4729 (Gen), 5) 4184 (Gen), 6)8384 (Gen), 7) 2217 (Gen), 8) 6467 (Gen), 9) 22370(Gen), 10)22618(SC), 11) 22614 (Gen), 12) 21643 (Gen), 13)21681(Gen), 14)21641(SC), 15) 21682 (Gen), 16)21684 (ST), 17)21694(Gen), 18)21693(SC), 19) 22720 (Gen), 20) 22732 (Gen), 21) 18945(ST), 22) 22743(Gen), 23) 21638 (Gen), 24)22630 (Gen), 25) 22610(Gen), 26) 22640(SC), 27) 22639 (ST), 28) 22635 (Gen), 29) 22524(Gen), 30) 22596(Gen), 31) 21635(Gen), 32) 22632(Gen), 33) 22601(Gen), 34) 22636(Gen), 35) 22638(Gen), 36) 18988(Gen), 37) 22603(ST), 38) 21637(Gen), 39) 22484(Gen), 40) 22595(SC), 41) 22606(SC), 42) 22631(Gen), 43) 19008(SC), 44) 22621(Gen), 45) 18997(Gen), 46) 21468(SC), 47) 22599(Gen), 48) 22629(ST), 49) 22480 (SC), 50) 22597(Gen), 51) 22607(Gen), 52) 22708(Gen), 53) 22584(Gen), 54) 22627(SC), 55) 18999(Gen), 56) 21163(Gen), 57) 22598(Gen), 58) 22707(Gen) 59) 22739(Gen), 60) 17438(Gen), 61) 17463(Gen), 62) 17442(Gen), 63) 22634(Gen).
ಒಟ್ಟು 63 ಕಾಮಗಾರಿಗಳು ಮೊತ್ತ **ರೂ.753.73** ಲಕ್ಷಗಳಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರ ದಾಖಲೆಗಳನ್ನು ಕರ್ನಾಟಕ ಸರಕಾರದ ಇ-ಪ್ರೊಕ್ಯೂರಮೆಂಟನಲ್ಲಿ **ದಿನಾಂಕ:23/07/2024** (ಅ.ನಂ. 1 ರಿಂದ 63) ಹಾಗೂ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರ ಟೆಂಡರನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 0836-2213838 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in/ ರಲ್ಲಿ ಪಡೆಯಬಹುದು.
ಈ ಮೇಲಿನ ಕಾಮಗಾರಿಗಳಿಗೆ (ಅ.ನಂ. 1 ರಿಂದ 59)
1) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : **12/08/2024 ಸಂಜೆ 05.00 ಗಂಟೆಯವರೆಗೆ**
2) ಟೆಂಡರ ತೆರೆಯುವ ದಿನಾಂಕ : **13/08/2024 ಸಂಜೆ 5.30 ಗಂಟೆ**
ಈ ಮೇಲಿನ ಕಾಮಗಾರಿಗಳಿಗೆ (ಅ.ನಂ.60 ರಿಂದ 63)
1) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : **01/08/2024 ಸಂಜೆ 05.00 ಗಂಟೆಯವರೆಗೆ**
2) ಟೆಂಡರ ತೆರೆಯುವ ದಿನಾಂಕ : **02/08/2024 ಸಂಜೆ 05.00 ಗಂಟೆ**
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ.
ವಾ.ಸಾ.ಇ/ಧಾರವಾಡ/189/ದೇಶಪಾಂಡೆಪಬ್ಲಿಸಿಟಿ/2024-25

ಲಡ್ಡುಗೆ ಕಳಪೆ ತುಪ್ಪ ಪೂರೈಕೆ, ಟಿಟಿಡಿ ಕ್ರಮ

ತಿರುಪತಿ: ತಿರುಪತಿ ತಿಮ್ಮಪ್ಪನ ಲಡ್ಡು ಪ್ರಸಾದದ ಗುಣಮಟ್ಟ ಕ್ಷೀಣಿಸುತ್ತಿದೆ ಎಂಬ ಬಗ್ಗೆ ಭಾರಿ ಚರ್ಚೆಯಾಗುತ್ತಿದೆ. ಈ ಹಿನ್ನೆಲೆ ಪರಿಶೀಲನೆ ನಡೆಸಿದ ಟಿಟಿಡಿ ಆಡಳಿತ ಮಂಡಳಿ ಪೂರೈಕೆಯಾಗುವ ತುಪ್ಪದಲ್ಲಿ ದೋಷವನ್ನು ಪತ್ತೆ ಮಾಡಿದೆ . ಈ ಹಿನ್ನೆಲೆ ದೇವಸ್ಥಾನ ಪ್ರಸಾದಕ್ಕೆ ತುಪ್ಪ ಪೂರೈಸುವ ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆ ನಿರ್ಧರಿಸಿದೆ.



ಲಡ್ಡು ತಯಾರಿಕೆಗೆ ಪೂರೈಕೆಯಾಗುವ ತುಪ್ಪ ಗುಣಮಟ್ಟದಲ್ಲಿಲ್ಲ ಹೀಗಾಗಿ ಲಡ್ಡು ಪ್ರಸಾದದ ರುಚಿಯಲ್ಲಿ ಬದಲಾವಣೆ ಕಂಡು ಬಂದಿದೆ ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿದೆ. ಭಕ್ತರು ಈ ಬಗ್ಗೆ ದೂರಿದ್ದು ಸಿಎಂ ಚಂದ್ರಬಾಬು ನಾಯ್ಡು ಈ ಬಗ್ಗೆ ಸಮಗ್ರ ಪರಿಶೀಲನೆಗೆ ಸೂಚಿಸಿ ದ್ದರು.ಹೀಗಾಗಿ ಲಡ್ಡು ಬಳಕೆಗೆ ಉಪಯೋಗವಾಗುವ ಕಚ್ಚಾವಸ್ತು ಗಳ ಗುಣಮಟ್ಟದ ಬಗ್ಗೆ ಹೆಚ್ಚಿನ ಪರೀಕ್ಷೆಗಳನ್ನು ನಡೆಸಲು ಎಫ್ ಎಸ್‌ಎಸ್‌ಎಐ ಮೂಲಕ ತಿರುಮಲದಲ್ಲಿ ಪ್ರಯೋಗಾಲಯ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಟಿಟಿಡಿ ತಿಳಿಸಿದೆ. ತುಪ್ಪ ಪೂರೈಕೆ ಮಾಡುವ 5 ಗುತ್ತಿಗೆದಾರರಲ್ಲಿ ಒಬ್ಬರು ಪೂರೈಸಿದ ತುಪ್ಪದ ಗುಣ ಮಟ್ಟ ಕಳಪೆಯಾಗಿದೆ ಎಂದು ಪತ್ತೆಯಾಗಿದೆ. ಈ ಹಿನ್ನೆಲೆ ತುಪ್ಪ ಪೂರೈಕೆಯಲ್ಲಿ ಟೆಂಡರ್ ನಿಯಮ ಉಲ್ಲಂಘಿಸಿದ ಪೂರೈಕೆ ದಾರ ರನ್ನು ಕಪ್ಪು ಪಟ್ಟಿಗೆ ಸೇರಿಸಲು ಶೋಕಾಸ್ ನೋಟೀಸ್ ನೀಡಲಾಗಿದೆ.

10 ವರ್ಷ ಜೈಲು, 1 ಕೋಟಿ ರು.ವರೆಗೆ ದಂಡ

ಪ್ರಶ್ನೆ ಪತ್ರಿಕೆ ಸೋರಿಕೆ ತಡೆ ಮಸೂದೆ ಅಂಗೀಕಾರ

ಪಟನಾ: ನೀಟ್ -ಯುಜಿ ಸೇರಿ ಹಲವು ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಕೇಂದ್ರಬಿಂದುವಾಗಿರುವ ಬಿಹಾರ ರಾಜ್ಯ ಪ್ರಶ್ನೆ ಪತ್ರಿಕೆ ಸೋರಿಕೆ ತಡೆ ಮಸೂದೆಯನ್ನು ಬುಧವಾರ ಅಂಗೀಕರಿಸಿದೆ. ಈ ಮೂಲಕ

ರಾಜ್ಯದಲ್ಲಿ ಪರೀಕ್ಷಾ ಅಕ್ರಮ ತಡೆಗೆ ಕಠಿಣ ಕ್ರಮ ಕೈಗೊಂಡಿದೆ .

ರಾಜ್ಯ ಸಂಸದೀಯ ವ್ಯವಹಾರಗಳ ಸಚಿವ ವಿಜಯ್ ಕುಮಾರ್ ಚೌಧರಿ ಬಿಹಾರ ಪಬ್ಲಿಕ್ ಪರೀಕ್ಷೆ (ಅಕ್ರಮ ತಡೆ) ಕಾಯ್ದೆ 2024 ಮಸೂದೆ ಮಂಡಿಸಿದ್ದಾರೆ.ಧ್ವನಿ ಮತಗಳಿಂದ ಅಂಗೀಕಾರ ಪಡೆದು ಮಸೂದೆ ಜಾರಿಗೆ ಬಂದಿದೆ.ಈ ಸಂದರ್ಭದಲ್ಲಿ ಬಿಹಾರಕ್ಕೆ ವಿಶೇಷ ಸ್ಥಾನಮಾನ ನೀಡದ ಎನ್‌ಡಿಎ ನಿರ್ಧಾರ ಖಂಡಿಸಿ ವಿಪಕ್ಷ ನಾಯಕರು ಸದನದಿಂದ ಹೊರನಡೆದಿದ್ದಾರೆ. ಮುಂಗಾರು ಅಧಿವೇಶನದಲ್ಲಿ ಅಂಗೀಕಾರಗೊಂಡ ಈ ಮಸೂದೆ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ 10 ವರ್ಷಗಳವರೆಗೆ ಜೈಲು, 1 ಕೋಟಿವರೆಗೆ ದಂಡ ಹಾಗೂ ಆಸ್ತಿ ಮುಟ್ಟುಗೋಲು ಹಾಕುವಂತಹ ಕಠಿಣ ಕ್ರಮದ ಭರವಸೆಯನ್ನು ಸೂಚಿಸಿದೆ.

10 ವರ್ಷ ಜೈಲು, 1 ಕೋಟಿ ದಂಡ: ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಉತ್ತರ ಪತ್ರಿಕೆ ವಂಚನೆ ಪ್ರಕರಣದಲ್ಲಿ ಅಪರಾಧಿ ಎಂದು ಸಾಬೀತಾದರೆ ಕನಿಷ್ಠ 3-5 ವರ್ಷ ಜೈಲು ಶಿಕ್ಷೆ ಹಾಗೂ 10 ಲಕ್ಷದ ವರೆಗೆ ದಂಡ ವಿಧಿಸಲಾಗುವುದು. ಈ ಕಾಯ್ದೆಯಡಿಯಲ್ಲಿ ಎಲ್ಲಾ ಅಪರಾಧಗಳು ಜಾಮೀನು ರಹಿತವಾಗಿವೆ. ಜತೆಗೆ ಪರೀಕ್ಷಾ ಸೇವೆ ಒಗಿಸುವ ಸಂಸ್ಥೆಗಳು ಕ್ರಮದ ಬಗ್ಗೆ ಮಾಹಿತಿ ಇದ್ದೂ ವರದಿ ಮಾಡದಿದ್ದಲ್ಲಿ , ಹಾಗೂ ಹಿರಿಯ ಅಧಿಕಾರಿಗಳು ಅಕ್ರಮದಲ್ಲಿ ಭಾಗಿಯಾಗಿದ್ದಲ್ಲಿ ಅಂತಹ ಅಪರಾಧಿಗಳಿಗೆ 3-10 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ ಒಂದು ಕೋಟಿ ವರೆಗೆ ದಂಡವನ್ನು ವಿಧಿಸಲಾಗುವುದು ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ. ಇದರ ಜತೆಗೆ ಅಪರಾಧಿಯ ಆಸ್ತಿ ಮುಟ್ಟುಗೋಲು ಹಾಕಲಾಗುವದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಕಮಲಾ, ಉಷಾ ಚಿಲುಕುರಿಗೆ ಭಾರತ ನಂಟು

ಅಮೆರಿಕಾ ಅಧ್ಯಕ್ಷೀಯ ಚುನಾವಣೆ ಆಂಧ್ರ, ತಮಿಳುನಾಡಲ್ಲಿ ಪ್ರಾರ್ಥನೆ

ದೆಹಲಿ: ಅಮೆರಿಕಾ ಅಧ್ಯಕ್ಷೀಯ ಚುನಾವಣೆ ಭಾರತೀಯರಲ್ಲೂ ಸಾಕಷ್ಟು ಕುತೂಹಲ ಕೆರಳಿಸಿದೆ. ಡೆಮಾಕ್ರೆಟಿಕ್ ಪಕ್ಷದಿಂದ ಕಮಲಾ ಹ್ಯಾರಿಸ್ ಅಭ್ಯರ್ಥಿಯಾಗುವ ಸಾಧ್ಯತೆ ದಟ್ಟವಾಗಿದೆ. ರಿಪಬ್ಲಿಕನ್ ಪಕ್ಷದಿಂದ ಜೆ ಡಿ ವ್ಯಾನ್ಸ್ ಉಪಾಧ್ಯಕ್ಷ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಈ ಇಬ್ಬರಿಗೂ ಭಾರತದ ಜತೆ ಬಹಳ ಹತ್ತಿರದ ನಂಟು ಇರುವ ಹಿನ್ನೆಲೆ ಗೆಲುವಿಗೆ ಭಾರತದಲ್ಲಿ ಸಾಕಷ್ಟು ಪ್ರಾರ್ಥನೆಗಳು ನಡೆಯುತ್ತಿವೆ.

ಕಮಲಾ ಹ್ಯಾರಿಸ್ ಮೂಲತಃ ತಮಿಳುನಾಡಿನವರಾಗಿದ್ದಾರೆ. ಜೆ ಡಿ ವ್ಯಾನ್ಸ್ ಪತ್ನಿ ಆಂಧ್ರಪ್ರದೇಶದ ನಂಟು ಹೊಂದಿದ್ದಾರೆ. ಹೀಗಾಗಿ ಈ ಎರಡು ರಾಜ್ಯಗಳ ಗ್ರಾಮಗಳಲ್ಲಿ ಈಗ ಅಮೆರಿಕಾ ಚುನಾವಣೆ ಚರ್ಚೆ ,ನಾಯಕರ ಗೆಲುವಿಗೆ ಪ್ರಾರ್ಥನೆ ನಡೆಯುತ್ತಿದೆ. ಕಮಲಾ ಹ್ಯಾರಿಸ್ ತಾಯಿಯ ಪೂರ್ವಜರು ತಮಿಳುನಾಡಿನ ತುಳಸಿತೀರ್ಥಪುರಂನವರಾದ ಹಿನ್ನೆಲೆ

ಅಲ್ಲಿರುವ ಕುಟುಂಬಸ್ಥರು ಟ್ರಂಪ್ ವಿರುದ್ಧ ಗೆಲುವಿಗೆ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಇನ್ನೊಂದೆಡೆ ಜೆ ಡಿ ವ್ಯಾನ್ಸ್ ಪತ್ನಿ ಉಷಾ ಚಿಲುಕುರಿ ಪೂರ್ವಜರು ನೆಲೆಸಿದ್ದ ಗ್ರಾಮ ವಡ್ಲೂರಿನ ದೇವಾಲಯಗಳಲ್ಲಿ ಜೆ ಡಿ ವ್ಯಾನ್ಸ್ ಗೆಲುವಿಗೆ ಪ್ರಾರ್ಥನೆ ಸಲ್ಲಿಸಲಾಗಿದೆ. ವಡ್ಲೂರಿನ ದೇವಾಲಯದ ಇರುವ ಜಾಗವೂ ಒಂದು ಸಮಯದಲ್ಲಿ ಉಷಾ ವ್ಯಾನ್ಸ್ ಕುಟುಂಬಸ್ಥರ ಭೂಮಿ ಆಗಿತ್ತು ಎಂದೂ ಹೇಳಲಾಗಿದೆ.

ನೀತಿ ಆಯೋಗ ಸಭೆ: 4 ಸಿಎಂಗಳಿಂದ ಬಹಿಷ್ಕಾರ

ದೆಹಲಿ: ಕೇಂದ್ರ ಬಜೆಟ್ 2024-25ನ್ನು ತಾರತಮ್ಯ ಬಜೆಟ್ ಎಂದು ವಿಪಕ್ಷಗಳು ಜರಿದಿವೆ. ಬಜೆಟ್ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ವಿರೋಧ ಪಕ್ಷಗಳ ಮುಖ್ಯಮಂತ್ರಿಗಳು ನೀತಿ ಆಯೋಗ ಸಭೆಯನ್ನು ಬಹಿಷ್ಕರಿಸಲು ನಿರ್ಧರಿಸಿವೆ.

ಜುಲೈ 27 ರಂದು ದೆಹಲಿಯಲ್ಲಿ ನೀತಿ ಆಯೋಗ ಸಭೆ ನಡೆಯಲಿದ್ದು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣ ಸಿಎಂ ರೇವಂತ ರೆಡ್ಡಿ, ಹಿಮಾಚಲ ಪ್ರದೇಶ ಸಿಎಂ ಸುಖ್ವಿಂದರ್ ಸುಖು, ತಮಿಳುನಾಡು ಸಿಎಂ ಎಂ ಕೆ ಸ್ಟಾಲಿನ್ ಸಭೆಯನ್ನು ಬಹಿಷ್ಕರಿಸುವುದಾಗಿ ತಿಳಿಸಿದ್ದಾರೆ. ಮಂಗಳವಾರ ಸಂಜೆ ದೆಹಲಿಯಲ್ಲಿ ಇಂಡಿಯ ಬ್ಲಾಕ್ ಮೈತ್ರಿಕೂಟದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಈ ಬಗ್ಗೆ ಇನ್ನೂ ಯಾವುದೇ ಪ್ರತಿಕ್ರಿಯೇ ನೀಡಿಲ್ಲ. ಮಮತಾ ಬ್ಯಾನರ್ಜಿ ಸಭೆಯಲ್ಲಿ ಭಾಗಿಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಇನ್ನು ದೆಹಲಿ ಸಿಎಂ ಜೈಲಿನಲ್ಲಿರುವ ಕಾರಣ ಸಭೆಯಲ್ಲಿ ಭಾಗಿಯಾಗುವ ಸಾಧ್ಯತೆ ಇಲ್ಲ. ಮೈತ್ರಿ ಪಕ್ಷ ಆಡಳಿತದ ಆಂಧ್ರಪ್ರದೇಶ ಹೊರತಾಗಿ ದಕ್ಷಿಣ ಭಾರತದ ಯಾವ ರಾಜ್ಯವನ್ನೂ ಬಜೆಟ್‌ನಲ್ಲಿ ಉಲ್ಲೇಖಿಸಿಲ್ಲ. ಈ ಬಜೆಟ್ ರಾಜಕೀಯ ದೃಷ್ಟಿಯಿಂದ ಕೂಡಿದ ತಾರತಮ್ಯ ಬಜೆಟ್, ಈ ರೀತಿಯ ಧೋರಣೆ ಅಪಾಯಕಾರಿ ಯಾಗಿದೆ. ಸಾಂವಿಧಾನಿಕ ತತ್ವಗಳಿಗೆ ವಿರುದ್ಧವಾಗಿದೆ ಎಂದು ಸಿದ್ದರಾಮಯ್ಯ, ಸ್ಟಾಲಿನ್ , ರೇವಂತ್ ರೆಡ್ಡಿ ಸೇರಿ ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆ ನೀತಿ ಆಯೋಗ ಸಭೆ ಬಹಿಷ್ಕರಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಒಲಿಂಪಿಕ್‌ಗೆ ಇನ್ನೇನು ಒಂದೇ ದಿನ ಬಾಕಿ ಉಳಿದಿದ್ದು, ಎಲ್ಲ ಕ್ರೀಡಾಪಟುಗಳು ಈಗಾಗಲೇ ಪ್ಯಾರಿಸ್‌ಗೆ ತಲುಪಿದ್ದಾರೆ. ಈ ಮಧ್ಯೆ ಭಾರತದ ಒಲಿಂಪಿಕ್ಸ್ ಪಟುಗಳೂ ಸಹ ಪ್ಯಾರಿಸ್‌ಗೆ ತಲಪುತ್ತಿದ್ದು, ಪದಕದ ಬೇಟೆಗೆ ಸಿದ್ಧವಾಗಿದ್ದಾರೆ. ಹಾಗಿದ್ದರೆ ಈ ಬಾರಿ ಒಲಿಂಪಿಕ್ಸ್‌ಗೆ ತೆರಳಿರುವ ಕ್ರೀಡಾಪಟುಗಳ ಪೈಕಿ ಯಾವ ಯಾವ ರಾಜ್ಯದಿಂದ ಎಷ್ಟು ಆಟಗಾರರು ಭಾಗಿಯಾಗಲಿದ್ದಾರೆ ಎಂಬ ಪ್ರಶ್ನೆ ಎಲ್ಲರಿಗೂ ಕಾಡುತ್ತಿದೆ. 16 ಕ್ರೀಡಾ ವಿಭಾಗಗಳಲ್ಲಿ ಈ ಕ್ರೀಡಾಪಟುಗಳು ಭಾರತದ 117 ಆಟಗಾರರು ಭಾಗವಹಿಸುತ್ತಿದ್ದು, 70 ಪುರುಷ ಮತ್ತು 47 ಮಹಿಳಾ ಅಥ್ಲೀಟ್‌ಗಳು ಬಹುರಾಷ್ಟ್ರೀಯ ಕ್ರೀಡಾ ವೇದಿಕೆಯ ಮೇಲೆ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಲು ಪ್ರಯತ್ನಿಸಲಿದ್ದಾರೆ.

ರಾಜ್ಯವಾರು ಕ್ರೀಡಾಪಟುಗಳನ್ನು ನೋಡಿದರೆ, ನೀರಜ್ ಚೋಪ್ರಾ ಮತ್ತು ಬಾಕ್ಸರ್ ಅಮಿತ್ ಪಂಗಲ್ ಸೇರಿದಂತೆ ಹರಿಯಾಣ ರಾಜ್ಯದಿಂದ (23) ಅತಿ ಹೆಚ್ಚಿನ ಅಥ್ಲೀಟ್‌ಗಳು ಸೇರಿದ್ದಾರೆ. ಪಂಜಾಬ್ ರಾಜ್ಯದಿಂದ 18 ಅಥ್ಲೀಟ್‌ಗಳು ಭಾಗವಹಿಸುತ್ತಿದ್ದು, ಎರಡನೇ ಸ್ಥಾನ ಪಡೆದಿದೆ.

8 ಚೊಚ್ಚಲ ಅಥ್ಲೀಟ್ಸ್ ಮೇಲೆ ನಿರೀಕ್ಷೆ

ಒಲಿಂಪಿಕ್ಸ್‌ನಲ್ಲಿ 10 ಕ್ರೀಡಾಪಟುಗಳು ತಮ್ಮ ಚೊಚ್ಚಲ ಒಲಿಂಪಿಕ್ಸ್ ಆಡಲಿದ್ದಾರೆ. ಈ ಬಾರಿ ಒಲಿಂಪಿಕ್ಸ್‌ನಲ್ಲಿ ಭಾರತದಿಂದ 117 ಆಟಗಾರರು ಭಾಗವಹಿಸಲಿದ್ದಾರೆ. ಕಳೆದ ಬಾರಿ 118 ಆಟಗಾರರು ಭಾಗವಹಿಸಿದ್ದರು. ಆದರೆ ಈ ಬಾರಿ ಕೆಲವು ಆಟಗಾರರು ತಮ್ಮ ಅರ್ಹತೆ ಕಳೆದುಕೊಂಡರೆ ಮತ್ತೊಂದೆಡೆ ಹಲವು ನೂತನ ಆಟಗಾರರು ಆಯ್ಕೆಯಾಗಿದ್ದಾರೆ.

ರಾಜ್ಯವಾರು ಭಾರತೀಯ ಅಥ್ಲೀಟ್ ಪ್ರಾತಿನಿಧ್ಯ	
ಹರಿಯಾಣ	23
ಪಂಜಾಬ್	18
ತಮಿಳುನಾಡು	13
ಉತ್ತರ ಪ್ರದೇಶ	9
ಕರ್ನಾಟಕ	7
ಕೇರಳ	5
ಮಹಾರಾಷ್ಟ್ರ	5
ದೆಹಲಿ	5
ಆಂಧ್ರ ಪ್ರದೇಶ	4
ಉತ್ತರಾಖಂಡ	4
ತೆಲಂಗಾಣ	4
ಪಶ್ಚಿಮ ಬಂಗಾಳ	3
ಒಡಿಶಾ	2
ಮಧ್ಯಪ್ರದೇಶ	2
ಮಣಿಪುರ	2
ಛತ್ತೀಸ್‌ಗಢ	2
ರಾಜಸ್ಥಾನ	2
ಗುಜರಾತ್	2
ಸಿಕ್ಕಿಂ	1
ಜಾರ್ಖಂಡ್	1
ಗೋವಾ	1
ಅಸ್ಸಾಂ	1
ಬಿಹಾರ	1



ಕರ್ನಾಟಕದಿಂದ ಈ ಬಾರಿ 7 ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲಿದ್ದಾರೆ. ಕರ್ನಾಟಕದ ಆಟಗಾರರು ಈ ಬಾರಿ ರ್‍ಯಾಂಕಿಂಗ್ ಹಾಗೂ ಕೋಟಾ ವಿಭಾಗದಿಂದ ಆಯ್ಕೆಯಾಗಿದ್ದು, ಕ್ರೀಡಾಕೂಟಕ್ಕೆ ಸಿದ್ಧವಾಗಿದ್ದಾರೆ.

ಕರ್ನಾಟಕದ ಆಟಗಾರರು

- ಅಶ್ವಿನಿ ಪೊನ್ನಪ್ಪ: ಮಹಿಳಾ ಡಬಲ್ಸ್ ಬ್ಯಾಡ್ಮಿಂಟನ್
- ಅದಿತಿ ಅಶೋಕ್: ಮಹಿಳಾ ಗಾಲ್ಫ್
- ಧಿನಿಧಿ ದೇಸಿಂಗೂ: ಮಹಿಳಾ ಈಜು
- ಎಂ.ಆರ್.ಪೂವಮ್ಮ: ಮಿಕ್ಸೆಡ್ ರಿಲೇ ಓಟ
- ಅರ್ಚನಾ ಕಾಮತ್: ಟೇಬಲ್ ಟೆನ್ನಿಸ್
- ಶ್ರೀಹರಿ ನಟರಾಜ್: ಪುರುಷರ ಈಜು
- ರೋಹನ್ ಭೋಪಣ್ಣ: ಪುರುಷರ ಟೆನ್ನಿಸ್ ಡಬಲ್ಸ್

ಚೊಚ್ಚಲ ಒಲಿಂಪಿಕ್ಸ್‌ನ ಕ್ರೀಡಾಪಟುಗಳು

ಶ್ರೀಜಾ ಅಕುಲಾ: ಭಾರತದ ಯುವ ಟೆನಿಸ್ ಟೇಬಲ್ ಆಟಗಾರ್ತಿ ಶ್ರೀಜಾ ಅಕುಲಾ ಪದಾರ್ಪಣೆ ಮಾಡಲಿದ್ದಾರೆ. ವಿಶ್ವ ಟೇಬಲ್ ಟೆನ್ನಿಸ್ ಪಂದ್ಯಾವಳಿಯನ್ನು ಗೆದ್ದಿದ್ದ ಅವರು, ಈ ಸಾಧನೆ ಮಾಡಿದ ಮೊದಲ ಭಾರತೀಯ ಮಹಿಳಾ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಅಂತಿಮ್ ಪಂಘಾಲ್: ಭಾರತದ ಯುವ ಕುಸ್ತಿಪಟು ಫೈನಲ್ ಅಂತಿಮ್ ಪಂಘಾಲ್ ಭಾಗವಹಿಸಲಿದ್ದಾರೆ. ಪಂಘಾಲ್ 2 ಬಾರಿ ಕುಸ್ತಿಯಲ್ಲಿ 20 ವರ್ಷದೊಳಗಿನವರ ವಿಶ್ವ ಚಾಂಪಿಯನ್ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಇದರೊಂದಿಗೆ ಏಷ್ಯನ್ ಗೇಮ್ಸ್, ಏಷ್ಯನ್ ಚಾಂಪಿಯನ್‌ಶಿಪ್ ಮತ್ತು ಸೀನಿಯರ್ ವರ್ಲ್ಡ್ ವ್ರೆಸ್ಲಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ.

ಪ್ರೀತಿ ಸಾಯಿ ಪವಾರ್: ಬಾಕ್ಸರ್ ಪ್ರೀತಿ ಸಾಯಿ ಪವಾರ್ ಅವರಿಂದ ಭಾರತ ಪದಕ ಗೆಲ್ಲುವ ನಿರೀಕ್ಷೆಯಿದೆ. ಏಷ್ಯನ್ ಗೇಮ್ಸ್‌ನಲ್ಲಿ ಬಾಕ್ಸಿಂಗ್‌ನಲ್ಲಿ ಬೆಳ್ಳಿ ಪದಕವನ್ನು ಗೆದ್ದಿದ್ದರು. ಹ್ಯಾಂಗ್ಝೌನಲ್ಲಿ ಸೆಮಿಫೈನಲ್‌ಗೆ ಪ್ರವೇಶಿಸುವ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾ ಪಡೆದಿದ್ದರು.

ಧಿನಿಧಿ ದೇಸಿಂಗು: 14 ವರ್ಷದ ಯುವ ಈಜುಗಾರ್ತಿ ಧಿನಿಧಿ ದೇಸಿಂಗು ಚೊಚ್ಚಲ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಲುವ ನಿರೀಕ್ಷೆಯಲ್ಲಿದ್ದಾರೆ. ಈಜಿನಲ್ಲಿ, ಧಿನಿಧಿ ಅದ್ಭುತ ಪ್ರದರ್ಶನ ನೀಡಿದ್ದು, ರಾಷ್ಟ್ರೀಯ ಕ್ರೀಡಾಕೂಟ ಮತ್ತು ಹಿರಿಯ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಪದಕ ಗೆದ್ದರು.

ರಿತಿಕಾ ಹೂಡಾ: ಕುಸ್ತಿಪಟು ರೀತಿಕಾ ಹೂಡಾ ಭಾರತಕ್ಕಾಗಿ ಚೊಚ್ಚಲ ಒಲಿಂಪಿಕ್ಸ್ ಆಡಲಿದ್ದಾರೆ. ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಗೆದ್ದಿದ್ದು, ರಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕಕ್ಕೆ ಮುತ್ತಿಕ್ಕಿದ್ದಾರೆ.

ಸಿಫ್ಟ್ ಕೌರ್ ಸಮ್ರಾ: ಭಾರತದ ಶೂಟರ್ ಸಿಫ್ಟ್ ಕೌರ್ ಸಮ್ರಾ, ಅವರು ಇದೇ ಮೊದಲು ಬಾರಿಗೆ ಒಲಿಂಪಿಕ್ಸ್‌ಗೆ ಪದಾರ್ಪಣೆ ಮಾಡಲಿದ್ದಾರೆ. ಏಷ್ಯನ್ ಕ್ರೀಡಾಕೂಟದಲ್ಲೂ ಚಿನ್ನದ ಪದಕ ಗೆದ್ದಿರುವ ಸಿಫ್ಟ್, ಮಹಿಳೆಯರ 50 ಮೀ. ರೈಫಲ್ 3 ಸ್ಥಾನಗಳಲ್ಲಿ ವಿಶ್ವ ದಾಖಲೆ ಹೊಂದಿದ್ದಾರೆ.

ಇಶಾ ಸಿಂಗ್: ಮತ್ತೊರ್ವ ಶೂಟರ್ ಇಶಾ ಸಿಂಗ್ ಕೂಡ ಮೊದಲ ಬಾರಿಗೆ ಕಣಕ್ಕಿಳಿದಿದ್ದಾರೆ. ಹೈದರಾಬಾದ್‌ನ ಶೂಟರ್ ಕಳೆದ ವರ್ಷ ಹ್ಯಾಂಗ್ಝೌ ಏಷ್ಯನ್ ಗೇಮ್ಸ್‌ನಲ್ಲಿ ಸಿಂಗಲ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದರು. ಜಕಾರ್ತದಲ್ಲಿ ನಡೆದ ಏಷ್ಯನ್ ಒಲಿಂಪಿಕ್ ಕ್ವಾಲಿಫೈಯರ್‌ನಲ್ಲಿ 10 ಮೀಟರ್ ಏರ್ ಪಿಸ್ತೂಲ್‌ನಲ್ಲಿ ಚಿನ್ನದ ಪದಕವನ್ನು ಗೆದ್ದಿದ್ದಾರೆ.

ಧೀರಜ್ ಬೊಮ್ಮದೇವರ: ಬಿಲ್ಲುಗಾರ ಧೀರಜ್ ಬೊಮ್ಮದೇವರ ಅವರು ಮೊದಲು ಬಾರಿಗೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲಿದ್ದಾರೆ. ಏಷ್ಯನ್ ಗೇಮ್ಸ್‌ನಲ್ಲಿ ಪುರುಷರ ರಿಕರ್ವ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಆರ್ಚರಿ ಕಾಂಟಿನೆಂಟಲ್ ಕ್ವಾಲಿಫೈಯಿಂಗ್ ಟೂರ್ನಮೆಂಟ್‌ಗಳಲ್ಲಿ ಅವರು ಪ್ಯಾರಿಸ್ ಒಲಿಂಪಿಕ್ ಕೋಟಾ ಪಡೆಯವಲ್ಲಿ ಯಶಸ್ವಿಯಾಗಿದ್ದರು.

ಸಮಾಚಾರ ಸಣ್ಣದಲ್ಲ

ಪ್ರಿಯತಮೆಯ ಕೊಂದು ಹೂತಿಟ್ಟ ಪ್ರಿಯಕರ

ಶಿವಮೊಗ್ಗ: ಮದುವೆಯಾಗಲು ಒತ್ತಾಯಿಸಿದ ಕಾರಣ ಪ್ರಿಯತಮೆ ಯನ್ನು ಪ್ರಿಯಕರನೇ ಕತ್ತುಹಿಸುಕಿ ಕೊಲೆ ಮಾಡಿರುವ ಭೀಕರ ಘಟನೆ ಶಿವಮೊಗ್ಗದಲ್ಲಿ ನಡೆದಿದೆ. ಹೊಸನಗರದ ತಾಲೂಕಿನ ಹೆದ್ದಾರಿಪುರ ಗ್ರಾಮದಲ್ಲಿ ಈ ಘಟನೆ ನಡೆದಿದ್ದು ಮೃತ ಯುವತಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಮೂಲದ ನರ್ಸಿಂಗ್ ವ್ಯಾಸಂಗ ಮಾಡ್ತಿದ್ದ ಸೌಮ್ಯ ಎಂದು ತಿಳಿದು ಬಂದಿದೆ. ಕೊಲೆ ಆರೋಪಿ ಸಾಗರ ಮೂಲದ ಸೃಜನ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಕಳೆದ ಎರಡೂವರೆ ವರ್ಷದಿಂದ ಪ್ರೀತಿಸುತ್ತಿದ್ದ ತನ್ನನ್ನು ಮದುವೆಯಾಗುವಂತೆ ಸೃಜನ್‌ನನ್ನು ಸೌಮ್ಯ ಒತ್ತಾಯಿಸುತ್ತಿದ್ದಳು. ಇದರಿಂದ ಕೋಪಗೊಂಡ ಸೃಜನ್ ಸೌಮ್ಯಳನ್ನು ಕೊಲೆ ಮಾಡಿದ್ದಾನೆ ಎನ್ನಲಾಗುತ್ತಿದೆ. ಬಳಿಕ ಸೃಜನ್ ಸೌಮ್ಯಳ ಮೃತದೇಹವನ್ನು ಶಿವಮೊಗ್ಗದ ಮುಂಬಾಳು ಗ್ರಾಮದ ಬಳಿ ಹೂತಿಟ್ಟಿದ್ದ. ಯುವತಿಯ ಪೋಷಕರು ನಾಪತ್ತೆ ಪ್ರಕರಣ ದಾಖಲಿಸಿದ ನಂತರ ಪೊಲೀಸರ ತನಿಖೆಯಿಂದ ಕೊಲೆ ವಿಚಾರ ಬೆಳಕಿಗೆ ಬಂದಿದೆ.

ಒಲಿಂಪಿಕ್ಸ್ ಸದಸ್ಯೆಯಾಗಿ ನಿತಾ ಅವಿರೋಧ ಆಯ್ಕೆ

ಪ್ಯಾರಿಸ್: ರಿಲಯನ್ಸ್ ಫೌಂಡೇಷನ್ ಒಡತಿ ನೀತಾ ಅಂಬಾನಿ ಅವರು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಸದಸ್ಯೆಯಾಗಿ ಅವಿರೋಧವಾಗಿ ಮರು ಆಯ್ಕೆಯಾಗಿದ್ದಾರೆ. ಪ್ಯಾರಿಸ್‌ನಲ್ಲಿ ನಡೆದ 142ನೇ ಐಒಸಿ ಅಧಿವೇಶನದಲ್ಲಿ ನೀತಾ ಅವರು ಶೇ 100ರಷ್ಟು ಮತಗಳನ್ನು ಪಡೆದು ಸರ್ವಾನುಮತದಿಂದ ಆಯ್ಕೆಯಾದರು. ಐಒಸಿ ಸದಸ್ಯೆಯಾಗಿ ಮತ್ತೆ ಆಯ್ಕೆ ಮಾಡಿರುವುದು ನನಗೆ ಸಿಕ್ಕ ದೊಡ್ಡ ಗೌರವವಾಗಿದೆ. ನನ್ನ ಮೇಲೆ ಇಟ್ಟ ನಂಬಿಕೆ ಮತ್ತು ವಿಶ್ವಾಸಕ್ಕಾಗಿ ಐಒಸಿ ಅಧ್ಯಕ್ಷರಿಗೆ ಮತ್ತು ಎಲ್ಲ ಸಹೋದ್ಯೋಗಿಗಳಿಗೆ ಕೃತಜ್ಞತೆಗಳು. ನನ್ನ ಮರು ಆಯ್ಕೆಯು ಜಾಗತಿಕ ಕ್ರೀಡಾ ಕ್ಷೇತ್ರದಲ್ಲಿ ಭಾರತದ ಪ್ರಭಾವವನ್ನು ತೋರಿಸುತ್ತದೆ. ಈ ಸಂತೋಷ ಮತ್ತು ಹೆಮ್ಮೆಯ ಕ್ಷಣವನ್ನು ಪ್ರತಿ ಭಾರತೀಯರೊಂದಿಗೆ ಹಂಚಿಕೊಳ್ಳುವುದಕ್ಕೆ ಬಯಸುತ್ತೇನೆ. ಭಾರತವೂ ಒಳಗೊಂಡಂತೆ ವಿಶ್ವದಾದ್ಯಂತ ಒಲಿಂಪಿಕ್ ಸಂಭ್ರಮವನ್ನು ಹೆಚ್ಚಿಸಲು ಪ್ರಯತ್ನಿಸುತ್ತೇನೆ' ಎಂದು ನೀತಾ ಅಂಬಾನಿ ಪ್ರತಿಕ್ರಿಯಿಸಿದ್ದಾರೆ.

ಪೇದೆಗಳು ಲೋಕಾ ಬಲೆಗೆ

ವಿಜಯಪುರ: ಗಲಾಟೆಗೆ ಸಂಬಂಧಿಸಿದ ವಿಚಾರಕ್ಕೆ ಆರೋಪಿಗಳಿಗೆ ಸ್ಟೇಷನ್ ಜಾಮೀನು ನೀಡಲು ಲಂಚದ ಬೇಡಿಕೆ ಇಟ್ಟಿದ್ದ ಇಬ್ಬರು ಪೊಲೀಸ್ ಪೇದೆಗಳು ಸಾಕ್ಷಿಸಮೇತ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ವಿಜಯಪುರ ನಗರದ ಗೋಲ ಗುಂಬಜ್ ಠಾಣೆಯ ಹನುಮಂತ ಪೂಜಾರಿ, ಜಟ್ಟೆಪ್ಪ ಬಿರಾದಾರ ಲೋಕಾಯುಕ್ತ ಬಲೆಗೆ ಬಿದ್ದ ಕಾನ್‌ಸ್ಟೇಬಲ್‌ಗಳು. ಗಲಾಟೆಗೆ ಸಂಬಂಧಿಸಿದ ಆರೋಪಿಗಳಿಗೆ ಸ್ಟೇಷನ್ ಜಾಮೀನು ನೀಡುವ ವಿಚಾರದಲ್ಲಿ ಆರೋಪಿಗಳಿಂದ 50 ಸಾವಿರ ರು.ಗೆ ಬೇಡಿಕೆ ಇಟ್ಟು 40 ಸಾವಿರ ಪಡೆದಿದ್ದರು. ಲೋಕಾಯುಕ್ತ ಎಸ್ಪಿ ಟಿ. ಮಲ್ಲೇಶ, ಡಿವೈಎಸ್ಪಿ ಸುರೇಶ ರೆಡ್ಡಿ, ಇನ್‌ಸ್ಪೆಕ್ಟರ್ ಆನಂದ ಠಕ್ಕನವರ, ಎ.ಎ.ಡೋಣಿ ನೇತೃತ್ವದಲ್ಲಿ ದಾಳಿ ನಡೆದಿದ್ದು, ಲೋಕಾಯುಕ್ತದಲ್ಲಿ ಪ್ರಕರಣ ದಾಖಲಿಸಲಾಗಿದೆ

ಕೋರಂ ಸಮಸ್ಯೆ; ಕಾನೂನಿಗೆ ತಿದ್ದುಪಡಿ ಮಾಡಲು ಚಿಂತನೆ

ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ನಡವಳಿಕೆ ತಿದ್ದುಪಡಿ ಅಂಗೀಕಾರ

ವಿಧಾನಸಭೆ: ಸದನಕ್ಕೆ ಶಾಸಕರ ಹಾಜರನ್ನು ಹೆಚ್ಚಿಸಬೇಕು ಎನ್ನುವ ಕಾರಣಕ್ಕೆ ಕಾರಣಕ್ಕೆ ಹತ್ತು ಹಲವು ಕ್ರಮವಹಿಸಲಾಗುತ್ತಿದೆ. ಆದರೆ ಸದನದ ಬಳಿಕದ ವಿವಿಧ ಸ್ಥಾಯಿ ಸಮಿತಿ ಹಾಗೂ ನಿಯಮಾವಳಿ ಸಮಿತಿ ಸಭೆಗೂ ಶಾಸಕರು ಬಾರದೇ, ಕೋರಂ ಸಮಸ್ಯೆ ಎದುರಾಗುತ್ತಿದೆ. ಇದನ್ನು ಬಗೆಹರಿಸುವ ನಿಟ್ಟಿನಲ್ಲಿ ಕಾನೂನಿಗೆ ತಿದ್ದುಪಡಿ ಮಾಡಲು ಸರಕಾರ ಮುಂದಾಗಿದೆ.

ವಿಧಾನಸಭೆಯಲ್ಲಿ ಈ ಸಂಬಂಧ ಬುಧವಾರ ತಿದ್ದುಪಡಿ ವಿಧೇಯಕವನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಮಂಡಿಸಿದರು. ಈ ವೇಳೆ ಮಾತನಾಡಿದ ಅವರು, ನಿಯಮಾವಳಿ ಸಮಿತಿ ಸಭೆ ಸೇರಲು ಕೋರಂ ಸಮಸ್ಯೆಯಾಗುತ್ತಿದ್ದು, ಆ ಸಮಸ್ಯೆ ಪರಿಹಾರಕ್ಕಾಗಿ ತಿದ್ದುಪಡಿ ತರಲಾಗಿದೆ. ಎಲ್ಲಾ ಸ್ಥಾಯಿ ಸಮಿತಿಗಳಿಗೂ ಅನ್ವಯವಾಗಲಿದ್ದು, ಸಭೆ ನಡೆಸಲು ಅನುಕೂಲವಾಗಲಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಮಾತನಾಡಿ, ಸ್ಥಾಯಿ ಸಮಿತಿಗಳ ಸಭೆಗೆ ಅಧಿಕಾರಿಗಳು ಬರುತ್ತಾರೆ. ಸದಸ್ಯರು ಸರಿಯಾಗಿ ಬರುವುದಿಲ್ಲ. ಬರುವಂತೆ ಮಾಡಬೇಕು ಎಂದು ಹೇಳಿದರು. ಅದಕ್ಕೆ ಸ್ಪೀಕರ್ ಯು.ಟಿ.ಖಾದರ್ ಮಾತನಾಡಿ, ನೀವು ನೀಡಿದ ಸಲಹೆ ಉತ್ತಮವಾಗಿದ್ದು, ಆಲೋಚನೆ ಮಾಡಿ ತೀರ್ಮಾನ ಮಾಡುತ್ತೇವೆ ಎಂದು ತಿಳಿಸಿದರು.

ಬಿಜೆಪಿ ಹಿರಿಯ ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ಹಕ್ಕುಬಾಧ್ಯತಾ ಸಮಿತಿಯಲ್ಲಿ ಹಿರಿಯ ಶಾಸಕರು ಸದಸ್ಯರಾಗಿದ್ದು, ಶ್ರೀಮಂತ ಶಾಸಕರು ಸರಿಯಾಗಿ ಸಭೆಗೆ ಬರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಗ ಕಾನೂನು ಸಚಿವರು ಈ ಸಮಸ್ಯೆ ಪರಿಹಾರಕ್ಕಾಗಿಯೇ ತಿದ್ದುಪಡಿ ತರಲಾಗಿದ್ದು, ಇದನ್ನು ಅಂಗೀಕರಿಸುವಂತೆ ತಿದ್ದುಪಡಿ ಅಂಗೀಕರಿಸಲಾಯಿತು.

ಕನ್ನಡ ಸಾಹಿತ್ಯ ಚಿನ್ನ ಪ್ರಶಸ್ತಿ ಪ್ರದಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣದಲ್ಲಿರುವ ಪ್ರೊ. ವೆಂಕಟಗಿರಿಗೌಡ ಸಭಾಂಗಣದಲ್ಲಿ ಆಯೋಜಿಸಿದ ಸಂವಹನ ವಿಭಾಗದ ಸುವರ್ಣ ಮಹೋತ್ಸವದ ಅಂಗವಾಗಿ 'ಮೀಡಿಯಾ ಸ್ಪಿಯರ್ - 2024, ಭಾರತೀಯ ಮಾಧ್ಯಮ ಉದ್ಯಮದ ರೂಪಾಂತರ ರಾಷ್ಟ್ರೀಯ ಸಮ್ಮೇಳನವನ್ನು ಬೆಂಗಳೂರು ವಿವಿಯ ಸಂವಹನ ವಿಭಾಗ, ಭಾರತೀಯ ಸಂವಹನ ಕಾಂಗ್ರೆಸ್ (ಐಸಿಸಿ) ಹಾಗೂ ಕರ್ನಾಟಕ ರಾಜ್ಯ ಪತ್ರಿಕೋದ್ಯಮ ಮತ್ತು ಸಂವಹನ ಶಿಕ್ಷಕರ ಸಂಘ (ಕೆಎಸ್ ಜೆಸಿಟಿಎ) ಸಹಯೋಗದೊಂದಿಗೆ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ನಡೆಸಲಾಯಿತು.

ಇದರ ಪ್ರಯುಕ್ತ ಕನ್ನಡ ಸಾಹಿತ್ಯದಲ್ಲಿ ಸಾಧನೆಗೈದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಸಂಶೋಧನಾ ವಿದಾರ್ಥಿ ಶ್ರೀನಿವಾಸ ಎನ್ ಅವರಿಗೆ' 'ಕನ್ನಡ ಸಾಹಿತ್ಯ ಚಿನ್ನ ಪ್ರಶಸ್ತಿ' ಪ್ರಧಾನವನ್ನು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಬಿ.ಕೆ. ರವಿ , ಮಾಧ್ಯಮ ಅಕಾಡೆಮಿಯ ಅಧ್ಯಕ್ಷ ಆಯೇಷ ಖಾನಂ, ಬೆಂವಿವಿಯ ಕುಲಸಚಿವ ಶೇಕ್ ಲತೀಫ್, ಮೌಲ್ಯಮಾಪನ ಕುಲಸಚಿವ ಪ್ರೊ. ಶ್ರೀನಿವಾಸ್ ಚೌಡಪ್ಪ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥ ಡಾ. ಬಿ. ಶೈಲಶ್ರೀ, ಭೂಪಾಲ್ ನ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ಮಖನ್ ಲಾಲ್ ಚತುರ್ವೇದಿ, ರಾಷ್ಟ್ರೀಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಕೆ.ಜಿ. ಸುರೇಶ್, ಮತ್ತಿತರರ ಸಮ್ಮುಖದಲ್ಲಿ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಮುಡಾದಲ್ಲಿ ಎಚ್‌ಡಿಕೆ ನಿವೇಶನ ಪಡೆದಿಲ್ಲ

ಮೈಸೂರು: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಅವರ ಕುಟುಂಬ ಸದಸ್ಯರು ಮುಡಾದಲ್ಲಿ ನಿವೇಶನಗಳನ್ನು ಪಡೆದಿದ್ದಾರೆಂಬ ಕೆಪಿಸಿಸಿ ವಕ್ತಾರ ಎಂ ಲಕ್ಷ್ಮಣ್ ಆರೋಪ ನಿರಾಧಾರ ಎಂದು ಮಾಜಿ ಸಚಿವ ಸಾ.ರಾ ಮಹೇಶ್ ತಿರುಗೇಟು ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಮುಡಾದಲ್ಲಿ ಕುಮಾರಸ್ವಾಮಿ ಹಾಗೂ ಅವರ ಕುಟುಂಬ ಸದಸ್ಯರ ಹೆಸರಿನಲ್ಲಿ ಯಾವುದೇ ನಿವೇಶನ ಪಡೆದಿಲ್ಲ. 1985ರಲ್ಲಿ ನಿವೇಶನ ಕೋರಿ ಅರ್ಜಿ ಸಲ್ಲಿಸಿದ್ದರೂ ಮಂಜೂರಾಗಿಲ್ಲ. ಅವರು ಸಿಎಂ ಆಗಿದ್ದಾಗಲೂ ಅಧಿಕಾರ ಬಳಸಿಕೊಂಡು ನಿವೇಶನ ಪಡೆದಿಲ್ಲ. ಈ ಬಗ್ಗೆ ಕಾಂಗ್ರೆಸ್ ನಾಯಕರು ಇಲ್ಲಸಲ್ಲದ ಆರೋಪ ಮಾಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ರೈತರಿಗೆ ದಂಡನೆ ಬೇಡ: ನಾಲೆ ನೀರು ಕದ್ದರೆ 2 ವರ್ಷ ಜೈಲು, 2 ಲಕ್ಷ ದಂಡ ಮಂಡನೆ ಮಾಡಬೇಡಿ. ರೈತರು ಮೊದಲೇ ಸಂಕಷ್ಟದಲ್ಲಿದ್ದಾರೆ. ನಾಲೆಗೆ ಕಾನೂನುಬಾಹಿರವಾಗಿ ನೀರಿನ ಪೈಪ್‌ಲೈನ್ ಹಾಕಲು ತಡೆಯೊಡ್ಡಿದ್ದಾರೆ. ಜಮೀನು ಪಕ್ಕದಲ್ಲಿರುವ ನಾಲೆಯಿಂದ ರೈತರು ನೀರು ತೆಗೆದುಕೊಂಡರೆ ತಪ್ಪೇನು? ಬರ, ಅತಿವೃಷ್ಟಿಯಿಂದ ಬಳಲಿರುವ ರೈತರಿಗೆ ಮತ್ತೆ ಬರೆಹಾಕುವ ಕೆಲಸ ಮಾಡಬೇಡಿ ಎಂದು ಸಾ.ರಾ. ಮಹೇಶ್ ಸಲಹೆ ನೀಡಿದರು.

ಖಂಡಾಂತರ ಕ್ಷಿಪಣಿ ಪ್ರಯೋಗ ಯಶಸ್ವಿ

ಒಡಿಶಾ: ಖಂಡಾಂತರ ಕ್ಷಿಪಣಿ ರಕ್ಷಣಾ ವ್ಯವಸ್ಥೆಯ (ಬ್ಯಾಲಿಸ್ಟಿಕ್ ಮಿಸೈಲ್ ಡಿಫೆನ್ಸ್ ಸಿಸ್ಟೆಮ್)ಎರಡನೇ ಹಂತದ ಪರೀಕ್ಷಾರ್ಥ ಪ್ರಯೋಗ ಒಡಿಶಾ ತೀರದಲ್ಲಿ ಬುಧವಾರ ಯಶಸ್ವಿಯಾಗಿ ನೆರವೇರಿದೆ. ಸ್ವದೇಶಿ ನಿರ್ಮಿತ ರಕ್ಷಣಾ ವ್ಯವಸ್ಥೆ ಇದಾಗಿದ್ದು , ಎಸ್ ಸಿ 4-ಧಾಮ್ರಾ ಉಡ್ಡಯನ ಕೇಂದ್ರದಿಂದ ಬುಧವಾರ ಸಂಜೆ 4.20ರ ಸಮಯದಲ್ಲಿ ಹಾರಿಸಲಾಗಿದ್ದು ವಿವಿಧ ಪರೀಕ್ಷೆಗಳಿಗೆ ರಕ್ಷಣಾ ವ್ಯವಸ್ಥೆಯನ್ನು ಒಡ್ಡಲಾಗಿದ್ದು ಕ್ಷಿಪಣಿಗಳನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ಯಶಸ್ವಿಯಾಗಿದೆ.

ಡಿ.ಎಸ್.ವೀರಯ್ಯಗೆ ಷರತ್ತುಬದ್ಧ ಜಾಮೀನು

ಬೆಂಗಳೂರು: ದೇವರಾಜ ಅರಸ್ ಟ್ರಕ್ ಟರ್ಮಿನಲ್ ಹಗರಣ ಪ್ರಕರಣದ ಆರೋಪಿ ಆಗಿರುವ ಡಿ. ವೀರಯ್ಯ ಅವರಿಗೆ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿದೆ. ಪ್ರಕರಣದ ವಿಚಾರಣೆ ನಡೆಸಿ ನಗರದ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ವೀರಯ್ಯ ಅವರಿಗೆ ಜಾಮೀನು ಮಂಜೂರು ಮಾಡಿ ಆದೇಶಿಸಿದ್ದಾರೆ. ಅಲ್ಲದೇ, 2 ಲಕ್ಷ ರು. ಶ್ಯೂರಿಟಿ, ಅಷ್ಟೇ ಮೌಲ್ಯದ ಖಾತರಿ, ಪಾಸ್‌ಪೋರ್ಟ್‌ನ ತನಿಖಾಧಿಕಾರಿಗಳಿಗೆ ಒಪ್ಪಿಸಬೇಕು. ತನಿಖೆಗೆ ಸಹಕರಿಸಬೇಕು ಮತ್ತು ಸಾಕ್ಷ್ಯಗಳ ನಾಶಕ್ಕೆ ಮುಂದಾಗಬಾರದು ಎಂದು ಷರತ್ತುಗಳನ್ನು ವಿಧಿಸಿದೆ.



ಕಾವೇರಿ ಆಸ್ಪತ್ರೆಯಲ್ಲಿ ದೇಶದಲ್ಲೇ ಮೊದಲು ಎಐ ಆಧಾರಿತ ಜೀವನ ಶೈಲಿ ರೋಗಗಳು ವಿಭಾಗವನ್ನು ಸಂತೋಷ ಹೆಗ್ಡೆ ಉದ್ಘಾಟಿಸಿದರು.

ವೈಟ್ ಟಾಪಿಂಗ್ ಕಾಮಗಾರಿ: ಪರ್ಯಾಯ ರಸ್ತೆ ಬಳಸಲು ಸೂಚನೆ

ಬೆಂಗಳೂರು: ರಾಜಾಜಿನಗರದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಹಿನ್ನೆಲೆಯಲ್ಲಿ 1ನೇ ಬ್ಲಾಕ್‌ನಿಂದ ಡಾ. ರಾಜ್‌ಕುಮಾರ್ ರಸ್ತೆಯ 10ನೇ ಕ್ರಾಸ್‌ವರೆಗೆ ಎಲ್ಲಾ ರೀತಿಯ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ ಎಂದು ಸಂಚಾರ ಪೊಲೀಸ್ ವಿಭಾಗ ಮಾಹಿತಿ ನೀಡಿದೆ.

ಪರ್ಯಾಯ ಮಾರ್ಗಗಳು: ಇಸ್ಕಾನ್ ಎಂಟ್ರಿ ಕಡೆಯಿಂದ ಬರುವ ವಾಹನಗಳು ನೇರವಾಗಿ ಸ್ಟಾರ್ ಸರ್ಕಲ್ ಎಡತಿರುವು ಮೂಲಕ ನವರಂಗ್ ವೃತ್ತದ ಬಳಿ ಎಡ ತಿರುವು ಪಡೆದು ಡಾ.ರಾಜಕುಮಾರ್ ರಸ್ತೆ 10ನೇ ಕ್ರಾಸ್ ಕಡೆಗೆ ಸಂಚರಿಸಬಹುದಾಗಿದೆ. ಮಹಾಲಕ್ಷ್ಮಿ ಲೇಔಟ್ ಕೆಳ ಭಾಗದಿಂದ ಸಂಚರಿಸುವ ವಾಹನಗಳು ಬಲ ತಿರುವು ಪಡೆದು ಸ್ಟಾರ್ ಸರ್ಕಲ್ ಎಡ ತಿರುವು ಮೂಲಕ ನವರಂಗ್ ವೃತ್ತದ ಬಳಿ ಎಡ ತಿರುವು ಪಡೆದು ಡಾ. ರಾಜಕುಮಾರ್ ರಸ್ತೆ 10ನೇ ಕ್ರಾಸ್ ಕಡೆಗೆ ಹಾಗೂ ಮಹಾಲಕ್ಷ್ಮಿ ಲೇಔಟ್ ಕೆಳ ಭಾಗದಿಂದ ಸಂಚರಿಸುವ ವಾಹನಗಳು ಎಡತಿರುವು ಪಡೆದು ಜಿಎಸ್‌ಎಫ್ ವೃತ್ತದ ಮೂಲಕ ಡಾ. ರಾಜಕುಮಾರ್ ರಸ್ತೆ 10 ನೇ ಕ್ರಾಸ್ ಕಡೆಗೆ ವಾಹನಗಳು ಚಲಿಸಬಹುದು. ರಾಜಾಜಿನಗರ ಮೆಟ್ರೋ ಸ್ಟೇಷನ್ ಕಡೆಯಿಂದ ಸಂಚರಿಸುವ ವಾಹನ ಗಳು ರಾಜಾಜಿನಗರ 1ನೇ ಬ್ಲಾಕ್ ಜಂಕ್ಷನ್‌ನಲ್ಲಿ ಯು ಟರ್ನ್ ಪಡೆದು ಸ್ಟಾರ್ ಸರ್ಕಲ್ ಎಡತಿರುವಿನ ಮೂಲಕ ನವರಂಗ್ ವೃತ್ತದ ಬಳಿ ಎಡತಿರುವು ಪಡೆದು ಡಾ.ರಾಜಕುಮಾರ್ 10 ನೇ ಕ್ರಾಸ್ ಕಡೆಗೆ ಮತ್ತು ರಾಜಾಜಿನಗರ ಮೆಟ್ರೋ ಸ್ಟೇಷನ್ ಕಡೆಯಿಂದ ಸಂಚರಿಸುವ ವಾಹನಗಳು ನೇರವಾಗಿ ಜಿಎಸ್‌ಎಫ್ ಮುಖಾಂತರ ಡಾ.ರಾಜಕುಮಾರ್ 10ನೇ ಕ್ರಾಸ್ ಕಡೆಗೆ ಸಂಚರಿಸಬಹುದು.

ಆರೋಗ್ಯ ಇಲಾಖೆಗೆ ಬಿಬಿಎಂ ಮನವಿ | ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳುವ ನಿರೀಕ್ಷೆ

ಪ್ರತ್ಯೇಕ ಆರೋಗ್ಯ ಆಯುಕ್ತಾಲಯಕ್ಕೆ ಪ್ರಸ್ತಾಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತ್ಯೇಕ ಆರೋಗ್ಯ ಆಯುಕ್ತರನ್ನು ನೇಮಕ ಮಾಡುವಂತೆ ಪ್ರಸ್ತಾವನೆ ಸಲ್ಲಿಕೆ ಮಾಡಿದ್ದು, ಆರೋಗ್ಯ ಇಲಾಖೆ ಶೀಘ್ರವೇ ತೀರ್ಮಾನವನ್ನು ಕೈಗೊಳ್ಳುವ ನಿರೀಕ್ಷೆಯಿದೆ.

ನಗರದಲ್ಲಿ ಗುಣಮಟ್ಟದ ಆರೋಗ್ಯ ಸೇವೆ ನೀಡಲು ಬೆಂಗಳೂರು ಆರೋಗ್ಯ ಆಯುಕ್ತ ರನ್ನು ನೇಮಕ ಮಾಡಲು ಬಿಬಿಎಂಪಿ ಪ್ರಸ್ತಾವನೆಯನ್ನು ಆರೋಗ್ಯ ಇಲಾಖೆಗೆ ಸಲ್ಲಿಕೆ ಮಾಡಿದ್ದು, ಬಿಬಿಎಂಪಿಯ ವಿಶೇಷ ಆಯುಕ್ತರಾಗಿ ವಿಕಾಸ್ ಸುರಳ್ಕರ್ ಕಾರ್ಯ ನಿರ್ವಹಿಸುತ್ತಿದ್ದು, ಪಾಲಿಕೆ ಸದಯ ಸಲ್ಲಿಸಿ ರುವ ಪ್ರಸ್ತಾವನೆಗೆ ಅನುಮತಿ ದೊರಕಿದರೆ ನಗರದಲ್ಲಿರುವ ಎಲ್ಲಾ ಆರೋಗ್ಯ ಸೇವೆಗಳು ಇವರ ವ್ಯಾಪ್ತಿಗೆ ಸೇರಲಿವೆ.

ಪ್ರಸ್ತಾವನೆಯಲ್ಲಿ ಏನಿದೆ?: ಬೆಂಗಳೂರು ನಗರಕ್ಕೆ ಪ್ರತ್ಯೇಕ ಆರೋಗ್ಯ ಆಯುಕ್ತರು ನೇಮಕವಾದರೆ, ಪ್ರಾಥಮಿಕವಾಗಿ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಮತ್ತು ನೇರವಾಗಿ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅವರಿಗೆ ವರದಿ ಮಾಡಿಕೊಳ್ಳುತ್ತಾರೆ. ಅಲ್ಲದೇ ನಗರ ವ್ಯಾಪ್ತಿಯ ವೈದ್ಯಕೀಯ ಕಾಲೇಜುಗಳಿಗೆ ನಿರ್ದೇಶಕರಾಗಲಿದ್ದಾರೆ.

> **ಬೆಂಗಳೂರು ನಗರದ ಹಲವಾರು ಆರೋಗ್ಯ ಸೇವೆಗಳು ಈಗ ಬಿಬಿಎಂಪಿ, ಆರೋಗ್ಯ ಇಲಾಖೆ ವ್ಯಾಪ್ತಿಯಲ್ಲಿವೆ. ಒಂದು ವೇಳೆ ಪ್ರತ್ಯೇಕ ಆರೋಗ್ಯ ಆಯುಕ್ತರ ನೇಮಕವಾದರೆ ಎಲ್ಲಾ ಸೇವೆಗಳು ಒಬ್ಬರ ಅಡಿ ಬರುತ್ತವೆ. ಆಗ ಸರಕಾರದ ಯೋಜನೆಗಳನ್ನು ಜನರಿಗೆ ತಲುಪಿಸಲು, ಆರೋಗ್ಯ ಸೇವೆಗಳ ಮೇಲುಸ್ತುವಾರಿಗೆ ಸಹಾಯಕವಾಗಲಿದೆ.**
>
> **- ವಿಕಾಸ್ ಕಿಶೋರ್ ಸುರಳ್ಕರ್,** ಬಿಬಿಎಂಪಿ ವಿಶೇಷ ಆಯುಕ್ತ

ಕೆಲವು ದಿನಗಳ ಹಿಂದೆ ಆರೋಗ್ಯ ಸಚಿವರನ್ನು ಭೇಟಿಯಾಗಿದ್ದ ಬಿಬಿಎಂಪಿಯ ಆರೋಗ್ಯ ವಿಭಾಗದ ಅಧಿಕಾರಿಗಳು ಪ್ರತ್ಯೇಕ ಆರೋಗ್ಯ ಆಯುಕ್ತ ರನ್ನು ನೇಮಕ ಮಾಡುವ ಕುರಿತು ಪ್ರಸ್ತಾವನೆ ಸಲ್ಲಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಬೆಂಗಳೂರು ನಗರಕ್ಕೆ ಪ್ರತ್ಯೇಕ ಆರೋಗ್ಯ ಆಯುಕ್ತರನ್ನು ನೇಮಕ ಮಾಡುವಂತೆ ಸಲ್ಲಿಕೆಯಾದ ಪ್ರಸ್ತಾವನೆ ಕುರಿತು ವಿವರವಾದ ವರದಿ ತಯಾರು ಮಾಡಿ ಆರೋಗ್ಯ ಸಚಿವರಿಗೆ ಸಲ್ಲಿಕೆ ಮಾಡಲಿದ್ದು, ಬೆಂಗಳೂರು ನಗರದ ಜನರ ಹಿತದೃಷ್ಟಿಯಿಂದ ಸಚಿವರು ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ.

ವಿಶೇಷ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್ ಈ ಕುರಿತು ಮಾತನಾಡಿ, ಆರೋಗ್ಯ ಇಲಾಖೆಯಲ್ಲಿ ಈ ಕುರಿತು ಚರ್ಚೆ ನಡೆಸಲಾಗಿದೆ. ಬೆಂಗಳೂರಿನಲ್ಲಿ ಹಲವಾರು ಆರೋಗ್ಯ ಸೇವೆಗಳು ಬಿಬಿಎಂಪಿ,ಆರೋಗ್ಯ ಇಲಾಖೆ ವ್ಯಾಪ್ತಿಯಲ್ಲಿವೆ. ಬಿಬಿಎಂಪಿ ಪ್ರಾಥ ಮಿಕ ಆರೋಗ್ಯ ಕೇಂದ್ರ ಹಾಗೂ ಮ್ಯಾಟ್ರನಲ್ ಹೆಲ್ತ್ ಕೇರ್ ನೋಡಿಕೊಳ್ಳುತ್ತಿದ್ದೇನೆ. ಈಗಾ ಗಲೇ ಪಾಲಿಕೆಯಡಿಯಲ್ಲಿ ಹಲವು ಆರೋಗ್ಯ ಕೇಂದ್ರಗಳಿವೆ ಅದರ ಜತೆಗೆ ಮೆಡಿಕಲ್ ಎಜುಕೇಷನ್, ಮೆಡಿಕಲ್ ಕಾಲೇಜುಗಳು ಸೇರಿಕೊಂಡಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಪ್ರಾಥ ಮಿಕ ಆರೋಗ್ಯ ಕೇಂದ್ರಗಳು ಒಂದೇ ವ್ಯವಸ್ಥೆಯ ಅಡಿಯಲ್ಲಿ ಬರುವಂತೆ ಮಾಡಲು ಪ್ರತ್ಯೇಕ ಆರೋಗ್ಯ ಆಯುಕ್ತರ ನೇಮಕವಾಗಬೇಕು. ಬೆಂಗಳೂರು ಹೆಲ್ತ್ ಕಮೀಷನ್ ಎಂದು ನಿರ್ಮಿಸಲಾಗುವುದು. ಅದಕ್ಕೆ ಆರೋಗ್ಯ ಆಯುಕ್ತರು ಎಂದು ನೇಮಕ ಮಾಡಲಾಗುವುದು ಎಂದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಬೆಂಗಳೂರು ನಗರಕ್ಕೆ ಪ್ರತ್ಯೇಕ ಆರೋಗ್ಯ ಆಯುಕ್ತರನ್ನು ನೇಮಕ ಮಾಡುವಂತೆ ಸಲ್ಲಿಕೆಯಾದ ಪ್ರಸ್ತಾವನೆ ಕುರಿತು ವಿವರವಾದ ವರದಿ ತಯಾರು ಮಾಡಿ ಆರೋಗ್ಯ ಸಚಿವರಿಗೆ ಸಲ್ಲಿಸಲಿದ್ದಾರೆ.

ಇಬ್ಬರು ಯೋಧರು ಹುತಾತ್ಮ, ಉಗ್ರನೊಬ್ಬ ಹತ

ಕುಪ್ವಾರ್‌ನಲ್ಲಿ ಮತ್ತೆ ಗುಂಡಿನ ಮೊರೆತ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರ ವಿರುದ್ಧ ಕಾರ್ಯಾಚರಣೆ ನಡೆಯುತ್ತಿದೆ. 24 ಗಂಟೆಯಲ್ಲಿ ಇಬ್ಬರು ಯೋಧರು ಹುತಾತ್ಮರಾಗಿದ್ದು, ಓರ್ವ ಉಗ್ರರನ್ನು ಭದ್ರತಾ ಪಡೆ ಹೊಡೆದುರುಳಿಸಿದೆ.

ಕುಪ್ವಾರ ಜಿಲ್ಲೆಯಲ್ಲಿ ಮಂಗಳವಾರ ತಡ ರಾತ್ರಿ ಉಗ್ರರು ಹಾಗೂ ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದಿದೆ. ಲೋಲಾಬ್ ಎಂಬಲ್ಲಿ ಕೆಲ ದಿನಗಳಿಂದ ಉಗ್ರರ ಚಟುವಟಿಕೆ ನಡೆಯುತ್ತಿರುವ ಮಾಹಿತಿ ಮೇರೆಗೆ ಭಾರತೀಯ ಸೇನೆ ಹಾಗೂ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಜಂಟಿ ಕಾರ್ಯಾಚರಣೆ ಕೈಗೊಂಡಿದ್ದು ಉಗ್ರರ ನೆಲೆ ಪತ್ತೆ ಹಚ್ಚಿದೆ, ಈ ವೇಳೆ ಉಗ್ರರು ಭದ್ರತಾ ಪಡೆಗಳ ಮೇಲೆ ಗುಂಡಿನ ದಾಳಿ ನಡೆಸಿದೆ. ಸೇನೆಯಿಂದಲೂ ಪ್ರತಿದಾಳಿ ನಡೆದಿದ್ದು ಓರ್ವ ಉಗ್ರರನ್ನ ಕೊಲ್ಲಲಾಗಿದೆ. ಗುಂಡಿನ ಚಕಮಕಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಓರ್ವ ರಾಷ್ಟ್ರೀಯ ರೈಫಲ್ಸ್ ನ ಯೋಧ ದಿಲಾವರ್ ಸಿಂಗ್ ಹುತಾತ್ಮರಾಗಿದ್ದಾರೆ.

ಸಮಾಚಾರ ಸಣ್ಣದಲ್ಲ

ವಾಲಿಬಾಲ್: ಭಾರತಕ್ಕೆ ಭರ್ಜರಿ ಗೆಲುವು

ಸುರಬಯ: ಭಾರತ ತಂಡವು ಸಂಘಿಕ ಪ್ರದರ್ಶನದಿಂದಾಗಿ 20 ವರ್ಷದೊಳಗಿನವರ ಏಷ್ಯನ್ ವಾಲಿಬಾಲ್ ಚಾಂಪಿಯನ್‌ಶಿಪ್‌ನ ಎರಡನೇ ಪಂದ್ಯದಲ್ಲಿ ಕುವೈತ್ ವಿರುದ್ಧ 3-0 ನೇರ ಸೆಟ್‌ಗಳಿಂದ ಭರ್ಜರಿ ಗೆಲುವು ಸಾಧಿಸಿದೆ. 'ಸಿ' ಗುಂಪಿನ ಈ ಪಂದ್ಯದಲ್ಲಿ ಭಾರತ ತಂಡ 25-14, 25-12, 25-18ರಲ್ಲಿ ಜಯಗಳಿಸಿತು. ಮಿಡ್ಲ್ ಬ್ಲಾಕರ್ ಆದಿತ್ಯ, ದಾಳಿಯಲ್ಲಿ ಧ್ರುವಿಲ್ ಮತ್ತು ಸೆಟ್ಟರ್ ಆಗಿದ್ದ ನಾಯಕ ಕಬಿಲನ್ ಉತ್ತಮ ಪ್ರದರ್ಶನ ನೀಡಿದರು. ಕುವೈತ್‌ಗೆ ಇದು ಎರಡನೇ ಸೋಲಾಗಿದ್ದು, ಮೊದಲ ಪಂದ್ಯದಲ್ಲಿ ಜಪಾನ್ ತಂಡಕ್ಕೆ ಮಣಿದಿತ್ತು. ನಡೆದ ಮೊದಲ ಪಂದ್ಯ ದಲ್ಲಿ ಎರಡು ಸೆಟ್ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತ 3-2 ಸೆಟ್‌ಗಳಿಂದ (21-15, 21-25, 25-23, 25-15, 15-12ರಲ್ಲಿ) ಬಾಂಗ್ಲಾದೇಶ ತಂಡವನ್ನು ಮಣಿಸಿತ್ತು. ಒಟ್ಟು 16 ತಂಡಗಳನ್ನು ನಾಲ್ಕು ಗುಂಪುಗಳಲ್ಲಿ ವಿಂಗಡಿಸಲಾಗಿದೆ.

ಸರಣಿಯಿಂದ ಹೊರ ಬಿದ್ದ ಶ್ರೀಲಂಕಾ ವೇಗಿ

ಕೊಲಂಬೊ: ಶನಿವಾರದಿಂದ ಶುರುವಾಗಲಿರುವ ಭಾರತ ಮತ್ತು ಶ್ರೀಲಂಕಾ ನಡುವಣ ಸರಣಿಗೂ ಮುನ್ನ ಶ್ರೀಲಂಕಾ ತಂಡಕ್ಕೆ ಆಘಾತ ಎದುರಾಗಿದ್ದು, ತಂಡದ ಪ್ರಮುಖ ವೇಗಿ ದುಷ್ಮಂತ ಚಮೀರಾ ಈ ಸರಣಿಯಿಂದ ಹೊರಗುಳಿ ದಿದ್ದಾರೆ. ಇತ್ತೀಚೆಗೆ ಮುಗಿದ ಲಂಕಾ ಪ್ರೀಮಿಯರ್ ಲೀಗ್‌ನ ಪಂದ್ಯದ ವೇಳೆ ಚಮೀರಾ ಗಾಯಗೊಂಡಿದ್ದರು. ಈ ಗಾಯದಿಂದ ಚೇತರಿಸಿಕೊಳ್ಳಲು ಮತ್ತಷ್ಟು ಸಮಯ ತೆಗೆದುಕೊಳ್ಳ ಲಿದ್ದಾರೆ. ಹೀಗಾಗಿ ಭಾರತದ ವಿರುದ್ಧದ ಸರಣಿಗಳಿಂದ ಹೊರಗುಳಿಯಲು ನಿರ್ಧರಿಸಿದ್ದಾರೆ. ಭಾರತ ಮತ್ತು ಶ್ರೀಲಂಕಾ ನಡುವಣ ಟಿ20 ಸರಣಿಯು ಜುಲೈ 27 ರಿಂದ ಶುರುವಾಗಲಿದ್ದು, ಈ ಸರಣಿಯಲ್ಲಿ ಒಟ್ಟು 3 ಪಂದ್ಯಗಳನ್ನಾಡಲಾಗುತ್ತದೆ. ಇನ್ನು ಈ ಪಂದ್ಯಕ್ಕೆ ಬದಲಿ ಆಟಗಾರರನ್ನು ಟಿ20 ಸರಣಿ ಆರಂಭಕ್ಕೂ ಮುನ್ನವೇ ಪ್ರಕಟಿಸುವ ಸಾಧ್ಯತೆ ಇದೆ.

ವಿರಾಮ
ಪ್ರತಿ ಭಾನುವಾರ

ಸತತ ಮೂರನೇ ಸೋಲುಂಡ ವಿನಿಫ್ರೆಡ್ ಪಡೆ | ಮಿಂಚಿದ ಮುರ್ಷಿದಾ, ನಿಗಾರ್

ಬಾಂಗ್ಲಾ ದಾಳಿಗೆ ಬಸವಳಿದ ಮಲೇಷ್ಯಾ

ದಂಬುಲಾ: ಮುರ್ಷಿದಾ ಖಾತುನ್, ನಿಗಾರ್ ಸುಲ್ತಾನ ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ಬೌಲರ್‌ಗಳ ಭರ್ಜರಿ ಬೌಲಿಂಗ್ ದಾಳಿಗೆ ಮಲೇಷ್ಯಾ ತತ್ತರಿಸಿದ್ದು, ತನ್ನ ಮೂರನೇ ಪಂದ್ಯದಲ್ಲೂ ಹೀನಾಯ ಸೋಲನುಭವಿಸಿದೆ. ಈ ಮೂಲಕ ಬಾಂಗ್ಲಾ ಪಡೆ ಈ ಭರ್ಜರಿ ಗೆಲುವಿನೊಂದಿಗೆ ಸೆಮಿಸ್‌ಗೆ ಲಗ್ಗೆ ಇಟ್ಟಿದ್ದು, ಆಡಿರುವ ಮೂರೂ ಪಂದ್ಯಗಳಲ್ಲಿ ಹೀನಾಯ ಸೋಲನುಭವಿಸಿದ ಮಲೇಷ್ಯಾ ಪಡೆಯ ಪಯಣ ಅಂತ್ಯಗೊಂಡಿದೆ. ಶ್ರೀಲಂಕಾದಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಎ ಗುಂಪಿನಲ್ಲಿ ಭಾರತ ಹಾಗೂ ಪಾಕಿಸ್ತಾನ ಸೆಮಿಸ್‌ಗೆ ಲಗ್ಗೆ ಇಟ್ಟರೆ, ಮತ್ತೊಂದೆಡೆ ಬಿ ಗುಂಪಿನಲ್ಲಿ ಆತಿಥೇಯ ಶ್ರೀಲಂಕಾ ಹಾಗೂ ಬಾಂಗ್ಲಾದೇಶ ಸೆಮಿಫೈನಲ್‌ಗೆ ತಲುಪಿವೆ.

ಇಲ್ಲಿನ ರಂಗಿರಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾ ತಂಡವು ಸ್ಫೋಟಕ ಬ್ಯಾಟಿಂಗ್‌ನಿಂದಾಗಿ 20 ಓವರ್‌ಗಳಲ್ಲಿ 191 ರನ್ ಪೇರಿಸಿತು. ಅದನ್ನು ಬೆನ್ನು ಹತ್ತಿದ ಮಲೇಷ್ಯಾ ಪಡೆ 8 ವಿಕೆಟ್ ಕಳೆದುಕೊಂಡು 77 ರನ್ ಅಷ್ಟೇ ಗಳಿಸಲು ಶಕ್ತವಾಯಿತು.

ಬಾಂಗ್ಲಾ ಪಡೆಗೆ ಸ್ಫೋಟಕ ಆರಂಭ: ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾ ಪಡೆಗೆ ಭರ್ಜರಿ ಆರಂಭ ಸಿಕ್ಕಿತು. ಬೃಹತ್ ಗುರಿ ಪೇರಿಸಲೆಂದೇ ಬ್ಯಾಟಿಂಗ್‌ಗೆ ಬಂದ ದಿಲಾರಾ ಹಾಗೂ ಮುರ್ಷಿದಾ ಅವರು ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಮಲೇಷ್ಯಾ ಬೌಲರ್‌ಗಳನ್ನು ಮನ ಬಂದಂತೆ ದಂಡಿಸಿದ ಈ ಜೋಡಿ ಪವರ್‌ಪ್ಲೇನಲ್ಲೇ ಬೃಹತ್ ಬ್ಯಾಟಿಂಗ್ ಪ್ರದರ್ಶಿಸಿದರು. ಸ್ಫೋಟಕ ಬ್ಯಾಟಿಂಗ್ ಮಾಡಿದ ದಿಲಾರಾ ಅವರು 33 ರನ್ ಬಾರಿಸಿ ವಿಕೆಟ್ ನೀಡಿದರು. ಈ ವೇಳೆ ಜತೆಗೂಡಿದ ಮುರ್ಷಿದಾ ಹಾಗೂ ನಿಗಾರ್ ಅವರು ಸ್ಫೋಟಕ ಬ್ಯಾಟಿಂಗ್ ಮುಂದುವರಿಸಿದರು. ಆರಂಭದಿಂದಲೂ ಬ್ಯಾಟಿಂಗ್ ಮಾಡಿದ ಮುರ್ಷಿದಾ ಅವರು ಅರ್ಧಸತಕ ಬಾರಿಸಿದರು. ಮತ್ತೊಂದೆಡೆ ನಿಗಾರ್ ಅವರೂ ಸಹ ಸ್ಫೋಟಕ ಬ್ಯಾಟಿಂಗ್ ಆರಂಭಿಸಿ ಅರ್ಧಶತಕ ಪೂರೈಸಿದರು. ಮುರ್ಷಿದಾ ಅವರು 80 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ರುಮನಾ ಅವರು 6 ರನ್ ಗಳಿಸಿದರು. ನಿಗಾ ರ್ ಅವರು 62 ರನ್ ಬಾರಿಸಿ ಅಜೇಯರಾಗಿ ಉಳಿದರು.

ನಿರಸ ಪ್ರದರ್ಶನ ತೋರಿದ ಮಲೇಷ್ಯಾ: ಬೃಹತ್ ಗುರಿ ಬೆನ್ನಟ್ಟಿದ ಮಲೇಷ್ಯಾ ಪಡೆ ನಿರಸ ಪ್ರದರ್ಶನ ತೋರಿತು. ಆರಂಭದಿಂದಲು ಮಂದಗತಿ ಬ್ಯಾಟಿಂಗ್ ಮಾಡಿದ ಮಲೇಷ್ಯಾ ಪಡೆಗೆ ಉತ್ತಮ ಆರಂಭ ಸಿಗಲಿಲ್ಲ. ಐನಾ ಅವರು ಶೂನ್ಯಕ್ಕೆ ವಿಕೆಟ್ ನೀಡಿದರು. ಮತ್ತೊಂದೆಡೆ ನಿಧಾನಗತಿ ಬ್ಯಾಟಿಂಗ್ ಆರಂಭಿಸಿದ ವ್ಯಾನ್ ಹಾಗೂ ಎಲ್ಸಾ ಅವರು ಟೆಸ್ಟ್‌ನಂತೆ ಬ್ಯಾಟಿಂಗ್ ಮಾಡಿದರು. ವ್ಯಾನ್ ಅವರು 25 ಎಸೆತಗಳಲ್ಲಿ 11 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಎಲ್ಸಾ ಅವರು 20 ರನ್ ಬಾರಿಸಿ ಮರಳಿದರು. ವಿನಿಫ್ರೆಡ್ 8 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇಜ್ಜತ್ ಅವರು 15 ರನ್ ಬಾರಿಸಿ ವಿಕೆಟ್ ನೀಡಿದರು. ಉಳಿದಂತೆ ಇನ್ನ್ಯಾವ ಬ್ಯಾಟರ್ ಸಹ ಪ್ರತಿರೋಧ ತೋರಲಿಲ್ಲ. ಎಲ್ಸಾ ಅವರು ಬಾರಿಸಿದ 20 ರನ್ ತಂಡದ ಗರಿಷ್ಠ ಸ್ಕೋರ್ ಆಗಿತ್ತು. ನಿಧಾನಗತಿ ಬ್ಯಾಟಿಂಗ್‌ನಿಂದಾಗಿ ಕೇವಲ 77 ರನ್ ಗಳಿಸಿತು.

ಟೆಸ್ಟ್‌ನಂತೆ ಬಿಂಬಿಸಿದ ಪಂದ್ಯ: 192 ರನ್ ಗುರಿ ಪಡೆದ ಮಲೇಷ್ಯಾ ಪಡೆ ಟೆಸ್ಟ್‌ನಂತೆ ಬ್ಯಾಟಿಂಗ್ ಮಾಡಿತು. ಆಲೌಟ್ ಆಗದೆ ಸಂಪೂರ್ಣ ಓವರ್‌ಗಳಲ್ಲಿ 77 ರನ್ ಬಾರಿಸಿದ ತಂಡ ಎನ್ನಿಸಿಕೊಂಡಿದೆ. ಟಿ20 ಕ್ರಿಕೆಟ್‌ನಲ್ಲಿ ಇರುವ 120 ಬಾಲ್‌ಗಳಲ್ಲಿ 77 ರನ್ ಬಾರಿಸಿದ್ದಾರೆ. ಬಾಂಗ್ಲಾ ಪಡೆಯ ಬೌಲಿಂಗ್ ದಾಳಿಗೆ ತತ್ತರಿಸಿದ ಮಲೇಷ್ಯಾ ಪಡೆ ಒಂದೊಂದು ರನ್ ಬಾರಿಸಲೂ ತಿಣುಕಾಡಿತು. ಆರಂಭಿಕ ಬ್ಯಾಟರ್‌ಗಳಿಂದ ಕೆಳಕ್ರಮಾಂಕದ ಬ್ಯಾಟರ್‌ಗಳವರೆಗೂ ಟೆಸ್ಟ್‌ನಂತೆ ಬ್ಯಾಟಿಂಗ್ ಮಾಡಿದರು.

ಮುರ್ಷಿದಾ, ನಿಗಾರ್ ಸ್ಫೋಟಕ ಬ್ಯಾಟಿಂಗ್

ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾ ಪರ ಕಳೆದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಮುರ್ಷಿದಾ ಹಾಗೂ ನಿಗಾರ್ ಭರ್ಜರಿ ಪ್ರದರ್ಶನ ತೋರಿದರು. ಆರಂಭಿಕ ಆಟಗಾರ್ತಿ ಮುರ್ಷಿದಾ ಅವರು 135 ಸ್ಟ್ರೈಕ್‌ರೇಟ್‌ನಲ್ಲಿ 10 ಬೌಂಡರಿ ಹಾಗೂ 1 ಸಿಕ್ಸ್‌ನೊಂದಿಗೆ 59 ಎಸೆತಗಳಲ್ಲಿ 80 ರನ್ ಬಾರಿಸಿದರು. ಮತ್ತೊಂದೆಡೆ ನಿಗಾರ್ ಅವರು 167 ಸ್ಟ್ರೈಕ್‌ರೇಟ್‌ನೊಂದಿಗೆ 37 ಎಸೆತಗಳಲ್ಲಿ 2 ಸಿಕ್ಸ್ ಹಾಗೂ 5 ಬೌಂಡರಿಗಳೊಂದಿಗೆ 62 ರನ್ ಬಾರಿಸಿ ಅಜೇಯರಾಗಿ ಉಳಿದರು.

ಅಗ್ರ ಸ್ಥಾನಕ್ಕೇರಿದ ಚಮಾರಿ ಪಡೆ | ನಾಳೆ ಸೆಮಿಫೈನಲ್

ಲಂಕೆಗೆ ಭರ್ಜರಿ ಗೆಲುವು

ದಂಬುಲಾ: ಶ್ರೀಲಂಕಾ ಪಡೆಯ ಭರ್ಜರಿ ಬೌಲಿಂಗ್ ದಾಳಿ ಹಾಗೂ ಆರಂಭಿಕ ಬ್ಯಾಟರ್‌ಗಳ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಥಾಯ್ಲೆಂಡ್ ವಿರುದ್ಧ ಶ್ರೀಲಂಕಾ ಭರ್ಜರಿ ಗೆಲುವು ಸಾಧಿಸಿದ್ದು, ಏಷ್ಯಾಕಪ್‌ನ ಬಿ ಗುಂಪಿನಲ್ಲಿ ಮೊದಲ ಸ್ಥಾನ ಪಡೆದಿದೆ. ಈ ಮೂಲಕ ವನಿತೆಯರ ಏಷ್ಯಾಕಪ್‌ನ ಲೀಗ್ ಹಂತದ ಪಂದ್ಯಗಳು ಮುಕ್ತಾಯಗೊಂಡಿದ್ದು, ಅಗ್ರ ನಾಲ್ಕು ತಂಡಗಳು ಮಹಿಳಾ ಏಷ್ಯಾಕಪ್‌ನ ಸೆಮಿಸ್‌ಗೆ ಲಗ್ಗೆ ಇಟ್ಟಿವೆ. ಎ ಗುಂಪಿನಲ್ಲಿ ಭಾರತ ಮೊದಲನೇ ಸ್ಥಾನ ಪಡೆದಿದ್ದು, ಬಿ ಗುಂಪಿನ ಎರಡನೇ ತಂಡ ಅಂದರೆ ಬಾಂಗ್ಲಾವನ್ನು ಎದುರಿಸಲಿದೆ. ಆಡಿರುವ ಮೂರೂ ಪಂದ್ಯಗಳಲ್ಲಿ ಭಜರಿ ಗೆಲುವು ಸಾಧಿಸಿರುವ ಶ್ರೀಲಂಕಾ ತಂಡವು ಪಾಕಿಸ್ತಾನವನ್ನು ಎದುರಿಸಲಿದೆ.

ಇಲ್ಲಿನ ರಂಗಿರಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಥಾಯ್ಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 94 ರನ್ ಗಳಿಸಿತು. ಅದನ್ನು ಬೆನ್ನುಹತ್ತಿದ ಶ್ರೀಲಂಕಾ ತಂಡವು ಆರಂಭಿಕ ಬ್ಯಾಟಿಂಗ್ ಜತಯಾಟದಿಂದ ಸರಳವಾಗಿ ಪಂದ್ಯವನ್ನು ಗೆದ್ದುಕೊಂಡಿತು.

ಕುಸಿದ ಥಾಯ್ಲೆಂಡ್: ಮೊದಲು ಬ್ಯಾಟಿಂಗ್ ಮಾಡಿದ ಥಾಯ್ಲೆಂಡ್ ಪಡೆಗೆ ಉತ್ತಮ ಆರಂಭ ಸಿಗಲಿಲ್ಲ. ಬೋಕ್ಥಾಮ್ ಅವರು ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಸುವಾಂಚೋನ್‌ರಾಥಿ 12 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮಾಯಾ ಅವರು 2 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಲಾವೊಮಿ 4 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆದರೆ ಮಂದಗತಿ ಬ್ಯಾಟಿಂಗ್ ಮಾಡಿದ ನಾನಾಫಾಟ್ ಅವರು ಆರಂಭದಿಂದಲೂ ನಿಧಾನಗತಿಯಾಟ ಪ್ರದರ್ಶಿಸಿದರು. 53 ಎಸೆತಗಳನ್ನು ಎದುರಿಸಿದ ಅವರು, 47 ರನ್ ಬಾರಿಸಿ 90ರ ಗಡಿ ದಾಟಲು ನೆರವಾದರು.

ವಿಕೆಟ್ ಕಳೆದುಕೊಳ್ಳದೇ ಗೆದ್ದ ಶ್ರೀಲಂಕಾ: ಸರಳ ಗುರಿಯನ್ನು ಬೆನ್ನಟ್ಟಿದ ಶ್ರೀಲಂಕಾದ ಬ್ಯಾಟರ್‌ಗಳು ಸರಳವಾಗಿ ಪಂದ್ಯವನ್ನು ಗೆದ್ದುಕೊಂಡರು. ಶ್ರೀಲಂಕಾ ತಂಡವನ್ನು ಮುನ್ನಡೆಸುವ ಈ ಜೋಡಿ ಪ್ರತಿ ಪಂದ್ಯದಂತೆ ಈ ಪಂದ್ಯದಲ್ಲೂ ಭರ್ಜರಿ ಬ್ಯಾಟಿಂಗ್ ಮಾಡಿದರು. ಇನ್ನಿಂಗ್ಸ್ ಉದ್ದಕ್ಕೂ ಸ್ಫೋಟಕ ಬ್ಯಾಟಿಂಗ್ ಮಾಡಿದ ಈ ಜೋಡಿ ಎದುರಾಳಿ ತಂಡವನ್ನು ಸಮರ್ಥವಾಗಿ ಎದುರಿಸಿ ವಿಕೆಟ್ ನೀಡದೆ, 11.3 ಓವರ್‌ಗಳಲ್ಲಿ 94 ರನ್ ಗಳಿಸಿ ಭರ್ಜರಿ ಗೆಲುವು ಸಾಧಿಸಿದರು. ವಿಶ್ಮಿ ಅವರು ಅಜೇಯ 69 ರನ್ ಗಳಿಸಿದರೆ, ಚಮಾರಿ ಅವರು 49 ರನ್ ಗಳಿಸಿ ಗೆಲುವು ತಂದುಕೊಟ್ಟರು.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಹಮಾಸ್ ಉಗ್ರರ ಬೆದರಿಕೆ

ಪ್ಯಾರಿಸ್: ಒಲಿಂಪಿಕ್ಸ್ ಆರಂಭಕ್ಕೆ ಒಂದೇ ದಿನ ಬಾಕಿ ಉಳಿದಿದ್ದು, ಕ್ರೀಡಾಕೂಟಕ್ಕೆ ಉಗ್ರರ ದಾಳಿಯ ಭೀತಿ ಎದುರಾಗಿದ್ದ ಕಾರಣ ಪ್ಯಾರಿಸ್‌ನಲ್ಲಿ ಹಿಂದೆಂದೂ ಕಾಣದ ಭಾರೀ ಭದ್ರತೆ ಕೈಗೊಳ್ಳಲಾಗಿದೆ. ಈ ಮಧ್ಯೆ, ಇದೀಗ ಹಮಾಸ್ ಭಯೋತ್ಪಾದಕರಿಂದ ಭೀಕರ ದಾಳಿಯ ಬೆದರಿಕೆ ಬಂದಿದೆ. ಮುಸುಕುಧಾರಿ ವ್ಯಕ್ತಿಯೊಬ್ಬ ಅರೇಬಿಕ್ ಭಾಷೆಯಲ್ಲಿ ಬೆದರಿಕೆ ಹಾಕಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ಈ ವಿಡಿಯೊದಲ್ಲಿ ಒಲಿಂಪಿಕ್ಸ್ ವೇಳೆ ಫ್ರಾನ್ಸ್ ಅಧ್ಯಕ್ಷರನ್ನು ಹತ್ಯೆ ಮಾಡುವುದಾಗಿ ಮತ್ತು ಫ್ರಾನ್ಸ್‌ನಲ್ಲಿ ರಕ್ತದೋಕುಳಿ ಹರಿಸುವುದಾಗಿ ಎಚ್ಚರಿಕೆ ನೀಡಿದ್ದಾನೆ ಎಂದು ವರದಿಯಾಗಿದೆ.

ಈ ವಿಡಿಯೊ ವೈರಲ್ ಆಗುತ್ತಿದ್ದಂತೆ, ಫ್ರಾನ್ಸ್‌ನಲ್ಲಿ ಮತ್ತಷ್ಟು ಭದ್ರತೆ ಕೈಗೊಳ್ಳಲಾಗಿದೆ. ಪ್ಯಾರಿಸ್‌ನ ಕ್ರೀಡಾ ಗ್ರಾಮದ ವಿವಿಧ ಸ್ಥಳಗಳಲ್ಲಿ ಹೆಚ್ಚಿನ ಭದ್ರತೆ ಒದಗಿಸಲು ಸಂಘಟಕರು ನಿರ್ಧರಿಸಿದ್ದಾರೆ. ಪ್ಯಾರಿಸ್ ಪೊಲೀಸ್ ಮುಖ್ಯಸ್ಥ ಲಾರೆಂಟ್ ನುನೆಜ್ ಅವರು ಸುದ್ದಿಗೋಷ್ಠಿಯಲ್ಲಿ ಕ್ರೀಡಾಕೂಟಕ್ಕೆ ಸಂಬಂಧಿಸಿ ಮಾತನಾಡಿದ್ದು, ನಾವು ಉಗ್ರರ ಬೆದರಿಕೆಯ ಬಗ್ಗೆ ಕಳವಳ ಹೊಂದಿದ್ದೇವೆ. ವಿಶೇಷವಾಗಿ ಇಸ್ಲಾಮಿಕ್ ಉಗ್ರವಾದಿಗಳು, ಪ್ಯಾಲೆಸ್ಟೀನಿಯನ್ ಪರ ಚಳವಳಿಯಿಂದ ಕಡಿಮೆ-ತೀವ್ರತೆಯ ಬೆದರಿಕೆಯ ಬಗ್ಗೆಯೂ ನಾವು ವಿಶೇಷ ಕಾಳಜಿ ವಹಿಸುತ್ತೇವೆ. ಕ್ರೀಡಾಪಟುಗಳು ಆತಂಕಪಡಬೇಕಿಲ್ಲ ಎಂದು ಹೇಳಿದ್ದಾರೆ.

ಭಾರತೀಯ ಶ್ವಾನಪಡೆ ನಿರ್ವಹಣೆ

ಭಾರತೀಯ ಸೇನೆಯಲ್ಲಿ ತರಬೇತುಗೊಂಡ ಶ್ವಾನದಳವನ್ನು ನಿಯೋಜಿಸಲಾಗಿದೆ. ಕೇಂದ್ರ ಸಶಸ್ತ್ರ ಪೊಲೀಸ್ ಪಡೆ (ಸಿಎಪಿಎಫ್) ಮತ್ತು ವಿಶೇಷ ಕಮಾಂಡೊ ಪಡೆಯ ಭಾರತೀಯ ಕೆ9 ಹತ್ತು ಶ್ವಾನಗಳ ಪಡೆಯನ್ನು ಪ್ಯಾರಿಸ್‌ಗೆ ಕಳುಹಿಸಲಾಗಿದೆ. ಬೆಂಗಳೂರು ಸಮೀಪದ ತರಳುವಿನಲ್ಲಿರುವ ಸಿಆರ್‌ಪಿಎಫ್ ಶ್ವಾನ ತಳಿ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರದಲ್ಲಿ ಈ ಶ್ವಾನಪಡೆಯ ಸಾಮರ್ಥ್ಯ ಪರೀಕ್ಷೆ ನಡೆಸಿದ ಬಳಿಕ ಪ್ಯಾರಿಸ್‌ಗೆ ಕಳುಹಿಸಲಾಗಿದೆ.

ಕಾಲಿವುಡ್‌ಗೂ ಕಾಲಿಟ್ಟ ನೀಲ್

ಕೆಜಿಎಫ್ ಚಿತ್ರದ ಮೂಲಕ ಇಡೀ ಭಾರತೀಯ ಚಿತ್ರರಂಗವೇ ಸ್ಯಾಂಡಲ್‌ವುಡ್‌ನತ್ತ ತಿರುಗಿ ನೋಡುವಂತೆ ಮಾಡಿದ್ದ ನಿರ್ದೇಶಕ ಪ್ರಶಾಂತ್ ನೀಲ್ ಬಲು ಬೇಡಿಕೆಯ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದಾರೆ. ಸ್ಯಾಂಡಲ್‌ವುಡ್ ಜತೆಗೆ ಟಾಲಿವುಡ್‌ನಲ್ಲಿಯೂ ಬ್ಯುಸಿಯಾಗಿರುವ ನೀಲ್, ಈಗ ಕಾಲಿವುಡ್‌ಗೂ ಕಾಲಿಡಲಿದ್ದಾರೆ. ಹೌದು, ತೆಲುಗಿನಲ್ಲಿ ಸಲಾರ್ ಸಿನಿಮಾ ನಿರ್ಮಿಸಿ ಯಶಸ್ವಿಯಾಗಿದ್ದಾರೆ. ಈ ಯಶಸ್ಸಿನ ಖುಷಿಯಲ್ಲಿರುವ ಪ್ರಶಾಂತ್ ನೀಲ್ ತಮಿಳಿನ ಖ್ಯಾತ ನಟ ಅಜಿತ್ ನಟಿಸಲಿರುವ ಸಿನಿಮಾವನ್ನು ನಿರ್ದೇಶನ ಮಾಡಲಿದ್ದಾರೆ. ಹೌದು, ನೀಲ್, ಅಜಿತ್‌ಗಾಗಿ ಅದ್ಭುತವಾದ ಕಥೆ ಹೆಣೆದಿದ್ದಾರೆ. ಅಜಿತ್ ಈ ಕಥೆಯನ್ನು ಕೇಳಿ ಮೆಚ್ಚಿದ್ದು, ನಟಿಸಲು ಸಂತಸದಿಂದಲೇ ಸಮ್ಮತಿಸಿದ್ದಾರೆ. ನೀಲ್ ಹೆಣೆದಿರುವ ಕಥೆ ಆ್ಯಕ್ಷನ್, ಥ್ರಿಲ್ಲರ್ ಸ್ಟೋರಿಯಾಗಿದ್ದು, ಅಜಿತ್‌ಗೆ ಹೇಳಿ ಮಾಡಿಸಿದ ಸಿನಿಮಾವಾಗಿದೆ. ಈ ಚಿತ್ರಕ್ಕಾಗಿ ಅಜಿತ್ ಮೂರು ವರ್ಷ ಮುಡುಪಾಗಿಡಲಿದ್ದಾರೆ. ಈ ಸಿನಿಮಾವನ್ನು ಕೂಡ ಹೊಂಬಾಳೆ ಫಿಲಂಸ್ ನಿರ್ಮಾಣ ಮಾಡಲಿದೆ.

ನೀಲ್ ಕೈಯಲ್ಲಿ ಹಲವು ಸಿನಿಮಾಗಳು

ಸದ್ಯ ಪ್ರಶಾಂತ್ ನೀಲ್, ಸಲಾರ್ 2 ಸಿನಿಮಾದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾರೆ. ಈ ಸಿನಿಮಾದ ಬಳಿಕ ಜೂ.ಎನ್‌ಟಿಆರ್ ಅಭಿನಯದ ಡ್ರಾಗನ್ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಇದರ ನಂತರ ಮಹೇಶ್ ಬಾಬು ನಟಿಸಲಿರುವ ಚಿತ್ರವನ್ನು ನಿರ್ದೇಶನ ಮಾಡಲಿದ್ದಾರೆ. ಈ ನಡುವೆ ಕೆಜಿಎಫ್ ಚಾಪ್ಟರ್ 3 ಚಿತ್ರದ ಕಥೆ ಹೆಣೆದಿದ್ದು, ಆ ಸಿನಿಮಾವನ್ನು ಕೈಗೆತ್ತಿಕೊಳ್ಳುವ ನಿರೀಕ್ಷೆಯೂ ಇದೆ. ಇನ್ನು ಕೆಜಿಎಫ್ ಸಿನಿಮಾ ನೋಡಿ ಮೆಚ್ಚಿರುವ ಬಾಲಿವುಡ್ ನಟ ಅಮೀರ್ ಖಾನ್, ಪ್ರಶಾಂತ್ ನೀಲ್ ನಿರ್ದೇಶನದಲ್ಲಿ ನಟಿಸುವ ಇಂಗಿತ ವ್ಯಕ್ತಪಡಿಸಿದ್ದರು. ಅಮೀರ್ ಖಾನ್‌ಗಾಗಿ ನೀಲ್ ಕೂಡ ಕಥೆ ಹೆಣೆಯುವುದರಲ್ಲಿ ಬ್ಯುಸಿಯಾಗಿದ್ದರು. ಈ ಸಿನಿಮಾಗಳು ಮುಗಿದ ಬಳಿಕ ನೀಲ್ ಬಾಲಿವುಡ್‌ಗೂ ಎಂಟ್ರಿಕೊಡುವ ನಿರೀಕ್ಷೆ ಇದೆ.

ಹಾಡಿನಲ್ಲೇ ಮನಗೆದ್ದ ತಮನ್ನಾ

ನಟಿ ತಮನ್ನಾ ನಟಿಯಾಗಿಯಾಗಿ ಪ್ರಸಿದ್ಧಿ ಪಡೆದುದ್ದಕ್ಕಿಂತ ಇತ್ತೀಚಿನ ದಿನಗಳಲ್ಲಿ ಐಟಂ ಸಾಂಗ್‌ನಲ್ಲಿ ಹೆಚ್ಚಾಗಿ ಮನಗೆದ್ದಿದ್ದಾರೆ. ಹೌದು, ಈ ಹಿಂದೆ ಜೈಲರ್ ಸಿನಿಮಾದಲ್ಲಿ ಕಾವಾಲಯ್ಯ.. ನಾ.. ಕಾವಾಲಯ್ಯ ಹಾಡಿನಲ್ಲಿ ಕುಣಿದು ಮನಗೆದ್ದಿದ್ದರು. ಈಗ ಮತ್ತೊಮ್ಮೆ ಸ್ತ್ರೀ 2 ಚಿತ್ರದಲ್ಲಿ ಅಂತಹದ್ದೇ ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ. ತಮನ್ನಾ ಕಂಡು ಅಭಿಮಾನಿಗಳು ಖುಷಿಯಾಗಿದ್ದಾರೆ. ಹಾರರ್ ಕಾಮಿಡಿ ಕಥೆಯ ಸ್ತ್ರೀ ಚಿತ್ರದಲ್ಲಿ ರಾಜ್‌ಕುಮಾರ್ ರಾವ್ ನಾಯಕನಾಗಿ ನಟಿಸಿದ್ದು, ಶ್ರದ್ಧಾ ಕಪೂರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಈ ಚಿತ್ರದ ಆಜ್ ಕೀ ರಾತ್.. ಹಾಡಿನಲ್ಲಿ ತಮನ್ನಾ ಸೊಂಟ ಬಳುಕಿಸಿದ್ದು, ಹಾಟ್ ಆಗಿ ಕಂಗೊಳಿಸಿದ್ದಾರೆ. ಈ ಚಿತ್ರದ ಹಾಡು ಮಿಲಿಯನ್ ಗಟ್ಟಲೇ ವೀಕ್ಷಣೆ ಕಂಡಿದೆ, ಸಿನಿಮಾದ ಬಗ್ಗೆಯೂ ಕುತೂಹಲ ಮೂಡುವಂತೆ ಮಾಡಿದೆ. 2018ರಲ್ಲಿ ಸ್ತ್ರೀ ಮೊದಲ ಭಾಗ ಬಿಡುಗಡೆಯಾಗಿತ್ತು. ಈ ಚಿತ್ರದಲ್ಲಿ ನೂರಾ ಫತೇಹಿ ಕಮರಿಯಾ.. ಎಂದು ಹಾಡಿ ಕುಣಿದಿದ್ದರು. ಈ ಹಾಡು ಭರ್ಜರಿ ಹಿಟ್ ಆಗಿತ್ತು. ಅಂತೆಯೇ ಈಗ ಆಜ್ ಕೀ ರಾತ್... ಹಾಡೂ ಕೂಡ ಸಂಗೀತ ಪ್ರಿಯರ ಮನಗೆದ್ದಿದೆ. ಸ್ತ್ರೀ 2 ಆಗಸ್ಟ್‌ನಲ್ಲಿ ತೆರೆಗೆ ಬರಲಿದೆ. ತಮನ್ನಾ ಅಭಿನಯದ ಅರನ್ ಮನ್ಯೆ 4 ಇತ್ತೀಚೆಗೆ ತೆರೆಗೆ ಬಂದಿತ್ತು. ಹಾರರ್ ಕಥೆಯ ಈ ಸಿನಿಮಾ ಒಂದಷ್ಟು ಸದ್ದು ಮಾಡಿತ್ತು. ಆದರೆ ಈ ಚಿತ್ರಕ್ಕಿಂತ ಐಟಂ ಸಾಂಗ್‌ಗಳೇ ಮಿಲ್ಕಿ ಬ್ಯೂಟಿಗೆ ಪ್ರಸಿದ್ಧಿ ತಂದುಕೊಡುತ್ತಿವೆ. ಹಾಗಾಗಿ ತಮನ್ನಾ ಹೆಚ್ಚಾಗಿ ಐಟಂ ಸಾಂಗ್‌ಗಳಲ್ಲಿಯೇ ಕಾಣಿಸಿಕೊಳ್ಳುತ್ತಿದ್ದಾರೆ. ಪುಷ್ಪ ಚಿತ್ರದಲ್ಲಿ ಹೂಂ ಅಂಟಾವ ಮಾಮ.. ಹಾಡಿನಲ್ಲಿ ಸಮಂತಾ ಕಾಣಿಸಿಕೊಂಡಿದ್ದರು. ಈಗ ಪುಷ್ಪ 2 ಚಿತ್ರದಲ್ಲಿ ತಮನ್ನಾ ಐಟಂ ಸಾಂಗ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾಗುತ್ತಿದೆ. ಯಾಕೆಂದರೆ ಮಿಲ್ಕಿ ಬ್ಯೂಟಿ ಹೆಜ್ಜೆ ಹಾಕಿದರೆ ಆ ಹಾಡಿಗೆ ಹೊಸತನ ಬರುತ್ತದೆ ಎಂಬ ನಿರೀಕ್ಷೆ ಚಿತ್ರತಂಡದಲ್ಲಿದೆ.

ಬಂಗಾರದ ನಾಣ್ಯದಲ್ಲಿ ಶಾರುಖ್



ಬಾಲಿವುಡ್ ನಟ ಶಾರುಖ್ ಖಾನ್ ಅವರಿಗೆ ವಿಶ್ವಾದ್ಯಂತ ಅಪಾರ ಅಭಿಮಾನಿಗಳಿದ್ದಾರೆ. ಹಾಗಾಗಿಯೇ ಕಿಂಗ್ ಖಾನ್ ಸಿನಿಮಾ ರಿಲೀಸ್ ವಿಶ್ವದ ವಿವಿಧೆಡೆ ರಿಲೀಸ್ ಆಗುತ್ತದೆ. ಅಭಿಮಾನಿಗಳು ಸಿನಿಮಾ ನೋಡಿ ಖುಷಿಪಡುತ್ತಾರೆ. ಅಂತೆಯೇ ಫ್ರಾನ್ಸ್‌ನಲ್ಲೂ ಶಾರುಖ್ ಆರಾಧಿಸುವ ಅಪಾರ ಅಭಿಮಾನಿಗಳಿದ್ದಾರೆ. ಈಗ ಫ್ರಾನ್ಸ್‌ನಲ್ಲಿ ಶಾರುಖ್‌ಗೆ ವಿಶೇಷ ಗೌರವ ಸಲ್ಲಿಸಲಾಗಿದೆ. ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನ ಗ್ರೇವಿನ್ ಮ್ಯೂಸಿಯಂನಲ್ಲಿ ಹೊಸ ಬಂಗಾರದ ನಾಣ್ಯವನ್ನು ಬಿಡುಗಡೆ ಮಾಡಲಾಗಿದ್ದು, ಅದರ ಮೇಲೆ ಶಾರುಖ್ ಖಾನ್ ಅವರ ಚಿತ್ರ ಮತ್ತು ಹೆಸರು ಇದೆ. ಸದ್ಯ ಈ ಬಂಗಾರದ ನಾಣ್ಯದ ಫೋಟೋ ಸೋಶಿಯಲ್ ಮೀಡಿಯಾದಲ್ಲಿ ಬಿಡುಗಡೆಯಾಗಿದೆ. ಇದನ್ನು ನೋಡಿ ಅಭಿಮಾನಿಗಳು ಖುಷಿಯಾಗಿದ್ದಾರೆ. ಪ್ರಸಿದ್ಧ ಗ್ರೆವಿನ್ ಮ್ಯೂಸಿಯಂನಲ್ಲಿ ಅನೇಕ ಸೆಲೆಬ್ರಿಟಿಗಳ ಮೇಣದ ಪ್ರತಿಮೆ ಇದೆ. ಶಾರುಖ್ ಖಾನ್ ಅವರ ಮೇಣದ ಪ್ರತಿಮೆಯನ್ನೂ ಇಲ್ಲಿ ಕಾಣಬಹುದಾಗಿದೆ. ಅದರ ಜತೆಗೆ ಬಂಗಾರದ ನಾಣ್ಯವನ್ನು ಕೂಡ ಬಿಡುಗಡೆ ಮಾಡುವ ಮೂಲಕ ಶಾರುಖ್‌ಗೆ ಗೌರವ ಸಲ್ಲಿಸಲಾಗಿದೆ. ಈ ಗೌರವ ಪಡೆದ ಭಾರತದ ಮೊದಲ ನಟ ಎಂಬ ಖ್ಯಾತಿಗೆ ಶಾರುಖ್ ಖಾನ್ ಭಾಜನರಾಗಿದ್ದಾರೆ.

ರುದ್ರವೀಣ ತೆರೆಗೆ ಸಿದ್ಧ

ಮಾಸ್ ಮತ್ತು ಕ್ಲಾಸ್ ಅಂಶಗಳು ಬೆರೆತಿರುವ ರುದ್ರವೀಣ ತೆರೆಗೆ ಸಿದ್ಧವಾಗಿದೆ. ಮೆಗಾ ಸ್ಟಾರ್ ಚಿರಂಜೀವಿ ಸಿನಿಮಾದ ಟ್ರೇಲರ್ ರಿಲೀಸ್ ಮಾಡಿದ್ದು ಟ್ರೇಲರ್ ಅನ್ನು ಮೆಚ್ಚಿದ್ದಾರೆ. ಹಾಗಾಗಿಯೇ ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಾಗಿದೆ. ಮಧುಸೂದನ್ ರೆಡ್ಡಿ ನಿರ್ದೇಶನದ ಚಿತ್ರವನ್ನು ಲಕ್ಷ್ಮಣ್ ರಾವ್ ರಾಘುಳ ನಿರ್ಮಾಣ ಮಾಡಿದ್ದಾರೆ. ಮಾಸ್ ಮತ್ತು ಕ್ಲಾಸ್ ಜತೆಗೆ ಭಾವನೆಗಳು ಮಿಳಿತವಾಗಿದ್ದು ಪ್ರೇಕ್ಷಕರನ್ನು ರಂಜಿಸಲಿದೆ. ಇನ್ನು ಪರಿಪೂರ್ಣತೆಯಲ್ಲಿ ಎಲ್ಲಾ ನವರಸ ಒಳಗೊಂಡ ರುದ್ರವೀಣ ಮೂರು ಗಂಟೆ ಚಿತ್ರಮಂದಿರದಲ್ಲಿ ಪ್ರೇಕ್ಷರನ್ನು ಹಿಡಿದು ಕೂರಿಸುತ್ತದೆ. ಶ್ರೀರಾಮ್ ನಿಮ್ಮಲ ನಾಯಕನಾಗಿ ನಟಿಸಿದ್ದು, ನಾಯಕಿಯಾಗಿ ಎಲ್ಸಾ ಬಣ್ಣಹಚ್ಚಿದ್ದಾರೆ. ಎಲ್ಸಾ ಗ್ಲಾಮರ್ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಟರ್ನ್ ಅಂಡ್ ಟ್ವಿಸ್ಟ್ ಜತೆಗೆ ರೊಮ್ಯಾಂಟಿಕ್ ದೃಶ್ಯಗಳೊಂದಿಗೆ ನಾಯಕ ಮತ್ತು ನಾಯಕಿಯ ಕೆಮಿಸ್ಟ್ರಿ ಅದ್ಭುತವಾಗಿ ಮೂಡಿಬರಲಿದೆ. ಲೇಡಿ ವಿಲನ್ ಪಾತ್ರದಲ್ಲಿ ಸೋನಿಯಾ ಅಭಿನಯಿಸುತ್ತಿದ್ದು, ರಘು ಕುಂಚ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮಹಾವೀರ್ ಸಂಗೀತ ನಿರ್ದೇಶನ ಚಿತ್ರಕ್ಕೆ ಶಕ್ತಿ ತುಂಬಿದೆ. ರುದ್ರ ವೀಣಾ ತೆಲುಗು ಸೇರಿದಂತೆ ನಾಲ್ಕು ಭಾಷೆಯಲ್ಲಿ ತೆರೆಕಾಣಲಿದೆ.

ಹೊಸ ಲುಕ್‌ನಲ್ಲಿ ಅಶುಬೆದ್ರ

ಅಳಿದು ಉಳಿದವರು ಸಿನಿಮಾ ಮೂಲಕ ನಾಯಕ ನಟನಾಗಿ ಸ್ಯಾಂಡಲ್‌ವುಡ್‌ಗೆ ಪರಿಚಿರತನಾದ ಅಶು ಬೆದ್ರ ವಫಾ, ನಿರ್ಮಾಪಕನಾಗಿಯೂ ಗುರುತಿಸಿಕೊಂಡಿದ್ದಾರೆ. ಅಶುಬೆದ್ರ ಕಿರುತೆರೆಯಲ್ಲಿ ರಾಧಾ ಕಲ್ಯಾಣ ಧಾರಾವಾಹಿ ನಿರ್ಮಿಸಿದರೆ, ಅಳಿದು ಉಳಿದವರು ಹಾಗೂ ಸಿಂಪಲ್ ಆಗಿ ಇನ್ನೊಂದ್ ಲವ್ ಸ್ಟೋರಿ ಚಿತ್ರವನ್ನು ನಿರ್ಮಿಸಿ ಯಶಸ್ವಿಯಾದರು. ಈಗ ಅದೇ ಅಶು ಬೆದ್ರ ಈಗ ಮತ್ತೊಂದು ಪ್ರಯತ್ನದ ಮೂಲಕ ಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದ್ದಾರೆ. ಅಶುಬೆದ್ರ ವಫಾ ಹೊಸ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಪ್ರವೀಣ್ ಕಾಡಶೆಟ್ಟಿ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಚಿತ್ರದಲ್ಲಿ ಅಶುಬೆದ್ರ ವಫಾ ನಾಯಕನಾಗಿ ಬಣ್ಣಹಚ್ಚಿದ್ದಾರೆ. ಹಳ್ಳಿ ಸೊಗಡನ್ನು ತೆರೆದಿಡುವ ವಿಡಿಯೊ ತುಣುಕು ನೋಡುತ್ತಿದ್ದರೆ ಸಾಕಷ್ಟು ಜನ ಈ ಸಿನಿಮಾಗೆ ಪರಿಶ್ರಮ ಹಾಕಿರುವುದು ಗೊತ್ತಾಗುತ್ತಿದೆ. ಬಹಳ ಅದ್ಧೂರಿಯಾಗಿ ಸಿನಿಮಾ ಮೂಡಿಬರುತ್ತಿದೆ. ಸದ್ಯ ಬಿಡುಗಡೆಯಾಗಿರುವ ಮೇಕಿಂಗ್ ವಿಡಿಯೊ ಸದ್ದು ಮಾಡುತ್ತಿದೆ.

ಆಗಸ್ಟ್‌ನಲ್ಲಿ ಇದು ಎಂಥಾ ಲೋಕವಯ್ಯ

ನಿರ್ದೇಶಕ ಸಿತೇಶ್.ಸಿ.ಗೋವಿಂದ್ ವಿಭಿನ್ನ ಕಥೆಯ ಇದು ಎಂಥಾ ಲೋಕವಯ್ಯ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಈ ಚಿತ್ರವು ಒಂದು ಹೊಸತನದ ಮತ್ತು ವಿಶಿಷ್ಟ ರೀತಿಯ ಸಿನಿಮಾ ಅನುಭವವನ್ನು ನೀಡುವ ಭರವಸೆಯೊಂದಿಗೆ ಮೂಡಿಬಂದಿದೆ. ಮಲೆಯಾಳಂನಲ್ಲಿ ಪ್ರಸಿದ್ಧಿ ಪಡೆದ, ನಿರ್ದೇಶಕ ಜಿಯೋ ಬೇಬಿ ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೂ ಪರಿಚಿತರಾಗುತ್ತಿದ್ದಾರೆ. ಇದು ಎಂಥಾ ಲೋಕವಯ್ಯ ಒಂದು ಸಾಮಾಜಿಕ ವಿಡಂಬನಾತ್ಮಕ ಚಿತ್ರವಾಗಿದ್ದು, ಕರ್ನಾಟಕ ಮತ್ತು ಕೇರಳ ಗಡಿಯ ಹಳ್ಳಿಗಳಲ್ಲಿ ನಡೆಯುವ ಕಥೆಯಾಗಿದೆ.

ಇದು ಎರಡು ದಿನಗಳಲ್ಲಿ ನಡೆಯುವ ಘಟನೆಗಳೊಂದಿಗೆ ತೆರೆದುಕೊಳ್ಳುತ್ತದೆ, ಇಲ್ಲಿನ ಪಾತ್ರಗಳು ಜೀವನದಲ್ಲಿ ಉಂಟಾಗುವ ಕೆಲವು ಆಳವಾದ ಬದಲಾವಣೆಗಳಿಗೆ ಕಾರಣವಾಗುವ ಘಟನೆಗಳು ಈ ಚಿತ್ರದಲ್ಲಿವೆ. ಈ ಸಿನಿಮಾದಲ್ಲಿ ಕನ್ನಡ, ಮಲೆಯಾಳಂ ಜತೆಗೆ ತುಳು, ಕೊಂಕಣಿ ಮತ್ತು ಬ್ಯಾರಿ ಭಾಷೆಗಳ ಸಮ್ಮಿಳತವೂ ಇದೆ. ಇದು ಗಡಿ ಪ್ರದೇಶದ ವೈವಿಧ್ಯಮಯ ಸಾಂಸ್ಕೃತಿಕ ಚಿತ್ರಣವನ್ನೂ ಪ್ರತಿಬಿಂಬಿಸುತ್ತದೆ. ಚಿತ್ರದ ಹಾಡುಗಳು ಸಹ ಮಿಶ್ರ ಭಾಷಾ ಛಾಯೆಗಳನ್ನು ಹೊಂದಿದ್ದು, ಚಿತ್ರದ ಮೆರುಗು ಮತ್ತು ಆಕರ್ಷಣೆಯನ್ನು ಹೆಚ್ಚಿಸಿದೆ.

ನಿರ್ದೇಶಕ ಸಿತೇಶ್.ಸಿ.ಗೋವಿಂದ್, ಕರ್ನಾಟಕ-ಕೇರಳ ಗಡಿಯ ಸಾಂಸ್ಕೃತಿಕ ಸತ್ವ ಮತ್ತು ಅಲ್ಲಿನ ಜನರ ವಿಶಿಷ್ಟ ನಂಬಿಕೆಗಳನ್ನು ಹೊರತರುವ ಒಳನೋಟವುಳ್ಳ ಸಾಮಾಜಿಕ ವ್ಯಾಖ್ಯಾನವನ್ನು ತಿಳಿಯಾದ ಹಾಸ್ಯದೊಂದಿಗೆ ಹೇಳ ಹೊರಟ್ಟಿದ್ದಾರೆ. ಇದು ಎಂಥಾ ಲೋಕವಯ್ಯ ಚಿತ್ರವನ್ನು ಕಡ್ಲೆಕಾಯಿ ಫಿಲಂಸ್ ಬ್ಯಾನರ್‌ನಲ್ಲಿ ಮಂಗಲ್ವಾಡಿ ನರೇಶ್, ನಾಮದೇವ್ ಶೆಣೈ ನಿರ್ಮಿಸಿದ್ದಾರೆ. ಆಗಸ್ಟ್ ಎರಡನೇ ವಾರದಲ್ಲಿ ಚಿತ್ರ ತೆರೆಗೆ ಬರಲಿದೆ.

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್

11 ವಿಶ್ವವಾಣಿ
25.07.2024 ಗುರುವಾರ
vishwavani.news

ದಿನ ದರ್ಶಿಕೆ

ಶ್ರಾವಣ ಮಾಸ, ಕೃಷ್ಣ ಪಕ್ಷ, ಪಂಚಮಿ ತಿಥಿ, ಪೂರ್ವ ಭಾದ್ರಪದ ನಕ್ಷತ್ರ, ಶೋಭನ ಯೋಗ, ಕೌಲವ ಕರಣ, 1946 ಕ್ರೋಧಿನಾಮ ಸಂವತ್ಸರ, ವರ್ಷಾ ದ್ರಕ್ ಋತು, ದ್ರಿಕ್ ಆಯನ ದಕ್ಷಿಣಾಯನ

ಮನೆಮದ್ದು

ಮುಖದ ಸುಕ್ಕುಗಳನ್ನು ಕಡಿಮೆ ಮಾಡಲು, ನೆಲ್ಲಿಕಾಯಿ ಫೇಸ್ ಪರಿಣಾಮಕಾರಿ. ಇದನ್ನು ಮಾಡಲು ಒಂದು ಚಮಚ ನೆಲ್ಲಿಕಾಯಿ ಪುಡಿಯನ್ನು ಒಂದು ಚಮಚ ಮೊಸರು ಮತ್ತು ಜೇನುತುಪ್ಪದೊಂದಿಗೆ ಬೆರೆಸಿ ಪೇಸ್ಟ್ ತಯಾರಿಸಬೇಕು. ಈ ಪೇಸ್ಟ್ ಅನ್ನು ಮುಖದ ಮೇಲೆ ಹಚ್ಚಿ 15 ರಿಂದ 20 ನಿಮಿಷಗಳ ಕಾಲ ಬಿಡಿ, ನಂತರ ಶುದ್ಧ ನೀರಿನಿಂದ ಮುಖ ತೊಳೆಯಿರಿ.

ಸೌಂದರ್ಯ ಸೂತ್ರ

ನೀರಿನಲ್ಲಿ ನಿಂಬೆಹುಳಿ ಮತ್ತು ಅರಿಶಿನ ಹಾಕಿ ಕುಡಿಯುವುದರಿಂದ ಮೆಟಬೋಲಿಸಂ ಪ್ರಕ್ರಿಯೆ ಹೆಚ್ಚಾಗುತ್ತದೆ. ನಿಂಬೆಹಣ್ಣಿನಲ್ಲಿ ಕಂಡು ಬರುವಂತಹ ವಿಟಮಿನ್ ಸಿ ನಮ್ಮ ದೇಹದ ಮೆಟಬಾಲಿಸಂ ಪ್ರಮಾಣವನ್ನು ವೃದ್ಧಿಸುತ್ತದೆ ಮತ್ತು ಅರಿಶಿನದಲ್ಲಿ ಕಂಡು ಬರುವಂತಹ ಉಷ್ಣ ಪ್ರಭಾವ ನಮ್ಮ ದೇಹದ ಕ್ಯಾಲೋರಿಗಳನ್ನು ಕರಗಿಸಲು ಸಹಾಯ ಮಾಡುತ್ತದೆ.

ದಿನ ಭವಿಷ್ಯ

ಮೇಷ ಬಾಳಸಂಗಾತಿಯ ಆರೋಗ್ಯದ ಬಗ್ಗೆ ಎಚ್ಚರ. ಇನ್ನೊಬ್ಬರಿಂದ ಮಾತು ಕೇಳುವುದರಿಂದ ತಪ್ಪಿಸಿಕೊಳ್ಳಲು ಹೊಂದಾಣಿಕೆ ಮುಖ್ಯ.

ವೃಷಭ ಇಷ್ಟು ಕಾಲ ಕಾಡುತ್ತಿದ್ದ ಗೊಂದಲವೊಂದು ನಿವಾರಣೆ ಆಗುವ ಸೂಚನೆ ಕಾಣುತ್ತಿದೆ. ಹಣಕಾಸಿನ ಗಳಿಕೆಗೆ ಹೊಸ ಮಾರ್ಗ, ಆರ್ಥಿಕ ಸ್ಥಿರತೆ ಇದೆ.

ಮಿಥುನ ನೀವು ಎಷ್ಟೇ ಬುದ್ಧಿವಂತರು, ಲೆಕ್ಕಾಚಾರ ಹಾಕುವಲ್ಲಿ ನಿಸ್ಸೀಮರು ಆಗಿರಬಹುದು. ಗುರು-ಹಿರಿಯರ ಮಾರ್ಗದರ್ಶನದಂತೆ ನಡೆಯಿರಿ.

ಕಟಕ ಎಂಜಿನಿಯರಿಂಗ್ ವೃತ್ತಿಯಲ್ಲಿ ಇರುವವರಿಗೆ ಏಳ್ಗೆ ಇದೆ. ಮಹಿಳೆಯರಿಗೆ ಸ್ವಲ್ಪ ಮಟ್ಟಿಗೆ ಆರೋಗ್ಯ ಸಮಸ್ಯೆ ಆಗುವ ಸಾಧ್ಯತೆ.

ಸಿಂಹ ಯಾವಾಗಲೋ ಆಡಿದ ಜಗಳ- ಮಾತಿನ ಫಲಿತವನ್ನು ಈ ದಿನ ಅನುಭವಿಸಬೇಕಾಗುತ್ತದೆ. ಮೇಲ್ನೋಟಕ್ಕೆ ಕಾಣುವುದಷ್ಟೇ ಸತ್ಯವಲ್ಲ

ಕನ್ಯಾ ಹಣಕಾಸು- ಮನಸ್ಸಂತೋಷ ನೀಡದಿರುವ ಕೆಲಸವೊಂದು ಈ ದಿನ ನಿಮ್ಮ ಹೆಗಲೇರುತ್ತದೆ. ನೆಮ್ಮದಿ ನೆಲೆಸುತ್ತದೆ.

ತುಲಾ ಮುಂದೆ ಹೇಗೋ ಏನೋ ಎಂಬ ಆತಂಕ ಕಾಡುತ್ತಿದ್ದರೆ ಅದನ್ನು ಬಿಟ್ಟುಬಿಡಿ. ಈ ದಿನ ಶುಭ ವಾರ್ತೆಯೊಂದನ್ನು ನಿರೀಕ್ಷಿಸಿ.

ವೃಶ್ಚಿಕ ಮಾತಿನ ಮೇಲೆ ಹೆಚ್ಚು ಹಿಡಿತ ಇರಲಿ. ಯಾರಿಗೆ ಸಲಹೆ ನೀಡಲು ಹೋಗದಿರಿ. ನಿಮ್ಮ ನಡವಳಿಕೆ ವಿವಾದಕ್ಕೆ ಎಡೆ ಮಾಡಿಕೊಡಬಹುದು.

ಧನು ವ್ಯಾಸಂಗಕ್ಕೆ- ಉದ್ಯೋಗಕ್ಕಾಗಿ ವಿದೇಶದ ಸಂಪರ್ಕಕ್ಕಾಗಿ ಪ್ರಯತ್ನ ನಡೆಸುತ್ತಿದ್ದರೆ ಮುಖ್ಯವಾದ ವ್ಯಕ್ತಿಯೊಬ್ಬರ ಸಂಪರ್ಕ ದೊರೆಯುತ್ತದೆ.

ಮಕರ ಕಳೆದ ವಾರ ಆಗಿರುವ ಸುಸ್ತು ಮತ್ತು ಒತ್ತಡದ ಸಲುವಾಗಿ ಮನಸ್ಸು ವಿಶ್ರಾಂತಿ ಬಯಸುತ್ತದೆ. ಮುಖ್ಯ ನಿರ್ಧಾರಗಳನ್ನು ಮುಂದಕ್ಕೆ ಹಾಕಬೇಡಿ.

ಕುಂಭ ವಹಿಸಿದ ಕೆಲಸಗಳಲ್ಲಿ ತಾತ್ಸಾರ ಮನೋಭಾವ ಸಲ್ಲದು. ಅಂದುಕೊಂಡ ಕೆಲಸ ಆಗಬೇಕು ಅಂದರೆ ಸಂಯಮ ಮುಖ್ಯ. ಪ್ರಯತ್ನ ವ್ಯರ್ಥವಾಗಲ್ಲ.

ಮೀನ ಮಾಧ್ಯಮ ಕ್ಷೇತ್ರದವರಿಗೆ ಏಳ್ಗೆ ಇದೆ. ಶೈಕ್ಷಣಿಕ ರಂಗದಲ್ಲಿ ಸವಾಲು ಎದುರಿಸಬೇಕಾಗುತ್ತದೆ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1978: ವಿಶ್ವದ ಮೊದಲ ಟೆಸ್ಟ್ ಟ್ಯೂಬ್ ಬೇಬಿ ಲೂಯಿಸ್ ಜಾಯ್ ಬ್ರೌನ್ ಹುಟ್ಟಿದರು.
- 2007: ಭಾರತದ ಮೊದಲ ಮಹಿಳಾ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಪ್ರಮಾಣ ವಚನ ಸ್ವೀಕರಿಸಿದರು.
- 1956: ಟುನಿಸಿಯಾ ದೇಶವು ಫ್ರಾನ್ಸ್‌ನಿಂದ ಸ್ವಾತಂತ್ರ ಪಡೆದುಕೊಂಡಿತು.

ಚಿತ್ರಸ್ಫೂರ್ತಿ

ಹೊರಟೆವು ನಾವು ಸಂಚಾರಕ್ಕೆ ಎಂದು ಬಾತುಕೋಳಿಗಳು ಸೂರ್ಯನ ದಿಕ್ಕಿನೆದುರು ಹೊರಟಾಗ, ಅದರ ಕಾಂತಿ ಫೋಟೋಗ್ರಾಫರ್‌ನ ಕ್ಯಾಮರಾಗೆ ಕಂಡಾಗ!

ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎನಬಾರದೆ

ಪಾಂಡವರು ವನವಾಸದಲ್ಲಿದ್ದಾಗ, ಕೃಷ್ಣ ಒಮ್ಮೆ ಅವರಿದ್ದೆಡೆಗೆ ಅವರನ್ನು ವಿಚಾರಿಸಲೆಂದು ಬಂದ. ಎಲ್ಲರಿಗೂ ಅವನನ್ನು ನೋಡಿ ಬಹಳ ಸಂತೋಷವಾಯಿತು. ದ್ರೌಪದಿಯ ಕಣ್ಣಲ್ಲೂ ನೀರು ಹರಿಯಲಾರಂಭಿಸಿತು.

'ಚಿಂತಿಸಬೇಡ ಸಹೋದರಿ, ಶೀಘ್ರದಲ್ಲೇ ಎಲ್ಲವೂ ಸರಿಹೋಗುತ್ತದೆ' ಎಂದು ಹೇಳಿ ಆಕೆಯನ್ನು ಸಮಾಧಾನ ಪಡಿಸಿದ.

'ಇರಲಿ ಬಿಡು ಅಣ್ಣಾ, ಅದು ಬಂದಾಗ ಬರಲಿ, ನೀನು ಬಂದಿದ್ದೇ ನನಗೆ ಬಹಳ ಸಂತೋಷ, ಈಗ ನೀನು ಸ್ನಾನ ಮಾಡಿ ನಿನ್ನ ಆಯಾಸವನ್ನು ಪರಿಹರಿಸಿಕೋ. ನಂತರ ಭೋಜನ ಮಾಡುವೆಯಂತೆ' ಎಂದು ಹೇಳಿ, ದ್ರೌಪದಿ ಕೃಷ್ಣನ ಸ್ನಾನಕ್ಕಾಗಿ ಬಿಸಿ ನೀರನ್ನು ಸಿದ್ಧಪಡಿಸಲು ಹೊರಟಳು.

ಭೀಮ, ಒಣಗಿದ ಸೌದೆಯನ್ನು ದ್ರೌಪದಿಗೆ ತಂದುಕೊಟ್ಟು, ಒಲೆ ಉರಿಸಲು ಸಹಾಯ ಮಾಡಿದ. ದ್ರೌಪದಿ ಕೃಷ್ಣನ ಸ್ನಾನಕ್ಕಾಗಿ ಒಲೆ ಉರಿಸತೊಡಗಿದಳು. ಆಗ ಎಲ್ಲರೂ ಗುಡಿಸಲ ಹೊರಗೆ ಕುಳಿತು ಮಾತನಾಡುತ್ತಿದ್ದರು. ಆಗ ಕೃಷ್ಣ, ಅರ್ಜುನನನ್ನು ಕುರಿತು, 'ವನವಾಸದ ಜೀವನ ಹೇಗೇನಿಸುತ್ತಿದೆ?' ಎಂದು ಕೇಳಿದ. 'ನೀನು ನಮ್ಮನ್ನೆಲ್ಲಾ ರಕ್ಷಿಸುತ್ತಿರುವಾಗ, ನಮಗೆ ಯಾವುದರ ಚಿಂತೆಯೂ ಇಲ್ಲಾ ಕೃಷ್ಣಾ, ಎಲ್ಲರೂ ಚೆನ್ನಾಗಿಯೇ ಇದ್ದೇವೆ,' ಎಂದ ಅರ್ಜುನ.

'ಯುಧಿಷ್ಠಿರಾ, ಇವನ ಮಾತನ್ನು ಕೇಳಿದೆಯಾ, ನಿನ್ನ ತಮ್ಮನಿಗೆ ಇಲ್ಲೇ ಹೆಚ್ಚು ಸಂತೋಷವಂತೆ!' ಎಂದು ಹೇಳಿದ ಕೃಷ್ಣ.

'ಅವನು ಹೇಳುವುದು ನಿಜ ತಾನೇ? ಪ್ರಕೃತಿಯ ಸೌಂದರ್ಯದ ಜತೆಗಿರುವುದಕ್ಕಿಂತ ಬೇರೆ ಇನ್ನೇನು ಬೇಕು ಕೃಷ್ಣಾ?' ಎಂದ ಯುಧಿಷ್ಠಿರ. 'ನಿನಗೇನಿಸುತ್ತೆ, ತಂಗಿ ದ್ರೌಪದಿ?' ಕೃಷ್ಣ ಕೇಳಿದಾಗ, 'ನನ್ನ ಗಂಡಂದಿರು ಎಲ್ಲಿರುತ್ತಾರೆ ಅಲ್ಲೇ ನನಗೆ ಸಂತೋಷ ಕೃಷ್ಣ, ಅದು ಕಾಡಾದರೇನು? ಅರಮನೆಯಾದರೇನು?' ಎಂದಳು ದ್ರೌಪದಿ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಟ್ಟಲ್ಲಿ ನೀವೆಲ್ಲಾ ಸಂತೋಷವಾಗಿರುವುದೇ ನನಗೆ ಮುಖ್ಯ, ನೀರು ಸಿದ್ಧವಾಯಿತೆ? ನಾನು ಸ್ನಾನಕ್ಕೆ ಹೋಗುತ್ತೇನೆ' ಎಂದ ಕೃಷ್ಣ. 'ಇಷ್ಟೊತ್ತಿಗೆ, ಅದು ಕಾದಿರಬೇಕು ನೋಡಿ ಬರುತ್ತೇನೆ' ಎಂದಳು ದ್ರೌಪದಿ. ಅಲ್ಲಿ ದ್ರೌಪದಿಗೆ ಆಶ್ಚರ್ಯ ಕಾದಿತ್ತು. 'ಒಲೆ ಜೋರಾಗಿ ಉರಿಯುತ್ತಿದೆ, ಆದರೆ ನೀರು ಸ್ವಲ್ಪವೂ ಬೆಚ್ಚಗೆ ಆಗಿಲ್ಲ' ಎಂದಳು ದ್ರೌಪದಿ. ಭೀಮ ಬಂದು ನೋಡಿದ, 'ಅರೆ, ಇದೇನು, ಇಷ್ಟು ಜೋರಾಗಿ ಒಲೆ ಉರಿಯುತ್ತಿದೆ, ಆದರೆ ಸ್ವಲ್ಪ ಬೆಚ್ಚಗೂ ಆಗಿಲ್ಲವಲ್ಲ, ನೀರು ಇದ್ದ ಹಾಗೆ ಇದೆಯಲ್ಲಾ' ಎನ್ನುತ್ತಾ ಕೃಷ್ಣನ ಬಳಿಗೆ ಹೋದ.

'ಯಾಕೆ ಏನಾಯ್ತು?' ಎಂದು ಕೃಷ್ಣನೂ ಒಲೆಯ ಹತ್ತಿರ ಬಂದು, ಹಂಡೆಯೊಳಗೆ ಕೈ ಹಾಕಿ ನೋಡಿ, 'ಹೌದು ನೀರು ತಣ್ಣಗಿದೆಯಲ್ಲಾ, ಆ ನೀರನ್ನು ಪೂರ್ತಿ ಹೊರಗೆ ಸುರಿಯಿರಿ, ಯಾಕೆ ಬಿಸಿಯಾಗುತ್ತಿಲ್ಲ?' ಎಂದು ನೋಡೇ ಬಿಡೋಣ ಎಂದ. ಭೀಮ ಹಂಡೆಯಲ್ಲಿದ್ದ ನೀರನ್ನೆಲ್ಲಾ ಹೊರಗೆ ಸುರಿದ. ಆಗ ಅದರೊಳಗೆ ಇದ್ದ ಕಪ್ಪೆ ಹಾರಿ ಹೊರಗೆ ಬಂದಿತು. ಇದು ಹೇಗೆ ಅದರೊಳಗೆ ಹೋಯಿತು ಎಂದು, ಎಲ್ಲರೂ ಆಶ್ಚರ್ಯಗೊಂಡರು.

'ಆಶ್ಚರ್ಯ ಪಡುವುದೇನಿಲ್ಲ, ಹಂಡೆಯೊಳಗೆ ಅದು ಹೋಗಿ ಸೇರಿಕೊಂಡಿತ್ತು, ಅಷ್ಟೇ. ನೀವು ಬೆಂಕಿ ಹಚ್ಚಿದಾಗ, ಕಪ್ಪೆ ನನಗೆ ಶರಣಾಯಿತು. ಅದನ್ನು ರಕ್ಷಿಸುವುದು ನನ್ನ ಕರ್ತವ್ಯ, ಆದ್ದರಿಂದ ನೀರು ಬಿಸಿಯಾಗಲೇ ಇಲ್ಲ. ನಾನು ಅದನ್ನು ಕಾಪಾಡಿದೆ' ಎಂದ ಕೃಷ್ಣ.

ಎಲ್ಲರೂ ಭಕ್ತಿಯಿಂದ ಕೃಷ್ಣನಿಗೆ ನಮಸ್ಕರಿಸಿ, 'ನಾವು ಕೂಡ ನಿನಗೆ ಶರಣಾಗಿದ್ದೇವೆ, ನಮ್ಮನ್ನೂ ರಕ್ಷಿಸು ದೇವಾ' ಎಂದು ಬೇಡಿಕೊಂಡರು.

ಕಷ್ಟ ಎಂದು ಬೇಡಿಕೊಂಡಾಗ ಕಪ್ಪೆಯಂತಹ ಒಂದು ಜೀವಿಯನ್ನು ಬಿಡದೆ ರಕ್ಷಿಸುವ ಭಗವಂತ ನಮ್ಮನ್ನು ಕಡೆಗಣಿಸಿಯಾನೆ? ನಂಬಿಕೆ ಒಂದಿದ್ದರೆ ಅಲ್ಲಿ ಭಗವಂತ ಇದ್ದೇ ಇರುತ್ತಾನೆ. ಅದಕ್ಕೆ ದಾಸರು ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎನಬಾರದೆ? ಕೃಷ್ಣನ ನೆನೆದರೆ ಕಷ್ಟ ಒಂದಿಷ್ಟಿಲ್ಲ ಕೃಷ್ಣ ಎನಬಾರದೆ ಎಂದು ಹಾಡಿ ಸಾರಿರುವುದು.

ಪದಬಂಧ



ಎಡದಿಂದ ಬಲಕ್ಕೆ:
1. ಸಲೀಸಾದ ಎಂದರ್ಥ (3)
4. ಕೊಡಗಿನ ಸುಗ್ಗಿ ಹಬ್ಬ (3)
6. ನಮ್ಮ ಭಾಷೆ ಮಾತನಾಡುವ ಜನರ ರಾಜ್ಯವನ್ನು ಹೀಗೆಯೂ ಹೇಳಬಹುದು (5)
7. ಗಣೇಶನಿಗೆ ಪ್ರಿಯವಾದ ಸಿಹಿಕಡುಬು (3)
9. ರಂಗಸ್ಥಳದ ಮೇಲೆ ಪಾತ್ರಗಳು ಅಭಿನಯಿಸುವ ದೃಶ್ಯಗಳು (3)
11. ನೀರು ಬೇಕೆನಿಸುವ ಬಾಯಾರಿಕೆ (2)
12. ರಸಭರಿತ ಮಾವು (3)
13. ಎರಡಕ್ಷರದ ಜೇನು (2)
14. ತಟಪಟನೆ ಮಾಡಿದ ಮೋಸ (3)
16. ಪರಚು ಎಂದರ್ಥ (3)
21. ಒಂದು ಪಟಾಕಿ ಅಥವಾ ಹುರಿಗಾಳು (5)
22. ಅತಿಯಾದ ಒತ್ತಾಯ (3)
23. ಸಣ್ಣಸಣ್ಣ ಮನೆಗಳಿರುವ ಪ್ರದೇಶ (3)

ಮೇಲಿನಿಂದ ಕೆಳಕ್ಕೆ:
1. ಅಚಲವಾದ ಅಥವಾ ಗಟ್ಟಿಯಾದ (3)
2. ಹೂವಿನಿಂದ ದುಂಬಿಯು ಹೀರುವುದು (4)
3. ಪತ್ನಿಗೆ ಮತ್ತೊಂದು ಹೆಸರು (3)
4. ಬಾಲ್ಯದಲ್ಲಿ ಮಾಡುವ ಚೇಷ್ಟೆ (4)
5. ರೀತಿಯೊಂದಿಗೆ ಬರುವ ಜೋಡಿಪದ (3)
7. ನೋಡುವಾಗ ಮರುಳುಗೊಳಿಸುವ ಎಂದರ್ಥ (3)
8. ತೆಂಗಿನ ಚಿಪ್ಪು (3)
9. ಮಾತನಾಡಲು ಅಗತ್ಯವಾದ ಅಂಗ (3)
10. ಬಾಡಿ ಹೋಗು (3)
15. ಗುರುತುಳ್ಳವನು (4)
17. ಉಡುಗೊರೆ ಅಸ್ತವ್ಯಸ್ತವಾಗಿ ಬಂದಿದೆ (4)
18. ಶ್ರೇಷ್ಠತೆ ಅಥವಾ ಮರ್ಯಾದೆ (3)
19. ಮೊಳಕೆ (3)
20. ಹತ್ತು ನೂರುಗಳು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಪ್ರತಿಪಾದಿಸು 5. ಸಮೀಪ 8. ನಗರ 10. ಅರಿಕೆ 12. ಕಾಲುಕೀಳು 13. ಸವಿನಯ 14. ಕುಸಿರು 16. ಕಡೆವ 18. ಆನನ 20. ತಲೆಬರಹ

ಮೇಲಿನಿಂದ ಕೆಳಕ್ಕೆ: 1. ವಾಯಸ 2. ಪ್ರತಾಪ 3. ಸುಲ್ತಾನ 4. ಕಿನ್ನರ 6. ಮೀಸಲುಪಡೆ 7. ಗರಿ 9. ಗಗನಯಾನ 10. ಅಳುಕು 11. ಕೆಸರು 15. ಸಿಟ್ಟು 16. ಕಸೂತಿ 17. ವರಾತ 18. ಆಗ್ರಹ 19. ನವಿಲು

● ಸಿ. ರವಿಶಂಕರ ಶಾಸ್ತ್ರಿ, ದಂಟೆ

ದಿನಕ್ಕೊಂದು ಮಾಹಿತಿ

ಲಕ್ಷ ಮೈಲಿನಷ್ಟು ನರ



ಒಂದು ಮಗುವಿನ ರಕ್ತಪರಿಚಲನಾ ವ್ಯವಸ್ಥೆಯ, ನರ ನಾಡಿ, ಅಪಧಮನಿಗಳು, ಲೋಮನಾಳಗಳನ್ನು ಒಂದಂಕ್ಕೊಂದು ಸರಿಯಾಗಿ ಜೋಡಿಸಿ, ಉದ್ದಕ್ಕೆ ಹಾಕುತ್ತಾ ಹೋದರೆ ಅದು 60,000 ಮೈಲಗಳನ್ನು ದಾಟುತ್ತದೆ. ಫ್ರಾಂಕ್ಲಿನ್ ಸಂಸ್ಥೆಯ ಮಾಹಿತಿ ಪ್ರಕಾರ, ಮನುಷ್ಯನ ದೇಹ ಪ್ರೌಢಾವಸ್ಥೆಗೆ ಬಂದ ನಂತರ ರಕ್ತನಾಳಗಳು ಒಂದು ಲಕ್ಷ ಮೈಲುಗಳನ್ನು ದಾಟಬಹುದೆಂದು ಹೇಳುತ್ತದೆ.

ಪುಸ್ತಕ ಲೋಕ

ಸನ್ ಆಫ್ ಹಮಾಸ್



ಮೊಸಾಬ್ ಹಸನ್ ಯುಸೂಫ್ ಎಂಬ ಇಸ್ರೇಲಿ ಗುಪ್ತಚರ ಒಬ್ಬ ಬರೆದಿರುವ ಪುಸ್ತಕ. ಇದು ಮೊದಲು ಇಂಗ್ಲೀಷ್‌ನಲ್ಲಿ ಬರೆದಿದ್ದರೂ ಕನ್ನಡದ ಖ್ಯಾತ ಪತ್ರಕರ್ತ ಅಜಿತ್ ಹನುಮಕ್ಕನವರ್ ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಈ ಪುಸ್ತಕದಲ್ಲಿ ಹಮಾಸ್ ಎಂಬ ಭಯೋತ್ಪಾದಕ ಸಂಘಟನೆಯನ್ನು ಹುಟ್ಟುಹಾಕಿದ್ದ ಮೊಸಾಬ್‌ನ ತಂದೆ, ಆಮೇಲೆ ಗಾಜಾ ಪಟ್ಟಿಯಲ್ಲಿ ದುಷ್ಕರ್ಮಿಗಳ ಜತೆ ಸೇರಿಕೊಂಡು ಮೊಸಾಬ್ ಸಹ ಒಬ್ಬ ಉಗ್ರನಾಗಿರುತ್ತಾನೆ. ಆಮೇಲೆ, ಅವರ ತಂದೆಯ ಸ್ಥಾನವನ್ನು ಭರಿಸುತ್ತಾ, ಭಯೋತ್ಪಾದಕ ಕೃತ್ಯಗಳಿಗೆ ಬೆಂಬಲ ನೀಡುತ್ತಾ ಇಸ್ರೇಲ್‌ಗೆ ಗುಪ್ತಚರವಾಗಿ ಸಂದೇಶಗಳನ್ನೂ ಕಳಿಸುತ್ತಾ, ಹಲವಾರು ಉಗ್ರರನ್ನು ಸೆದೆಬಡಿಯುವಲ್ಲಿ, ಹಲವಾರು ಉಗ್ರಕೃತ್ಯಗಳನ್ನು ತಡೆಯುವಲ್ಲಿ ಕೆಲಸ ಮಾಡುತ್ತಾನೆ. ಹೀಗೆ ಕೆಲವರ್ಷಗಳ ನಂತರ ಕಟ್ಟರ್ ಮುಸಲ್ಮಾನ್ ಆಗಿದ್ದ ಇವನು ಕ್ರೈಸ್ತ ಧರ್ಮಕ್ಕೆ ಧರ್ಮಾಂತರವಾಗಿ ಅಮೆರಿಕದಲ್ಲಿ ಜೀವನ ನಡೆಸುತ್ತಾನೆ. ಭಯೋತ್ಪಾದಕತೆ, ಇಸ್ರೇಲ್ ಮತ್ತು ಹಮಾಸ್‌ನ ಜಗಳವೇ ಈ ಪುಸ್ತಕದ ಮುಖ್ಯ ಕತೆ.

ಟ್ವೀಟ್‌ಮೆಂಟ್

ಹನಿ: ನಾನಗೀಗ 21 ವರ್ಷ ತುಂಬುತ್ತಿದೆ. ಏನಾದರೂ ಒಂದು ಸಲಹೆ ನೀಡಿ.

ಕೋಡರ್: ಕೂತ್ಕೊಂಡು ಟ್ವೀಟ್ ಮಾಡೋದು ಬಿಟ್ಟು ಕೆಲಸ ನೋಡ್ಕೊಳ್ಳಿ

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಜನವರಿ 1610 ರಲ್ಲಿ ಗೆಲಿಲಿಯೋ ಗೆಲಿಲಿ ಕಂಡುಹಿಡಿದ ಗುರುಗ್ರಹದ ಉಪಗ್ರಹಗಳ ಸಂಖ್ಯೆ ಎಷ್ಟು?



- ಎ. 4.
- ಬಿ. 8.
- ಸಿ. 9.
- ಡಿ. 6.

ಉತ್ತರ: ಎ. 4

ಮಾಹಿತಿ

ಗುರು ಗ್ರಹದ ನಾಲ್ಕು ಉಪಗ್ರಹಗಳು ಐಯೊ, ಯುರೋಪಾ, ಗ್ಯಾನಿಮೀಡ್ ಮತ್ತು ಕ್ಯಾಲಿಸ್ಟೊಗಳನ್ನು ಜನಪ್ರಿಯವಾಗಿ ಗೆಲಿಲಿಯನ್ ಚಂದ್ರಗಳು ಎಂದು ಕರೆಯಲಾಗುತ್ತದೆ. ಏಕೆಂದರೆ ಈ ಚಂದ್ರಗಳನ್ನು ಖಗೋಳಶಾಸ್ತ್ರಜ್ಞ ಗೆಲಿಲಿಯೋ ಗೆಲಿಲಿ ಜನವರಿ 1610 ರಲ್ಲಿ ಕಂಡುಹಿಡಿದನು.

ದೇವಾಲಯಗಳು ಮತ್ತು ಶಾಸ್ತ್ರೀಯ ನೃತ್ಯಕಲೆ

ಭರತನಾಟ್ಯವು ಬಹಳ ಪ್ರಾಚೀನ ಕಾಲದಿಂದಲೂ ದೇವತಾರ್ಚನೆಯ ಒಂದು ಭಾಗವಾಗಿತ್ತು. ದೇವಸ್ಥಾನಗಳಲ್ಲಿ ಇದು ಪೂಜಾವಿಧಿಗಳ ಒಂದು ಅಂಗವಾಗಿತ್ತು. ಈಗಲೂ ಇದು ಹಲವು ದೇವಸ್ಥಾನಗಳಲ್ಲಿ ಅನುಷ್ಠಾನದಲ್ಲಿದೆ. ದೇವಸ್ಥಾನಗಳ ಉತ್ಸವದ ಸಂದರ್ಭದಲ್ಲಿ, ಜಾತ್ರೆ, ಶಿವರಾತ್ರಿ ಇತ್ಯಾದಿ ವಿಶೇಷ ಸಂದರ್ಭಗಳಲ್ಲಿ ಸಂಗೀತ-ನೃತ್ಯ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವ ಸಂಪ್ರದಾಯವು ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ನಡೆದುಕೊಂಡು ಬಂದಿದೆ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ದೇವಸ್ಥಾನಗಳಲ್ಲೂ ಉತ್ಸವದ ಸಂದರ್ಭದಲ್ಲಿ, ಅರ್ಚಕರು ದೇವರ ಉತ್ಸವ ಮೂರ್ತಿಯನ್ನು ತಲೆಯ ಮೇಲೆ ಹೊತ್ತುಕೊಂಡು ನಾದಸ್ವರ, ಕ್ಲಾರಿಯೋನೆಟ್, ಸಾಕ್ಸೋಫೋನ್, ಚೆಂಡೆ ಮುಂತಾದ ಸಂಗೀತ ವಾದ್ಯಗಳ ಹಿನ್ನೆಲೆಗೆ ತಕ್ಕಂತೆ ಭಕ್ತಿಭಾವಪೂರ್ಣವಾಗಿ ನರ್ತಿಸುತ್ತಾ ದೇವಾಲಯದ ಹೊರ ಆವರಣದಲ್ಲಿ ಪ್ರದಕ್ಷಿಣೆ ಹಾಕುವ ಕ್ರಮ ಇಂದಿಗೂ ಎಲ್ಲ ಕಡೆ ಇದೆ. ಇದು ತುಂಬಾ ಆಕರ್ಷಕವಾಗಿರುತ್ತದೆ. ಹೀಗೆ ಉತ್ಸವಮೂರ್ತಿಯನ್ನು ಹೊತ್ತುಕೊಂಡು ನರ್ತಿಸುವವರನ್ನು ದರ್ಶನ ಪಾತ್ರಿಗಳೆಂದು ಕರೆಯುವುದು ರೂಢಿ. ಈ ಸಂಪ್ರದಾಯ ತಮಿಳುನಾಡಿನಲ್ಲಿ ಹಾಗೂ ಕೇರಳದ ಹಲವಾರು ದೇವಸ್ಥಾನಗಳಲ್ಲೂ ರೂಢಿಯಲ್ಲಿದೆ. ಅದೇ ರೀತಿ ಮೈಸೂರು, ಬೆಂಗಳೂರು ಮುಂತಾದ ನಗರಗಳಲ್ಲಿನ ಕರಗ ಮಹೋತ್ಸವಗಳಲ್ಲೂ ಕರಗವನ್ನು ಹೊತ್ತುಕೊಂಡು ನೃತ್ಯಾರಾಧನೆ ನಡೆಸಲಾಗುತ್ತದೆ.

ನ ತಥಾ ಗಂಧಮಾಲ್ಯೇನ
ದೇವಾ ತುಷ್ಯಂತಿ ಪೂಜಿತಾಃ
ಯಥಾ ನಾಟ್ಯ ಪ್ರಯೋಗಜ್ಞೈ : ತುಷ್ಯಂತಿ
ಸ್ತುತಿ ಮಂಗಲೈಃ ॥

ಗಂಧ ಮಾಲ್ಯಾದಿಗಳಿಂದ ಪೂಜಿಸಿದರೆ ಆಗುವ ಸಂತೋಷಕ್ಕಿಂತಲೂ ನಾಟ್ಯ ಪ್ರಯೋಗಗಳನ್ನು ಬಲ್ಲ ನಟರು ಅರ್ಪಿಸುವ ಮಂಗಳಕರ ಸ್ತುತಿಗಳಿಂದ ದೇವತೆಗಳಿಗೆ ಅಧಿಕ ಸಂತೋಷವಾಗುತ್ತದೆ ಎಂಬ ಭರತವಾಕ್ಯವಿದೆ. ಇದನ್ನು ಪುರಂದರದಾಸರೂ ತಮ್ಮ ಉಗಾಭೋಗವೊಂದರಲ್ಲಿ ಈ ರೀತಿ ಹೇಳಿದ್ದಾರೆ. –

ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ
ಕುಳಿತು ಪಾಡಿದರೆ ನಿಂತು ಕೇಳುವ
ನಿಂತು ಪಾಡಿದರೆ ನಲಿದು ಕೇಳುವ
ನಲಿದು ಹಾಡಿದರೆ ಒಲಿವ ಹರಿ

ಅಂದರೆ, ನೃತ್ಯದ ಮೂಲಕ ಮಾಡುವ ಸೇವೆಯೇ ಅತ್ಯಂತ ಶ್ರೇಷ್ಠವಾದದ್ದೆಂದು ಅರ್ಥಮಾಡಿಕೊಳ್ಳಬಹುದು. ಹೀಗಿರುವಾಗ ಪೂಜಾಸ್ಥಾನವಾಗಿರುವ ದೇವಸ್ಥಾನಗಳಲ್ಲಿ ಮೊದಲಿನಿಂದಲೂ ನೃತ್ಯಕ್ಕೆ ಹಿರಿದಾದ ಸ್ಥಾನ ಲಭಿಸುತ್ತ ಬಂದಿದೆ. ಇದಕ್ಕೆ ಸಾಕ್ಷಿ ಎಂಬಂತೆ ದೇಶದ ಉದ್ದಗಲಕ್ಕೆ ಸಂಚರಿಸಿ ಯಾವುದೇ ದೇವಾಲಯಗಳನ್ನು ವೀಕ್ಷಿಸಿದರೂ ಅಲ್ಲೆಲ್ಲ ನೃತ್ಯ ಕಲೆಗೆ ಸಂಬಂಧಿಸಿದಂತಹ ಹತ್ತು ಹಲವು ವಿಗ್ರಹಗಳು ಶಿಲ್ಪಗಳು ಕಾಣಸಿಗುತ್ತವೆ. ಉದಾಹರಣೆಗೆ ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಕಂಡುಬರುವ ಮದನಿಕಾ ವಿಗ್ರಹಗಳು, ಹಳೇಬೀಡಿನ ನೃತ್ಯ ಶಿಲ್ಪಗಳು, ತಂಜಾವೂರು, ಮಧುರೈ, ಕುಂಭಕೋಣಂ, ಮಹಾಬಲಿಪುರಂ, ಕಾಂಚೀಪುರಂ,

ಐಹೊಳೆ, ಪಟ್ಟದಕಲ್ಲು, ಬಾದಾಮಿ, ಅಜಂತಾ, ಎಲ್ಲೋರಾ, ಭುವನೇಶ್ವರ, ಕೋನಾರ್ಕ್, ಖಜುರಾಹೋ ಹೀಗೆ ಈ ಪಟ್ಟಿ ಬೆಳೆಯುತ್ತದೆ. ಈ ಎಲ್ಲ ಕಡೆಗಳಲ್ಲೂ ನೃತ್ಯದ ಶಿಲ್ಪ ಭಂಗಿಗಳೇ ಕಾಣಸಿಗುವುದರಿಂದ ನೃತ್ಯಕ್ಕೂ ದೇವಾಲಯಗಳಿಗೆ ಅನನ್ಯವಾದ ಸಂಬಂಧವಿರುವುದು ಸ್ಪಷ್ಟವಾಗುತ್ತದೆ.

ಕ್ರಿ.ಶ.965 –1015ರಲ್ಲಿ ತಂಜಾವೂರಿನ ಚೋಳ ರಾಜನು ಬಸವೇಶ್ವರ ದೇವಾಲಯದ ಸಭಾಂಗಣದಲ್ಲಿ ಈಶ್ವರ ಪೂಜೆಗೋಸ್ಕರ ಸುಮಾರು 400 ಮಂದಿ ನರ್ತಕಿಯರನ್ನು ನೇಮಿಸಿದ್ದನೆಂದು ಇತಿಹಾಸ ಹೇಳುತ್ತದೆ. ನೃತ್ಯ ಕಲೆಯು ಎಲ್ಲರ ಪ್ರೀತಿಗೆ ಪಾತ್ರವಾಗಲೆಂದೂ ಅದರ ಬಗ್ಗೆ ಆಕರ್ಷಣೆ ಮೂಡಿಸಲೆಂದೂ ದೇವಾಲಯಗಳ ಹೊರಗೋಡೆಗಳಲ್ಲಿ ಮತ್ತು ಗೋಪುರಗಳಲ್ಲಿ ನೃತ್ಯ ಶಿಲ್ಪಗಳನ್ನು ಅರಸರು ಕೆತ್ತಿಸುತ್ತಿದ್ದರು.

ಬಾದಾಮಿಯ ಚಾಲುಕ್ಯರು ಕಟ್ಟಿಸಿರುವ ಎಂಟನೆಯ ಶತಮಾನದ ದೇವಾಲಯ ಒಂದರ ಶಾಸನದಲ್ಲಿ ಅಚಲನ್ ಎಂಬ ನಾಟ್ಯಾಚಾರ್ಯನ ಬಗ್ಗೆ ವರ್ಣನೆ ಇದೆ. ಹಾಗೆಯೇ ನಾಟ್ಯ ಪ್ರವೀಣೆಯಾಗಿದ್ದ ವಿಷ್ಣುವರ್ಧನನ ಪಟ್ಟದರಾಣಿ ಶಾಂತಲಾದೇವಿ ಬೇಲೂರಿನ ದೇವಾಲಯದಲ್ಲಿ ನರ್ತಿಸಿ ದೇವರಿಗೆ ಸೇವೆ ಸಲ್ಲಿಸುತ್ತಿದ್ದಳೆಂಬುದೂ ಇತಿಹಾಸದಿಂದ ತಿಳಿದುಬರುತ್ತದೆ.

19ನೆಯ ಶತಮಾನದ ಕೊನೆಯ ಭಾಗ ಹಾಗೂ 20ನೆಯ ಶತಮಾನದ ಮೊದಲ ಭಾಗದಲ್ಲಿ ದೇವಾಲಯಗಳಲ್ಲಿ ನೃತ್ಯ ಸೇವೆ ಸಲ್ಲಿಸುವ ದೇವದಾಸಿಯರೆಂಬ ನರ್ತಕಿಯರದ್ದೇ ಒಂದು ಪಂಗಡವಿತ್ತು. ನೃತ್ಯ ಕಲೆಯ ಅಭಿವೃದ್ಧಿಯಲ್ಲಿ ಅವರ ಕೊಡುಗೆಯೂ ಅಪಾರ.ಹೀಗೆ ನೃತ್ಯ ಕಲೆಯು ಧಾರ್ಮಿಕ ಸಂಸ್ಕಾರವಾಗಿ ಉದ್ಭವವಾಯ್ತು. ಪೂಜೆಯ ಒಂದು ಅಂಗವಾಗಿ ಬೆಳೆಯಿತು. ಭಕ್ತಿಯ ಮಾರ್ಗವಾಗಿ ಆಚರಣೆಗೆ ಬಂತು. ಈ ಹಿನ್ನೆಲೆಯಿರುವುದರಿಂದಲೇ ನೃತ್ಯದ ವಿಷಯಗಳೆಲ್ಲ ಪುರಾಣ ಕಥೆಗಳು ಮತ್ತು ಭಕ್ತಿಮಾರ್ಗವನ್ನೇ ಆಧಾರವಾಗಿಟ್ಟುಕೊಂಡಿದೆ. ಪುರಾಣ ಕಾಲದಲ್ಲಿ ಕೂಡಾ ಋಷಿಮುನಿಗಳು ಯಜ್ಞ ಮಾಡುತ್ತಾ ಆನಂದ ಪರವಶತೆಯಿಂದ ಕುಣಿಯುತ್ತಿದ್ದರಂತೆ. ಗೀತಂ ಸಮರ್ಪಯಾಮಿ, ವಾದ್ಯಂ ಸಮರ್ಪಯಾಮಿ, ನೃತ್ಯಂ ಸಮರ್ಪಯಾಮಿ ಎಂಬುದಾಗಿ ದೇವರಿಗೆ ದೇವಸ್ಥಾನಗಳಲ್ಲಿ ಸಲ್ಲಿಸುವ ಶೋಡಷ ಪೂಜಾ ವಿಧಾನಗಳು ಇಂದೂ ಚಾಲ್ತಿಯಲ್ಲಿದೆ.

ಕೆ.ರಾಮಮೂರ್ತಿರಾವ್ ಮೈಸೂರು

ಮೊಸರು; ಆರೋಗ್ಯಕ್ಕೆ ಉಸಿರು

ಆಕಳ ಹಾಲಿಗೆ ನೀರು ಬೆರೆಸದೇ ಮಂದ ಉರಿಯಲ್ಲಿ ಕೆನೆ ಬರುವವರೆಗೆ ಕಾಯಿಸಿ ತಣ್ಣಗಾಗಿಸಬೇಕು. ಉಗುರು ಬೆಚ್ಚಗಿನ ಹಾಲಿಗೆ ಒಂದು ಚಮಚದಷ್ಟು ಮಜ್ಜಿಗೆ ಅಥವಾ ಮೊಸರು ಬೆರೆಸಿ ಬೆಚ್ಚನೆ ಸ್ಥಳದಲ್ಲಿಡಬೇಕು. ಬೆಳಗಾಗುವಷ್ಟರಲ್ಲಿ ಹಾಲಿನಲ್ಲಿನ ಲ್ಯಾಕ್ಟೋಬಾಸಿಲಾ ಆಸಿಡೋಫಿಲಸ್ ದೆಸೆಯಿಂದ ಲ್ಯಾಕ್ಟಿಕ್ ಆಮ್ಲ, ಆಲ್ಕೋಹಾಲ್, ಸಕ್ಸೆನಿಕ್ ಆಮ್ಲಗಳು ಉತ್ಪತ್ತಿಯಾಗಿ ಹಾಲು ಗಟ್ಟಿಯಾಗಿ ಮೊಸರು ತಯಾರಾಗುತ್ತದೆ.ಈ ಮೊಸರು ನಾನಾ ಕಾರಣಗಳಿಂದ ಆರೋಗ್ಯದಾಯಿ!

- ಗಲೀಜು ನೀರಿನಿಂದ ಬರುವ ಅಮೀಬಿಯಾಸಿಸ್ ಕಾಯಿಲೆ ಗುಣಪಡಿಸುತ್ತದೆ.
- ಇದರಲ್ಲಿರುವ ಪ್ರೋಟೀನ್, ಕ್ಯಾಲ್ಸಿಯಂ, ವಿಟಮಿನ್ ಬಿಗಳು ದೇಹದ ಮೂಳೆಗಳು ಹಾಗೂ ಹಲ್ಲುಗಳನ್ನು ಸದೃಢಗೊಳಿಸುತ್ತವೆ.
- ಉದರಕ್ಕೆ ಸಂಬಂಧಿಸಿದ ನೋವು, ಭೇದಿ, ಗ್ಯಾಸ್ಟ್ರಿಕ್, ಅಜೀರ್ಣ, ಮಲಬದ್ಧತೆಗಳನ್ನು ನಿವಾರಿಸುತ್ತದೆ.
- ಮೊಸರಿಗೆ ಅರಿಶಿನ ಬೆರೆಸಿ ಹಚ್ಚುವುದರಿಂದ ತುರಿಕೆ, ಇಸಬು, ನೀರುಗುಳ್ಳೆ ಮೊದಲಾದ ಚರ್ಮರೋಗಗಳು ಮಾಯವಾಗುತ್ತವೆ.
- ಮೊಸರಿಗೆ ಮದರಂಗಿ ಸೇರಿಸಿ ತಲೆಗೆ ಹೆಚ್ಚುವುದರಿಂದ ತಲೆಹೊಟ್ಟು ನಿವಾರಣೆಯಾಗಿ ಕೂದಲು ನವಿರಾಗುತ್ತದೆ.
- ಉರಿಮೂತ್ರ, ಅತಿದಾಹ, ಮಧುಮೇಹ, ಬಿಸಿಲ ಬೇಗೆ, ರಕ್ತದೊತ್ತಡಗಳಿಗೆ ಮೊಸರಿನೊಂದಿಗೆ ಅನ್ನ,ಬೆಲ್ಲ, ಕಾಳುಮೆಣಸಿನ ಪುಡಿ ಬೆರೆಸಿ ಸೇವಿಸಬೇಕು.
- ನಿತ್ಯ ಮೊಸರು ಸೇವಿಸುವುದರಿಂದ ದೇಹದ ಕೊಲೆಸ್ಟರಾಲ್ ಕಡಿಮೆಯಾಗಿ ಬೊಜ್ಜು ನಿವಾರಣೆಯಾಗುತ್ತದೆ.

- ಮೂಲವ್ಯಾಧಿ ಸಮಸ್ಯೆಗೆ ಮೊಸರಿಗೆ ಬೆಲ್ಲ ಸೇರಿಸಿ ತಿನ್ನಿಸಬೇಕು.
- ಮೊಸರಿಗೆ ಕಡಲೆಹಿಟ್ಟು, ನಿಂಬೆರಸ ಕಲಸಿ ದೇಹಕ್ಕೆ ಹಚ್ಚಿಸ್ನಾನ ಮಾಡಿದರೆ ಚರ್ಮರೋಗಗಳು ಗುಣವಾಗುವುದರೊಂದಿಗೆ ದೇಹಕ್ಕೆ ಕಾಂತಿ ಬರುತ್ತದೆ.
- ಮೊಸರೊಡೆ, ಮೊಸರನ್ನ, ಮೊಸರುಬಜ್ಜಿ, ಧಹಿಪುರಿ, ಮೊಸರವಲಕ್ಕಿ, ಮೊದಲಾದ ಹಲವು ಆಹಾರೋತ್ಪನ್ನಗಳನ್ನು ಮೊಸರಿನಿಂದ ತಯಾರಿಸಬಹುದು.

ಕೆ.ಶ್ರೀನಿವಾಸರಾವ್. ಹರಪನಹಳ್ಳಿ

ಐವಿಎಫ್ ತಂತ್ರಜ್ಞಾನದಲ್ಲಿ ಹೊಸ ಅಧ್ಯಾಯ!



ಇಂದು ಐವಿಎಫ್ (ಇನ್ ವಿಟ್ರೋ ಫರ್ಟಿಲೈಸೇಷನ್) ತಂತ್ರಜ್ಞಾನದ ಕೊಡುಗೆಯನ್ನು ಗುರುತಿಸುವ ಕಾಲ ಬಂದಿದೆ. 45 ವರ್ಷಗಳ ಹಿಂದೆ, 1978ರಲ್ಲಿ ಐವಿಎಫ್‌ನ ಮೊದಲ ಯಶಸ್ಸನ್ನು ಕಾಣಲಾಯಿತು. 25.7.1978ರಂದು ಮೊದಲ ಐವಿಎಫ್ ಮಗು ಜನಿಸಿತು.

ಆ ನಂತರ ಐವಿಎಫ್ ತಂತ್ರಜ್ಞಾನ ಸಾಕಷ್ಟು ಬೆಳೆದಿದೆ. ಜಗತ್ತಿನಾದ್ಯಂತ ಸಾವಿರಾರು ವೈದ್ಯರು ಐವಿಎಫ್ ತಂತ್ರಜ್ಞಾನವನ್ನು ಕರಗತಮಾಡಿಕೊಂಡಿದ್ದಾರೆ ಮತ್ತು ಅವರಲ್ಲಿ ಕೆಲವರು ಐವಿಎಫ್ ನಲ್ಲಿ ಹೆಚ್ಚಿನ ಯಶಸ್ಸು ಕಾಣುವಲ್ಲಿ ವಿಶೇಷ ಪರಿಣತಿ ಪಡೆದಿದ್ದಾರೆ.

ಐವಿಎಫ್ ತಂತ್ರಜ್ಞಾನವನ್ನು ಕರಗತ ಮಾಡಿಕೊಂಡು, ಅದರಲ್ಲಿ ವಿಶೇಷ ಯಶಸ್ಸು ಗಳಿಸಿದವರಲ್ಲಿ ಕರ್ನಾಟಕ ರಾಜ್ಯದ ಡಾ. ರಶ್ಮಿ ಯೋಗೀಶ್ ಒಬ್ಬರಾಗಿದ್ದಾರೆ. ಡಾ. ರಶ್ಮಿ ಯೋಗೀಶ್ ಅವರ ವೈದ್ಯಕೀಯ ವೃತ್ತಿಯ ಯಶಸ್ಸಿನ ಕುರಿತು ಈ ಬರಹದಲ್ಲಿ ಬೆಳಕು ಚೆಲ್ಲಲಾಗಿದೆ.

ಐವಿಎಫ್ ತಂತ್ರಜ್ಞಾನದ ಕುರಿತು ಡಾ. ರಶ್ಮಿ ಯೋಗೀಶ್ ಅವರು ವಿಶೇಷ ಒಲವನ್ನು ಹೊಂದಿದ್ದಾರೆ ಮತ್ತು ಈ ವಿಚಾರದಲ್ಲಿ ಪ್ರತಿದಿನ ಹಲವು ಗಂಟೆಗಳಷ್ಟು ಸೇವೆ ನೀಡುತ್ತಿದ್ದಾರೆ. ಅವರು ಈ ವಿಚಾರದಲ್ಲಿ ಹೊಂದಿರುವ ಪರಿಣತಿ, ಕೌಶಲ ಮತ್ತು ವೃತ್ತಿನಿಷ್ಠೆಯಿಂದಾಗಿ, ಗರ್ಭಧಾರಣೆಯ ಪ್ರಮಾಣದ ಹೆಚ್ಚಳದ ಕುರಿತು ಎಲ್ಲರೂ ಮಾತನಾಡುತ್ತಿದ್ದಾರೆ. ಈ ಕುರಿತು ಪ್ರಶ್ನಿಸಿದಾಗ, 'ಮಕ್ಕಳಿಲ್ಲದ ಮಹಿಳೆಯರನ್ನು ಕಂಡಾಗ ಬಹಳ ಬೇಸರವಾಗುತ್ತದೆ ಎಂದಿದ್ದಾರೆ ಮತ್ತು ಮಕ್ಕಳಾಗದಿರುವ ಹಲವು ಮಹಿಳೆಯರ ನೋವನ್ನು ಸಹ ಡಾ. ರಶ್ಮಿ ಯೋಗೀಶ್ ಅವರು ಗುರುತಿಸಿದ್ದಾರೆ.

ಮಹಿಳೆ ಕುಟುಂಬದ ಕಣ್ಣು

ಮಹಿಳೆಯು ಒಂದು ಕುಟುಂಬದ ಕಣ್ಣು ಇದ್ದಂತೆ ಮತ್ತು ಮಹಿಳೆ ಸಂತಸದಿಂದ ಇದ್ದಾಗ ಆ ಕುಟುಂಬವು ಸಂತಸಪಡುತ್ತದೆ ಎಂಬುದು ಅವರ ಅಭಿಪ್ರಾಯ. ತನ್ನ ಪತಿ ಮತ್ತು ಕುಟುಂಬವು ತನ್ನನ್ನು ನೋಡಿಕೊಳ್ಳುವ ರೀತಿಯಿಂದಲೇ, ಮಹಿಳೆಯು ಸಂತಸವನ್ನು ಅನುಭವಿಸುತ್ತಾರೆ. 'ಮಹಿಳೆಯು ತನ್ನ ಮಹತ್ವವನ್ನು ಅರಿಯಬೇಕು ಮತ್ತು ಕುಟುಂಬದಲ್ಲಿ ತನ್ನ ಜವಾಬ್ದಾರಿಯನ್ನು ಸ್ಥೈರ್ಯದಿಂದ ನಿರ್ವಹಿಸಬೇಕು, ಆಗ ಮಾತ್ರ ಒಂದು ಬಲಿಷ್ಠ ದೇಶವನ್ನು ಕಟ್ಟಬಹುದು' ಎನ್ನುತ್ತಾರೆ ಡಾ. ರಶ್ಮಿ ಯೋಗೀಶ್.

'ಒಬ್ಬ ಮಹಿಳೆಯು ಗರ್ಭ ಧರಿಸದೇ ಹೋದ ಪಕ್ಷದಲ್ಲಿ, ಮಾನಸಿಕವಾಗಿ ಆಕೆ ತುಂಬಾ ಜರ್ಜರಿತವಾಗುತ್ತಾರೆ ಮತ್ತು ಮಕ್ಕಳಾಗದೇ ಇರುವುದರಿಂದ ತನ್ನ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳುತ್ತಾಳೆ ಮತ್ತು ತನ್ನನ್ನು ಹಳಿದುಕೊಳ್ಳುತ್ತಾ, ಇಡೀ ಕುಟುಂಬದ ಬೇಸರಕ್ಕೆ ಕಾರಣಳಾಗುತ್ತಾಳೆ' ಎನ್ನುತ್ತಾರೆ ಡಾ. ರಶ್ಮಿ ಯೋಗೀಶ್.

ಬೆಂಗಳೂರಿನಲ್ಲಿ ಒಂದು ಹೊಸ ಮತ್ತು ಅತ್ಯಾಧುನಿಕ ಐವಿಎಫ್ ಕೇಂದ್ರವು ಇನ್ನು ಕೆಲವೇ ತಿಂಗಳುಗಳಲ್ಲಿ ಆರಂಭವಾಗಲಿದೆ. ಇದು ಅಂತಾರಾಷ್ಟ್ರೀಯ ಮಟ್ಟದ ಐವಿಎಫ್ ಕೇಂದ್ರ ಎನಿಸಿದ್ದು, ನಮ್ಮ ದೇಶದ ಐವಿಎಫ್ ಇತಿಹಾಸದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸುತ್ತಿದೆ.

ಆದ್ದರಿಂದಲೇ, ವಿಶ್ವ ಐವಿಎಫ್ ದಿನದಂದು (ಜುಲೈ 25) ಎಲ್ಲಾ ಮಹಿಳೆಯರಿಗೆ ಒಂದು ಸಂದೇಶವನ್ನು ನೀಡಲು ಡಾ. ರಶ್ಮಿ ಯೋಗೀಶ್ ಬಯಸುತ್ತಾರೆ.

ಗರ್ಭವನ್ನು ಸೂಕ್ತವಾಗಿ ಪ್ಲಾನ್ ಮಾಡಿ

ಮದುವೆಗಿಂದ ಮೂರು ತಿಂಗಳ ಮುಂಚೆ, ರೂಬೆಲ್ಲಾ, ಚಿಕನ್ ಪಾಕ್ಸ್, ಕ್ಯಾನ್ಸರ್ ಸರ್ವಿಕ್ಸ್ ಚುಚ್ಚುಮದ್ದನ್ನು ತೆಗೆದುಕೊಳ್ಳಿ. (ಬಾಲ್ಯ ದಲ್ಲಿ ತೆಗೆದುಕೊಳ್ಳದೇ ಇದ್ದ ಪಕ್ಷದಲ್ಲಿ). ಮದುವೆಯಾಗಿ ಮೂರು ತಿಂಗಳ ನಂತರ, ಎಎಂಎಚ್ ಎಂಬ ಸರಳ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ. ಇದು, ಮಹಿಳೆಯ ಅಂಡಾಶಯ ಕಣಜವನ್ನು ಗುರುತಿಸು ತ್ತದೆ. ಮಹಿಳೆಯಲ್ಲಿ ಫಲನೀಡಬಲ್ಲ ಅಂಡಾಣುಗಳು ಒಮ್ಮೆಗೇ ಉತ್ಪತ್ತಿಯಾಗುವುದರಿಂದ, ಮಹಿಳೆಯ ದೈಹಿಕ ವ್ಯವಸ್ಥೆಯಲ್ಲಿ ಉಳಿದಿರುವ ಅಂಡಾಣುಗಳ ಅನುಪಾತವನ್ನು ಈ ಪರೀಕ್ಷೆ ತಿಳಿಸುತ್ತದೆ.

ಆದ್ದರಿಂದಲೇ ಹೇಳುವುದು, ಸಾಮಾನ್ಯ ಸ್ಥಿತಿಗಿಂತ ಎಎಂಎಚ್ ಕಡಿಮೆ ಇದ್ದಾಗ, ಕನ್ಸೆಪ್ಷನ್‌ನ್ನು (ಗರ್ಭವತಿ) ಯೋಜಿಸಬೇಕು, ಹೊರತು ಕಾಂಟ್ರಾಸೆಪ್ಷನ್ (ಗರ್ಭನಿರೋಧಕ) ಅಲ್ಲ. ಎಎಂಎಚ್ ಕಡಿಮೆ ಇದ್ದಾಗ, ಆಕಸ್ಮಿಕವಾಗಿ ಗರ್ಭಧಾರಣೆಯಾದರೆ, ಅದನ್ನು ಉಳಿಸಿಕೊಂಡು, ಪಾಲನೆ ಮಾಡಿಕೊಳ್ಳಬೇಕು. ಫೋಲಿಕ್ ಆ್ಯಸಿಡ್ ಮಾತ್ರೆಗಳ ಸೇವನೆಯನ್ನು ಆರಂಭಿಸಿ ಮತ್ತು ಫರ್ಟಿಲಿಟಿ ಸ್ಪೆಷಲಿಸ್ಟ್ ಅವರ ಮಾರ್ಗದರ್ಶನ ಪಡೆಯಿರಿ. ಅವರು ಸ್ಕ್ಯಾನ್ ಮಾಡುವ ಮೂಲಕ, ಗರ್ಭಕೋಶದ ಧಾರಣ ಶಕ್ತಿಯನ್ನು ಗುರುತಿಸಿ, ಕಡಿಮೆ ಎಎಂಎಚ್ ಇದ್ದರೆ ಪತ್ತೆಹಚ್ಚಬಲ್ಲರು.

ಹೊಸ ತಪಾಸಣಾ ಕೇಂದ್ರ

ಡಾ. ರಶ್ಮಿ ಯೋಗೀಶ್ ಅವರ ಮಾರ್ಗದರ್ಶನದಲ್ಲಿ 'ಖುಷಿ' ತಂಡವು, ಆಸ್ಟ್ರೇಲಿಯಾದ ದ ಗ್ರಿಫಿತ್ ಯೂನಿವರ್ಸಿಟಿಯ ಜ್ಞಾನವರ್ಗಾವಣೆಯ ಜತೆ, ಯಶಸ್ವಿಯಾಗಿ ಕೆಲಸ ಮಾಡುತ್ತಿದೆ. ಈಗ 'ಖುಷಿ'ಯ ಇತಿಹಾಸದಲ್ಲಿ ಹೊಸದೊಂದು ಬೆಳವಣಿಗೆಯಾಗಿದೆ. ಡಾ. ರಶ್ಮಿ ಯೋಗೀಶ್ ಅವರ ಸಮರ್ಥ ಮಾರ್ಗದರ್ಶನದಲ್ಲಿ, ರಿಪ್ರೊಡಕ್ಟಿವ್ ಮೆಡಿಸಿನ್ ಮತ್ತು ಐವಿಎಫ್‌ನ ಅತ್ಯಾಧುನಿಕ ಕೇಂದ್ರವನ್ನು ಆರಂಭಿಸಲಾಗುತ್ತಿದೆ ಮತ್ತು ಇದು ಬೆಂಗಳೂರಿನ ಅತಿ ದೊಡ್ಡ ಐವಿಎಫ್ ಕೇಂದ್ರ ಎನಿಸಿದೆ. ಈ ಅತ್ಯಾಧುನಿಕ ಐವಿಎಫ್ ಕೇಂದ್ರವು ಇನ್ನು ಕೆಲವೇ ತಿಂಗಳುಗಳಲ್ಲಿ ಆರಂಭವಾಗಲಿದೆ. ಅಂತಾರಾಷ್ಟ್ರೀಯ ಐವಿಎಫ್ ಕೇಂದ್ರಗಳಿಗೆ ಸರಿಸಮಾನ ಎನಿಸಬಲ್ಲ ಈ ಹೊಸ ಕೇಂದ್ರವು ಬೆಂಗಳೂರಿನ ಮತ್ತು ಕರ್ನಾಟಕದ ಜನತೆಗೆ ಒಂದು ವಿಶೇಷ ವರದಾನ ಎನಿಸಲಿದೆ. ಈ ಒಂದು ಮೈಲಿಗಲ್ಲು ಸಾಧನೆಯನ್ನು ಮಾಡಿ, ಭಾರತದ ಐವಿಎಫ್ ಇತಿಹಾಸದಲ್ಲಿ ಹೊಸ ಹೆಗ್ಗುರುತನ್ನು ಮೂಡಿಸಿದ ಖುಷಿ ತಂಡವನ್ನು ಅಭಿನಂದಿ ಸುತ್ತೇವೆ.

ಸಂಪರ್ಕ:
ಡಾ. ರಶ್ಮಿ ಯೋಗೀಶ್ , 9008692449.



ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಹೆಲ್ತ್ ಕಾರ್ನರ್

ಅಲ್ಜಮೀರ್ ವಾಸಿ ಮಾಡಬಲ್ಲ ಸಸ್ಯ

ಇದೊಂದು ವಿಚಿತ್ರ, ಆದರೆ, ಪ್ರಬಲ ಔಷಧೀಯ ಗುಣಹೊಂದಿದ ಸಸ್ಯ; ಈ ಸಸ್ಯವು ತನ್ನ ಸಹಜವಾಸಸ್ಥಳದಲ್ಲಿ ಕಣ್ಮರೆಯಾಗಿದೆ ಎಂದೇ ತಿಳಿಯಲಾಗಿತ್ತು. ಈಗ ಇದಕ್ಕೆ ಮರುಜನ್ಮ ನೀಡಲಾಗಿದ್ದು, ಚೀನಾ,

ಕೊರಿಯಾ ಮತ್ತು ಜಪಾನ್ ದೇಶಗಳಲ್ಲಿ ಬೆಳೆಸಲಾಗುತ್ತಿದೆ. ಇದರ ಹೆಸರು ಜಿಂಕೊ. ಮನುಷ್ಯನಲ್ಲಿ ಕಾಣಿಸಿಕೊಳ್ಳುವ ಮರೆವಿನ ರೋಗ, ಅಲ್ಜಮೀರ್ ಕಾಯಿಲೆ, ಕಾಲಿನಲ್ಲಿನ ದೌರ್ಬಲ್ಯಕ್ಕೆ ಈ ಸಸ್ಯದ ಎಲೆಗಳು ಉತ್ತಮ ಪರಿಹಾರ ಎಂದು ಗುರುತಿಸಲಾಗಿದೆ. ಜಿಂಕೋ ಎಲೆಗಳಲ್ಲಿ ಆ್ಯಂಟಿ ಆಕ್ಸಿಡೆಂಟ್ ಎನಿಸಿರುವ ಹಲವು ಸಂಯುಕ್ತಗಳಿವೆ. ದೇಹದಲ್ಲಿನ ಉರಿಯೂತವನ್ನು (ಇನ್‌ಫ್ಲೆಮೇಶನ್) ಕಡಿಮೆ ಮಾಡುವ ಶಕ್ತಿ ಈ ಎಲೆಗಳಿವೆ. ಜತೆಗೆ ಹೃದಯದ ಆರೋಗ್ಯ, ಮಿದುಳಿನ ಆರೋಗ್ಯ ಕಾಪಾಡುವಲ್ಲಿ ಜಿಂಕೊ ಎಲೆಗಳ ಸೇವನೆ ಉಪಯುಕ್ತ ಎಂದು ಕಂಡು ಬಂದಿದೆ.

● ಅಜಯ ಅಂಚೆಪಾಳ್ಯ

ಸಂತಾನದ ಕುಡಿ ಜನಿಸಿದ ನಂತರ, ಶಾಲೆಗೆ ಸೇರಿಸುವುದು, ಉನ್ನತ ವಿದ್ಯಾಭ್ಯಾಸ ಕೊಡಿಸುವುದು. ಆ ಮಗು ಕೆಲಸಕ್ಕೆ ಸೇರಿದ ನಂತರ, ಉದ್ಯೋಗ ನಿಮಿತ್ತ ವಿದೇಶಕ್ಕೋ, ದೂರದ ಊರಿಗೋ ಹೋಗುವುದುಂಟು. ಮೊಮ್ಮಕ್ಕಳ ಜತೆ ಕಾಲ ಕಳೆಯಲು ಬಯಸುವ ಮುದಿ ಜೀವಗಳು, ಕೊನೆಗೆ ನೆಲೆ ಕಾಣುವುದು ವೃದ್ಧಾಶ್ರಮದಲ್ಲಿ!

ವ್ಯಾಮೋಹ ಎಂಬ ಆಸೆಯ ಬಲೆ

● ಪಿ.ಎನ್.ನಾಗೇಂದ್ರ, ಶಿರಸಿ

ಮದುವೆಯಾದ ಹೊಸದರಲ್ಲಿ ಒಂದಿಷ್ಟು ಕಾಲ ಸುಖವಾದ ದಾಂಪತ್ಯ ಜೀವನ ಅನುಭವಿಸಿ, ತದನಂತರ ಮುಂದಿನ ಜೀವನ, ಜೀವನದ ತಳಪಾಯ ಭದ್ರತೆಯ ಬದುಕಿನ ಸುಂದರ ಸೌಧ ಕಟ್ಟಲು ಒಂದೊಂದು ಆಸೆಗಳ ಚಿಗುರು ಒಡೆಯಲು ಪ್ರಾರಂಭಿಸುತ್ತದೆ. ಗಂಡೋ ಹೆಣ್ಣೋ ಹೆತ್ತವರನ್ನು ಕಾಣಲು ಮಕ್ಕಳು ಬೇಡವೇ? ಹೀಗೆ ದಂಪತಿಗಳಲ್ಲಿ ಫ್ಯಾಮಿಲಿ ಪ್ಲಾನಿಂಗ್ ಕುರಿತು ಚರ್ಚೆ ನಡೆಯುತ್ತಿದೆ.

ಅವರುಗಳು ಅಂದುಕೊಂಡಂತೆ ಪುಟ್ಟದಾದ ಮಕ್ಕಳು ಮನೆಯಲ್ಲಿ ಕಿಲಕಿಲ ನಗುತ್ತಾ ಹೆತ್ತವರ ಬೆಚ್ಚನೆಯ ಸ್ಪರ್ಶದಲ್ಲಿ ಬೆಳೆಯುತ್ತಿರುತ್ತವೆ. ಮಗ/ಳು ಬೆಳೆಯುತ್ತಾ ಶಾಲೆಗೆ ಹೋಗುವ ವಯಸ್ಸು ಸಮೀಪಿಸುತ್ತಿದ್ದಂತೆ ಮಗ/ಳ ನ್ನು ಕನ್ನಡ ಮಾಧ್ಯಮದಲ್ಲಿ ಓದಿಸುವುದೋ ಅಥವಾ ಆಂಗ್ಲ ಮಾಧ್ಯಮದಲ್ಲಿ ಓದಿಸುವುದೋ ಎನ್ನುವ ಗಂಭೀರ ಚರ್ಚೆ ನಡೆಯುತ್ತದೆ. ಸೇರಿಸುವುದಾದರೆ ಪಟ್ಟಣದಲ್ಲಿದ್ದವರು ಅಂದರೆ ಸರ್ಕಾರಿನೋ/ಖಾಸಗಿ ಕಂಪನಿಯಲ್ಲಿ ದ್ದವರು ಹೆಚ್ಚೆಚ್ಚು ಡೋನೆಷನ್ ಪಡೆಯುವ ಶಾಲೆಗೆ ಸೇರಿಸುವ ಚಿಂತನೆಯಲ್ಲಿದ್ದರೆ, ಗ್ರಾಮೀಣ ಭಾಗದಲ್ಲಿ ಇದ್ದವರು ನಗರದಲ್ಲಿಯ ಅಥವಾ ಹಳ್ಳಿಯ ಶಾಲೆಗೆ ಸೇರಿಸುವ ಬಗ್ಗೆ ಚರ್ಚೆ ನಡೆಯುತ್ತದೆ.

ಮಗುವನ್ನು ಶಾಲೆಗೆ ಸೇರಿಸಿಯೂ ಆಯ್ತು - ಅಲ್ಲಿಗೆ ಆಸೆಯ ಎರಡನೇ ಹಂತ ಮುಗಿತು. ಮುಂದೆ ಆಟೋ ಅಥವಾ ಶಾಲೆಯ ಬಸ್ಸಿನಲ್ಲಿ ಕಳುಹಿಸುವುದು ಇದ್ದಿದ್ದೇ ಬಿಡಿ. ಮಕ್ಕಳು ಹೀಗೆ ಪಾಲಕರ ಲಾಲನೆ ಪಾಲನೆಯಲ್ಲಿ ಬೆಳೆದು ಎಸ್ ಎಸ್ ಎಲ್ ಸಿ ವರೆಗೆ ಶಿಕ್ಷಣ ಮುಗಿದೇ ಹೋಯ್ತು. ಈವಾಗ ದೊಡ್ಡ ಘಟ್ಟದ ಮೆಟ್ಟಿಲೇರುವ ಸಮಯ ಅಂದರೆ ಯಾವ ವಿಷಯ ತೆಗೆದು ಕೊಂಡು ಯಾವ ಕಾಲೇಜಿನಲ್ಲಿ ಅಡ್ಮಿಷನ್ ಮಾಡಿಸುವುದು. ಊಟ ಮಾಡುವಾಗ, ಮಲಗುವಾಗ ಹೆತ್ತವರ ತಿರ್ಮಾನದ ಕೊನೆಯ ಹಂತದ ನಿರ್ಣಯ ಮಗ/ಳ ಲ್ಲಿ ಹೇಳುವುದನ್ನು ಬಿಟ್ಟು ನೀನು ಸೈನ್ಸ್ ಓದು, ಕಾಮರ್ಸ್ ಮಾಡು ಎಂದು ಒಂದೇ ಸಮನೆ ಜಡಿ ಮಳೆಯಂತೆ ಸುರಿಯುತ್ತಿರುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಓದಬೇಕಾದವರ ಅನಿಸಿಕೆ ಕೇಳಿಕೊಂಡು ಮುಂದಿನ ನಿರ್ಧಾರ ತೆಗೆದುಕೊಳ್ಳುವುದು ನಮ್ಮದಾಗಬೇಕು ವಿನಹಃ, ನಮ್ಮ ಆಸೆಗಳ ಯಾವುದೋ ಕಾಡುವ ವ್ಯಾಮೋಹಕ್ಕೆ ಇನ್ನೊಬ್ಬರು ಯಾಕೆ ಬಲಿಪಶು ಆಗಬೇಕು? ಹಾಗೆ ಹೀಗೆ, ಅಲ್ಲಿ ಇಲ್ಲಿ ತಿರುಗಿ ದಿನಗಳು ಉರುಳಿದವು. ಅಲ್ಲಿಗೆ ಕಾಲೇಜು ವ್ಯಾಸಂಗ ಮುಗಿದಿರುತ್ತದೆ.

ಉತ್ತಮ ಅಂಕಗಳನ್ನು ಪಡೆದು ತೇರ್ಗಡೆ ಹೊಂದಿದರು ಹೆತ್ತವರ ಮನಸ್ಸಿಗೆ ಸಮಾಧಾನ ಉಂಟೇ? ಇಲ್ಲ. ಮಗ/ಳು ಅತೀ ಹೆಚ್ಚು ಅಂಕ ಗಳಿಸಿದ ಪರಿಣಾಮವಾಗಿ ಇಂಜಿನಿಯರಿಂಗ್ ಓದಿಸುವುದಾ? ಡಾಕ್ಟರ್ ಓದಿಸುವುದಾ? ಎನ್ನುವ ಗೊಂದಲದಲ್ಲಿ ಬೀಳುತ್ತಾರೆ. ಇದು ಹಣ ಇದ್ದವರದ್ದಾದರೆ, ಹಣ ಇಲ್ಲದವರ ಪಾಡು ಹೇಳತೀರದು. ಆಯ್ತು, ಎಲ್ಲೋ ಸಾಲ ಮಾಡಿ ಉನ್ನತ ವ್ಯಾಸಂಗಕ್ಕೆ ಸೇರಿಸಿದ್ದಾಯ್ತು. ಮಕ್ಕಳು ಅಲ್ಲಿ ವ್ಯಾಸಂಗ ಮಾಡುತ್ತಿರುತ್ತಾರೆ. ಇಲ್ಲಿ ಹೆತ್ತವರು ಮಾಡಿದ ಸಾಲ ತೀರಿಸಲು ದಿನವಿಡೀ ಶ್ರಮವಹಿಸಿ ಮುಂದೆ ನಮ್ಮ ಸಂತಾನದ ಗೌರವ, ಮರ್ಯಾದೆ ಕಾಪಾಡುವ ಗುಂಗಿನಲ್ಲಿ ದಿನಗಳನ್ನು ಕಳೆಯುತ್ತಿದ್ದಂತೆ ಮುಪ್ಪು ಸನಿಹಕ್ಕೆ ಬಂದು ನಿಂತಿರುವುದು ನಮಗೆ ತಿಳಿಯುವುದಿಲ್ಲ.

ವಿದೇಶದಲ್ಲಿ ಉದ್ಯೋಗ

ಉನ್ನತ ವ್ಯಾಸಂಗದ ಬಳಿಕ ಉದ್ಯೋಗ ಮಾಡುವ ಸ್ಥಳದ ಆಯ್ಕೆ ಜೋರಾಗಿ ನಡೆಯುತ್ತಿರುತ್ತದೆ. ತಾಯ್ನಾಡಿನಲ್ಲಿ ಉದ್ಯೋಗ ಮಾಡುವುದಾ? ಅಥವಾ ವಿದೇಶಕ್ಕೆ ಹೋಗುವುದಾ? ಅವಸರದ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಆದರೆ, ಮಕ್ಕಳ ಆ ವಯಸ್ಸಿನಲ್ಲಿ, ಹೆತ್ತವರ ಮಾರ್ಗದರ್ಶನ ಪಡೆದು ತೀರ್ಮಾನಕ್ಕೆ ಬರುವವರು ತುಂಬಾ ವಿರಳ. ಅವರ ಭವಿಷ್ಯದ ಬಗ್ಗೆ ಕನಸು ನನಸು ಮಾಡುವ ಹೊಸ ಪೀಳಿಗೆಯವರು ಆಗಿರುವುದರಿಂದ ಹಿರಿಯರ ಮಾತುಗಳಿಗೆ ಮನ್ನಣೆ ದೊರಕುವುದು ಕಡಿಮೆ. ಎಲ್ಲರೂ ಹಾಗೆ ಇರುವುದಿಲ್ಲ.

ಉದ್ಯೋಗವು ಲಭಿಸಿದಂತಾಗುತ್ತದೆ. ಹೆತ್ತವರ ಇನ್ನೊಂದು ಆಸೆ, ಮದುವೆ ಮಾಡಿಸುವುದು! ಅದಾದನಂತರ ಮೊಮ್ಮಕ್ಕಳೊಂದಿಗೆ, ನೆಮ್ಮದಿಯಾಗಿ ಜೀವಿಸುವ ಮಹತ್ವದ ಆಸೆಗಳು. ಇಂತಹ ಆಸೆಗಳ ನಡುವೆಯೇ, ಕೆಲವರೂ ಉದ್ಯೋಗಕ್ಕಾಗಿ ವಿದೇಶ ಸೇರಿ, ಅಲ್ಲೇ ನೆಲೆ ನಿಲ್ಲುತ್ತಾರೆ. ಕೆಲವು ತಾಯಂದಿರು, ಮಗಳ ಹೆರಿಗೆಯ ಸಮಯದಲ್ಲಿ ಸಹಾಯ ಮಾಡಲು ವಿದೇಶಕ್ಕೆ ಹೋಗಿ ಆರು ತಿಂಗಳು ಇದ್ದು ಬರುತ್ತಾರೆ; ಆಗಾಗ, ಆರು ತಿಂಗಳು ಅಮೆರಿಕ ಮೊದಲಾದ ದೇಶಗಳಿಗೆ ಹೋಗಿ ಬರುವವರೂ ಉಂಟು. ನಂತರ, ತಮ್ಮ ಮೊಮ್ಮಕ್ಕಳನ್ನು ಎಂದು ವಿದೇಶದಿಂದ ಕರೆದುಕೊಂಡು ಬರುತ್ತಾನೋ ಜಾತಕ ಪಕ್ಷಿಯಂತೆ ಕಾಯುತ್ತ, ವಯೋಸಹಜ ಖಾಯಿಲೆಗಳಿಗೆ ತುತ್ತಾಗಿ ವ್ಯಾಮೋಹ ಎಂಬ ತಾವೇ ಹೆಣೆದುಕೊಂಡಿರುವ ಆಸೆಯ ಬಲೆಯಲ್ಲಿ ಸಿಲುಕಿ ವೃದ್ಧಾಶ್ರಮಗಳಲ್ಲಿ ಮುದಿ ಜೀವಗಳು ಸೇರಿಕೊಳ್ಳುತ್ತವೆ.

ಮಳೆಗೆ ಒಂದು ಪತ್ರ

● ಮಂಗಳ ಎಂ ನಾಡಿಗ್

ನೀನೊಬ್ಬನೇ ಬಾ, ಸಾಕು ಮಾರಾಯ. ನಿನ್ನೊಂದಿಗೆ ಚಳಿಯನ್ನೇಕೆ ಕರೆತರುತ್ತೀ ? ನಿನಗೆ ಮಾತ್ರ ಆಮಂತ್ರಣ ಕೊಟ್ಟದ್ದು. ಅದೂ ಬಿಸಿಲ ಬೇಗೆಗೆ ಬೆಂದು. ಕರೆದ ಮಾತ್ರಕ್ಕೆ ಬೇಕೇ ಇಷ್ಟೊಂದು ಆರ್ಭಟ! ನಿನ್ನ ಸಖ್ಯವ ಬಯಸಿದವರಿಗೆ ನೀನು ಸ್ನೇಹ ಹಸ್ತ ಚಾಚದೇ ಬದುಕನ್ನೇ ನುಂಗುವಷ್ಟು. ಹೋಗಲಿ, ಬೀಳಿಸಿದ ಗುಡ್ಡ , ಮನೆ, ಮರಗಳ ಭಾಗಗಳನ್ನು , ತೇಲಿಸಿದ ಪಶು, ಪಕ್ಷಿಗಳನ್ನು ನೀನಾದರೂ ಎಲ್ಲಿಗೆಂದು ಒಯ್ಯುತ್ತೀಯಾ.. ? ಒಂದಷ್ಟು ದೂರ ಹೊತ್ತ ಮೇಲೆ ನಿನಗೂ ಅದು ಭಾರ. ಎಲ್ಲಿಯೋ ಒಂದೆಡೆ ಇಳಿಸಿ ನೀನು ಹಾಯಾಗಿ ಧರೆಯೊಳಗೆ ಮರೆಯಾಗುವವನಲ್ಲವೇ....? ಇದ್ದಲ್ಲಿಯೇ ಬಿಟ್ಟಿದ್ದರೆ ಅವುಗಳನ್ನೆಲ್ಲ ಎಂಥಹ ಉಪಕಾರವಾಗುತ್ತಿತ್ತು ನಿನ್ನಿಂದ. ಹಾಡಿ ಹೊಗಳುವಷ್ಟು, ಕೊಂಡಾಡುವಷ್ಟು, ಸದಾ ನೆನೆದು ಮನದಲ್ಲಿಡುವಷ್ಟು.

ಹೀಗಂದೆನೆಂದು ಬೇಸರಿಸಿ ಮತ್ತೆ ದೂರ ಓಡಬೇಡ. ನೀನು ಏನೇ ಮಾಡಿದರೂ ನಮ್ಮ ಸಂಗಾತಿಯೆ. ನೀನಿಲ್ಲದೆ ನಾವಿಲ್ಲ, ಜೀವರಾಶಿಗಳಿಲ್ಲ ಎನ್ನುವುದು ನಿನಗೂ ಗೊತ್ತು. ಬುದ್ಧಿಯಿಲ್ಲದ ಮಂದಿ ಮಾಡಿದ ಪ್ರಕೃತಿಯ ಮೇಲಿನ ದೌರ್ಜನ್ಯ ನೋಡಿ ನಿನಗೆ ಸುಮ್ಮನಿರಲಾಗುತ್ತಿಲ್ಲವೆಂಬುದು ನನಗೆ ತಿಳಿದಿದೆ. ಆದರೆ ಆ ಮೂಕ ಪ್ರಾಣಿಗಳೇನು ಮಾಡಿದ್ದಾವೆ ನಿನಗೆ? ನಿನ್ನ ಬರುವಿಕೆಗೆ ನೆರವಾಗುವ ಮರ, ಗಿಡಗಳ ಮೇಲಾದರೂ ಕರುಣೆ ಬೇಡವೇ. ಒಮ್ಮೆ ಮುರಿದ ಮೇಲೆ ಬದುಕುಂಟೆ ಅವಕೆ . ಎಷ್ಟೋ ಎತ್ತರ ಬೆಳೆದು ಇನ್ನೆಷ್ಟೋ ವರ್ಷ ಬದುಕುವ ಆಸೆ ಹೊತ್ತವು. ಪರೋಪಕಾರಕ್ಕಾಗಿಯೇ ಜನ್ಮ ತಳೆದವು. ಇದ್ದಕ್ಕಿದ್ದಂತೆ ಬಂದು ನೀನು ಬದುಕು ಕಿತ್ತುಕೊಂಡರೆ ಅವಾದರೂ ಏನು ಮಾಡುತ್ತವೆ ಮೂಕವಾಗುವುದ ಬಿಟ್ಟು.

ಇದೆಲ್ಲ ನಿನಗೇನು ಹೊಸತಲ್ಲ. ಪ್ರತೀ ವರ್ಷ ಇದ್ದದ್ದೆ. ನೀನು ಬರುವುದು, ಅವಾಂತರ ಸೃಷ್ಟಿಸಿ ಜನರಿಂದ ಬೈಸಿಕೊಳ್ಳುವುದು, ಮತ್ತೆ ಮುನಿಸಿಕೊಂಡು ಬಾರದೇ ಗೋಳಾಡಿಸುವುದು. ಬಿಸಿಲ ಧಗೆಗೆ ಬೆಂದ ಮಂದಿ ಮತ್ತೆ ನಿನಗೆ ಗೋಗರೆಯುವುದು. ಒಂದಷ್ಟು ಕಾಡಿಸಿ ಕೊನೆಗೂ ಬಂದೆಯೆಂದು ಖುಷಿಪಟ್ಟರೆ, ನೀ ಸುರಿಸಿದ ಹನಿಗಳಿಗಿಂತ ಎಲ್ಲೆಡೆ ಕಣ್ಣೀರೆ ಕಾಣಿಸುವಷ್ಟು ನಿನ್ನ ಆರ್ಭಟ. ನೀನಾದರೂ ಏನು ಮಾಡುತ್ತಿ. ತಪ್ಪಿತಸ್ಥರನ್ನು ಮಾತ್ರ ಬೇರ್ಪಡಿಸಿ ಶಿಕ್ಷೆ ಕೊಡಲಾಗದ ಅಸಹಾಯಕತೆ ನಿನ್ನದು. ಹೋಗಲಿ , ಸ್ವಲ್ಪ ಮತಿಯನ್ನಾದರೂ ಕೊಡು. ನೀನು ಕಲಿಸುತ್ತಿರುವ ಪಾಠ ಇನ್ನಾದರೂ ಕಣ್ತೆರೆಸಲಿ.

ಇವರ ತ್ಯಾಗಕ್ಕೆ ಬೆಲೆ ಕಟ್ಟಲಾರೆವು!

● ಚಿದಾನಂದ ಪಡದಾಳೆ

ನಾವೆಲ್ಲರೂ ಈಗ ಕಾರ್ಗಿಲ್ ವಿಜಯೋತ್ಸವದ ರಜತ ಸಂಭ್ರಮದಲ್ಲಿದ್ದೇವೆ. 26.7.1999ರಂದು ಕಾರ್ಗಿಲ್ ಯುದ್ಧ ಮುಗಿಯಿತು. ಈ ಸಮಯದಲ್ಲಿ ನಮ್ಮ ದೇಶಕ್ಕಾಗಿ ಹೋರಾಡಿದ ವೀರಯೋಧರನ್ನು ನೆನಪಿಸಿಕೊಳ್ಳಲೇಬೇಕು. ಈ ನಿಟ್ಟಿನಲ್ಲಿ ಒಬ್ಬ ಕಾರ್ಗಿಲ್ ಹೀರೋ ಕುರಿತಾಗಿ ನಾನಿಲ್ಲಿ ಹೇಳಲು ಇಚ್ಛಿಸುತ್ತೇನೆ.

ಯುದ್ಧಭೂಮಿಯಲ್ಲಿ ತನ್ನ ಕಂಪನಿಯ ಸೈನಿಕರಿಂದ 'ಶೇರ್ ಷಾ' ಎಂದೇ ಕರೆಸಿಕೊಳ್ಳುತ್ತಿದ್ದ 24ರ ಹರೆಯದ ಕೆಚ್ಚೆದೆಯ ತರುಣ ಕ್ಯಾಪ್ಟನ್ ವಿಕ್ರಮ್ ಬಾತ್ರಾ, ಅಂದುಕೊಂಡ ಗುರಿಯನ್ನು ಸಾಧಿಸುವಲ್ಲಿ ತ್ರಿವಿಕ್ರಮ. ಯುದ್ಧದಲ್ಲಿ ಭಾಗವಹಿಸುವುದರಲ್ಲಿ ಹಿಂಜರಿಕೆ ಇಲ್ಲ. ಸಹ ಸೈನಿಕರೊಂದಿಗೆ ಅನೇಕ ಸಾಹಸಗಳನ್ನು ಮಾಡಿದ್ದು, ಇನ್ನಷ್ಟು ಸಾಹಸ ಮಾಡಬೇಕು, ಶತ್ರುಗಳನ್ನು ಬಗ್ಗು ಬಡಿಯಬೇಕು ಎಂಬ ಅದಮ್ಯ ಆಸೆ.. ಅದಕ್ಕಾಗೇ ಆತ ಯಾವಾಗಲೂ ಹೇಳುತ್ತಿದ್ದ 'ಯೇ ದಿಲ್ ಮಾಂಗೇ ಮೊರ್' ಎಂದು.



ಕಾರ್ಗಿಲ್ ಯುದ್ಧದ ಸಮಯದಲ್ಲಿ, ಪಾಯಿಂಟ್ 5140ನ್ನು ವಶಪಡಿಸಿಕೊಳ್ಳಬೇಕಾದ ಸಮಯದಲ್ಲಿ ಡೆಲ್ಟಾ ಕಂಪನಿಯನ್ನು ವಿಕ್ರಮ್ ಮುನ್ನಡೆಸುತ್ತಿದ್ದ. ಶಿಖರದ ತುದಿ ಏರಿ ಹೋಗುತ್ತಿರುವಾಗ ಶತ್ರು ಸೈನಿಕನ ಗುಂಡುಗಳು ಬಾತ್ರಾನ ಶರೀರವನ್ನು ಹೊಕ್ಕಿದ್ದವು, ಆದರೂ 'ಭಾರತ್ ಮಾತಾ ಕೀ ಜೈ' ಎಂದು ಮುನ್ನಡೆದು ಶತ್ರುಗಳೆಲ್ಲರನ್ನೂ ನಾಶಗೊಳಿಸಿಯೇ ಆತ ಇಹಲೋಕ ತ್ಯಜಿಸಿ ಅಮರನಾಗಿದ್ದ! ಮರಣೋತ್ತರ ವಾಗಿ ವಿಕ್ರಮ್‌ಗೆ 'ಪರಮವೀರ ಚಕ್ರ' ಪ್ರಶಸ್ತಿಯನ್ನು ನೀಡಲಾಯಿತು.

ವಿಕ್ರಮ್ ಮಡಿದಿರುವ ವಿಷಯ ಕೇಳಿದ ಅವರ ತಂದೆ ಪ್ರತಿಕ್ರಿಯಿಸಿದ ರೀತಿ ಎಂಥವರ ಮನವನ್ನು ಕಲಕುವಂಥದ್ದು. ಅವರು ಹೇಳುತ್ತಾರೆ, 'ಇದು ನನಗೊಂದು ಆಘಾತಕಾರಿ ವಿಷಯವಾಗಿರಬಹುದು. ಆದರೆ ಆತ ದೇಶಕ್ಕಾಗಿ ಪ್ರಾಣ ನೀಡಿದ್ದಾನೆ. ಇದರಿಂದ ನನಗೆ ದು:ಖವಾಗುತ್ತಿಲ್ಲ. ಅವನು ದೇಶಕ್ಕಾಗೇ ಪ್ರಾಣ ಕೊಟ್ಟ'ನೆಂದು ಹೆಮ್ಮೆಯಿಂದ ಹೇಳುತ್ತಾರೆ. ಇನ್ನು ಅವರ ತಾಯಿ ಮಾತು ಕೇಳಿದರಂತೂ ದುಃಖ ಉಕ್ಕಿ ಬರುತ್ತದೆ. ಅವರ ತಾಯಿ ಹೇಳುತ್ತಾರೆ, 'ಉಸ್ ನೇ ಮೇರೆ ಧೂದ್ ಕೋ ಧನ್ಯ ಕರ್ ದಿಯಾ'(ಅವನಿಂದ ನನ್ನ ಎದೆಹಾಲು ಧನ್ಯ). ಎಂತಹ ಮಾತು ಎಂಥವರಲ್ಲೂ ದೇಶ ಪ್ರೇಮವನ್ನು ಹರಿಸಬಲ್ಲುದು.

ದೇಶ ಕಾಯುವ ಯೋಧರು ಶಿಸ್ತಿನಿಂದ, ಕೆಚ್ಚೆದೆಯಿಂದ ಕೆಲಸ ಮಾಡಿದರೆ ಮಾತ್ರ, ನಾವು ಇಲ್ಲಿ ದೇಶದೊಳಗಿದ್ದುಕೊಂಡು ನಮ್ಮ ಬದುಕನ್ನು ಸಾಗಿಸಲು ಸಾಧ್ಯ! ಅಲ್ಲವೆ?